# ಪಾ.ವೆಂ.ಆಚಾರ್ಯ

## ಆಯ್ದ ನಗೆಬರಹಗಳು



ಸಂಪಾದಕರು:

ಡಾ॥ ಶ್ರೀನಿವಾಸ ಹಾವನೂರ

ಪ್ರೊ॥ ಅ.ರಾ. ಮಿತ್ರ

ಪಾ. ವೆಂ. ಆಚಾರ್ಯ ಸಮಗ್ರ ಸಾಹಿತ್ಯ

ಸಂಪುಟ - ೨

# ಆಯ್ದ ನಗೆಬರಹಗಳು

ಲಾಂಗೂಲಾಚಾರ್ಯ
(ಪಾ. ವೆಂ. ಆಚಾರ್ಯ)

ಸಂಪಾದಕರು
ಡಾ॥ ಶ್ರೀನಿವಾಸ ಹಾವನೂರ
ಪ್ರೊ॥ ಆ.ರಾ. ಮಿತ್ರ

ಪ್ರಿಸಮ್ ಬುಕ್ಸ್ ಪ್ರೈ. ಲಿ.
ನಂ. 1865, 32ನೇ ಕ್ರಾಸ್, ಬನಶಂಕರಿ ಎರಡನೇ ಹಂತ
ಬೆಂಗಳೂರು - 560 070

**Pa. Vem. Acharya Samgra Sahitya Samputa-2: Aayda Nagebarahagalu—** Selected homurous writings of Sri Pa.Vem. Acharya, edited by Dr. Srinivasa Havanur and Prof. A.R. Mitra.

Published by
**Prism Books Pvt Ltd.**
1865, 32nd Cross
Banashankari 2nd Stage
Bangalore - 560070.
Ph: 6713979

Pages: 120

First edition: 2000
Second Edition : 2003
Price: Rs. 60/-

© ಮುರಳೀಧರ ಪಾಡಿಗಾರ

ಬೆಲೆ: ರೂ. ೬೦

ಪುಟಗಳು: 120

ಪ್ರಥಮ ಮುದ್ರಣ: ೨೦೦೦
ದ್ವಿತೀಯ ಮುದ್ರಣ : 2003

ಪಾ.ವೆಂ. ಭಾವಚಿತ್ರ ಕೃಪೆ: ಕೆ. ಜಿ. ಸೋಮಶೇಖರ್

ರಕ್ಷಾಪುಟ ವಿನ್ಯಾಸ : ಸುಧಾಕರ ದರ್ಬೆ

ಮುದ್ರಣ: ಸ್ಟ್ಯಾಂಡರ್ಡ್ ಪ್ರೆಸ್, ಬೆಂಗಳೂರು

# ಹೀಗಿವೆ ಈ ಹರಟೆಗಳು

ಪಾ.ವೆಂ. ಆಚಾರ್ಯರ ಅರ್ಧ ಸಹಸ್ರದಷ್ಟು ಹರಟೆಗಳಲ್ಲಿ ಕೆಲವನ್ನೆ ಇಲ್ಲಿ ಆಯ್ದು ಕೊಟ್ಟಿದೆ. ಇವಿಷ್ಟರಲ್ಲಿಯೆ ಎಷ್ಟೊಂದು ವೈವಿಧ್ಯವನ್ನು ಕೊಡಮಾಡಿದ್ದೇವೆ—ಎಂದು ನಮ್ಮನ್ನು ನಾವೇ ಹೊಗಳಿಕೊಳ್ಳತಕ್ಕುದು. ಇಲ್ಲಿ ಚುನಾವಣೆಗಳು, ರಾಜೀನಾಮೆಗಳು, ಮಂತ್ರಿಗಳ ಅಡಿಗಲ್ಲು ಸಮಾರಂಭ, ರಾಜಕೀಯ ಪುಢಾರಿಗಳ ದಪ್ಪ ಚರ್ಮ—ಇನ್ನೂ ಹಲವಾರು ರಾಜಕೀಯ ವಿಡಂಬನೆಗಳಿವೆ. ತದ್ವಿರುದ್ಧವೆಂಬಂತೆ ಇಲಿ, ನೊಣ, ಸೊಳ್ಳೆಗಳ ಉಪದ್ರವದ ಪ್ರಸ್ತಾಪವಿದೆ. ಇತ್ತ ನಮ್ಮ ನಿತ್ಯಜೀವನದಲ್ಲಿ ತೋರಿಬರುವ ಬಸ್‌ಪ್ರಯಾಣ, ಗೌಜಿ-ಗದ್ದಲ, ಅದರಂತೆ ಸ್ವಂತದ ಚಟಗಳಾದ ಸಿಗರೇಟ್ ಸೇವನೆ (ಹೌದು, ಪಾವೆಂ, ಆಗೀಗೊಮ್ಮೆ ಸಿಗರೇಟ್ ಸೇದುತ್ತಿದ್ದರು.) ನಸ್ಯ ಏರಿಸುವಿಕೆ, ಕೆಮ್ಮು ಅಲರ್ಜಿಗಳೂ ಸಹ ಕಾಣಿಸಿಕೊಂಡಿವೆ. ನಾರಿಯರು? ಓಹೋ! ಇದ್ದಾರೆ—ತಮ್ಮ ಸ್ವಭಾವದ, ಸಾಂಸಾರಿಕ ನಿರ್ವಹಣೆಯ ಓರೆಕೋರೆಗಳೊಂದಿಗೆ ಕಾಣಿಸಿಕೊಂಡಿದ್ದಾರೆ. ಮತ್ತೆ, ಅವರುಗಳಿಂದಾಗಿ ಕನ್ಯಾಪಹಾರ, ಸವತಿ ಮತ್ಸರ, ದ್ವಿತೀಯ ವಿವಾಹ—ಮೊದಲಾದ ಪ್ರಬಂಧಗಳೇ ಮೈದಾಳಿವೆ.

ಈ ಸ್ಥೂಲ ಲಕ್ಷಣದ ವಿಷಯಗಳ ಒಳಗೇ ಏನೇನೊ ಬೇರೆ ಸಂದರ್ಭಗಳು, ಉಲ್ಲೇಖಗಳು ತೆರಪಿಲ್ಲದೆ ತುಂಬಿಕೊಂಡಿರುತ್ತವೆ. ಹಾಗೆ ಸಾಗಿದ ನಿರೂಪಣೆಯನ್ನು ಗ್ರಹಿಸುತ್ತಿದ್ದಾಗ ವಿಷಯವು ನುಣುಚಿಕೊಂಡು ಮತ್ತೆತ್ತಲೋ ನಮ್ಮನ್ನು ಕೊಂಡೊಯ್ಯುತ್ತದೆ. ಪಾವೆಂ ಹೀಗೆ ಕ್ಷುಲ್ಲಕ ವಿಷಯವನ್ನು ಎತ್ತಿಕೊಂಡು ಗಂಭೀರವಾಗಿ ಬೆಳೆಸುತ್ತಾರೆ. ಗಂಭೀರ ವಿಷಯ ಹೇಳಹೊರಟು ಕೆಳಗಿನ ಸ್ತರಕ್ಕೆ ಒಮ್ಮೆಲೆ ಜರಿಯುತ್ತಾರೆ. ಪರಿಣಾಮ? 'ಗಿಡ್ಡ ಗಂಡ, ಎತ್ತರದ ಹೆಂಡತಿ'—ಈ ಜೋಡಿ ನೋಡಿದರೆ ನಮ್ಮಲ್ಲಿ ಕೌತುಕಮಯವಾದ ನಗೆ ಹೇಗೋ ಹಾಗೆ, ಅವರ ಹರಟೆಗಳನ್ನು ಓದುವಾಗ ಹೊರಹೊಮ್ಮುತ್ತದೆ. ಪಾವೆಂ ಹಾಸ್ಯದ ಬಗೆ ಇಂಥದು.

ಪಾವೆಂ.ಗೆ ಹರಟೆ ಆರಂಭಿಸಲು ಏನಾದರೊಂದು ಘಟನೆ ನಿಮಿತ್ತವಾಗಬೇಕು. ಫಿರೋಜಖಾನ್ ನೂನ ಎಂಬ ಪಾಕಿಸ್ತಾನಿಯ ಪತ್ನಿಯ ಚಪ್ಪಲಿ ಜನ ಸಮ್ಮರ್ದದಲ್ಲಿ ಕಳಚಿ ಕೆಳಗೆ ಬಿತ್ತು. ಅಲ್ಲಿದ್ದ ಯಾರೊ ಎತ್ತಿಕೊಟ್ಟರೆನ್ನಿ. ಅದನ್ನು ಆಚಾರ್ಯರೂ 'ಎತ್ತಿಕೊಂಡರು'—ತಮ್ಮ ಹರಟೆಯಲ್ಲಿ. ಅಲ್ಲಿಂದ ಹಲವಾರು ಪಾದುಕೆಗಳ ಹರಣ, ಪೆಟ್ಟುಗಳನ್ನು ಪ್ರಸ್ತಾಪ

ಮಾಡಿದರು. ಶಾಂತಾ ಆಪ್ಟೆ ಎಂಬ ಗತಕಾಲದ ಸಿನೆಮಾ ನಟಿ, ಸಿನೆಮಾ ಪತ್ರಿಕೆಯ ಸಂಪಾದಕರಿಗೆ ಹೊಡೆದದ್ದು. ನಾಗಪುರದ ಮೂವರು ನಾರೀಮಣಿಗಳು ಇಬ್ಬರು ಬೀದಿ ಕಾಮಣ್ಣರಿಗೆ ಚಪ್ಪಲಿಯಿಂದ ಥಳಿಸಿದ್ದು (ಈ 3+2ರ ಇಜ್ಜೋಡಿನ ಬಗ್ಗೆ ಸ್ವಾರಸ್ಯಕರ ತರ್ಕವಿದೆ), ಮುಂತಾಗಿ ವಿವರಣೆ ಇದೆ. ಅಲ್ಲಿಂದ ವಿಷಯ 'ಪಾದುಕೆ'ಯತ್ತ ತಿರುಗುತ್ತದೆ. ಗಾಂಧೀಜಿ ಹೊಲಿದು ಕೊಟ್ಟ ಚಪ್ಪಲಿಗಳನ್ನು ದಕ್ಷಿಣ ಆಫ್ರಿಕದ ಅಧ್ಯಕ್ಷ ಸ್ಮಟ್ಸ್, ರಾಮಾಯಣದ ಭರತನಂತೆ ಗೌರವದಿಂದ ಕಂಡದ್ದು.

ಚಂದ್ರಲೋಕ ಪ್ರಯಾಣವನ್ನು ನಾವೂ ಮಾಡಬೇಕೆಂದು ಆಗ್ರಹಿಸುತ್ತಾರೆ, ಪಾವೆಂ. ಕಾರಣವೆಂದರೆ ಭಾರತೀಯರಾದ ನಾವು ಇಹಲೋಕಕ್ಕಿಂತ ಸ್ವರ್ಗಲೋಕವನ್ನು ಆಶಿಸಬೇಕೆಂದು ಶಾಸ್ತ್ರಗಳು ಸಾರುತ್ತವಷ್ಟೇ; ಈ ಚಂದ್ರಲೋಕ ಸ್ವರ್ಗಕ್ಕೆ ಹತ್ತಿರವಾದದ್ದು. ಅವರು ಕೊಡುವ ಇನ್ನೊಂದು ಕಾರಣ, ಈ ಪ್ರವಾಸ ಕೇವಲ ಹತ್ತೇ ತಾಸಿನದು-ಅಂತರಿಕ್ಷ ವಿಮಾನದಲ್ಲಿ. ಅರ್ಥಾತ್ ಹುಬ್ಬಳ್ಳಿಯಿಂದ ಬೆಂಗಳೂರಿಗೆ ರೈಲಿನಲ್ಲಿ ಲಟಪಟ ಹೋಗುವ ಅವಧಿಗಿಂತಲೂ ತುಸು ಕಡಿಮೆ!

ಅವರ ಯಾವ ಹರಟೆಯನ್ನು ತಗೊಂಡರೂ, ಅದರ ವಿಸ್ತಾರ ವ್ಯಾಸಂಗದ ಮಾರ್ಪೂಳಪು ಇದ್ದೇ ಇರುತ್ತದೆ. ಪಾಶ್ಚಾತ್ಯ ವಿದ್ವಾಂಸರ, ವಿಚಾರವೇತ್ತರ ಹೆಸರುಗಳು (ಕೆಲವನ್ನು ನಾವು ಕೇಳಿಯೆ ಇಲ್ಲದವು ಉದಾ.ಗೆ ರೋಸ್ಟ್ಯಾಂಡ್, ಯಾರೀತ?) ಮಿಂಚಿನಂತೆ ಕಾಣಿಸಿಕೊಂಡು ಮಾಯವಾಗುತ್ತವೆ. ಹಾಗೇನೆ ಕವಿವರ್ಯರ ಉಕ್ತಿಗಳು, ಅವರ ಬತ್ತಳಿಕೆಯಲ್ಲಿ ಸದಾ ಸಿದ್ಧವಿದ್ದು ನಿರಾಯಾಸವಾಗಿ ಸದ್ದಿಲ್ಲದೆ ಹೊರಬರುತ್ತವೆ. 'ಚಂದ್ರಲೋಕದಲ್ಲಿ ಮೈಭಾರ ಕಡಿಮೆಯಾಗಿ ಯಾರೂ ಜಿಗಿಯಬಹುದು, ಹೈಜಂಪ್‌ನವರು ಹಾರಬಹುದು' ಎಂದು ವಿಜ್ಞಾನಿಗಳು ಹೇಳುತ್ತಾರಲ್ಲವೆ. ಆಗ ಪಾವೆಂ. ಅವರಿಗೆ ಕುವೆಂಪು ಕವನದ ಸಾಲೊಂದು ನೆನಪಾಯಿತು: ನೀ ಹಾರಬಲ್ಲೆಯ ನಾನೇರುವೆತ್ತರಕೆ?

ಕವಿ ಬೇಂದ್ರೆ ಕಾಣಿಸಿಕೊಳ್ಳುವ ಬಗ್ಗೆ ವಿಶಿಷ್ಟವಾದುದು. 'ಶ್ರೀಮನ್ನಾರಾಯಣನ ನಿವೃತ್ತಿ' ಎಂಬ ಪ್ರಬಂಧವಿದೆ. ನಿವೃತ್ತಿಯ ಅಪೇಕ್ಷೆಗೆ ಏನು ಕಾರಣ? ದೇವದೇವತೆಗಳು ನಿಷ್ಕ್ರಿಯರಾಗಿ 'ಕೊಳೆಯದ ಶವ'ದಂತಾಗಿದ್ದಾರೆ ಎಂದು ತನ್ನ ಕಾರಣ ಕೊಡುತ್ತಾನೆ. ಅದನ್ನು ಓದಿದ ನಾರದರಿಗೆ, ಈ 'ಕೊಳೆಯದ ಶವ' ಎಂಬ ಪದವನ್ನು ಎಲ್ಲಿಯೊ ನೋಡಿದ ಹಾಗಿದೆ—ಎಂದೆನಿಸಿತಂತೆ? ಹಾಂ ಹೊಳೆಯಿತು! ಬೇಂದ್ರೆಯವರು ಈ ಶಬ್ದವನ್ನು coin ಮಾಡಿದ್ದು—ಅದನ್ನು ಎತ್ತಿಕೊಂಡು ಶ್ರೀಮನ್ನಾರಾಯಣನು ಕೃತಿಚೌರ್ಯ ಮಾಡಿದನಲ್ಲವೆ—ಎಂಬುದಾಗಿ ಯೋಚಿಸುತ್ತಾರಂತೆ.

ಹೋಲಿಕೆಗಳಿಂದ ಹಾಸ್ಯವನ್ನು ಹೊರಹೊಮ್ಮಿಸುವುದು ಪಾವೆಂ ಅವರ ಒಂದು ವೈಶಿಷ್ಟ್ಯ. ಸ್ತ್ರೀ ಮಗುವಿಗೆ ಮುತ್ತುಕೊಡುತ್ತಾಳೆ. ತನ್ನ ಪ್ರಿಯಕರನಿಗೂ ಕೊಡುವಳು—ಎನ್ನುವ, ಎರಡರಲ್ಲಿಯೂ ಸುಖವಿದೆ. ಆದರೆ ಬಹಿರಂಗವಾಗಿ ಕೊಟ್ಟಾಗ? ಒಂದನೆಯದು ಸಹ್ಯ,

ಎರಡನೆಯದು ಅಪರಾಧ. ಅದರಂತೆ ನೊಣ, ಸೊಳ್ಳೆಗಳ ಉಪದ್ರವದ ಹೋಲಿಕೆ. ಮನುಷ್ಯನಿಗೆ ಸೊಳ್ಳೆಯ ಕಡಿತ ಸಮರ್ಥನೀಯ; ಏಕೆಂದರೆ ಅವುಗಳಿಗೆ ಹಸಿವಾಗಿರುತ್ತದಂತೆ. (ಹಾಗೆ ಕಚ್ಚುವುದು ಯಾವಾಗಲೂ ಹೆಣ್ಣು ಸೊಳ್ಳೆಯೇ. ಹೇಗಿದ್ದರೂ ಸ್ತ್ರೀಯರೇ ಪುರುಷರ ರಕ್ತ ಹೀರುವವರು ಎಂಬುದು ಪಾವೆಂ ಅವರ comment). ಈ ಹೋಲಿಕೆಯಲ್ಲಿ ನೊಣ ದೋಷಿಯಾಗಿ ಕಂಡಿದೆ. 'ಎಲ್ಲ ಹೇಡಿಗಳಂತೆ ನೊಣಗಳು ಕತ್ತಲೆಗೆ ಅಂಜುತ್ತದೆ' ಎಂಬ ನಿಂದನೆ ಬೇರೆ. ಅಂದ ಹಾಗೆ ಈ ಪ್ರಬಂಧದಲ್ಲಿ ಬಲಾಢ್ಯನಾದ ಚೆಂಗೀಸಖಾನನೂ ಅನುಭಾವಿ ಗೋರಖನಾಥನೂ ಕಾಣಿಸಿಕೊಳ್ಳುತ್ತಾರೆ. ಏಕೆಂದು ಕೇಳಬೇಡಿರಿ; ಓದಿ ನೋಡಿರಿ.

ಇಲ್ಲ, ನಾನು ತಪ್ಪು ಮಾಡುತ್ತಿದ್ದೇನೆ. ಹೀಗೆಲ್ಲ ಈ ಹರಟೆಗಳನ್ನು dissect ಮಾಡ್ತಾ ಇದ್ದರೆ ಅವುಗಳ ಸ್ವಾರಸ್ಯವೇ ಹೊರಟುಹೋದೀತು. ಒಂದೊಂದು ಹರಟೆಯೂ ತನ್ನಷ್ಟಕ್ಕೆ ಪೂರ್ಣ ಸ್ವರೂಪವಿದ್ದು, ಅವನ್ನು ಇಡಿಯಾಗಿ ಓದಿಯೇ ಸವಿಯಬೇಕು; ಮನಸಾರೆ ನಗಬೇಕು. ಆದರೆ ಈ ನಗೆ ಕಚಗುಳಿಯದಲ್ಲ. 'ಹೊಟ್ಟೆ ಹುಣ್ಣಾಗುವಂತೆ' ಅವು ನಗಿಸುವುದಿಲ್ಲ. ಯಾರೊಬ್ಬರನ್ನು ಚುಚ್ಚಿ, ಅಣಕವಾಗುವ ಬಗೆಯೂ ಇಲ್ಲ. ಹಾಗೆ ನಗಿಸುವ ಹರಟೆಗಳು ಆ ಮಟ್ಟಿಗೆ ಮಾತ್ರ ನಗಿಸಿ, ಮರೆತುಹೋಗುತ್ತವೆ. ಪಾವೆಂ ಹರಟೆಗಳು ಆ ಪ್ರಕಾರವಲ್ಲ. ಹಾಗೆಂದು ಅವು ಗೊಡ್ಡು ಹರಟೆಗಳಂತೂ ಸರ್ವಥಾ ಅಲ್ಲ. ಅವರ ಬಹುಶ್ರುತತ್ವದಿಂದಾಗಿ ಸುತ್ತೆಲ್ಲ ಅರಳಿಕೊಂಡು ಮನಸ್ಸನ್ನು ಮುದಗೊಳಿಸುತ್ತವೆ. ಮಂದಹಾಸ ನಮ್ಮ ಮುಖದಲ್ಲಿ ತೇಲುವಂತೆ ಮಾಡುತ್ತವೆ. ಅವರ ಈ ಬೌದ್ಧಿಕ ಹಿನ್ನೆಲೆಯಿಂದಾಗಿ ಬಹು ಕಾಲ ನೆನಪಿನಲ್ಲಿ ಉಳಿಯುತ್ತವೆ; ಮೆಲುಕು ಹಾಕುವಂತೆ ಮಾಡುತ್ತವೆ.

ಮುಗಿಸುವ ಮುನ್ನ, ಪ್ರಿಸಮ್ ಹೌಸಿನವರನ್ನು ಮನಸಾರೆ ಅಭಿನಂದಿಸತಕ್ಕದು. ಪಾವೆಂ ಅವರ ಸಮಗ್ರ ಸಂಪುಟ ಪ್ರಕಟನ ಯೋಜನೆಯಲ್ಲಿ ಬೇರೆ ಪ್ರಕಾಶಕರು ಮುಂದೆ ಬಂದಿದ್ದರೂ ಮೊದಲಿಗೆ ಪ್ರಕಟಿಸುತ್ತಿರುವ ಶ್ರೇಯಸ್ಸು ಅವರದು. ಅದಕ್ಕಾಗಿ ವಿಶೇಷ ಕೃತಜ್ಞತೆಯನ್ನು ಸಲ್ಲಿಸುವೆ.

ಶ್ರೀನಿವಾಸ ಹಾವನೂರ

# ಪಾ. ವೆಂ. ಆಚಾರ್ಯ - ಪರಿಚಯ

‘ಕಸ್ತೂರಿ’ಯ ಸಮರ್ಥ ಸಂಪಾದಕರು,
‘ಓದುಗರೊಡನೆ ಹರಟೆ’ ಹೊಡೆದ ಲಾಂಗೂಲಾಚಾರ್ಯರು,
ಪ್ರಥಮ ದರ್ಜೆಯ ಚಿಂತಕರು,
ಸರ್ವಕುತೂಹಲಿ - ಸರ್ವಜ್ಞಾಚಾರ್ಯರು,
ಪ್ರತಿಭಾವಂತ ಪಂಡಿತರು;

ಈ ರೀತಿಯ ನಾನಾ ಉಪಾಧಿಗಳನ್ನು ಪಡೆದಿದ್ದ ದಿವಂಗತ ಪಾಡಿಗಾರು ವೆಂಕಟರಮಣ ಆಚಾರ್ಯರ ಸಮಗ್ರ ಬರಹಗಳನ್ನು ಪ್ರಕಟಿಸುವ ಯೋಜನೆಯೊಂದು ರೂಪುಗೊಂಡಿದೆ. ಮೊದಲಿಗೆ ಅವರ ಜೀವನ, ಕಾರ್ಯದ ಪರಿಚಯವನ್ನು ಮಾಡಿಕೊಳ್ಳೋಣ.

ಪಾ.ವೆಂ., ಉಡುಪಿಯ ಪಾಂಡಿತ್ಯದ ಪರಂಪರೆಯ ಆದರೆ ಕಡು ಬಡತನದ ಮನೆಯಲ್ಲಿ ದಿನಾಂಕ ೬, ಫೆಬ್ರವರಿ ೧೯೧೫ರಂದು ಜನ್ಮ ತಾಳಿದರು. ಆಗಿನ ಎಸ್.ಎಸ್.ಎಲ್.ಸಿ.ಯಲ್ಲಿ ಶಾಲೆಗೆ ಪ್ರಥಮಸ್ಥಾನ ಪಡೆದು ಪಾಸಾಗಿದ್ದರೂ ಕಾಲೇಜಿನ ಕಟ್ಟೆಯನ್ನು ಏರಲಾಗಲಿಲ್ಲ. ದಾರಿದ್ರ್ಯದಲ್ಲಿ ಹೇಗೆ ಸಾಧ್ಯ?

ಇಂಥದರಲ್ಲಿಯೇ ಸಾಹಿತ್ಯ ರಚನೆಯ ಹಂಬಲ ಮೂಡಿತ್ತು. ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ, ಔಷಧಿ ಬಾಟಲಿಗೆ ಸಂಬಂಧಿಸಿದ ಬಂಗಾಲೀ ಜಾಹೀರಾತಿನ ಮೂಲಕ ಬಂಗಾಲೀ ಕಲಿತರು. ಕಾರಣ? ರವೀಂದ್ರರ ‘ಗೀತಾಂಜಲಿ’ಯಲ್ಲಿ ಅನುವಾದಿಸಬೇಕೆನ್ನುವ ಛಲ!

ಹೊಟ್ಟೆಯ ಪಾಡಿಗಾಗಿ, ಅವರು ಉಡುಪಿಯಲ್ಲಿ ಶಾಲಾ ಮಾಸ್ತರಿಕೆ, ಅಂಗಡಿ ಲೆಕ್ಕ, ಮುದ್ರಣ ಕೆಲಸ—ಮುಂತಾದ ಹೋರೆಗಳಲ್ಲಿ, ಜೊತೆಗೆ ಆಗಿನ ಸುಪ್ರಸಿದ್ಧ ‘ಅಂತರಂಗ’ ಪತ್ರಿಕೆಯ ಸಹಸಂಪಾದನೆಯಲ್ಲಿ ಏಳೆಂಟು ವರ್ಷ ಕಳೆದರು. ಅಲ್ಲಿಂದ ಮದ್ರಾಸಿನಲ್ಲಿ ಕೆಲಕಾಲ ಸವೆಯಿತು. ಅವರು ೧೯೪೭ರಲ್ಲಿ ಹುಬ್ಬಳ್ಳಿಗೆ ಬಂದು ‘ಸಂಯುಕ್ತ ಕರ್ನಾಟಕ’ದಲ್ಲಿ ಮುದ್ರಣ ಮೇಲ್ವಿಚಾರಣೆಯ ನೌಕರಿಗೆ ಸೇರಿದರು. ಕೆಲವೇ ದಿನಗಳಲ್ಲಿ ಅವರ ಲೇಖನ ಕಾರ್ಯದ ಒಲವು ವ್ಯಕ್ತವಾದ್ದರಿಂದ ‘ಕರ್ಮವೀರ’ದಲ್ಲಿ ಬರೆಯತೊಡಗಿದರು. ‘ಲಾಂಗೂಲಾಚಾರ್ಯ’ರಾಗಿ ಹರಟೆಗಳು, ಸಂಪಾದಕ ಸಹಾಯಕರಾಗಿ ಪುಸ್ತಕ ವಿಮರ್ಶೆ, ರಾಜಕೀಯ ಟೀಕೆ-ಟಿಪ್ಪಣಿ ಮುಂತಾದವನ್ನು ಬರೆಯತೊಡಗಿದರು.

೧೯೫೫ರಲ್ಲಿ ಕಸ್ತೂರಿ ಡೈಜೆಸ್ಟ್ ಪತ್ರಿಕೆ ಆರಂಭವಾದಾಗ ಪಾ.ವೆಂ. ಅವರಿಗೇ ಅದರ ಸಂಪಾದಕತ್ವವನ್ನು ವಹಿಸಿಕೊಡಲಾಯಿತು. ಅಖಂಡ ೧೮ ವರ್ಷ ಅದರ ಸಂಪಾದನ ಕಾರ್ಯ. ಅವರ ಬೌದ್ಧಿಕ ನೆಲೆಯು ವಿಸ್ತಾರಗೊಂಡದ್ದು ಈ ಕಾಲದಲ್ಲಿಯೇ. ಅವರ ಲೇಖನ ಕಾರ್ಯವೂ ಗರಿಷ್ಠ ಪ್ರಮಾಣವನ್ನು ಕಂಡಿತು.

ಉಡುಪಿಯಲ್ಲಿದ್ದಾಗಲೇ ಲಕ್ಷ್ಮೀ ಅವರೊಂದಿಗೆ ಮದುವೆಯಾಗಿತ್ತು. ನಿವೃತ್ತಿಯ ಕಾಲದಲ್ಲಿ ಆಚಾರ್ಯರು ಅಷ್ಟ ಪುತ್ರ/ಪುತ್ರಿಯರ ಪರಿವಾರವನ್ನು ಹೊಂದಿದ್ದರು.

ನಿವೃತ್ತಿಯ ಹಿಂದಿನ ವರ್ಷ ಪಾ.ವೆಂ. ಕರುಳಿನ ಬೇನೆಯಿಂದ ತತ್ತರಿಸಿದರು. ಆಪರೇಶನ್ ಆಯಿತು; ಒಂದೇ ತಿಂಗಳಲ್ಲಿ ಎರಡು ಬಾರಿ. 'ಸತ್ತೇ ಹೋದರು' ಎನ್ನುವ ಘಟ್ಟದಲ್ಲಿಯೂ ಸಾವನ್ನು ಗೆದ್ದು ಬದುಕಿದರು. ಅವರ ಬರವಣಿಗೆ ಮುಂದುವರೆಯಿತು.

ಅರವತ್ತರ ಗಡಿಯನ್ನು ದಾಟಿದ್ದರಲ್ಲವೆ? ಹಲವಾರು ಸನ್ಮಾನ ಸಮಾರಂಭಗಳು ಜರುಗಿದವು. ೧೯೭೭ರಲ್ಲಿ ಮೈಸೂರವರು ಸಂಭಾವನಾ ಗ್ರಂಥವನ್ನು ('ಪಾವೆಂ-ಕಸ್ತೂರಿ') ಸಮರ್ಪಿಸಿದರು. ಪತ್ರಿಕೋದ್ಯಮದ ಸಾಧನೆಗಾಗಿ ಪಿ. ಆರ್. ರಾಮಯ್ಯ-ಹೆಸರಿನ ಪ್ರಶಸ್ತಿ ಲಭಿಸಿತು. ಅದೇ ಸಾಧನೆಗಾಗಿ ಅಖಿಲಭಾರತ ಮಟ್ಟದ ಗೋಯೆಂಕಾ ಪ್ರಶಸ್ತಿಗಾಗಿ ಆಯ್ಕೆಯಾದರು (೧೯೯೨). ಅದನ್ನು \ ಸ್ವೀಕರಿಸಲೆಂದು ಮುಂಬಯಿಗೆ ಹೋದರು; ಗೊತ್ತಾಗಿದ್ದ ಆ ದಿನ ಸಮಾರಂಭ ನಡೆಯಲಿಲ್ಲ. ಮರು ತಾರೀಖು ನಿಗದಿಮಾಡಿದ್ದರ ಮುಂಚೆಯೇ ಆಚಾರ್ಯರು ಅಸುನೀಗಿದರು (೪ ಮೇ, ೧೯೯೨).

## ಕೃತಿ ರಚನೆ

ಪಾ.ವೆಂ. ಅವರ ಸಾಹಿತ್ಯ ಕಾರ್ಯವನ್ನು ಈ ಮೂರು ಕಾಲಖಂಡಗಳಲ್ಲಿ ಗುರುತಿಸಬಹುದು.

—೧೯೩೨ರಿಂದ ೧೯೪೨. ಉಡುಪಿಯಲ್ಲಿದ್ದಾಗ, 'ಅಂತರಂಗ', 'ಜಯಕರ್ನಾಟಕ' ಮುಂತಾದ ಪತ್ರಿಕೆಗಳಲ್ಲಿ ಬಂದಂಥ ಕತೆ-ಕವನಗಳ ರಚನೆ. ಅವರ ಮೊದಲ ಕವನ 'ಉದ್ಗಾರ' ಎಂಬುದು 'ಜಯಕರ್ನಾಟಕ'ದಲ್ಲಿ ಪ್ರಕಟವಾಯಿತು (೧೯೩೩). ಅವರ ಪ್ರಥಮ ಸಣ್ಣಕತೆ 'ಮಧುವನ' ಎಂಬ ಕಥಾಸಂಗ್ರಹದಲ್ಲಿ ಬಂದಿದೆ (೧೯೩೫).

—೧೯೪೨ ರಿಂದ ೧೯೭೪. ನಿವೃತ್ತರಾದ ಮೇಲೆ ತುಷಾರ, ಸುಗುಣಮಾಲಾ, ತರಂಗ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದ ಸರ್ವವಿಧದ ಬರಹಗಳು. ತುಳುಕವನಗಳ ರಚನೆಯೂ ಇದೇ ಅವಧಿಯದು. ಜೊತೆಗೆ 'ಕಸ್ತೂರಿ'ಯಲ್ಲಿಯೇ ಪ್ರತಿ ತಿಂಗಳು ವಿವೇಚಿಸಲಾದ 'ಪದಾರ್ಥ ಚಿಂತಾಮಣಿ'.

ಪಾ.ವೆಂ. ಅವರ ಒಟ್ಟಿನ ಬರವಣಿಗೆ ಹತ್ತುಸಾವಿರ ಪುಟಗಳನ್ನು ಮೀರುವುದಾಗಿದ್ದರೂ ಪುಸ್ತಕ ರೂಪದಲ್ಲಿ ಬಂದದ್ದು ತೀರಾ ಕಡಿಮೆ. 'ರಶಿಯದ ರಾಜ್ಯಕ್ರಾಂತಿ' ಮತ್ತು 'ಸ್ವತಂತ್ರ ಭಾರತ' ಎಂಬೆರಡು ಪ್ರಚಲಿತ ರಾಜಕೀಯ ವಿಶ್ಲೇಷಣೆಗಳು, ನಾಲ್ಕು ಹರಟೆಗಳ

ಸಂಗ್ರಹಗಳು ಮತ್ತು ಎರಡೇ ಕವನ ಸಂಗ್ರಹಗಳು. ಎದ್ದು ಕಾಣುವ ಕೃತಿಗಳೆಂದು 'ಸುಭಾಷಿತ ಚಮತ್ಕಾರ' ಹಾಗೂ 'ಪದಾರ್ಥ ಚಿಂತಾಮಣಿ' ಇವನ್ನು ಹೆಸರಿಸಬೇಕು.

## ಪಂಚಮುಖಗಳು

ಪಾ.ವೆಂ. ಆಚಾರ್ಯರ ಕೃತಿರಚನೆಯ ಭೂಮಿಕೆಯನ್ನು ಐದು ಮುಖಗಳಲ್ಲಿ ರೇಖಿಸಬಹುದು. ಅವೆಂದರೆ: ಕಲ್ಪಕತೆ; ಚಿಂತಪರತೆ; ಶಬ್ದಾಸಕ್ತಿ; ಪತ್ರಿಕಾಧರ್ಮ ಹಾಗೂ ಅಣಕಪ್ರವೃತ್ತಿ.

ಕಲ್ಪಕತೆ ಅವರ ಕವನ, ಕತೆಗಳಲ್ಲಿ ವ್ಯಕ್ತವಾದರೆ, ಚಿಂತನಪರತೆಯು ಜೀವನ ಸಮಸ್ಯೆಗಳ ಕುರಿತ ವಿಚಾರಮಂಥನದಲ್ಲಿ ವ್ಯಕ್ತವಾಗಿದೆ. ಶಬ್ದಾಸಕ್ತಿಯಂತೂ 'ಕಸ್ತೂರಿ'ಯು ಆರಂಭವಾದ ಕಾಲದಿಂದ ತೋರಿಬಂದಿದೆ. ಪತ್ರಿಕಾಧರ್ಮದ ಬಗೆಯನ್ನು ಅವರು ಪಾಲಿಸುವುದಕ್ಕೂ 'ಕಸ್ತೂರಿ'ಯೇ ಕಾರಣವಾಯ್ತು. ಅಣಕ ಪ್ರವೃತ್ತಿ ಅವರಿಗೆ ಜನ್ಮಜಾತವಾಗಿದ್ದು ಅವರ ಹೆಚ್ಚಿನ ಕೃತಿರಚನೆಗೆ ಅರ್ಥಾತ್ ಹರಟೆಗಳಿಗೆ ಪ್ರಮುಖ ಪ್ರೇರಣೆಯಾಗಿ ನೆಲೆಗೊಂಡಿದೆ. ಇವು ಐದೂ ಭೂಮಿಕೆಗಳ ಹಿಂದೆ ಅಖಂಡವಾದ ವ್ಯಾಸಂಗಪ್ರಿಯತೆ ಇದ್ದುದನ್ನೂ ನಾವು ಗಣಿಸತಕ್ಕುದು.

ತುಸು ವಿವರಗಳನ್ನು ಕೊಡೋಣವೆ?

ಅನೇಕರಂತೆ ಪಾವೆಂ ತಮ್ಮ ಲೇಖನವನ್ನು ಕವನಿಸುವುದರಿಂದಲೇ ಆರಂಭಿಸಿದರು. ಅದೂ ಹನ್ನೊಂದು ವರ್ಷದವರಿದ್ದಾಗ. ಆ ಮುಂದೆಯೂ ಕವಿತಾರಚನೆಗೆ ಮನಗೊಟ್ಟರೂ, ನಿಯಮಿತವಾಗಿ ಬರೆಯುವುದಕ್ಕೆ ಆಗಲೆ ಅಲ್ಲ. ಆದರೆ ಕಾಲ ಸರಿದಂತೆ ಅವರ ಪ್ರಯೋಗಶೀಲ ಪ್ರವೃತ್ತಿ ಕವಿತೆಯಲ್ಲಿ ನವನವೀನ ಪ್ರಯೋಗ ಮಾಡುವುದಕ್ಕೆ ಪ್ರೇರಿಸಿತು. ಅವರ ಮೊದಲ ಕವನ ಸಂಗ್ರಹ 'ನವನೀರದ'ಕ್ಕೆ ಆಗಿನ ಮುಂಬಯಿ ಸರಕಾರದಿಂದ ಪಾರಿತೋಷಕವೂ ಲಭಿಸಿತ್ತು. ಅನಂತರ ಪ್ರಕಟವಾದ 'ಕೆಲವು ಪದ್ಯಗಳು' ಕೆಲವೇ ಇದ್ದು, ಅವರ ಒಟ್ಟಿನ ಕವನ ರಚನೆಗೂ ಅನ್ವಯಿಸುತ್ತದೆ.

'ಮಂಕುತಿಮ್ಮ'ನ ಮಾದರಿಯಲ್ಲಿ ಅವರು 'ಪೆಂಗೋಪದೇಶ'ದ ಪದ್ಯಗಳನ್ನು ರಚಿಸಿದ್ದಾರೆ. ಅವು ಈ ಮುಂಚೆ ಪ್ರಕಟವಾಗಿಲ್ಲ. ಇದೊಂದು ಮಾದರಿ:

ಬದುಕು ಖಟರಾ-ಬಸ್ಸು; ವಿಧಿಯದರ ಡ್ರೈವರನು
ಕುಡಿದು ಹೊಡೆಯುತ್ತಾನೆ ಎರಡು ಕಾಣುತ್ತ
ಗಟರವೊ ಮರವೊ ಸಂಕವೊ ಟ್ರಕ್ಕೊ ಗೋಡೆಯೊ
ಮಡಿದವನಿಗಾವುದೇನೊ ಎಲವೊ ಪೆಂಗೇ.

ಅವರು ಕತೆಗಳನ್ನು ಬರೆದದ್ದಾದರೂ ಕಡಿಮೆಯೇ. ಹೆಚ್ಚಾಗಿ ಉಡುಪಿಯ ಲ್ಲಿದ್ದಾಗ ಬರೆದವುಗಳು. ಅವು ೧೯೩೦ರ ದಶಕದ ಕತೆಗಳಾದರೂ ವಿಶಿಷ್ಟ ಸನ್ನಿವೇಶಗಳು ಹಾಗೂ

ಅನಿರೀಕ್ಷಿತ ಕೊನೆಯಿಂದ ಕೂಡಿದವುಗಳಾಗಿವೆ. ಆ ಕಾಲದಲ್ಲಿ ಬರೆದ 'ಅಪರಜೀವನ' ಎಂಬ ಕತೆಯು ಕನ್ನಡದಲ್ಲಿ ಅತೀಂದ್ರಿಯ ಪ್ರಜ್ಞೆಯನ್ನು ಮೈಗೂಡಿಸಿದಂಥ ಮೊತ್ತ ಮೊದಲಿನ ಕತೆಯಾಗಿದೆ.

ಸಾಹಿತ್ಯಿಕ ಬರಹಗಳಲ್ಲಿ ಪಾ.ವೆಂ. ಅವರದು ಇನ್ನೊಂದು ಬಗೆಯ ವಿಶಿಷ್ಟ ಕೊಡುಗೆ. ಸಂಸ್ಕೃತ ಸಾಹಿತ್ಯ, ಹಳಗನ್ನಡ ಮತ್ತು ಭಾಷಾವಿಷಯಗಳಿಗೆ ಸಂಬಂಧಿಸಿದ ಅವರ ಲೇಖನಗಳು ಮೌಲಿಕ ಅಂಶಗಳನ್ನು ಒಳಗೊಂಡಿವೆ. ಸಂಸ್ಕೃತ ಕಾವ್ಯಗಳಲ್ಲಿಯ ಪ್ರಣಯ ವಿವೇಚನೆ ಗಮನಾರ್ಹವಾಗಿದೆ. ಇತ್ತ ನೇಮಿಚಂದ್ರ, ಕುಮಾರವ್ಯಾಸರ ಬಗೆಗೆ ನವೀನ ಆಲೋಚನೆಗಳನ್ನು ಮಂಡಿಸಿದ್ದಾರೆ. ಸಮಕಾಲೀನ ಕನ್ನಡ ಸಾಹಿತ್ಯದ ಬಗ್ಗೆ ಆಳವಾಗಿ ಯೋಚಿಸಿ ಬರೆದದ್ದು ಕಂಡುಬಾರದಿದ್ದರೂ ತಮ್ಮ ಸಮಕಾಲೀನ—ಆದರೆ ಹಿರಿಯರಾದ, ಸಾಹಿತಿ ಪತ್ರಕರ್ತರ ಬಗ್ಗೆ ಮನನೀಯವಾದ ವ್ಯಕ್ತಿಚಿತ್ರಗಳನ್ನು ಕೊಟ್ಟಿದ್ದಾರೆ. ಶಿವರಾಮ ಕಾರಂತ, ಶಂ.ಬಾ. ಜೋಶಿ ಇವರ ವ್ಯಕ್ತಿ ಚಿತ್ರಣದ ಜೊತೆಗೆ ಅವರ ಕೃತಿಗಳ ಆಳವಾದ ಅಭ್ಯಾಸಮಾಡಿ ಬರೆದ ಪ್ರಬಂಧಗಳು ಆಚಾರ್ಯರ ವೈದುಷ್ಯಕ್ಕೆ ನಿದರ್ಶನಗಳಾಗಿವೆ. ಇತ್ತ ತಮ್ಮ ಸ್ನೇಹಿತರಾಗಿದ್ದ ದ.ಬಾ. ಕುಲಕರ್ಣಿಯವರ ವ್ಯಕ್ತಿಚಿತ್ರದಲ್ಲಿ ಆತ್ಮೀಯತೆ ಎದ್ದು ತೋರುವಂತಿದೆ.

ದಕ್ಷಿಣ ಕನ್ನಡ ಜಿಲ್ಲೆಯವರೇ ಆದ ಪಾ.ವೆಂ. ಅವರಿಗೆ ತುಳುಭಾಷೆ, ಉಡುಪಿ, ಕೃಷ್ಣಮಠದ ಸ್ವಾಮಿಗಳು-ಮುಂತಾದ್ದರ ಬಗ್ಗೆ ಸದ್ಭಾವ ಇದ್ದುದು ಸ್ವಾಭಾವಿಕ. ಈ ಕುರಿತು ಬರೆದಿದ್ದಾರೆ. ತುಳುವಿನ ಶಿಷ್ಟಭಾಷೆಯಲ್ಲಿಯೂ ಅವರಿಗೆ ಪರಿಶ್ರಮವಿತ್ತು. ತುಳುಕಾವ್ಯ 'ಭಾಗವತೋ'ದ ಮೇಲಿನ ಲೇಖನ ಈ ದೃಷ್ಟಿಯಿಂದ ಗಮನಾರ್ಹವಾದುದು. ಅವರ ತುಳು ಕವನಗಳ ಸಂಗ್ರಹವೂ ಪ್ರಕಟವಾಗಿದೆ. ('ಬಯ್ಯ ಮಲ್ಲಿಗೆ'). ಧರ್ಮದ ಹೆಸರಿನಲ್ಲಿ ನಡೆಯುವ ತಿಕ್ಕಾಟವನ್ನು 'ಆಯ ಬತ್ತೆ ಇಂಬೈ ಬತ್ತೆ' ಎಂಬ ಕವನದಲ್ಲಿ ಚಿತ್ರಿಸಿದ್ದು, ತುಳುಭಾಷಿಕರ ವಿಶೇಷ ಮೆಚ್ಚುಗೆಯನ್ನು ಗಳಿಸಿದೆ.

ಇವೆಲ್ಲವನ್ನು ಮೀರಿಸಿದುವೆಂದರೆ ಅವರ ಮೌಲಿಕ ಚಿಂತನೆಯನ್ನೊಳಗೊಂಡ ಪ್ರಬಂಧಗಳು. ಅವು ಆಚಾರ್ಯರ ವ್ಯಾಸಂಗಪ್ರೇರಿತವಾದ, ಆದರೆ ಮೂಲಭೂತವಾದ ವಿಚಾರಗಳನ್ನು ಒಳಗೊಂಡಿವೆ. 'ಜೀವನಕ್ಕೆ ಅರ್ಥವುಂಟೆ?' ಎಂಬುದು, ಅದರಂತೆ ಮಾನವ ಪ್ರವೃತ್ತಿ ಹಾಗೂ ಮೌಲ್ಯಗಳು, ಪಾಪಪ್ರಜ್ಞೆ, ಆಜ್ಞಾಪಾಲನೆ, ಆತ್ಮಸಾಕ್ಷಿ—ಈ ಬಗೆಯ ಹತ್ತಾರು ವಿಷಯಗಳನ್ನು ಅವರು ಎತ್ತಿಕೊಂಡಿದ್ದಾರೆ. ಪಕ್ವ ಆಲೋಚನೆಯ ಅಭಿವ್ಯಕ್ತಿ ಇಲ್ಲಿದೆ.

ಕೆಲವು ಪ್ರಬಂಧಗಳು ಧಾರ್ಮಿಕ, ಶೈಕ್ಷಣಿಕ ಸಮಸ್ಯೆಗಳನ್ನು ವಿವೇಚಿಸುತ್ತವೆ. ಉದಾಹರಣೆಗೆ ಶಾಸ್ತ್ರಗಳನ್ನು ಏಕೆ ಪಾಲಿಸಬೇಕು?, ಶಿಕ್ಷಣ ಮತ್ತು ಜೀವನ ಮೌಲ್ಯಗಳು, ಸಾಮಾಜಿಕ ಬದಲಾವಣೆ ಹಾಗೂ ಮನೋವೃತ್ತಿಗಳು. ಇವನ್ನು ಪರಿಶೀಲಿಸಿದಾಗ ಪಾ.ವೆಂ. ಪ್ರಥಮ ದರ್ಜೆಯ ಚಿಂತಕರೆಂಬುದು ಮನವರಿಕೆಯಾಗುವುದು. ಅವರ 'ಬ್ರಾಹ್ಮಣರೇನು

ಮಾಡಬೇಕು?' ಎಂಬ ಸವಿವರ ವಿಶ್ಲೇಷಣಾ ಪ್ರಬಂಧವನ್ನು ವಿಶೇಷವಾಗಿ ಹೆಸರಿಸಬೇಕು. ಅತ್ಯಂತ ನಿಷ್ಪಕ್ಷವಾದ ರೀತಿಯಲ್ಲಿ ವಿಷಯಮಂಡನೆ ಮಾಡಿದ್ದಾರೆ.

'ಕಸ್ತೂರಿ'ಗಾಗಿ ಬರೆದ ಲೇಖನಗಳು ೬೦೦ರ ಸಂಖ್ಯೆಯನ್ನು ಮೀರಿವೆ. ಅವನ್ನು ಹೀಗೆ ವರ್ಗೀಕರಿಸಬಹುದು:

ಅ) ಜಗದ್ವಿಖ್ಯಾತ ವ್ಯಕ್ತಿಗಳ ಚರಿತ್ರೆ

ಆ) ದೇಶ-ವಿದೇಶಗಳ ಪರಿಚಯ

ಇ) ಜಗತ್ತಿನಲ್ಲಿ ನಡೆದ ವೈಚಿತ್ರ್ಯಗಳು

ಈ) ಭಾರತದ ಆಗು-ಹೋಗುಗಳು

ಉ) ವೈಜ್ಞಾನಿಕ ವಿಷಯಗಳು

ಇಷ್ಟೊಂದು ವೈವಿಧ್ಯಮಯ ಲೇಖನಗಳಿಗಾಗಿ ಪಾ.ವೆಂ. ಮಾಹಿತಿಯನ್ನು ಕಲೆಹಾಕುವಲ್ಲಿ, ಅವನ್ನು ಪರಿಶೋಧಿಸಿ ವ್ಯವಸ್ಥಿತವಾಗಿ ನಿರೂಪಿಸುವಲ್ಲಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಇವನ್ನೆಲ್ಲ ಮರು-ಮುದ್ರಣ ಮಾಡಿ ಪ್ರಕಟಿಸಿದರೆ ವಿಶ್ವಕೋಶದ ಮಾದರಿಯಲ್ಲಿ ಯುವ ಪೀಳಿಗೆಗೆ ತುಂಬಾ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ಅವರ ವೈಜ್ಞಾನಿಕ ಲೇಖನಗಳನ್ನು ಎತ್ತಿ ಹೇಳಬೇಕು. ಕಸ್ತೂರಿಗಾಗಿ ಇತರ ವಿಷಯಗಳ ಬಗ್ಗೆ ಲೇಖನಗಳು ವಿಪುಲವಾಗಿ ಬರುತ್ತಿದ್ದರೂ, ವಿಜ್ಞಾನದ ಬಗ್ಗೆ ಬರೆಯುವ ಶ್ರಮವನ್ನು ವಹಿಸುವವರಿರಲಿಲ್ಲ. ಆದರೆ ಆ ವಿಷಯ ಕಸ್ತೂರಿಯಲ್ಲಿ ಬರಲೇಬೇಕು. ಹೀಗಾಗಿ 'ಕಸ್ತೂರಿ' ದಿನಗಳಲ್ಲಿ ಪಾ.ವೆಂ. ಅವರ ವಾಚನದ ಬಹುಪಾಲು ವಿಜ್ಞಾನ ವಿಷಯಕ್ಕೇ ಮೀಸಲಾಗಿದ್ದಿತು. ಅವರೇನೂ ವಿಜ್ಞಾನವನ್ನು ಕಾಲೇಜು ಮಟ್ಟದಲ್ಲಿ ಓದಿದವರಲ್ಲ. ಪ್ರಕೃತ ಬರಹಗಳನ್ನು ಇಂಗ್ಲಿಷ್‌ನಲ್ಲಿ ಓದಿ ತಾವು ಅದನ್ನು ಮೊದಲಿಗೆ ಅರ್ಥಮಾಡಿ ಕೊಳ್ಳಬೇಕಿತ್ತು. ಅದರ ವಿಷಯ ಪೂರ್ತತೆಗೆ ಬೇರೆ ಲೇಖನಗಳನ್ನು ಓದಬೇಕಿತ್ತು; ಕನ್ನಡ ಪಾರಿಭಾಷಿಕ ಪದಗಳನ್ನು ಸೃಷ್ಟಿಸಿಕೊಂಡು ಆಮೇಲೆ ಕನ್ನಡ ಲೇಖನವಾಗಿ ಸಿದ್ಧಗೊಳಿಸಬೇಕಿತ್ತು. ಪಾ.ವೆಂ. ಕಸ್ತೂರಿಯ ಮೊದಲ ಸಂಚಿಕೆಯಿಂದ ಹಿಡಿದು ೧೮ ವರ್ಷಗಳ ಪರ್ಯಂತ ಹಾಗೆ ಮಾಡಿದ್ದಾರೆ. ಆ ಲೆಕ್ಕದಲ್ಲಿ ಅವರೊಬ್ಬ ಗಣ್ಯ ವಿಜ್ಞಾನ-ಲೇಖಕರೆಂದೇ ಪರಿಗಣಿಸತಕ್ಕುದು.

ಅವರು ಪ್ರಾಯಶಃ ವಿಜ್ಞಾನದ ಎಲ್ಲ ಪ್ರಕಾರಗಳಲ್ಲಿಯೂ ಕೈಯಾಡಿಸಿದ್ದಾರೆ; ಖಗೋಳ ಶಾಸ್ತ್ರ, ಭೂಭೌತಿಕ, ಸಸ್ಯ-ಪ್ರಾಣಿಗಳ ಪ್ರಪಂಚ, ಜೊತೆಗೆ ಮನೋವಿಜ್ಞಾನ, ಲೈಂಗಿಕ ವಿಜ್ಞಾನಗಳೂ ಅವರ ಗಮನವನ್ನು ಸೆಳೆದಿವೆ. ಆದರೆ ಈ ವಿಜ್ಞಾನ ಲೇಖನ ಸಮುದಾಯದಲ್ಲಿ ವೈದ್ಯಕೀಯಕ್ಕೆ ಹೆಚ್ಚಿನ ಪಾಲು ಸಂದಿದೆ. ರೋಗಗಳ ಸ್ವರೂಪವನ್ನು ತಿಳಿದು ಜನ ಆರೋಗ್ಯವಂತರಾಗಿ ಬಾಳಬೇಕೆಂಬ ಸದಾಶಯವನ್ನು ನಾವು ಅಲ್ಲಿ ಗುರುತಿಸಬಹುದು. ಕೆಲವು ಪ್ರಸಿದ್ಧ ವಿಜ್ಞಾನಿಗಳ ಸಾಧನೆಯನ್ನು ವಿವರಿಸುವ ಚರಿತ್ರೆಗಳನ್ನೂ ಬರೆದಿಟ್ಟಿದ್ದಾರೆ.

ಇನ್ನೀಗ ಹರಟೆಗಳು. ಅವರ ಒಟ್ಟಿನ ಕೃತಿರಚನೆಯ ದೊಡ್ಡ ಮೊತ್ತ 'ಲಾಂಗೂಲಾ ಚಾರ್ಯ' ಹೆಸರಿನ ಹರಟೆಗಳದ್ದೇ. ಐನೂರನ್ನು ಮಿಕ್ಕಿದ ಇಷ್ಟೊಂದು ಹರಟೆಗಳನ್ನು ಕನ್ನಡದಲ್ಲಿ ಬೇರಾರೂ ಬರೆದಂತಿಲ್ಲ. ಆದರೇನು, ಹಾಗೆ ವಿಷಯದ ಮಂಡನೆಯ ಅಥವಾ ಪದಗುಚ್ಛದ ಪುನರಾವರ್ತನೆ ಕಂಡುಬರುವುದಿಲ್ಲ. (ಉದಾ: 'ಕತ್ತೆ'ಯ ನಿಮಿತ್ತದ ಗಾರ್ದಭಗಾನ ಮತ್ತು ಗಾರ್ದಭೋಪಾಖ್ಯಾನ ಎಂಬ ಎರಡು ಹರಟೆಗಳು).

ಹರಟೆ ಬರೆಯುವುದಕ್ಕೆ ಏನಾದರೊಂದು ಪ್ರಕೋಪನ (provocation) ಬೇಕು. ಒಂದು ಯಃಕಶ್ಚಿತ ಘಟನೆ, ಸಣ್ಣ ವಿಚಾರ ಇಲ್ಲವೆ ಆಡಿದ ಒಂದು ಮಾತು-ಇಷ್ಟರ ಮಟ್ಟಿಗಿನ ಪ್ರಕೋಪನೆ ಅವರಿಗೆ ಸಾಕಿತ್ತು. ಹಾಗೆ ಆರಂಭಿಸಿ ತಮ್ಮ ಬಹುಶ್ರುತತ್ವದ ಬೆಂಬಲದಿಂದ ವಿಷಯವನ್ನು ವ್ಯಂಗ್ಯದ ಧಾಟಿಯಲ್ಲಿಯೇ* ಮುಂದುವರಿಸುತ್ತಿದ್ದರು.

'ಕಸ್ತೂರಿ' ನಿಮಿತ್ತದ ಅವರ ಪತ್ರಿಕಾ ಧರ್ಮವನ್ನು ತುಸು ವಿವರಿಸಬೇಕು. ಈಗಿನ ಪತ್ರಿಕಾವೃತ್ತಿಯೆಂದರೆ ತತ್ಕಾಲದ ಸಂಚಿಕೆಗೆ ಏನು ಬೇಕೋ ಅದನ್ನು ಸೆಳೆದುಕೊಂಡು, ಎಷ್ಟು ಬೇಕೋ ಅಷ್ಟಕ್ಕೇನೆ ಗೀಚುವುದನ್ನು ಮುಗಿಸಿ, ಆಮೇಲೆ ಆ ಲೇಖನವನ್ನು (ಆ ಲೇಖಕನನ್ನೂ) ಮರೆತುಬಿಡಬಹುದಾಗಿದೆ. ಪಾವೆಂ. ಅವರಿಗೆ ಅದೊಂದು ಶ್ರದ್ಧೆಯಿಂದ ಮಾಡಬೇಕಾದ ಧರ್ಮಕಾರ್ಯವೇ ಎಂಬಂತಿದ್ದಿತು. ವಿಷಯವೊಂದರ ಬಗ್ಗೆ ಕುತೂಹಲದ ಆಸಕ್ತಿ ಮೂಡಿತೆಂದರೆ ತಾವು ಪೂರ್ವಭಾವಿಯಾಗಿ ತಿಳಿದುಕೊಂಡು ಸೂಕ್ತ ಲೇಖಕರನ್ನು ಹುಡುಕುತ್ತಿದ್ದರು. ಅವರಿಂದ ಬರೆಯಿಸುವುದು; ಅನಂತರವೇ ಅದನ್ನು ಪ್ರಕಟಿಸುವುದಾಗಬೇಕು. ಈ ಸಂದರ್ಭದಲ್ಲಿ ಪಾವೆಂ. ಹಿರಿ-ಕಿರಿಯರೆನ್ನದೆ ಸಂತತವಾಗಿ ಪತ್ರವ್ಯವಹಾರ ಮಾಡುತ್ತಿದ್ದರು. ಹಳೆಯ 'ಕಸ್ತೂರಿ'ಯ ಲೇಖಕರು ಯಾರನ್ನು ಕೇಳಿದರೂ ಪಾವೆಂ. ಅವರ ಈ ವಿಶೇಷತೆಯನ್ನು ಬಾಯ್ತುಂಬ ಹೊಗಳುತ್ತಾರೆ.

ಕಸ್ತೂರಿ ವಸ್ತುತಃ ಡೈಜೆಸ್ಟ್ ಪತ್ರಿಕೆ. ನಾನಾ ಕಡೆಗಳಿಂದ ಮಧುವನ್ನು ತಂದು ಇರಿಸಿದ ಜೇನ್ನೊಣದ ಹಾಗೆ. ಪಾ.ವೆಂ. ಅವರ ಮೇಲ್ಕಂಡ ಪತ್ರಿಕಾಧರ್ಮದಿಂದಾಗಿ ಈ ಜೇನುತುಪ್ಪ ತರುಣರಿಂದ ಮುದುಕರ ವರೆಗೆ ಸರ್ವಗ್ರಾಹ್ಯವಾಯಿತು.

ಈ 'ಕಸ್ತೂರಿ' ಪತ್ರಿಕೆಯೇ ಅವರ ಶಬ್ದಾಸಕ್ತಿಗೆ ಪುಟಕೊಟ್ಟಿತು. ಮುದ್ದಣ, ಗೋವಿಂದ ಪೈಗಳಂಥ ಶಬ್ದಾಸಕ್ತರು ಬಾಳಿದ ಪ್ರದೇಶದಿಂದ ಬಂದವರಾಗಿ, ಅವರಲ್ಲಿ ಈ ಪ್ರವೃತ್ತಿ ಮೊದಲಿನಿಂದಲೇ ಇದ್ದಿರಬೇಕು. ಕಸ್ತೂರಿಯ ಆರಂಭದ ಸಂಚಿಕೆಗಳಲ್ಲಿ ಕ್ರಮವಾಗಿ ಬರತೊಡಗಿದ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ಎಂಬುದರಲ್ಲಿ, ಅನಂತರ ಬರತೊಡಗಿದ 'ಪದ-ಅರ್ಥ ಚಿಂತಾಮಣಿ'ಯ ನಿಯಮಿತ ವಿವೇಚನೆಯಲ್ಲಿ ಅದು ಸುವ್ಯಕ್ತವಾಗಿದೆ. ಶಬ್ದದ

---

* ಅನೇಕ ಹರಟೆಗಳ ಶೀರ್ಷಿಕೆಗಳೇ ಪ್ರಚೋದಕವಾಗಿವೆ: 'ನಗ್ನಾಪರಾಧ', ಗೋಹತ್ಯೆ ಮಾಡಿರಿ', 'ಮನುಷ್ಯ ನಗದಿದ್ದರೆ', 'ಶ್ಮಶ್ರು (ಗಡ್ಡ) ಚಿಂತಾರತ್ನಂ', 'ನೀವು ಹೆಂಡತೀನ್ನ ಹೊಡೆಯುವುದನ್ನು ಬಿಟ್ಟಿದ್ದೀರಾ?'

ಪೂರ್ವಾಪರ, ಅದರ ಜ್ಞಾತಿಪದಗಳು, ಅದರಿಂದ ತಿಳಿದು ಬರುವ ಸಾಂಸ್ಕೃತಿಕ ಅಂಶಗಳು—ಇವುಗಳ ಆಳಕ್ಕೆ ಇಳಿದು 'ಚಿಂತಾಮಣಿ' ರತ್ನವನ್ನೇ ಹೊರತೆಗೆದರೆನ್ನಬೇಕು. ಇಲ್ಲಿ ಶಬ್ದಗಳ ಗಂಟನ್ನು ಬಿಚ್ಚುವುದಲ್ಲದೆ, ಅನ್ಯಭಾಷಾ ಶಬ್ದಗಳ ನಂಟನ್ನು ತೋರ್ಪಡಿಸಿದ್ದೂ ಕಂಡುಬರುತ್ತದೆ. ಈ ವೈದುಷ್ಯದಿಂದಾಗಿ ಕಿಟಲ್, ಡಿ.ಎಲ್. ನರಸಿಂಹಾಚಾರ್ಯ ಮತ್ತು ಜಿ. ವೆಂಕಟಸುಬ್ಬಯ್ಯ—ಇವರ ಸಾಲಿನಲ್ಲಿಯೇ ಪಾವೆಂ. ಅವರನ್ನೂ ಹೆಸರಿಸಬೇಕಾಗುವುದು.

## ಸಮಾರೋಪ

ಪಾ.ವೆಂ. ಆಚಾರ್ಯರು ಕಲಿತದ್ದು ಕಡಿಮೆ; ಓದಿದ್ದೇ ಜಾಸ್ತಿ. ಅವರ ಈ ಓದು ಬಿಡುವರಿಯದ್ದು. ಮತ್ತೆ ಅದೇನೂ ವ್ಯವಸ್ಥಿತವಾದದ್ದಲ್ಲ. ಆದರೆ ಓದಿದ್ದನ್ನು ತಮ್ಮ ಬೌದ್ಧಿಕ ಜರಡಿಯಲ್ಲಿ ಹಿಡಿದು ಗಟ್ಟಿಯಾದ ಆಲೋಚನೆಗಳನ್ನಷ್ಟೇ ಉಳಿಸಿಕೊಂಡರು. ಇನ್ನು ಸಮಕಾಲೀನ ಘಟನೆಗಳಿದ್ದರೆ ತೀವ್ರ ಪ್ರಭಾವಕ್ಕೊಳಗಾಗುತ್ತಿದ್ದರು. ಅನಂತರದ ತಮ್ಮ ಪ್ರತಿಕ್ರಿಯೆಯನ್ನು ಹಿಂದು-ಮುಂದುಗಳನ್ನು ಪರಾಮರ್ಶಿಸಿ, ಸಾರಾಸಾರ ವಿವೇಕದಿಂದ ನಿರೂಪಿಸುತ್ತಿದ್ದರು. ಈ ಕ್ರಮದಲ್ಲಿ ಸ್ವಂತದ ಅಭಿರುಚಿ ಮತ್ತು ಸ್ವತಂತ್ರ ದೃಷ್ಟಿ ಇವನ್ನು ತಮ್ಮ ಬದುಕು ಮತ್ತು ಬರಹಗಳಲ್ಲಿ ಉಳಿಸಿಕೊಂಡಿದ್ದರು.

ಪಾ.ವೆಂ. ಅವರ ಇನ್ನೊಂದು ವಿಶೇಷತೆ ಎಂದರೆ ಹತ್ತಾರು ವಿಷಯಗಳಲ್ಲಿ ಏಕಕಾಲಕ್ಕೆ ಚಿಂತನೆ ನಡೆಸುತ್ತಿದ್ದುದು. ಬರಹವಂತೂ ಸರಿಯೇ, ಅವರೊಡನೆ ಮಾತಿಗೆ ನಿಂತಾಗಲೂ ಇದು ಮನವರಿಕೆಯಾಗುವಂತಿತ್ತು. ವಿಧ-ವಿಧವಾದ, ಎಷ್ಟೋ ಸಲ ಒಂದಕ್ಕೊಂದು ಸಂಬಂಧವಿಲ್ಲ-ಎನಿಸುವಂತಹ ವಿಚಾರಗಳು ಕಾರಂಜಿಯ ನೀರಿನಂತೆ ಚಿಮ್ಮುತ್ತಿದ್ದವು. ಸ್ಫುರಣ-ಎನ್ನುವುದು ಹೀಗೇ ಕಾಣಿಸಿಕೊಳ್ಳುವುದಲ್ಲವೆ? ಈ ಸ್ಫುರಣವೇ ನವನವೋನ್ಮೇಷಶಾಲಿನಿಯಾದ ಪ್ರತಿಭೆ-ಎನಿಸಿಕೊಳ್ಳುತ್ತದೆ. ಇಂಥ ಪ್ರತಿಭೆ ಬೇಂದ್ರೆಯವರಲ್ಲಿ ಇದ್ದಿತು. ಅವರ ಅನಂತರ ಹೆಸರಿಸಬೇಕಾದವರು ಪಾ.ವೆಂ. ಆಚಾರ್ಯರೇ.

## ಸಮಗ್ರ ಪಾವೆಂ.

ಪಾ.ವೆಂ. ಆಚಾರ್ಯರ ಸಮಸ್ತ ಬರಹಗಳನ್ನು ೧೫ ಸಂಪುಟಗಳಲ್ಲಿ ಹೊರತರುವ ಯೋಜನೆ ಇದ್ದು, ಅದರ ರೂಪರೇಷೆ ಇಂತಿದೆ.

—ಲಾಂಗೂಲಾಚಾರ್ಯ -ಹೆಸರಿನ ಹರಟೆಗಳು, ನಗೆಬರಹಗಳು

—ಉಡುಪಿಯ ಪರಿಸರದ ಲೇಖನಗಳು (ತುಳು ವಿಷಯವೂ ಸೇರಿ)

—ಜಗದ್ವಿಖ್ಯಾತ ವ್ಯಕ್ತಿಗಳು (ಚರಿತ್ರಾತ್ಮಕ)

—ಜೀವನ ಮಂಥನ (ಮೌಲಿಕ ವಿಚಾರಗಳು)

—ಸಾಹಿತ್ಯ ಸ್ಫುರಣ (ಹಿರಿಯ ಸಾಹಿತಿಗಳ ವ್ಯಕ್ತಿಚಿತ್ರ ಸಹಿತ)

—ಜಗತ್ತಿನಲ್ಲಿ ಜರುಗಿದ ವೈಚಿತ್ರ್ಯದ ಘಟನೆಗಳು

—ವೈಜ್ಞಾನಿಕ ಆವಿಷ್ಕಾರ
—ಲಲಿತ ಸೃಷ್ಟಿ (ಕವನ, ಸಣ್ಣಕತೆ, ಪೆಂಗೋಪದೇಶ)
—ಪ್ರಪಂಚ ಪರ್ಯಟನ (ವಿವಿಧ ದೇಶಗಳ ತ್ರೋಟಿಕ ಪರಿಚಯ)
—ಪಾ.ವೆಂ. ಕಂಡ ಭಾರತ (ಪ್ರಚಲಿತ ಸಮಸ್ಯೆಗಳ ವಿಶ್ಲೇಷಣೆ)
—ಸುಭಾಷಿತ ಚಮತ್ಕಾರ (ಮರುಮುದ್ರಣ)

ಈ ಯೋಜನೆಗೆ ಚಾಲನೆ ಕೊಟ್ಟವರನ್ನು ನೆನೆಯಬೇಕು. ಮೊದಲಿಗೆ ಹೇಳಬೇಕಾದ ಹೆಸರು—ಹುಬ್ಬಳಿಯ ಸಾಹಿತ್ಯ ಪ್ರಕಾಶನದ ಶ್ರೀ ಸುಬ್ರಹ್ಮಣ್ಯಂ ಅವರದು. ಪಾ.ವೆಂ. ಕೃತಿಗಳೆಲ್ಲವನ್ನು ಹೊರತರಬೇಕೆಂದು ಆಗಾಗ ಸೌಮ್ಯ ರೀತಿಯಿಂದ (ನಾವು ಹಿರಿಯರಾದ್ದರಿಂದ!) ಒತ್ತಾಯಿಸುತ್ತಿದ್ದರು. ಯೋಜನೆ ಸಿದ್ಧವಾದ ಮೇಲೆ ಕೆಲವು ಸಂಪುಟಗಳನ್ನು ಪ್ರಕಟಿಸುವುದಾಗಿ ಸ್ವಯಂ ಮುಂಬಂದರು.

ಪಾ.ವೆಂ. ಅವರ ಹೆಚ್ಚಿನ ಬರಹಗಳು ಕರ್ಮವೀರ, ಕಸ್ತೂರಿಯಲ್ಲಿ ಬಂದವುಗಳು. ಅವುಗಳನ್ನು ಮರು-ಮುದ್ರಿಸಲು ಉದಾರವಾಗಿ ಸಮ್ಮತಿಸಿದ ಶ್ರೀ ಕೆ. ಶಾಮರಾಯರನ್ನು ಮನಸಾ ಅಭಿವಂದಿಸುವೆವು.

ಈ ಕಾರ್ಯದಲ್ಲಿ ನಮಗೆ ನೈತಿಕ ಬೆಂಬಲ ನೀಡಿದ ಪೂಜ್ಯರಾದ ಪೇಜಾವರ ಶ್ರೀಗಳವರನ್ನೂ, ಅದರಂತೆ ಶ್ರೀ ಪಾಟೀಲ ಪುಟ್ಟಪ್ಪ ಅವರನ್ನೂ ಕೃತಜ್ಞತಾಪೂರ್ವಕ ನೆನೆಯುತ್ತೇವೆ.

ಪ್ರತ್ಯೇಕವಾಗಿ ಹೇಳಬೇಕಾದ ಹೆಸರು ಪ್ರೊ. ಎಸ್.ಎಲ್. ಶ್ರೀನಿವಾಸಮೂರ್ತಿಯವರದು. ಪಾ.ವೆಂ. ಅವರ ನಾನಾ ಬಗೆಯ ಲೇಖನಗಳ ವರ್ಗೀಕರಣ ಮುಂತಾದ ಕೆಲಸಗಳಲ್ಲಿ ವಿಮರ್ಶನ-ವಿಚಕ್ಷಣೆಯನ್ನು ತೋರಿದ್ದಾರೆ. ಒಂದರ್ಥದಲ್ಲಿ ಅವರು ಈ ಎಲ್ಲ ಸಂಪುಟಗಳ ಸಹಾಯಕ ಸಂಪಾದಕರು.

ಡಾ॥ ಶ್ರೀನಿವಾಸ ಹಾವನೂರ
ಎಂ. ವಿ. ಪಾಡಿಗಾರ

# ಒಳಪುಟಗಳಲ್ಲಿ...

| | | |
|---|---|---|
| ೧. | ಬೀದಿಯ ಕಾಮಣ್ಣರು | ೧೭ |
| ೨. | ಅಮ್ಮಾವ್ರ ಗಂಡಾಯಣ | ೨೩ |
| ೩. | ಇಮ್ಮಡಿ ತೊಗಲಖ | ೨೭ |
| ೪. | ಯಾರಿಗಾಗಿ ಬದುಕುತ್ತೇವೆ? | ೩೫ |
| ೫. | ಸವಿಗನಸುಗಳು | ೪೧ |
| ೬. | ಸಾಯಲಿಕ್ಕೆ ಪುರುಸೊತ್ತಾಗಲಿಲ್ಲ | ೪೮ |
| ೭. | ಮಂಗಾಯಣಂ | ೫೬ |
| ೮. | ಕಪ್ಪು ಕಪ್ಪೆಂದೇಕೆ ಬೀಳುಗಳೆವಿರಿ? | ೬೦ |
| ೯. | ಯದ್ವಾತದ್ವಾ ಯೆಂಕಣ್ಣಯ್ಯನವರು | ೬೪ |
| ೧೦. | ಹೆಂಗಸರನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? | ೭೨ |
| ೧೧. | ಶ್ರೀ ಗಣೇಶಾಯ ನಮಃ | ೭೬ |
| ೧೨. | ಸೀರೆ ಮತ್ತು ಮಹಾಭಾರತ | ೮೩ |
| ೧೩. | ಹಾಸ್ಯ ಮೀಮಾಂಸೆ | ೮೬ |
| ೧೪. | ಭಾವೀ ಜಗತ್ತಿನಲ್ಲಿ ಮಹಿಳೆಯರ ಸ್ಥಾನ | ೯೨ |
| ೧೫. | ವಾನರಾಯಣ | ೧೦೦ |
| ೧೬. | ಮಶಕ ಪುರಾಣ | ೧೦೫ |
| ೧೭. | ಮದುವೆಯಾದರೂ ಸುಖಪಡುವುದು ಹೇಗೆ? | ೧೧೩ |

# ಬೀದಿಯ ಕಾಮಣ್ಣರು

ತರುಣಿಯರು ಬೀದಿಯಲ್ಲಿ ಹೋಗುವಾಗ ಚೇಷ್ಟೆ ಮತ್ತು ಒಮ್ಮೊಮ್ಮೆ ಅದಕ್ಕೂ ಹೆಚ್ಚಿನ ಉಪಟಳ ಮಾಡುವ ಗಂಡಸರನ್ನು ಏನು ಮಾಡಬೇಕು? ನಮ್ಮ ಅನೇಕ ನಗರ ಪಟ್ಟಣಗಳಲ್ಲಿ ಈ ಪ್ರಶ್ನೆ ಸಾಕಷ್ಟು ಗಂಭೀರವಾಗಿದೆ. ಉತ್ತರಪ್ರದೇಶದ ಕೆಲ ಪಟ್ಟಣಗಳಲ್ಲಿ ಈ "ಬೀದಿಯ ಕಾಮಣ್ಣ"ಗಳ ಕುಚೇಷ್ಟೆ ಎಷ್ಟು ಹೆಚ್ಚಾಗಿದೆಯೆಂದರೆ ಅನೇಕ ಪಾಲಕರು, ತಮ್ಮ ಹೆಣ್ಣುಮಕ್ಕಳು ಶಾಲೆಗೆ ಹೋಗುವ—ಬರುವ ವೇಳೆಗೆ ಬೀದಿಗಳಲ್ಲಿ ಪೊಲೀಸ ತಂಡಗಳ ರಕ್ಷಣೆ ಬೇಡಿ ಪಡೆದಿದ್ದಾರೆ. ಮದ್ರಾಸಿನಲ್ಲಿಯೂ ಇಂಥ ಕಿಡಿಗೇಡಿತನ ಧಾರಾಳ ವಾಗಿದೆಯೆಂದು ಅಲ್ಲಿಂದ ಬರುವ ಸುದ್ದಿಗಳಿಂದ ತರ್ಕಿಸಬಹುದು.

ಪೊಲೀಸು ಸಂರಕ್ಷಣೆ ಸರಿ. ಆದರೆ ಇದು ಯಾವಾಗಲೂ ಲಭ್ಯವಾದೀತೆಂದಾಗಲಿ ಇಂಥ ಪಿಕಲಾಟಕ್ಕೆ ಪರಿಣಾಮಕರ ಔಷಧವಾದೀತೆಂದಾಗಲಿ ಹೇಳಬರುವುದಿಲ್ಲ. ಮುಂಬಯಿಯ ಕೂಲಿಕಾರ—ಆರೋಗ್ಯ ಮಂತ್ರಿ ಶಾಂತಿಲಾಲ ಶಾಹರು ಹುಡುಗಿಯರಿಗೆ ಒಂದು ಉಗ್ರೋಪಾಯವನ್ನು ಸೂಚಿಸಿದ್ದಾರೆ. ಕಿರುಕುಳಗಾರರಿಗೆ ಆಯಾ ಹುಡುಗಿಯರೇ ಆ ಕ್ಷಣದಲ್ಲಿಯೇ ಕಪಾಳಮೋಕ್ಷಮಾಡಿ ಬುದ್ಧಿ ಕಲಿಸಬೇಕು. ಇದರಿಂದಾಗುವ ಕಾಯದೆ, ಪರಿಣಾಮಗಳ ವಿಚಾರ ಆಮೇಲೆ—ಎಂದು ಅವರ ಉಪದೇಶ.

ಶಾಂತಿಲಾಲರ ಸೂಚನೆಯನ್ನು ಪಾಲಿಸುವ ದಿಟ್ಟತನ ತರುಣಿಯರಲ್ಲಿ ಬಂದರೆ ಅದು ಒಳಿತೇ. ಅದರಿಂದ ಉಪಟಳಗಾರನ ಹೃದಯಪರಿವರ್ತನೆಯಾಗದಿದ್ದರೂ ಒಂದು ಬಗೆಯ ಅಂಜಿಕೆ ಉತ್ಪನ್ನವಾಗಬಲ್ಲದು. ಪಾಶ್ಚಾತ್ಯ ದೇಶಗಳಲ್ಲಿ ಈ ಬಗೆಯ ಸಂಪ್ರದಾಯವು ಇದೆ.

ಪಾಶ್ಚಾತ್ಯರಲ್ಲಿ ಬೀದಿಯಲ್ಲಿ ಹೋಗುತ್ತಿರುವ ಹೆಣ್ಣನ್ನು ಅನಪೇಕ್ಷಿತವಾಗಿ ಮಾತಾಡಿಸುವುದು, ಸಿಳ್ಳು ಹಾಕುವುದು ಮೊದಲಾದ ಉಪದ್ವ್ಯಾಪ ಮಾಡುವವರಿಗೆ ಅವಳು ಕಪಾಳಕ್ಕೆ ಒಂದೇಟು ಬಿಗಿಯಬಹುದು, ಇಲ್ಲವೆ ಕೊಡೆಯಿಂದಲೋ ಚೀಲದಿಂದಲೋ ಹೊಡೆಯಬಹುದು. ಹತ್ತಿರ ಯಾರಾದರೂ ಬೇರೆ ಗಂಡಸರಿದ್ದರೆ ಅವರು ಹುಡುಗಿಯ ನೆರವಿಗೆ ಬರುತ್ತಾರೆ. ಅವರು ಮೊದಲು ಬಂದು ಈ ಮನುಷ್ಯ ಪೀಡಿಸುತ್ತಿರುವನೇ? ಎಂದು ಕೇಳುವರು. ಅವಳು ಇಲ್ಲವೆನ್ನದಿದ್ದರೆ ಪೀಡಿಸುತ್ತಾನೆಂದೇ ಅರ್ಥ. ಆಗ ಆ ಗಂಡಸು ಕಿಡಿಗೇಡಿಯನ್ನು ಚನ್ನಾಗಿ ಥಳಿಸುತ್ತಾನೆ.

ತರುಣಿಯರ ಮಾನರಕ್ಷಣೆಯನ್ನು ಅಲ್ಲಿ ಅಪರಿಚಿತರು ಕೂಡಾ ಉಗ್ರೋಪಾಯದಿಂದ ಮಾಡುವ ಪರಂಪರೆ ಬಿದ್ದುಹೋಗಿದೆ. ಕಾಯದೆಯೂ ಅಪ್ರತ್ಯಕ್ಷವಾಗಿ ಅವರ ಪಕ್ಷ ವಹಿಸುತ್ತದೆ.

ಇಂಗ್ಲೆಂಡಿನಲ್ಲಿ ಕೆಲ ವರ್ಷಗಳ ಹಿಂದೆ ಆಸ್ತಿಯಾದ ಒಬ್ಬ ಜಾಗೀರದಾರನನ್ನು ಒಬ್ಬ ಇಂಗ್ಲೀಷನು ಥಳಿಸಿದನು. ಸಾಮಾನ್ಯವಾಗಿ ಪಾಶ್ಚಾತ್ಯರು ಇಂಥ ಪ್ರಸಂಗದಲ್ಲಿ ಕೋರ್ಟಿನ ಕಟ್ಟೆ ಹತ್ತುವದಿಲ್ಲ. ಆದರೆ ಆ ಜಾಗಿರದಾರ ನ್ಯಾಯಾಸ್ಥಾನಕ್ಕೆ ಹೋದನು. ಜಾಗಿರದಾರನು ಒಬ್ಬ ಹುಡುಗಿಯ ಮೇಲೆ "ಕಣ್ಣು ಮಿಟುಕಿಸು"ತ್ತಿದ್ದದ್ದರಿಂದ ತಾನು ಅವನನ್ನು ಹೊಡೆದದ್ದಾಗಿ ಪ್ರತಿವಾದಿ ಸಬೂಬು ಕೊಟ್ಟನು. ಮ್ಯಾಜಿಸ್ಟ್ರೇಟನು ಅವನನ್ನು ನಿರಪರಾಧಿಯೆಂದು ಬಿಡುಗಡೆ ಮಾಡುತ್ತ ಇಂಗ್ಲೆಂಡಿನಲ್ಲಿ ಸ್ತ್ರೀಯರ ಮಾನರಕ್ಷಣೆಗಾಗಿ ಇಂಥ ಕ್ರಮ ಕೈಕೊಳ್ಳಲು "ಅಲಿಖಿತ ಕಾಯದೆ"ಯ ಬೆಂಬಲವಿದೆಯೆಂದು ತೀರ್ಪು ಹೇಳಿದನು.

"ಬೀದಿಯ ಕಾಮಣ್ಣ"ಗಳ ಸಮಾಚಾರ ತೆಗೆದುಕೊಳ್ಳಲು ನಮ್ಮಲ್ಲಿಯೂ ಇಂಥ ಸಂಪ್ರದಾಯ ಅಥವಾ "ಅಲಿಖಿತ ಕಾಯದೆ"ಯನ್ನು ಮಾಡಿಕೊಳ್ಳುವುದು ಒಳಿತೆಂದು ಕಾಣುತ್ತದೆ. ಇದನ್ನು ಸುಶಿಕ್ಷಿತ ತರುಣ-ತರುಣಿಯರ ಸಭೆಗಳಲ್ಲಿ ಒಪ್ಪಂದ ಮೂಲಕ ಸಾಧಿಸಬಹುದು. ಪೀನಲ್ ಕೋಡಿನ 323ನೇ ಕಲಮಿನಲ್ಲಿ ತಿದ್ದುಪಡಿ ಮಾಡಿ ಈ ಬಗೆಯ ಹೊಡೆತವನ್ನು ಅಪರಾಧವಲ್ಲೆಂದು ಮಾಡಬಹುದು. ಅಥವಾ 509ನೇ ಕಲಮನ್ನು ತಿದ್ದಿ ಅಸಭ್ಯವರ್ತನೆಯನ್ನು ಕಾಗ್ನಿಜಿಬಲ್ ಅಪರಾಧವಾಗಿ ಮಾಡಿ ಅದರ ಸಮರಿ ವಿಚಾರಣೆಗೆ ಅವಕಾಶವೀಯುವುದು ಹಿತಕರವಾದೀತು.

ಆದರೆ ಕಿಡಿಗೇಡಿಗಳಿಗೆ, ಅವರ ಪೀಡೆಗೊಳಗಾದ ಅಬಲೆಯರಾಗಲಿ ಇತರರಾಗಲಿ ತತ್‌ಕ್ಷಣ ಉಗ್ರಶಾಸ್ತಿ ಮಾಡುವುದು ಪರಿಹಾರದ ಒಂದು ಮುಖ ಮಾತ್ರವಾಯಿತು. ಅದು ತಾತ್ಕಾಲಿಕ ಉಪಶಮನವೇ ಹೊರತು ಶಾಶ್ವತ ಪರಿಹಾರವಾಗಲಾರದು. ಅದಕ್ಕೆ ಸಮಸ್ಯೆಯ ಮೂಲಕಾರಣವನ್ನು ಶೋಧಿಸಬೇಕಾಗುವದು.

ಪಾಶ್ಚಾತ್ಯ ದೇಶಗಳಲ್ಲಿನಂತೆ ಇಲ್ಲಿ ಸ್ತ್ರೀ ಪೀಡಕರನ್ನು ಅಪ್ಪಳಿಸಲು ಮುಂದೆ ಬರುವ ಗಂಡಸರು ಅತ್ಯಂತ ವಿರಳ. ಇದಕ್ಕೆ ನಾಳೆ ಕಾಯದೆಯಿಂದ ಏನು ತ್ರಾಸ ಬರುವುದೋ ಎಂಬ ಭಯವೇ ಕಾರಣವೆಂದು ಎಂದಿಗೂ ಹೇಳಬರುವುದಿಲ್ಲ. ಗಾಂಧೀಜಿಯ ದೇಶವಾದರೂ ಇಲ್ಲಿ ಹಿಂಸೆ ಅಪರೂಪವಾಗಿಲ್ಲ. ಕಾಯಿದೆಯ ಮೇಲಿನ ಭಕ್ತಿಯಲ್ಲಿಯೂ ನಾವು ಪಾಶ್ಚಾತ್ಯರಿಗಿಂತ ಮುಂದಿಲ್ಲ. ಎಷ್ಟೋ ಕೃತ್ಯಗಳನ್ನು ನಾವು ಕಾಯದೆಯನ್ನಾಗಲಿ ಪ್ರತೀಕಾರವನ್ನಾಗಲಿ ಲೆಕ್ಕಿಸದೆ ಮಾಡಿಬಿಡುತ್ತೇವೆ. ನಮ್ಮ ಅನಾಸ್ಥೆಗೆ ಕಾರಣವೆಂದರೆ ಹೆಂಗಸರಿಗೆ ಕುಚೇಷ್ಟೆ ಮಾಡುವವರನ್ನು ನೋಡಿ ನಮ್ಮ ಆತ್ಮ ನೊಂದು ಉದ್ರೇಕಗೊಳ್ಳುವುದಿಲ್ಲ. ಇದಕ್ಕೆ ಸ್ತ್ರೀಜಾತಿಯ ವಿಷಯದಲ್ಲಿ ನಮ್ಮ ಪುರುಷರ ಮನಸಿನ ನಿಲುಮೆಯೇ ಮೂಲ.

ಕೆಲ ವರ್ಷಗಳ ಹಿಂದೆ ನಾನು ಒಂದು ಅಂಗಡಿಯಲ್ಲಿದ್ದಾಗ ನನಗೆ ಪರಿಚಿತರಾದ ಇಬ್ಬರು ಕಾಯಂ ಗಿರಾಕಿಗಳು ಅಂಗಡಿಯ ಮುಂದೆ ಕುಳಿತು ಮಾತಾಡುತ್ತಿದ್ದರು.

ಅವರಲ್ಲೊಬ್ಬನು ಒಮ್ಮೆಲೇ ಬೀದಿಯ ಕಡೆ ಹೊರಳಿ, ಸ್ವಲ್ಪ ಕಣ್ಣು ಸೆಳೆಯುವ ಗುಲಾಬಿ ರಂಗಿನ ಸೀರೆಯುಟ್ಟು ಅಂಗಡಿಯ ಮುಂದೆ ಹಾದು ಹೋಗುತ್ತಿದ್ದ ತರುಣಿಯನ್ನು ತೋರಿಸಿ ಅವಳ ಸೀರೆ ಮತ್ತು ಅಂಗಾಂಗಗಳನ್ನು ಉತ್ತಾನ ಶೃಂಗಾರದ ಮಾತುಗಳಲ್ಲೇ ಬಣ್ಣಿಸತೊಡಗಿದ.

ದೈವಯೋಗದಿಂದ ಆ ತರುಣಿ ಆ ಇನ್ನೊಬ್ಬ ಗಿರಾಕಿಯ ಹೆಂಡತಿಯಾಗಿದ್ದಳು. ಅವನು ಸಿಟ್ಟಿಗೆದ್ದು ಆ ಅಧಿಕಪ್ರಸಂಗಿಯ ಕೆನ್ನೆಗೆ ಎರಡೇಟು ಏರಿಸಿರಬೇಕೆಂದು ನೀವು ತರ್ಕಿಸುತ್ತೀರಿ, ಅಲ್ಲವೆ? ಆದರೆ ಹಾಗಾಗಲಿಲ್ಲ. ಅವನು ಬಾಯಿ ಮುಚ್ಚಿಕೊಂಡು ಅಪಮಾನವನ್ನು ನುಂಗಿಕೊಂಡ. ಅವನು ಕೈಕೊಂಡ ಕ್ರಮ ಬೇರೆಯೆ ಆಗಿತ್ತು. ಮನೆಗೆ ಹೋದವನೇ ಅವನು ಆ ಸೀರೆಯನ್ನು ಇನ್ನೆಂದಿಗೂ ಉಡತಕ್ಕದ್ದಲ್ಲೆಂದು ಹೆಂಡತಿಗೆ ತಾಕೀತು ಮಾಡಿದ!

ಗಂಡನಾದವನೇ ಷಂಡನಾದನೆ? ಎಂದು ನೀವು ದ್ರೌಪದಿಯಂತೆ ಕೇಳಬಹುದು. ಆದರೆ ಆ ಮನುಷ್ಯ ಹೇಡಿಯಲ್ಲೆಂದು ನಾನು ಭರವಸೆ ಕೊಡುತ್ತೇನೆ. ಅವನು ಅಧಿಕ ಪ್ರಸಂಗಿಗೆ ಶಾಸ್ತಿಮಾಡದಿರಲು ಕಾರಣವೆಂದರೆ ಈ ರೀತಿ "ಶೋಕಿ" ಮಾಡಿಕೊಂಡು ಹೋಗುವ ಹೆಂಗಸರಿಗೆ ಇಂಥ ಕುಚೇಷ್ಟೆ ನ್ಯಾಯವೇ ಸೈ ಎಂಬ ಮನೋವೃತ್ತಿ. ಅವನಿಗೆ ತನ್ನ ಹೆಂಡತಿಯ ಮೇಲೆ ಸಿಟ್ಟು ಬಂದಿತ್ತಲ್ಲದೆ ಉಪದ್ವ್ಯಾಪಿಯ ಮೇಲಲ್ಲ.

ಮದ್ರಾಸಿನ 'ಹಿಂದು' ಮತ್ತು 'ಸ್ವತಂತ್ರ' ಪತ್ರಿಕೆಗಳಲ್ಲಿ ಸ್ತ್ರೀ ಪೀಡಕರ ವಿಷಯದಲ್ಲಿ ಬಂದ ಪತ್ರವ್ಯವಹಾರಗಳು. ಕಲಿತವರಲ್ಲಿ ಕೂಡ ಇದೇ ಮನೋವೃತ್ತಿಯಿದೆಯೆಂದು ದೃಢಪಡಿಸುತ್ತವೆ. ತರುಣಿಯರು ಫ್ಯಾಶನ್ ಮಾಡಿಕೊಂಡು ಒಯ್ಯಾರದಿಂದ ಬೀದಿಗಳಲ್ಲಿ ಮೆರೆಯುವುದರಿಂದಲೇ ತರುಣರ ಕಿಡುಗಣ್ಣುಗಳಿಗೆ ಅವರು ಪಾತ್ರರಾಗುತ್ತಾರೆ. ಅವರು ಗರತಿಯರಂತಿದ್ದರೆ ಹುಡುಗರಾದರೂ ಪಾಪ, ಎಲ್ಲಿ ಅವರ ಗೋಜಿಗೆ ಹೋದಾರು? ಇದು ಆ ಪತ್ರಗಳ ಪಲ್ಲವಿಯಾಗಿದೆ.

ಇದೇ ನಮ್ಮಲ್ಲಿ ಅಧಿಕಾಂಶ ಜನರ—ಹೆಂಗಸರನ್ನೊಳಗೊಂಡು—ಮನೋವೃತ್ತಿಯಾಗಿದೆ. ಇದರಿಂದಲೇ ನಮಗೆ ಅಸಭ್ಯ ಕಾಮಣ್ಣಗಳನ್ನು ಕಂಡರೆ ರೇಗುವುದಿಲ್ಲ. ಗರತಿತನದ ಅಗತ್ಯದ ವಾದವನ್ನೇ ಸ್ವಲ್ಪ ಬೆಳಗಿ, ಶ್ರೀಮಂತರು ದೊಡ್ಡ ಸುಂದರ ಮನೆಗಳಲ್ಲಿ ವಾಸವಾಗುತ್ತಿರುವುದ ರಿಂದಲೇ ಪಾಪ, ಕಳ್ಳರಿಗೆ ಪ್ರಲೋಭನವುಂಟಾಗಿ ದರೋಡೆ ಮಾಡುತ್ತಾರೆ, ಎಂದು ಆ ಫ್ಯಾಶನ್ ವಿರೋಧಿಗಳು ತರ್ಕ ಹೂಡುವುದಿಲ್ಲ.

ವಸ್ತುಸ್ಥಿತಿಯೆಂದರೆ ನಮ್ಮ ನಾಗರಿಕತೆಯ ಪ್ರಗತಿಗೆ ಸರಿಯಾಗಿ ನಾವು ನಮ್ಮ ಸಾಮಾಜಿಕ ನಿಲುಮೆಗಳನ್ನು ತಿದ್ದಿಕೊಂಡಿಲ್ಲ. ನಮ್ಮಲ್ಲಿ ನೂರಕ್ಕೆ ತೊಂಭತ್ತು ಜನರ ಮನಸ್ಸಿನಲ್ಲಿ ಸ್ತ್ರೀಯರು ಕೇವಲ ಉಪಭೋಗದ ಸಾಮಗ್ರಿಗಳು. ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಕೂಡ ನಮ್ಮಲ್ಲಿ ಗಂಡು ಹೆಣ್ಣುಗಳ ಒಡನಾಟ ಕೇವಲ ಸಂತಾನೋತ್ಪಾದನೆಗೆ ಸೀಮಿತವಾಗಿದೆ. ಅವರಲ್ಲಿ ಪರಸ್ಪರ ಸಾಮಾಜಿಕ ಹೊಕ್ಕು ಬಳಕೆಗೆ ಅವಕಾಶವಿಲ್ಲದ್ದರಿಂದ, ಸುಸಂಸ್ಕೃತಿಕ ಮಾನವರಿಗೆ ಸಹಜವಾದ—ಓದು, ಕಲೆ, ರಾಜಕಾರಣ ಇತ್ಯಾದಿ ಉಭಯ

ಸಾಮಾನ್ಯ ಅಭಿರುಚಿಗಳಲ್ಲಿ ಗಂಡು ಹೆಣ್ಣುಗಳ ಸಹಯೋಗಕ್ಕೆ ಸಂದರ್ಭವೇ ಸಿಗುವುದಿಲ್ಲ. ಹೀಗಾಗಿ ಕಲಿತವರಿರಲಿ ಇತರರಿರಲಿ ಗಂಡಸರು-ಹೆಂಗಸರೊಳಗಿನ ಪರಸ್ಪರ ಆಸ್ಥೆ ಕಾಮ ವೊಂದರಲ್ಲಿಯೇ ಕೇಂದ್ರಿತವಾಗುತ್ತದೆ. ಆದ್ದರಿಂದಲೇ ನಮ್ಮಲ್ಲಿ ಸುಶಿಕ್ಷಿತರು ಕೂಡ ಸ್ತ್ರೀ ಜಾತಿಯ ಚರ್ಚೆಯಲ್ಲಿ ಅಶ್ಲೀಲ ಮಾತುಗಳನ್ನೇ ಆಡುವುದು ಕಂಡುಬರುತ್ತದೆ.

ಹೀಗೆ ಬೀದಿಯ ಕಾಮಣ್ಣಗಳ ಪ್ರಶ್ನೆ ನಮ್ಮ ಸಾಮಾಜಿಕ ಕಟ್ಟುಕಟ್ಟಳೆಗಳ ಕಡೆಗೆ ನಮ್ಮನ್ನು ಒಯ್ಯುತ್ತದೆ. ನಾವು ಒಪ್ಪಿಕೊಂಡ ಆಧುನಿಕ ಜೀವನಕ್ಕೂ ಅವುಗಳಿಗೂ ಮೇಳಗೂಡುವುದಿಲ್ಲ. ಸ್ತ್ರೀಯರು, ಅವರ ಹಕ್ಕುಗಳು, ಗರತಿತನ ಮೊದಲಾದವುಗಳ ಬಗ್ಗೆ ನಮ್ಮ ಮೂಲ ಮನೋವೃತ್ತಿಯೇ ಬದಲಾಗಬೇಕು. ಇಲ್ಲದಿದ್ದರೆ ಊರ್ವಶಿಯರನ್ನು ತಾರಕಾಸುರರಿಂದ ಉಳಿಸಲು ಪುರೂರವರು ಸಿಗಲಾರರು. ಸಾರ್ವಜನಿಕಾಭಿಪ್ರಾಯವು ಎಲ್ಲರ ವರ್ತನೆಗಳನ್ನೂ ನಿಯಂತ್ರಿಸುತ್ತದೆ. ಸಾರ್ವಜನಿಕಾಭಿಪ್ರಾಯವು ಊರ್ವಶಿಗೆ ಪರದೆ ತೊಡಿಸಬೇಕೆಂದು ಇನ್ನೂ ಬಯಸುತ್ತಿದ್ದರೆ ಪುರೂರವರಿಗೆ ಧೈರ್ಯ ಬರಲಾರದು; ಶಾಂತಿಲಾಲರು ಹೇಳಿದರೂ ಊರ್ವಶಿಯರು ಕೂಡ ಆತ್ಮರಕ್ಷಣೆ ಮಾಡಿಕೊಳ್ಳಲಾರರು.

* * *

ಬೀದಿಯ ಕಾಮಣ್ಣರೆಂದರೆ ಯಾರು? ಅವರು ನಿಜವಾದ ಕಾಮದೇವನಂತೆ ಎಲ್ಲ ಮೂಲೆಗಳಲ್ಲಿಯೂ ಅವಿತುಕೊಂಡು ಕಾಯುತ್ತಿರುವಂತೆ ಕಾಣುವಂತೆ ಕಾಣುತ್ತದೆ. ಮುಂಬಯಿ ನಗರದಲ್ಲಿ ಚೌಪಾಟಿ, ಜುಹು ಮತ್ತು ನಾರಿಮನ್ ಪಾಯಿಂಟ್ ಸಮುದ್ರತೀರಗಳಲ್ಲಿ ಅವರ ಕಾಟ ಹೆಚ್ಚಾಗಿದೆಯಂತೆ ಇತರ ದಿನಗಳಿಗಿಂತ ಆದಿತ್ಯವಾರ ದಿನ ಅವರ ಚಟುವಟಿಕೆ ಹೆಚ್ಚಾಗಿರುತ್ತದೆಯೆಂದೂ ತಿಳಿದು ಬಂದಿದೆ. ಮುರಾರ್ಜಿಭಾಯಿಯ ಬಿಳಿ ಅಂಗಿ ಪೊಲೀಸರು ಈ ಎಲ್ಲ ಸ್ಥಳಗಳಲ್ಲಿ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯುತ್ತಿದ್ದಾರಂತೆ. ಆದರೆ ಎಣ್ಣೆ ತುಟ್ಟಿಯಾಗಿದೆಯೆಂದೋ ಅಥವಾ ಅದರಲ್ಲಿ ನಿದ್ರೆ ಬರಿಸುವ ಯಾವುದೋ ದ್ರವದ ಮಿಶ್ರಣ ಹೆಚ್ಚಾಗಿದೆಯೆಂದೋ ಈ ಬಿಳಿ ಅಂಗಿ ಪೊಲೀಸರಿಗೆ ವಿಶೇಷ ಯಶ ಲಭ್ಯವಾಗುತ್ತಿಲ್ಲವೆಂದು ತೋರುತ್ತದೆ. ಕಳೆದ ವರ್ಷ 58 ಜನ ಕಾಮಣ್ಣರನ್ನು ಹಿಡಿದು ಅವರು ಖಟ್ಲೆ ಹಾಕಿದ್ದಾರಂತೆ ಈ ಕಾಮಣ್ಣರು ರಕ್ತಬೀಜ ರಾಕ್ಷಸನ ವಂಶದವರೋ ಏನೊ, ಅವರನ್ನು ಹಿಡಿದು ದಂಡಿಸಿದಷ್ಟೂ ಅವರ ಸಂಖ್ಯೆ ಹೆಚ್ಚುತ್ತಿದೆಯೆಂದು ಮುರಾರ್ಜಿಭಾಯಿ ಒಪ್ಪಿಕೊಂಡಿದ್ದಾರೆ.

* * *

ಇರಲಿ, ಮೂಲಪ್ರಶ್ನೆಗೆ ಮರಳುವುದಾದರೆ, ಬೀದಿಯ ಕಾಮಣ್ಣರೆಂದರೆ ಯಾರು? ರಸ್ತೆಯ ಕೂಟಗಳಲ್ಲಿಯೋ ಬೀಚುಗಳಲ್ಲಿಯೋ ಪಾರ್ಕುಗಳಲ್ಲಿಯೋ ನಿಂತು ದಾರಿಯಲ್ಲಿ ಹೋಗುವ ಹೆಣ್ಣುಮಕ್ಕಳನ್ನು ಚೇಷ್ಟೆ ಮಾಡುವ, ಮತ್ತು ಅವಕಾಶ ಸಿಕ್ಕಿದರೆ ಅದಕ್ಕಿಂತಲೂ

ಮುಂದೆ ಹೋಗುವ ಗಂಡಸರೇ ಬೀದಿಯ ಕಾಮಣ್ಣರೆಂದು ತಿಳಿದುಕೊಳ್ಳಿರಿ. ಇಂಥ ಕಾಮಣ್ಣರ ಹೆಚ್ಚಳ ಯಾಕಾಗುತ್ತಿದೆ? ಯಾರು ಇದಕ್ಕೆ ಹೊಣೆ? ಇದರ ಉತ್ತರಗಳಲ್ಲಿ ಮತಭೇದವೇ ಮತ್ತೈಕ್ಯಕ್ಕಿಂತ ಹೆಚ್ಚಾಗಿದೆ. ಅರ್ಧದಷ್ಟು ಜನರಾದರೂ ಕಾಮಣ್ಣರ ಪಕ್ಷಪಾತಿಗಳಲ್ಲದಿದ್ದರೂ ಅವರ ವಕೀಲರಾಗಿದ್ದಾರೆ. ಅವರ ಅಭಿಪ್ರಾಯದಲ್ಲಿ ತಪ್ಪೆಲ್ಲವೂ ಬೀದಿಗಾಮಿನಿ ರತಿಯರದು ಅವರು ಓರ ಬೈತಲೆ ತೆಗೆದು ಎರಡು ಹೆಗಲುಗಳಿಂದ ಎರಡು ಹೆಳಲುಗಳ ಹೆಡೆಗಳನ್ನು ಇಳಿಬಿಟ್ಟುಕೊಂಡು, ಮರೆ ಮಾಡಿದ್ದನ್ನು ಹೆಚ್ಚು ಅರ್ಥವತ್ತಾಗಿ ಮಾಡುವಂಥ ಕಟ್ಟಿನ ರವಿಕೆ ತೊಟ್ಟು, ಅಶ್ವಧಾವಕ್ಕೂ ಮಣಿಪುರಿ ನೃತ್ಯಕ್ಕೂ ನಡುವಿನ ಯಾವುದೋ ಅನಿರ್ವಚನೀಯ ಭಂಗಿಯ ನಡಿಗೆಯನ್ನಾಂತು ಬೀದಿಯಲ್ಲಿ ಯಾಕೆ ಪ್ರತ್ಯಕ್ಷರಾಗಬೇಕು? ಇಂಥವರನ್ನು ಚೇಷ್ಟೆ ಮಾಡುವ ತರುಣರು ಅಪರಾಧಿಗಳೆನ್ನುವುದಕ್ಕಿಂತಲೂ ಅಪರಾಧಕ್ಕೆ ಗುರಿಯಾದವರೆನ್ನಬೇಕು. ಅವರು ಮೇನಕೆಯರಿಂದ ತಪೋಭಂಗ ಹೊಂದಿದ ವಿಶ್ವಾಮಿತ್ರರು. ಕಡಿಮೆ ಪೌಡರು, ಕಡಿಮೆ ಲಿಪ್‌ಸ್ಟಿಕ್, ಕಡಿಮೆ ನಾಟ್ಯ ಹೆಚ್ಚು ಅರಿಸಿಣ, ಹೆಚ್ಚು ಕುಂಕುಮ ಹೆಚ್ಚು ಸಡಿಲಾದ ಕುಪ್ಪಸ ಇವುಗಳೇ ಬೀದಿಯ ಕಾಮಣ್ಣರನ್ನು ಅಂಕೆಯಲ್ಲಿಡುವ ಉಪಾಯಗಳು.

* * *

ವ್ಯಾಜ್ಯದ ಇನ್ನೊಂದು ಪಕ್ಷದ ಅಭಿಪ್ರಾಯದಲ್ಲಿ ಇದೆಲ್ಲ ಶುದ್ಧ ಪ್ರತಿಗಾಮಿ ನಾನ್‌ಸೆನ್ಸ್. ಅಪರಾಧವೆಲ್ಲ ಜಾತಿಯಿಂದಲೇ ಕಿಡಿಗೇಡಿ, ಸ್ವಾರ್ಥಿ, ದರ್ಪಶೀಲರಾದ ಪುರುಷರದು "ನಾವು ಏನನ್ನು ಎಷ್ಟು ಹಚ್ಚಿಕೊಳ್ಳುತ್ತೇವೆ, ಯಾವುದನ್ನು ಎಷ್ಟು ಬಿಗಿಯಾಗಿ ತೊಟ್ಟುಕೊಳ್ಳುತ್ತೇವೆ, ಯಾವ ಯಾವ ನೃತ್ಯ ಸಂಪ್ರದಾಯಗಳ ಸಮನ್ವಯದಡಿ ನಡೆಯುತ್ತೇವೆ ಎಂಬುದು ಸಂಪೂರ್ಣವಾಗಿ ನಮಗೇ ಸೇರಿದ್ದು. ಭಾರತದ ರಾಜ್ಯಘಟನೆ ಪುರುಷರಿಗೆಷ್ಟೋ ಅಷ್ಟೇ ನಮಗೂ ಸ್ವಾತಂತ್ರ್ಯ ಕೊಟ್ಟಿದೆ. ಇದಕ್ಕೆ ಆತಂಕ ತರುವುದನ್ನು ನಾವೆಂದೂ ಸೈರಿಸಲಾರೆವು" ಅನಂತರ ಅವರು ಭಾರತೀಯ ಪುರುಷ ಜಾತಿಯ ಸಹಸ್ರಾಪರಾಧಗಳನ್ನು ಎಣಿಸುತ್ತಾರೆ. ಈ ಜನರಿಗೆ ಸ್ತ್ರೀಯರನ್ನು ಕಲುಷಿತ ಹೊರತು ಬೇರಾವ ದೃಷ್ಟಿಯಿಂದಲೂ ನೋಡಲು ತಿಳಿಯುವುದಿಲ್ಲ. ಎಲ್ಲ ಪುರುಷರೂ ಕಾಮಣ್ಣರಲ್ಲದಿದ್ದರೂ ಸಂಭಾವ್ಯ ಕಾಮಣ್ಣರೇ ಸೈ. ಧೈರ್ಯ ಸಾಲದವರು ಮನಸಿನಲ್ಲೇ ಉಳಿಸಿಕೊಳ್ಳುತ್ತಾರೆ—ತೀರಿತು. ಅರ್ಥಾತ್ ಇವರು ನಿಷ್ಕ್ರಿಯ ಕಾಮಣ್ಣರು. ಇಲ್ಲದಿದ್ದರೆ ಈ ಪುರುಷರು ಸಕ್ರಿಯ ಕಾಮಣ್ಣರನ್ನು ಕಂಡೂ ಕಾಣದಂತೆ ಮಾಡಿಕೊಂಡು ಯಾಕೆ ಹೋಗುತ್ತಾರೆ? ಪುರೂರವನು ಊರ್ವಶಿಯನ್ನು ಬಿಡಿಸಿದಂತೆ ಇವರೇಕೆ ಸಂತ್ರಸ್ತನಾರಿಯರನ್ನು ರಕ್ಷಿಸಲು ಮುಂದೆ ಬರಬಾರದು?

* * *

ಯುದ್ಧರಂಗದಲ್ಲಿ ಜಯವಧುವಿನಂತೆ ಸತ್ಯವು ಇವೆರಡರ ಮಧ್ಯ ಬಿಂದುವಿನಲ್ಲಿ ಮುಂಗಾಣದೆ ನಿಂತಿದೆಯೆಂದು ತೋರುತ್ತದೆ. ಗಂಡಸು ಈಚೆಗೆ ಹೆಣ್ಣಿಗೆ ಬಹುಶೀಘ್ರವಾಗಿ ಸ್ವಾತಂತ್ರ್ಯ ಕೊಟ್ಟಿದ್ದಾನೆ. ಮತ್ತು ಹೆಂಗಸು ಅದನ್ನು ಅಷ್ಟೇ ಅವಸರದಿಂದ ಕಸಿದುಕೊಂಡು ನುಂಗಿದ್ದಾಳೆ. ಜೀರ್ಣಿಸಿಕೊಂಡಿಲ್ಲ. ಸ್ವತಂತ್ರಳಾದ ಹೆಣ್ಣಿನ ಸ್ವಾತಂತ್ರ್ಯ ಅವನಿಗೆ ಸ್ವಚ್ಛಂದದಂತೆ ಕಾಣಿಸಿದರೆ, ಈವರೆಗೆ ಪಂಜರದ ಗಿಳಿಯಾಗಿದ್ದ ಅವಳು ಪಂಜರದ ಗಿಳಿಯ ಸುರಕ್ಷಿತತೆಯನ್ನೂ ಆಕಾಶದ ಗಿಳಿಯ ಸ್ವಾತಂತ್ರ್ಯವನ್ನೂ ಏಕಕಾಲಕ್ಕೆ ಬಯಸುತ್ತಾಳೆ; ಮತ್ತು ಅವು ದೊರೆಯದಿದ್ದರೆ ಗಂಡಸು ಒಂದು ಕೈಯಿಂದ ಕೊಟ್ಟಿದ್ದನ್ನು ಇನ್ನೊಂದರಿಂದ ಸೆಳೆದುಕೊಳ್ಳಲು ಹೊರಟಿದ್ದಾನೆಂದು ದೂರುತ್ತಾಳೆ. ಕಾಮಣ್ಣರಿಗೆ ಧೈರ್ಯ ತರುವ ಸಂಗತಿಗಳು ಇವೇ. ಲಾಂಗೂಲಾಚಾರ್ಯರ ಮತದಲ್ಲಿ ಬೀದಿಯ ಕಾಮಣ್ಣನಿಗೆ ಸಿನೆಮಾಗಳು ಸ್ಫೂರ್ತಿ ಕೊಡುತ್ತಿವೆ. ಸಿನೇಮಾದಲ್ಲಿ ಏನಾಗುತ್ತದೆ? ಒಬ್ಬ ಕಿಡಿಗೇಡಿ ಹುಡುಗ ಹುಡುಗಿಯನ್ನು ಛೇಡಿಸುತ್ತಾನೆ. ಅವಳು ಸಿಟ್ಟಿಗೆದ್ದು ಅವನನ್ನು ದಂಡಿಸುತ್ತಾಳೆ ಮತ್ತು ಆನಂತರ ಅವನ ಪ್ರೇಮಪಾಶದಲ್ಲೇ ಸಿಲುಕುತ್ತಾಳೆ. ಕಾಮಣ್ಣನಿಗೆ ಪ್ರೇಮಸಂಪಾದನೆಗೆ ಇದೊಂದು ಉತ್ತಮ ಉಪಾಯವೆಂದು ಅನಿಸಿ ಅವನು ಅದನ್ನು ಕೃತಿಗಳಿಸಲು ಹೊರಡುತ್ತಾನೆ. ಅಲ್ಲದೆ ಸ್ತ್ರೀಯರಲ್ಲೊಂದು ಮೂಲಭೂತ ವಿರೋಧಾಭಾಸವಿರುತ್ತದೆ. ಅವರು ಸಿಂಗಾರ ಮಾಡಿಕೊಂಡು ಬೀದಿಯಲ್ಲಿ ಒಯ್ಯಾರದಿಂದ ಹೋಗುತ್ತಿರಬೇಕು, ಅವರ ಸೌಂದರ್ಯವನ್ನು ಎಲ್ಲರೂ ಮೆಚ್ಚಿ ಮನಸಾ ಪ್ರಶಂಸಿಸಬೇಕು. ಆದರೆ ಅದು ಮಾನಸಿಕ ಪ್ರಶಂಸೆಗಿಂತ ಒಂದಿಂಚು ಮುಂದೆ ಹೋಗಿ ವಾಚ್ಯ ಪ್ರಶಂಸೆಯಾದರೆ ತೀರಿತು, ಹುಯಿಲೆದ್ದು ಹೋಗುತ್ತದೆ. ಗಂಡಸಾದರೋ ಸೌಂದರ್ಯಾನುಭೂತಿಗೂ ಅಸಭ್ಯತೆಗೂ ನಡುವೆ ಇರುವ ಯೂಕ್ಲಿಡನ ರೇಖೆಯನ್ನು ಗುರುತಿಸಲಾರದಷ್ಟು ಮೂರ್ಖನಾಗಿರುತ್ತಾನೆ. ನಿರ್ವಿಕಾರ ಸೌಂದರ್ಯಾನುಭೂತಿ ಅವರ ಸಂಗ್ರಹ ವೃತ್ತಿಗೆ ತೀರಹೊರಗಿನದು. ಆಧುನಿಕ ನಾಗರಿಕತೆ ಸ್ತ್ರೀ ಪುರುಷರೊಳಗಿನ ಅಂತರವನ್ನು ಕಡಿಮೆ ಮಾಡಿದ್ದಕ್ಕಿಂತಲೂ ಹೆಚ್ಚಿಸಿದೆ ಎನ್ನಬೇಕು. ಸ್ತ್ರೀ ಸ್ವತಂತ್ರಳಾಗಿ ಸ್ತ್ರೀತ್ವವನ್ನು ಹೆಚ್ಚಿಸಿಕೊಳ್ಳುತ್ತಿದ್ದರೆ ಪುರುಷ ಸ್ವಾಮಿತ್ವವನ್ನು ಕಳೆದುಕೊಂಡು ಪುರುಷತ್ವವನ್ನು ಹೆಚ್ಚಿಸಿಕೊಂಡಿದ್ದಾನೆ. ಅಂತರ ಹೆಚ್ಚಿದಷ್ಟು ಆಕರ್ಷಣೆ ಹೆಚ್ಚುವುದಲ್ಲವೆ?

❐

# ಅಮ್ಮಾವ್ರ ಗಂಡಾಯಣ

"ಹೆಂಡತಿಯ ಇಚ್ಛೆಯವ (ಕಡು) ಹೇಡಿ ಹೊಲೆಯಾ" ಎಂದು ಕಾಂಬೋಧಿ ರಾಗ, ಝಂಪೆ ತಾಳದಲ್ಲಿ ಹಾಡಿದ ಕನಕದಾಸರು ಈಗ ಇದ್ದಿದ್ದರೆ ಜೈಲಿಗೆ ಹೋಗ ಬೇಕಾಗುತ್ತಿದ್ದಿತು. ಎರಡು ಅಪರಾಧಗಳಿಗಾಗಿ; ಹೊಲೆಯರನ್ನು ಹೆಂಡತಿಯ ಇಚ್ಛೆಯವರೆಂದು ಹೇಳಿದ್ದಕ್ಕಾಗಿ (ಇದು ಅಪ್ಪಟ ಸುಳ್ಳು) ಮತ್ತು ಅವರನ್ನು ಹೇಡಿಗಳೆಂದು ಕರೆದದ್ದಕ್ಕಾಗಿ. ವಾಸ್ತವವಾಗಿ ಹೆಂಡತಿಯ ಇಚ್ಛೆಯವರೆಲ್ಲ ಇರುವುದು ಮೇಲ್ಜಾತಿಯವರಲ್ಲೇ. ಅವರೇ ಹೇಡಿಗಳು ಕೂಡ. ಯಾಕೆಂದರೆ ಹೆಂಡತಿಯರಿಗೆ ಹೆದರುತ್ತೇವೆಂದು ಒಪ್ಪಿಕೊಳ್ಳಲು ಕೂಡ ಅವರು ಹೆದರುತ್ತಾರೆ. ಅರ್ಥಾತ್ ಅವರು ಡಬ್ಬಲ್ ಫಾಸ್ಟ್ ಹೇಡಿಗಳು.

ನನ್ನ ಮಟ್ಟಿಗೆ ನಾನು ಹೇಡಿಯೇ. ಆದರೆ ಸಿಂಗಲ್ ಹೇಡಿ. ನಾನು 'ಅಮ್ಮಾವ್ರ ಗಂಡ' ಅಂತ ಹೇಳಿಕೊಳ್ಳಲು ಅಂಜುವುದಿಲ್ಲ. "ಜಬ್ ಪ್ಯಾರ್ ಕಿಯಾ ತೋ ಡರ್‌ನಾ ಕ್ಯಾ?" ಅಂತ ಸಿನೆಮಾ ಹಾಡಿನಲ್ಲಿ ಹೇಳಿರುವ ಹಾಗೆ. ಹೆಂಡತೀ ಮಾತು ಕೇಳಿದ ಮೇಲೆ ಹಾಗೆ ಹೇಳಿಕೊಳ್ಳಲು ಹೆದರುವುದೇಕೆ? ಇದ್ದದ್ದನ್ನು ಒಪ್ಪಿಕೊಂಡು ಗಂಡಸರೆನಿಸಿ!

ಕೆಲವರು ಈ ವಿಷಯದಲ್ಲಿ ಎಷ್ಟು ಅಂಜುಬುರುಕರೆಂದರೆ ತಾವು ಅಮ್ಮಾವ್ರ ಗಂಡರೆಂದೊಪ್ಪಿಕೊಂಡರೆ ಅಮ್ಮಾವ್ರು ಎಲ್ಲಿ ಎಡಗಾಲಲ್ಲಿ ಒದೆಯುತ್ತಾರೋ ಅಂತ ಹೆದರುತ್ತಾರೆ. ಸಾಹಿತ್ಯ ಪರಿಷತ್ತಿನ ಬೃಹತ್ ನಿಘಂಟಿನ ಸಂಪಾದಕರಲ್ಲಿ ಯಾರೋ ಒಬ್ಬ ಅಮ್ಮಾವ್ರ ಗಂಡ ಇದ್ದಿರಬೇಕೆಂದು ನನಗೆ ಅನುಮಾನ ಇದೆ. ಇಷ್ಟು ದೊಡ್ಡ ನಿಘಂಟಿನಲ್ಲಿ 'ಅಮ್ಮಾವ್ರ ಗಂಡ' ಎನ್ನುವ ಪದವೇ ಇಲ್ಲ. ಎಂದರೆ?

ನಾನು ನಿಘಂಟಿನಲ್ಲಿ ಯಾಕೆ ನೋಡಿದೇ ಅಂದರೆ, 'ಅಮ್ಮಾವ್ರ ಗಂಡ' ಅನ್ನೋ ಜೋಡಿ ಶಬ್ದವನ್ನು ಸೃಷ್ಟಿಸಿದ ಆ ಬ್ರಹ್ಮ ಯಾರು ಅಂತ ನನಗೆ ಬೇಕಾಗಿತ್ತು. ಕೈಲಾಸಂ ಆ ತಲೆಬರಹದ ಒಂದು ನಾಟಕ ಬರೆದಿದ್ದಾರೆಂದು ನಾ ಬಲ್ಲೆ. (ನಮ್ಮ ಅಮ್ಮಾವ್ರನ್ನು ಮಾಡಿಕೊಳ್ಳುವ ಮೊದಲೇ ಅದನ್ನು ನಾನು ಓದಿದ್ದೆ.) ಆದರೆ ಆ ದ್ವಿ-ಪದವನ್ನು ಅವರಿಗಿಂತ ಮುಂಚೆಯೇ ಯಾರಾದರೂ ಹುಟ್ಟುಹಾಕಿದ್ದರೇ? ಅಂತ ಪ್ರಶ್ನೆ ಇತ್ತು. ಅದು ತೀರಲಿಲ್ಲ. ಆದ್ದರಿಂದ ಆ ಶಬ್ದ ಬ್ರಹ್ಮ ಕೈಲಾಸಂ-ಏ ಅಂತ, ವಿರುದ್ಧ ಪ್ರಮಾಣದ ಅಭಾವದ ಮೂಲಕ, ನಾವು ಒಪ್ಪಿಕೊಳ್ಳಬೇಕಾಗಿದೆ. ಆದರೆ ಎಂಥ ಪದ! ಇಂಗ್ಲಿಷಿನ ಆ ಅರ್ಥಪೂರ್ಣ

'ಹೆನ್-ಪೆಕ್ಡ್' ಪದಕ್ಕೆ ನಾ. ಕಸ್ತೂರಿಯವರು 'ಹೇಣ್ ಪೆಕ್ಡ್' ಅಂತ ವಿಶ್ರಾಮಿತ್ರ ಸೃಷ್ಟಿ ಮಾಡಿದ್ದಾರೆ. ಆದರೆ 'ಅಮ್ಮಾವ್ರ ಗಂಡ'ನ ಮುಂದೆ ಅದು ಬರೇ ಹೆಣ್ಣು ಪ್ರಯೋಗ. ಶೈಲಿಯ ಮೇಲೆ ಅಧಿಕಾರವಾಣಿಯಿಂದ ಮಾತನಾಡುತ್ತಿದ್ದ ಸರ್ ಆರ್ಥರ್ ಕ್ವಿಲ್ಲರ್-ಕೋಚ್ ಹೆಣ್ಣು ಪ್ರಯೋಗಗಳನ್ನು ಮೆಚ್ಚುತ್ತಿರಲಿಲ್ಲ.

ಅಮ್ಮಾವ್ರ ಗಂಡಂದಿರಿಗೆ ಕೂಡ ಗಂಡು ಪದ ಪ್ರಯೋಗವನ್ನು ಮೆಚ್ಚುವ ಅಧಿಕಾರವುಂಟೆಂದು ನನ್ನ ಸ್ವಂತ ಅಭಿಪ್ರಾಯ—ಮತ್ತು ನಮ್ಮ ಅಮ್ಮಾವ್ರು ಈ ವಿಷಯದಲ್ಲಿ ನನಗೆ ಸ್ವಂತ ಅಭಿಪ್ರಾಯದ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಅವರಿಗೆ ಗೊತ್ತಿರಬೇಕು. ಅಣ್ಣಾವ್ರಿಗೆ ಸ್ವಲ್ಪವೂ ಸ್ವಾತಂತ್ರ್ಯ ಕೊಡದಿದ್ದರೆ ಅಮ್ಮಾವ್ರ ಅಮ್ಮಾತನಕ್ಕೆ ಬೆಲೆ ಇಲ್ಲ—ಅಂತ. ಇದನ್ನು ನಾನು 'ಸ್ವತಂತ್ರಾಸ್ವತಂತ್ರವಾದ' ಎಂಬ ತಾತ್ತ್ವಿಕ ದರ್ಶನದ ಸಾಲಿಗೆ ಸೇರಿಸುತ್ತೇನೆ.

ಅಲ್ಲಾ, ಅಮ್ಮಾವ್ರ ಗಂಡ ಆಗಿರೋದಕ್ಕೆ ಇವರಿಗೆ (ಅಂದರೆ ತಾವು ಅಂಥವರಲ್ಲ ಅಂತ ನಟಿಸುವವರಿಗೆ) ಏನಪ್ಪ ಆಕ್ಷೇಪ? ತಾಯಮ್ಮನ ಮಗ ಅನ್ನಿಸಿಕೊಳ್ಳಲಿಕ್ಕೆ ಇವರಿಗೇನೂ ನಾಚಿಕೆ ಅನ್ನಿಸುವುದಿಲ್ಲ. ನಿಜ ಕೇಳಿದರೆ ತಾಯಮ್ಮನ ಮಗ ಆಗಿರುವವನೇ ಮುಂದೆ ಅಮ್ಮಾವ್ರ ಗಂಡ ಆಗುವುದಕ್ಕೆ ಉತ್ತಮ ಕ್ಯಾಂಡಿಡೇಟು—ಬೇಕಾದರೆ ಮನಃಶಾಸ್ತ್ರಿಗಳನ್ನು ಕೇಳಿ. ನಮ್ಮ ವಿಧೇಯತೆಯನ್ನು ನಾವು ಒಂದು ಹೆಣ್ಣಿನಿಂದ ಇನ್ನೊಂದಕ್ಕೆ ವರ್ಗಾಯಿಸುತ್ತೇವೆ—ಅಷ್ಟೇ. ಒಂದು ಸೆರಗಿನ ಮರೆಯಿಂದ ಇನ್ನೊಂದರ ಮರೆಗೆ.

ಅಮ್ಮಾವ್ರ ಗಂಡಂದಿರ ಹೆಂಡಿರಾಗುವವರು ಎಂಥವರು? ಆ ಕಿಡಿಗೇಡಿ ಕವಿ, ಹಲವು ಹೆಣ್ಣುಗಳನ್ನು ಬೇಟೆಯಾಡಿ ಬಲ್ಲ ಕುಂಟುಕಾಲಿನ ಲಾರ್ಡ್ ಬೈರನ್ ಇದ್ದನಲ್ಲ. ಅವನ ಅಭಿಪ್ರಾಯ ಕೇಳಿ ನಮ್ಮ ಕಲಿತ ಅಮ್ಮಣ್ಣಿಯರು ಉಬ್ಬಬಹುದು.

But-Oh! ye lords of ladies intellectual,
Inform us truly, have they not
hen-pecked you all?
ಕಲಿತ ಮಡ್ಡಮ್ಮಗಳ ಪುರುಷರೇ, ಹೇಳಿ ನೀವು ಸತ್ಯ—
ಅವರೆಲ್ಲ ನಿಮ್ಮನ್ನು ಕುಕ್ಕುತ್ತಿರುವರೋ ಇಲ್ಲವೋ ನಿತ್ಯ?

ಅಮ್ಮಾವ್ರು ಆಗುವವರು ಇಂಟೆಲೆಕ್ಚುವಲ್ಲು—ಅರ್ಥಾತ್ ಕಲಿತವರು, ಮತ್ತೇತರರಲ್ಲಿ ಅಲ್ಲದಿದ್ದರೂ ನಮ್ಮ ನಶ್ಯಪ್ರಿಯ ಡಾಕ್ಟರ್ ಜಾನ್ಸನ್, ಬೈರನ್ನನೊಡನೆ ಈ ಒಂದು ಸಂಗತಿಯಲ್ಲಿ ಏಕಮತನಾಗಿದ್ದ; ಡಾಕ್ಟರ್ ಜಾನ್ಸನ್ ಪ್ರಕಾರ ಗ್ರೀಕ್ ಮಾತನಾಡಬಲ್ಲ ಹೆಂಡಂದಿರಿಗಿಂತ ರುಚಿಯಾದ ಅಡಿಗೆ ಮಾಡಬಲ್ಲ ಹೆಂಗಸರು ಗಂಡಸರಿಗೆ—ಅಂದರೆ ಅವನಿಗೆ—ಇಷ್ಟ! ಆದ್ದರಿಂದ ಜಾನ್ಸನ್ ತನ್ನ ತಾಯಿಯ ವಯಸ್ಸಿನವಳೊಬ್ಬಳನ್ನು ಮದುವೆಯಾದ. ಅವರವರ ಇಷ್ಟ—ಏನು ಮಾಡುವುದಕ್ಕಾಗುತ್ತದೆ ಹೇಳಿ? ಆದರೆ ಅಮ್ಮಾವ್ರುಗಳೆಲ್ಲ ಓದಿದವರಾಗಬೇಕಿಲ್ಲ. ಒಂದಕ್ಷರ ಓದಲಾರದ ಅಮ್ಮಣ್ಣಿಯರು ತರ್ಕತೀರ್ಥ ಗಂಡಂದಿರ ಎದೆಗಳನ್ನು ಆರು-ಪಾರಾಗುವಂತೆ ಕುಕ್ಕುವಷ್ಟು ಉದ್ದ ಕೊಕ್ಕುಳ್ಳವರಾಗಿದ್ದುದನ್ನು

ನಾನು ನೋಡಿದ್ದೇನೆ. ಅದಕ್ಕೇ ಹೆಂಗಸರನ್ನು ಬಲ್ಲ ಸಂಸ್ಕೃತ ಕವಿಗಳು "ಸ್ತ್ರೀಣಾಂ ಅಶಿಕ್ಷಿತ ಪಟುತ್ವಂ" ಎಂದಿದ್ದಾರೆ. ಈ ವಿಷಯದಲ್ಲಿ ಅಶಿಕ್ಷಿತರಾದಷ್ಟೂ ಪಟುತ್ವ ಹೆಚ್ಚಾಗಿರುವುದುಂಟು.

ಜಗಳಗಂಟಿ ಹೆಂಡಂದಿರ ಗಂಡಂದಿರೆಲ್ಲ ಅಮ್ಮಾವ್ರ ಗಂಡಂದಿರು ಎಂದು ಭ್ರಮಿಸಬೇಡಿ. ವಾಸ್ತವತೆ ತದ್ವಿರುದ್ಧವಾಗಿರುವ ಸಂಭವವೇ ಜಾಸ್ತಿ. ಅವಳು ತನ್ನ ಕನಿಷ್ಠ ಹಕ್ಕು ಅಥವಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಜಗಳ ತೆಗೆಯುತ್ತಿರಬಹುದು. ಅಥವಾ ಅವಳಿಗೆ ಜಗಳದ ಮೇಲೆ ಮಾತ್ರ ಪ್ರೀತಿಯಿರಬಹುದು—ಗಂಡಂದಿರ ಮೇಲೆ ದಬ್ಬಾಳಿಕೆ ನಡೆಸುವುದು ಅವರ ಉದ್ದೇಶವೇ ಇಲ್ಲದಿರಬಹುದು.

Art lies in concealing art—ಕಲೆಯೆಂಬುದು ಕಲೆಯಾಗಿ ಎದ್ದು ಕಾಣಬಾರದು. ಹಾಗೆಯೆ ಅಮ್ಮಾವ್ರು ಅಪ್ಪಾವ್ರ ಮೇಲೆ ಅಧಿಕಾರ ನಡೆಸುತ್ತಾರೆ ಅಂತ ಹೊರಗಿನವರಿಗೆ ಅನ್ನಿಸಬಾರದು. ಅನ್ನಿಸಿದರೂ ಹಾಗೆ ಎತ್ತಿ ಆಡಲು ಪುರಾವೆ ಇರಬಾರದು. ಅದೊಂದು ಫೈನ್ ಆರ್ಟ್. ತಮ್ಮ ಗಂಡಂದಿರು 'ಉರಿಪಿಂಡ' ಅಂತ ಹೇಳಿಕೊಳ್ಳುವವರನ್ನು ಗುರುತಿಸಿ ಇಡಿ. ಅಲ್ಲಿ ನಸುವೆ ಕೆರೆದರೆ ಒಳಗೆ ಒಬ್ಬ ಅಮ್ಮಾವ್ರು ಸಿಗುವ ಸಾಧ್ಯತೆ ಇದೆ. ಗಂಡಂದಿರು ಕೌಲೆತ್ತುಗಳಾಗಿರಬೇಕು—ಆದರೆ ಇತರರಿಗೆ—ಅಂದರೆ ಇತರ ಹೆಂಗಸರಿಗೆ—ಹಾಗೆ ತಮಾಷೆ ಮಾಡಲು ಅವಕಾಶ ಸಿಕ್ಕಿರಬಾರದು.

ಅಮ್ಮಾವ್ರುಗಳು ಹೆಚ್ಚಾಗಿ ತಮ್ಮ ಅಪ್ಪಾವ್ರನ್ನು ಚೆನ್ನಾಗಿ ಸಾಕುತ್ತಾರೆ. ಸರಿಯಾಗಿ ಮಾಲೀಸು ಮಾಡಿ ಟ್ರಿಮ್ಮಾಗಿ ಇಡುತ್ತಾರೆ. ಹ್ಯಾಟಿನ ಮರೆಯಲ್ಲಿ ಮುತ್ತುಕೊಟ್ಟು ಆಫೀಸಿಗೆ ಅಟ್ಟುತ್ತಿರುತ್ತಾರೆ. ಇದಕ್ಕಾಗಿ ಗಂಡಂದಿರು ಚೆನ್ನಾಗಿ ಹಲ್ಲು ತೊಳೆದುಕೊಳ್ಳುವಂತೆ ನೋಡಿಕೊಳ್ಳುತ್ತಾರೆ.

ಅಮ್ಮಾವ್ರ ಗಂಡಂದಿರಿಗೂ ಅವರ ಅಮ್ಮಾವ್ರಿಗೂ ಸಂಪೂರ್ಣ ರ್‍ಯಾಪರ್ಟ್ ಇರುತ್ತದೆ. ತಮ್ಮ ಅಮ್ಮಾವ್ರ ಕಡೆ ಒಂದು ನೋಟ ಬೀರಿಯೇ ಅವರು ಅಪ್ರಸನ್ನರಾಗಿದ್ದಾರೆಂದು ಗುರುತಿಸಬಲ್ಲವರಿದ್ದಾರೆ. ಕಣ್ಣುಗಳಿಂದ ಹೊಂಚುವ ಒಂದು ಮಿಂಚು, ಮೂಗಿನ ತುದಿಯ ಬಣ್ಣದ ಸೂಕ್ಷ್ಮ ಬದಲಾವಣೆ, ತುಟಿಗಳ ರೇಖೆಯಲ್ಲಿ ಮೂಡಿದ ನಸು ಅಸ್ತವ್ಯಸ್ತ ಇಷ್ಟರಿಂದಲೇ ಗಂಡಂದಿರನ್ನು ಶಟಪ್ ಮಾಡಿಸಬಲ್ಲ ಅಮ್ಮಾವ್ರನ್ನು ನಾನು ನೋಡಿದ್ದೇನೆ.

ಆಫೀಸಿನಲ್ಲಿ ಬಹಳ ರುದ್ರರಾಗಿರುವ ಅಧಿಕಾರಿಗಳಿದ್ದಾರಲ್ಲ. ಅವರಲ್ಲಿ ಹೆಚ್ಚಿನವರು ಅಮ್ಮಾವ್ರ ಗಂಡಂದಿರಾಗಿರುತ್ತಾರೆಂದು ಸುಮಾರಾಗಿ ಇಟ್ಟುಕೊಳ್ಳಬಹುದು. ಅಂಥವರ ಕೈಕೆಳಗೆ ಕೆಲಸ ಮಾಡುವವರಿಗೆ ಈ ಸೂಕ್ಷ್ಮ ಗೊತ್ತಿರುತ್ತದೆ. ಅಪ್ಪಾವ್ರ ಕ್ರೋಧವನ್ನು ತಣಿಸಬೇಕಾದರೆ ಅಥವಾ ಅವರಿಂದ ಒಂದು ಕೆಲಸ ಮಾಡಿಸಿಕೊಳ್ಳಬೇಕಾದರೆ ಅಮ್ಮಾವ್ರಿಗೆ ನಡೆದುಕೊಳ್ಳುವುದು ಸೂಕ್ತ ಉಪಾಯವೆಂದು ಅವರು ಬೇಗ ಕಂಡುಕೊಳ್ಳುತ್ತಾರೆ. ಇದನ್ನೇ back door method-ಹಿಂಬಾಗಿಲು—ಅಥವಾ ಹೆಂ—ಬಾಗಿಲ ಎನ್ನಬೇಕಾದರೆ—ಉಪಾಯ ಎನ್ನುವುದು. ಮನೇಲಿ ಹೆಂಡತೀನ ಅಂಕೇಲಿಡಲಾರದವರು ಆಫೀಸಿನಲ್ಲಿ ಎಗರಾಡಿ ತಮ್ಮ ಅಹಂ-ಅನ್ನು ತಣಿಸಿಕೊಳ್ಳುತ್ತಾರೆಂದರೂ ಸೈ.

ಅಮ್ಮಾವ್ರಿಂದ ಅಮ್ಮಾವ್ರ ಗಂಡಂದಿರಾಗುತ್ತಾರೋ—ಅಮ್ಮಾವ್ರ ಗಂಡಂದಿರಿಂದ ಅಮ್ಮಾವ್ರು ಆಗುತ್ತಾರೋ ಅನ್ನುವುದೊಂದು ಸಂದಿಗ್ಧ. ಇಕ್ಕಟ್ಟಿನ ನಿರ್ಣಯಗಳನ್ನು ತಮಗಾಗಿ ಇನ್ನೊಬ್ಬರು ಮಾಡಿದರೆ ಸುಖ ಎಂಬ ಮನೋವೃತ್ತಿಯವರು ಅಮ್ಮಾವ್ರ ಗಂಡಂದಿರಾಗಬಹುದು. ಆದರೆ ಅವರಿಗೆ ದೊರಕುವ ಅಮ್ಮಾವ್ರು ಆ ಹೊರೆ ಹೊರಲು ಯಾವಾಗಲೂ ಸಿದ್ಧರಾಗುತ್ತಾರೆಂದು ಹೇಳಲಾಗುವುದಿಲ್ಲ. ಆ ರಗಳೆಯೆಲ್ಲ ನನಗೆ ಬೇಡ. ಸಂಬಳದ ಮತ್ತು ಗಿಂಬಳದ ಪ್ಯಾಕೆಟ್ ಸರಿಯಾಗಿ ನನ್ನ ಕೈಲಿ ತಂದುಕೊಟ್ಟುಬಿಡಿ. ಉಳಿದಂತೆ ನಿಮ್ಮ ನೊಗ ನೀವೇ ಹೊರಬೇಕು—ಎಂದು ಅವರು ಹೇಳಿಬಿಡಬಹುದು. ನಿಜವಾದ ಅಧಿಕಾರ ಎಲ್ಲಿರುತ್ತದೆಂದು ಅವರಿಗೆ ಗೊತ್ತು. ಆದರೂ ಅವರು ಪರ್ಫೆಕ್ಟ್ ಅಮ್ಮಾವ್ರಾಗಲಾರರು ಎಂದು ನನ್ನ ಮತ. ಗಿಂಬಳವನ್ನಂತೂ ಅಮ್ಮಾವ್ರೇ ನೋಡಿಕೊಂಡರೆ ಹಿತ.

ನಮ್ಮ ಬೆರಳು ಹಿಡಿದು ಬರುವವರು ಅಮ್ಮಾವ್ರಾಗುತ್ತಾರೋ ಇಲ್ಲವೋ ಎನ್ನುವುದು ಕೆಲವೇ ದಿನಗಳಲ್ಲಿ ನಮಗೆ—ಸೂಕ್ಷ್ಮಬುದ್ಧಿ ಇದ್ದರೆ—ತಿಳಿದುಹೋಗುತ್ತದೆ. ಅಥವಾ ತಿಳಿಯದೇ ನಾವು ಅಮ್ಮಾವ್ರ ಗಂಡ ಆಗಿಬಿಡಬಹುದು. ಅಷ್ಟು ಸ್ಲಿಕ್ ಆದ ಅಮ್ಮಾವ್ರೂ ಇದ್ದಾರೆ. ಸಂಸ್ಕೃತ ಕವಿ ಹೇಳಿದ ಹಾಗೆ ಒಂದು ವಯಸ್ಸು ಇರುತ್ತದೆ. ಆಗ ನಾವು ನಮ್ಮ ರಾಣಿ ನಮ್ಮ ಇಷ್ಟದಂತೆ ನಡೆಯುತ್ತಾಳೆ ಎಂದೆಣಿಸಿರುತ್ತೇವೆ. ಆದರೆ ಅವಳ ನಡೆಯೆಲ್ಲ ನಮಗೆ ಇಷ್ಟವಾಗಿ ಕಾಣುತ್ತದೆ ಎಂದು ನಮಗೆ ಗೊತ್ತಾಗುವುದೇ ಇಲ್ಲ. ಗೊತ್ತಾಗುವ ಹೊತ್ತಿಗೆ ಹೊತ್ತು ಮೀರಿರುತ್ತದೆ. ಒಮ್ಮೆ ನೀವು ಅಮ್ಮಾವ್ರ ಗಂಡ ಆದರೆ ಮುಗಿದುಹೋಯಿತು. ಸವಾರನನ್ನು ಇಳಿಸುವುದು ಕುದುರೆಗೆ ಸಾಧ್ಯವಾಗುವುದಿಲ್ಲ.

(ಮರೆತ ಮಾತು: ನಿಮ್ಮ ಸಂಪಾದಕರು "ತಾವು ಅಮ್ಮಾವ್ರ ಗಂಡ ಅಲ್ಲ" ಅಂತ ಹೇಳಿಕೊಂಡಿದ್ದಾರೆ. ಹಾಗಾದರೆ ಅವರ ಅಮ್ಮಾವ್ರು ಮೇಲೆ ಹೇಳಿದ ಸ್ಲಿಕ್ ಪೈಕಿ ಇರಬೇಕು.)

❐

# ಇಮ್ಮಡಿ ತೊಗಲಖ

ತೊಗಲಖಲ್ಯಾಂಡಿನ ಮೂಲ ಹೆಸರು ಇಲ್ಲಿ ಎಲ್ಲರಿಗೂ ಗೊತ್ತು. ಆದರೆ ಯಾರೂ ಅದನ್ನು ಉಚ್ಚರಿಸುವ ಧೈರ್ಯ ಮಾಡರು. ಮಾಡಿದವರಿಗೆ ನಾಲಗೆ ಕತ್ತರಿಸುವ ಶಿಕ್ಷೆ ಇದೆ.

ತೊಗಲಖಲ್ಯಾಂಡಿನ 'ಜನಪ್ರಿಯ' ಸರ್ವಾಧಿಕಾರಿ ಇಮ್ಮಡಿ ತೊಗಲಖ್ ತನ್ನನ್ನು 'ಪ್ರಜಾಸತ್ತಾತ್ಮಕ ಡಿಕ್ಟೇಟರ್' ಎಂದು ಕರೆದುಕೊಳ್ಳುತ್ತಾನೆ. ಅವನೊಡನೆ ಸಂದರ್ಶನ ದೊರೆತಾಗ ನಾನು ಈ ಪ್ರಶ್ನೆಯನ್ನೇ ಮೊಟ್ಟಮೊದಲು ಎತ್ತಿದೆ. "ನೀವು ಪ್ರಜಾಸತ್ತಾತ್ಮಕರಾಗಿದ್ದರೆ ಜನರಿಗೆ ತಮ್ಮ ದೇಶದ ಹಳೇ ಹೆಸರನ್ನು ಉಚ್ಚರಿಸಲು ಯಾಕೆ ಬಿಡುವುದಿಲ್ಲ?" ಅಂತ.

"ನಾನೆಲ್ಲಿ ಅವರನ್ನು ತಡೆಯುತ್ತೇನೆ? ನಮ್ಮ ದೇಶದಲ್ಲಿ ಪ್ರತಿಯೊಬ್ಬನಿಗೂ ವಾಕ್ ಸ್ವಾತಂತ್ರ್ಯ ಉಂಟು. ಹಳೆಯ ಹೆಸರನ್ನು ಉಚ್ಚರಿಸುವುದಕ್ಕೂ ಸ್ವಾತಂತ್ರ್ಯವುಂಟು. ಹಾಗೆಯೆ ನಾಲಗೆ ಕಳೆದುಕೊಳ್ಳಲಿಕ್ಕೂ ಸ್ವಾತಂತ್ರ್ಯ ಉಂಟು."

"ಸ್ವಾತಂತ್ರ್ಯದ ವ್ಯಾಖ್ಯೆಯ ಬಗ್ಗೆ ನಿಮಗೂ ನನಗೂ ಇರಬಹುದಾದ ಮತಭೇದವನ್ನು ಬದಿಗಿರಿಸಿದರೂ ನಾಲಗೆ ಕತ್ತರಿಸುವ ಶಿಕ್ಷೆ ಕ್ರೂರ, ಅನಾಗರಿಕ ಮತ್ತು ಅಮಾನುಷ ಎಂದು ನಿಮಗೆ ಅನಿಸುವುದಿಲ್ಲವೆ?"— ನಾನು ಕೇಳಿದೆ.

"ಇಲ್ಲ, ನಾಲಗೆಯನ್ನು ಕತ್ತರಿಸುವ ಅತ್ಯಂತ ವೇದನಾರಹಿತ ಉಪಾಯಗಳನ್ನು ನನ್ನ ಸರ್ಜನ್ನರು ಉಪಯೋಗಿಸುತ್ತಾರೆ. ಅಲ್ಲದೆ ನಾಲಗೆ ಕಳೆಯುವುದು ಮನುಷ್ಯನಿಗೆ ಮಾಡಬಹುದಾದ ಅತ್ಯಂತ ಸುಮಾನುಷ ಉಪಚಾರವೆಂದು ನಾನು ಬಗೆಯುತ್ತೇನೆ. ಮತ್ತೆ ಅದು ಪುಕ್ಕಟೆಯಾಗಿದೆ."

"ಆದರೆ ಸುಮಾನುಷ ಹೇಗೆ?"

"ನಾಲಗೆಯೆಂಬುದು ಮನುಷ್ಯನ ಪರಮ ಶತ್ರು—ಎರಡೂ ವಿಧಗಳಿಂದ. ನಾಲಗೆ ರುಚಿಯ ದಾಸರಾಗಿಯೇ ಹೆಚ್ಚಿನವರು ಮಧುಮೇಹ. ಹೃದಯವ್ಯಾಧಿ ಮೊದಲಾದ ಮಾರಕ ರೋಗಗಳನ್ನು ತಂದುಕೊಳ್ಳುತ್ತಾರೆ. ಎರಡನೆಯದಾಗಿ, ಮಾತಾಡುವ ಚಪಲದಿಂದಲೇ ಜನರು ತಮಗೂ ಇತರರಿಗೂ ವಿಪತ್ತು ತರುತ್ತಾರೆ. ಹೆಚ್ಚಿನವರು ಮಾತಾಡುವುದು ಆಲೋಚನೆ ಮಾಡುವುದಕ್ಕಿಂತ ಶ್ರೇಷ್ಠ ಎಂದು ಬಗೆಯುತ್ತಾರೆ. ನಾಲಗೆ ಹೋದರೆ ಅವರು

ಉಪಾಯವಿಲ್ಲದೆ ಆಲೋಚನೆ ಮಾಡಬೇಕಾಗುತ್ತದೆ. ಅವರಿಗೆ ಹೆಚ್ಚು ವಿವೇಕ ಬರುತ್ತದೆ. ಆದ್ದರಿಂದ ನಾಲಗೆ ಹೋಗುವುದು ಪೀಡೆ ಹೋದಂತೆ."

"ತುಂಬಾ ವಿಚಾರಾರ್ಹವಾದ ವಿಚಾರ, ಆದರೆ ಹಳೇ ಹೆಸರಿನ ಬಗ್ಗೆ ನಿಮ್ಮ ವಿರೋಧಕ್ಕೆ ಕಾರಣವೇನು?" ಎಂದೆ ನಾನು ಕುಂಟುತ್ತ.

"ನಮಗೆ ಪೂರ್ತಿ ಬದಲಾವಣೆ ಬೇಕಾಗಿದೆ. ಸಮಾಜ್ ಕೋ ಬದಲ್ ಡಾಲೋ! ಹಳೇ ಹೆಸರುಗಳು ಹಳೇ ಆಚಾರ ವಿಚಾರಗಳ ಮೈಗಳಾಗಿರುವುದರಿಂದ, ಮತ್ತು ಮನಸ್ಸು ಹೇಗೇ ಇರಲಿ, ಮೈಯಿಂದಲೇ ನಾವು ನಮ್ಮನ್ನೂ ಇತರರನ್ನೂ ಗುರುತಿಸುವುದರಿಂದ ಹೆಸರಿನ ಬದಲಾವಣೆ ಮತ್ತು ಹಳೇ ಹೆಸರಿನ ಪೂರ್ತಿ ವಿಸ್ಮರಣೆ ಸಾಮಾಜಿಕ ಬದಲಾವಣೆಗೆ ಅನಿವಾರ್ಯವಾಗಿದೆ. ಈ ಬದಲಾವಣೆಗೆ ನಾನು ಮೊದಲು ನನ್ನನ್ನು ಗುರಿಪಡಿಸಿಕೊಂಡೇ ದೇಶದ ಮೇಲೆ ಪ್ರಯೋಗಿಸಿದ್ದೇನೆ. ನೋಡಿ, ನನ್ನ ನಾಮಕರಣದ ಹೆಸರಾದರೂ ತೊಗಲಖ್ ಎಂದಲ್ಲ. ನಾನು ಮುಸಲ್ಮಾನನೂ ಅಲ್ಲ. ಆದರೆ ನಿಮ್ಮ ತೊಗಲಖ್ ಮಹಮ್ಮದನ ಅತ್ಯಂತ ರ್‍ಯಾಡಿಕಲ್ ವಿಚಾರಗಳಿಂದ ಪ್ರಭಾವಿತನಾಗಿ ನಾನು ಅವನ ಹೆಸರನ್ನಿಟ್ಟುಕೊಂಡಿದ್ದೇನೆ. ಅದಕ್ಕೆ ಸರಿಯಾಗಿ ನಡೆಯಲು ಅಹರ್ನಿಶಿ ಹೆಣಗುತ್ತಿದ್ದೇನೆ. ಮರೆತು ಕೂಡ ಹಳೇ ಹೆಸರನ್ನು ನೆನೆದುಕೊಳ್ಳುವುದಿಲ್ಲ."

ಇಮ್ಮಡಿ ತೊಗಲಖನ ವ್ಯಕ್ತಿತ್ವದ ಬಗ್ಗೆ ಹೇಳತಕ್ಕದ್ದು ಬಹಳ ಇದೆ. ಆದರೆ ಆ ವರದಿಯನ್ನು ಅತ್ತ ಕಡೆ ವಿಸ್ತರಿಸುವುದು ನನ್ನ ಉದ್ದೇಶವಲ್ಲ. ಅವನ ಆಡಳಿತದ ಬಗ್ಗೆ ಹೇಳತಕ್ಕದ್ದು ಬಹಳ ಇದೆ. ನಾವು ಇತಿಹಾಸದಲ್ಲಿ ಹುಚ್ಚ ಮಹಮ್ಮದನೆಂದು ಕರೆಯುವ ಆ ಸುಲ್ತಾನನ ಆದರ್ಶವನ್ನು ಈ ಇಮ್ಮಡಿ ತೊಗಲಖ ಬಹಳ ಮಟ್ಟಿಗೆ ಪಾಲಿಸುತ್ತಾನೆಂದು ಹೇಳಲೇಬೇಕು. ಆ ಮಾನದಿಂದ ಇವನನ್ನೂ ನಾವು ಹುಚ್ಚ ಎನ್ನಬಹುದು.

ನಾನು ಈ ಮಾತನ್ನು ಅವನ ಮುಂದೆ ಮೆತ್ತಗೆ ಪ್ರಸ್ತಾಪಿಸಿದೆ. ಅವನಿಗೆ ಅದರಿಂದ ಎಳ್ಳಷ್ಟೂ ಸಿಟ್ಟು ಬರಲಿಲ್ಲ. "ಎಲ್ಲಾ ಮಹಾಪುರುಷರೂ ಹುಚ್ಚರೇ. ಯಾಕೆಂದರೆ, ಜಾಣರೆಂದು ತಮ್ಮನ್ನು ಭಾವಿಸಿಕೊಂಡವರು. ಅಸಾಧ್ಯವೆಂದು ಹೇಳುವುದನ್ನು ಮಹಾಪುರುಷರು ಸಾಧಿಸಲು ಯತ್ನಿಸುತ್ತಾರೆ. ಅವರು ಅನೇಕ ಸಲ ವಿಫಲರಾಗುತ್ತಾರೆಂದು ನಾನು ಬಲ್ಲೆ. ಆದರೆ ಜಾಣರೆಂಬ ಹೇಡಿಗಳು ಎಂದಾದರೂ ಪಂಚದಲ್ಲಿ ಒಂದೇ ಒಂದು ಮಹತ್ವದ ಬದಲಾವಣೆ ತಂದ ಉದಾಹರಣೆ ಇದ್ದರೆ ಹೇಳಿ. ಹುಚ್ಚನೆಂದು ಕರೆಸಿಕೊಳ್ಳಲಿಕ್ಕೆ ನನಗೆ ಹೆಮ್ಮೆ ಅನಿಸುತ್ತದೆ. ಅನುಭವದ ವಿರುದ್ಧ ಆದರ್ಶವನ್ನು ಎತ್ತಿ ಹಿಡಿಯುವವರು ನಾವು. ಮತ್ತೆ ಕೆಲವಾದರೂ ಮೂಲಭೂತ ಬದಲಾವಣೆಗಳನ್ನು ನಾವು ಸಾಧಿಸುತ್ತೇವೆ. ಇತಿಹಾಸ ಅನ್ನುವುದು ನಮ್ಮ ಕುರಿತಾಗಿದೆ ಹೊರತು ಜಾಣರ ಕುರಿತಾಗಿ ಅಲ್ಲ."

ಇಮ್ಮಡಿ ತೊಗಲಖನ ವಾದವನ್ನು ನಿರಾಸಗೊಳಿಸಲು ನಾನು ಯತ್ನಿಸಲಿಲ್ಲ. ಆ ಬಗ್ಗೆ ನನ್ನ ಮನಸ್ಸಿನಲ್ಲಿ ಕೆಲವು ಶಂಕೆಗಳಿವೆ. ಆದರೆ ಅವನ ಆಡಳಿತ ವೈಖರಿ ಮತ್ತು ಕ್ರಿಯಾ ತಂತ್ರಗಳಲ್ಲಿ ಕೆಲವಾದರೂ ಗುಣಗಳಿವೆಯೆಂದೂ, ಅಭಿವರ್ಧಮಾನ ದೇಶಗಳು ಅವುಗಳನ್ನು

ಅಕ್ಷರಶಃ ಅನುಸರಿಸದಿದ್ದರೂ ಅಧ್ಯಯನ ಮಾಡುವುದು ಉಪಯುಕ್ತವಾಗಬಹುದೆಂದೂ ನನಗೆ ಅನಿಸುತ್ತದೆ. ಅವನ ರೀತಿಗಳು ಏನಿಲ್ಲೆಂದರೂ ಅತ್ಯಂತ ನವೀನವೂ ಕೆಲವೊಮ್ಮೆ ತುಂಬಾ ಪರಿಣಾಮಕಾರಿಯೂ ಆಗಿವೆಯೆಂದು ಒಪ್ಪದೆ ವಿಧಿಯಿಲ್ಲ.

ಉದಾಹರಣೆಗೆ, ರಾಜಧಾನಿ ತೊಗಲಖಪುರಿಯ ಒಂದು ಬಡಾವಣೆಯಲ್ಲಿ ಮೇಲಿಂದ ಮೇಲೆ ಕಳವುಗಳಾದಾಗ ಅವನು ಆ ಬಡಾವಣೆಯ ಪೊಲೀಸ್ ಅಧಿಕಾರಿಗಳನ್ನು ಬಂಧಿಸಲು ಆಜ್ಞಾಪಿಸಿದನಂತೆ. ಕಳ್ಳರನ್ನು ಹಿಡಿಯಲಾರದ ಪೊಲೀಸರೇ ಕಳ್ಳರು ಎಂಬುದು ಅವನ ವಾದವಾಗಿತ್ತು.

ಇನ್ನೊಂದು ಸಲ ಅವಶ್ಯಕ ವಸ್ತುಗಳ ಕಳ್ಳಪೇಟೆ ನಡೆಯುತ್ತಿರುವ ದೂರು ಬಂದಾಗ ಊರಿನ ಸಂಭಾವಿತ ವ್ಯಾಪಾರಿಗಳನ್ನು ಅವನು ಹಿಡಿತರಿಸಿದನಂತೆ. “ನಾವು ನಿರಪರಾಧಿಗಳು” ಎಂದು ಅವರು ಪ್ರತಿಭಟಿಸಿದಾಗ, “ನನಗೆ ಗೊತ್ತಿದೆ, ಅದಕ್ಕೇ ನಿಮ್ಮನ್ನು ಬಂಧಿಸಿದ್ದೇನೆ. ನಿಮ್ಮಲ್ಲಿನ ಅಪರಾಧಿಗಳು ಯಾರೆಂಬುದು ನಿಮಗೆ ಗೊತ್ತಿದೆ. ಅವರಲ್ಲಿ ಕೆಲವರು ನಿಮ್ಮ ಮಾವಂದಿರು ಅಳಿಯಂದಿರು ಇರಬಹುದು. ಅವರನ್ನು ಬೆಳಕಿಗೆ ತರಲು ನೀವೇನು ಮಾಡಿದ್ದೀರಿ?” ಎಂದು ಕೇಳಿದನಂತೆ.

ಇಂಥ ವಿಕ್ಷಿಪ್ತ ವಿಧಾನಗಳು ಕೆಲವೊಮ್ಮೆ ತುಂಬಾ ಫಲಪ್ರದವಾಗಿವೆ, ಅವು ಜನಪ್ರಿಯವಾಗದೆಯೂ ಇಲ್ಲ. ಸಂಭಾವಿತರು ಸುಮ್ಮನಿರುವುದರಿಂದಲೇ ಘಟಿಂಗರು ಹಾರಾಡುತ್ತಾರೆ ಎಂಬುದು ಅವನ ಸಿದ್ಧಾಂತ. “ನೆಗೆಟಿವ್ ಸಂಭಾವಿತತನ ಸಂಭಾವಿತತನವೇ ಅಲ್ಲ” ಎಂದು ಅವನು ನನಗೆ ಹೇಳಿದ. “ಅದು ನೆಗೆಟಿವ್ ಘಟಿಂಗತನ” ಎಂದು ನಾನು ಜೋಕಿಸಿದಾಗ ಅವನು ಗಟ್ಟಿಯಾಗಿ ನಕ್ಕು, “ಪೋಕ್ತಾಗಿ ಹೇಳಿದಿ ನೋಡು!” ಎಂದು ಮೆಚ್ಚಿಕೆ ವ್ಯಕ್ತಪಡಿಸಿದ.

ನನ್ನ ಇಲ್ಲಿನ ವಾಸ್ತವ್ಯದಲ್ಲೇ ನಡೆದ ಒಂದು ಪ್ರಸಂಗವನ್ನು ಇಲ್ಲಿ ಬಣ್ಣಿಸಿದರೆ ಇಮ್ಮಡಿ ತೊಗಲಖನ ರೀತಿ ನೀತಿಗಳ ಅರ್ಥ ಸ್ವಲ್ಪವಾದರೂ ಆದೀತು. ರಾಜಧಾನಿ ತೊಗಲಖಪುರಿಯಲ್ಲಿ ಸಂಭವಿಸಲಿದ್ದ ಒಂದು ಭಯಂಕರ ವಿದ್ಯಾರ್ಥಿ ಗಲಭೆ ಇಮ್ಮಡಿ ತೊಗಲಖನ ವಿಕ್ಷಿಪ್ತ ಕ್ರಮದಿಂದ ಹಗರಣದಲ್ಲಿ ಮುಕ್ತಾಯವಾಯಿತು. ತೊಗಲಖಪುರಿಯಲ್ಲಿ ಹತ್ತಿಪ್ಪತ್ತೈದು ಕಾಲೇಜುಗಳಿವೆ. ಒಟ್ಟು ಹದಿನೈದು ಸಾವಿರಕ್ಕೆ ಮೇಲ್ಪಟ್ಟು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಈಚೆಗೆ ಒಂದು ದಿನ ಇಲ್ಲಿಯ ವಾಣಿಜ್ಯ ಕಾಲೇಜಿನ ವಿದ್ಯಾರ್ಥಿಗಳಿಗೂ, ವಿಜ್ಞಾನ ಕಾಲೇಜಿನವರಿಗೂ ಆದ ಜಟಾಪಟಿ ಇಡೀ ವಿದ್ಯಾರ್ಥಿ ಸಮುದಾಯಕ್ಕೆ ವಿಸ್ತರಿಸಿತು.

ಶುರುವಾದದ್ದು ಒಂದು ಪುಟ್ಟ ಘಟನೆಯಿಂದ. ವಾಣಿಜ್ಯ ಕಾಲೇಜಿನ ಕೆಲ ವಿದ್ಯಾರ್ಥಿಗಳು ಸಿಟಿಬಸ್ಸಿನಲ್ಲಿ ಗುಂಪಾಗಿ ಹೊರಟಿದ್ದರು. ಅವರಲ್ಲೊಬ್ಬ ಚಲಿಸುವ ಬಸ್ಸಿನಲ್ಲಿ ಸಿಗರೇಟು ಹೊತ್ತಿಸಿ ಸೇದುತ್ತಿದ್ದ. ಅದರ ವಿರುದ್ಧ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳು ಆಕ್ಷೇಪ ಎತ್ತಿದಳು. ವಿದ್ಯಾರ್ಥಿ ಬೇಕೆಂದೇ ಒಂದು ದಮ್ಮು ಎಳೆದುಕೊಂಡು ಅವಳ ಮುಖಕ್ಕೆ ಊದಿ, “ನನ್ನಂಥ ಸಿಗರೇಟ್ ಗಂಡ ಬಂದ್ರೇನು ಮಾಡ್ತೀಯೇ? ಅಭ್ಯಾಸ ಮಾಡಿಕೊ”

ಅಂದ. ಅದೇ ಬಸ್ಸಿನಲ್ಲಿದ್ದ ವಿಜ್ಞಾನ ವಿದ್ಯಾರ್ಥಿಯೊಬ್ಬ ಆತನ ಕೈಯಿಂದ ಸಿಗರೇಟು ಕಿತ್ತುಕೊಂಡು ಹೊರಗೆಸೆದ. ವಾಣಿಜ್ಯ ವಿದ್ಯಾರ್ಥಿಯೂ ಅವನ ಸಂಗಡಿಗರೂ ವಿಜ್ಞಾನದವರನ್ನು ಚೆನ್ನಾಗಿ ತದಕಿದರು.

ವಿಜ್ಞಾನ ವಿದ್ಯಾರ್ಥಿಯ ಬೆಂಬಲಿಗರು ಯಾರೂ ಇಲ್ಲದ್ದರಿಂದ ಅವನು ತೆಪ್ಪಗಿರ ಬೇಕಾಯಿತು. ಮರುದಿನ ಕಾಲೇಜು ಪ್ರಾರಂಭವಾಗುತ್ತಲೇ ಅವನು ನಡೆದದ್ದನ್ನು ತನ್ನ ಸಹಪಾಠಿಗಳಿಗೆ ವಿವರಿಸಿದನು. ಅವರೆಲ್ಲ ಅದು ತಮ್ಮ ಕಾಲೇಜಿನ 'ಅಬರೂ' ಪ್ರಶ್ನೆಯೆಂದು ತೀರ್ಮಾನಿಸಿ ವಾಣಿಜ್ಯ ಕಾಲೇಜಿನ ಕೀಚಕನಿಗೆ ಪಾಠ ಕಲಿಸಲು ನಿರ್ಧರಿಸಿದರು. ಸಂಜೆ ವಾಣಿಜ್ಯದವನು ಬಸ್ಸಿನಿಂದ ಶಹರಿನಲ್ಲಿ ಇಳಿಯುತ್ತಿರುವಾಗ ವಿಜ್ಞಾನದವರು ಅವನನ್ನು ಸುತ್ತುವರಿದು ಮುಖಕ್ಕೆ ಡಾಂಬರು ಬಳಿದು ಎಂಜಲು ಸಿಗರೇಟುಗಳ ಮಾಲೆ ಹಾಕಿದರು.

ಈ ಇಬ್ಬರು, ನಗರದ ಆಢ್ಯ ವರ್ತಕ ಮತ್ತು ಉಚ್ಚ ಅಧಿಕಾರಿಯ ಮಕ್ಕಳಾಗಿದ್ದು, ಬೇರೆ ಬೇರೆ ಕಾಲೇಜುಗಳಲ್ಲಿ ಅವರಿಗೆ ಅನುಯಾಯಿಗಳ ಭಾರಿ ಬೆಂಬಲವಿತ್ತೆಂದು ಸಿದ್ಧವಾಯಿತು. ದಾಳಿ ಪ್ರತಿದಾಳಿಗಳಾಗಿ ಮೂರನೇ ದಿವಸ ವಿಜ್ಞಾನ ಕಾಲೇಜ್ ಆವರಣದಲ್ಲಿ ಪ್ರಚಂಡ ಸಂದಣಿ ಸೇರಿ ಕೀಚಕ ವಿರೋಧಿಯನ್ನು ತಮಗೆ ಶರಣಾಗತ ಪಡಿಸಬೇಕೆಂದು ಕೂಗತೊಡಗಿತು. ಅತ್ತ ವಿಜ್ಞಾನ ವಿದ್ಯಾರ್ಥಿಯ ಸಾವಿರಾರು ಬಲದ ಅನುಯಾಯಿಗಳು ಬೇರೆ ಬೇರೆ ಕಾಲೇಜುಗಳಿಂದ ಕಲೆತು, ಕೀಚಕನಿಗೆ ಧಿಕ್ಕಾರ! ಎಂದು ಘೋಷಿಸುತ್ತ ವಿಜ್ಞಾನ ಕಾಲೇಜಿನ ಕಡೆ ನುಗ್ಗಿದರು. ಹತ್ತು ಸಾವಿರವಿರಬಹುದೆಂದು ಅಂದಾಜಿಸಲಾದ ಉಭಯ ಪಕ್ಷಗಳ ಯೋಧರಿಂದ ಕಲ್ಲು, ಸೋಡಾ ಬಾಟ್ಲಿಗಳ ವಿನಿಮಯ ಆರಂಭವಾಯಿತು.

ಪೊಲೀಸರು ಬರುವಾಗ ಸ್ವಲ್ಪ ತಡವಾಯಿತು. ಅವರ ಅನುನಯ, ವಿನಯ ಏನೂ ಫಲಕಾರಿಯಾಗಲಿಲ್ಲ. ತೊಗಲಖನಿಗೆ ಸುದ್ದಿ ಹೋಯಿತು. ಅವನು ಒಂದು ಸಂದೇಶ ಕಳಿಸಿ, ವಿಚಾರಣೆ ಮಾಡಿ, ತಪ್ಪಿತಸ್ಥರನ್ನು ದಂಡಿಸುವುದಾಗಿ ಆಶ್ವಾಸನೆ ಕೊಟ್ಟನು. ಆದರೆ ಸನ್ನದ್ಧರಾಗಿ ಬಂದ ವಿದ್ಯಾರ್ಥಿಗಳ ಮುಖಂಡರು ಕಿವಿಗೊಡುವ ಸ್ಥಿತಿಯಲ್ಲಿರಲಿಲ್ಲ.

ಮುಂದೆ ನಡೆದ ಕ್ರಮ ತೊಗಲಖನಂಥ ಓರಿಜಿನಲ್ ಜೀನಿಯಸ್ಸಿಗೆ ಮಾತ್ರ ಸಾಧ್ಯವಾಗುವಂಥದ್ದು. ಕಾಲೇಜು ಪ್ರಿನ್ಸಿಪಾಲರುಗಳಿಗೂ ಪೊಲೀಸ್ ಅಧಿಕಾರಿಗಳಿಗೂ ಅವನು ಫೋನ್ ಮಾಡಿ, ವಿದ್ಯಾರ್ಥಿಗಳಿಗೆ ಯಾವುದೇ ಬೆದರಿಕೆ ಹಾಕತಕ್ಕದ್ದಲ್ಲ. ಅಥವಾ ಅವರ ಮೇಲೆ ಬಲಪ್ರಯೋಗ ಮಾಡತಕ್ಕದ್ದಲ್ಲ; ಅವರನ್ನು ಚದುರಿಸಲಿಕ್ಕೂ ಪ್ರಯತ್ನಿಸತಕ್ಕದ್ದಲ್ಲ ಎಂದು ಫರ್ಮಾನ್ ಕೊಟ್ಟ. ಒಬ್ಬ ಬ್ರಿಗೇಡಿಯರನ್ನು ಕರೆಸಿ ೨೫೦ ಬ್ರೆನ್‌ಗನ್ ಮತ್ತು ಅದಕ್ಕೆ ಬೇಕಾದ ಮದ್ದು ಗುಂಡುಗಳೊಡನೆ ಒಂದು ಪಡೆಯನ್ನು ಅಣಿಗೊಳಿಸಲು ಹೇಳಿದ. ಪಿ.ಡಬ್ಲ್ಯು.ಡಿ. ಅಧಿಕಾರಿಗಳನ್ನು ಕರೆಸಿ ೫೦ ಟ್ರಕ್ಕುಗಳ ತುಂಬ ಬೆಣಚುಕಲ್ಲು, ಇಟ್ಟಿಗೆ ತುಂಡು ಮತ್ತು ಸೋಡಾ ಬಾಟ್ಲಿಗಳನ್ನು ತತ್‌ಕ್ಷಣ ವಿಜ್ಞಾನ ಕಾಲೇಜು ಆವಾರದೊಳಗೆ ತಂದು

ಅಲ್ಲಲ್ಲಿ ಸುರಿಯತಕ್ಕದ್ದೆಂದು ತಿಳಿಸಿದ. ಕಾಲೇಜಿಗೆ ಬರಹೋಗುವ ರಸ್ತೆಗಳನ್ನೆಲ್ಲ ಪೊಲೀಸ್ ಮೂಲಕ ಬಂದ್ ಮಾಡಿಸಿದ.

ಹಾರ್ನ್ ಹೊಡೆಯುತ್ತ ಟ್ರಕ್ಕುಗಳು ಕಾಲೇಜ್ ಆವಾರದ ನಾಲ್ಕೂ ಗೇಟುಗಳ ಮೂಲಕ ಒಳಗೆ ಬಂದವು; ಮತ್ತು ತಮ್ಮ ಹೊರೆಗಳನ್ನು ಅಲ್ಲಲ್ಲಿ ಗುಂಪುಗುಂಪೆಯಾಗಿ ಸುರಿದವು. ಏನಾಗುತ್ತದೆಯೆಂದು ಯಾರಿಗೂ ತಲೆಯಲ್ಲಿ ಹೊಳೆಯುವ ಮೊದಲೇ ಒಂದು ಪಟಲಾಂ ಸೈನ್ಯ ಬಂದು ಆವಾರವನ್ನು ಸುತ್ತುವರಿಯಿತು. ಎಲ್ಲ ಗೇಟುಗಳನ್ನೂ ಮುಚ್ಚಿ ಸಶಸ್ತ್ರ ಕಾವಲು ಹಾಕಲಾಯಿತು. ಆವಾರದ ಗೋಡೆ ಜಿಗಿದು ಓಡಿಹೋಗಲು ಸಾಧ್ಯ ಎನಿಸಿದಲ್ಲೆಲ್ಲ ಬ್ರೆನ್‌ಗನ್ ಸಮೇತ ಸೈನಿಕರನ್ನು ನಿಲ್ಲಿಸಿದ್ದಾಯಿತು. ಎಲ್ಲ ೨೫೦ ಗನ್ನುಗಳು ಕಾಲೇಜಿಗೆ ಮುಖಹಾಕಿ ನಿಂತವು. ಕಾಲೇಜು ಕಟ್ಟಡದ ಎಲ್ಲ ಬಾಗಿಲುಗಳನ್ನು ಮುಚ್ಚಲಾಯಿತು.

ವಿದ್ಯಾರ್ಥಿವೀರರು ತತ್ತರಿಸಿ ಹೋದರು. ಅಷ್ಟರಲ್ಲಿ ತೊಗಲಖ್ ಸ್ವತಃ ಕಮಾಂಡ್ ವಹಿಸಿದ. ಧ್ವನಿವರ್ಧಕಗಳ ಮೂಲಕ ಅವನ ಭಾಷಣ ಆರಂಭವಾಯಿತು. "ನಾನು, ಇಮ್ಮಡಿ ತೊಗಲಖ್ ಮಾತಾಡುತ್ತಿದ್ದೇನೆ. ವಿದ್ಯಾರ್ಥಿಗಳೇ, ಅಂಜಬೇಡಿರಿ! ನಿಮ್ಮ ಇರಾದೆ ಉದಾತ್ತವಾಗಿದೆ. ಈ ಬ್ರೆನ್‌ಗಳು ನಿಮ್ಮನ್ನು ಚದುರಿಸುವ ಸಲುವಾಗಿ ನಿಮ್ಮತ್ತ ಮುಖಮಾಡಿ ನಿಂತಿಲ್ಲ. ನಿಮಗೆಲ್ಲ ಗೊತ್ತಿರುವ ಹಾಗೆ ನಾನು ಪ್ರಜಾಸತ್ತಾವಾದಿ. ಪ್ರಜೆಗಳ ಇಚ್ಛೆಯೇ ನನ್ನ ಇಚ್ಛೆ. ನೀವೆಲ್ಲ ಅಪ್ಪಂದಿರ ಹಣ ಖರ್ಚು ಮಾಡುವವರಾದರೂ ಪ್ರಾಯಪ್ರಬುದ್ಧರು. ನೀವು ಎರಡೂ ಕಡೆಯವರು ನಿಮ್ಮೊಳಗಿನ ಮತಭೇದವನ್ನು ಹೋರಾಡಿಯೇ ತೀರ್ಮಾನಿಸಬೇಕೆಂದು ನಿರ್ಧರಿಸಿದ್ದೀರಿ. ನಿಮ್ಮ ಘನವಾದ ನಿರ್ಧಾರಕ್ಕೆ ಅಡ್ಡಿ ಮಾಡುವುದೆಂದರೆ ಪ್ರಜಾ-ಇಚ್ಛೆಯನ್ನು ದಮನ ಮಾಡಿದಂತೆ. ಆದ್ದರಿಂದ ನಿಮ್ಮ ನಿರ್ಧಾರವನ್ನು ಜಾರಿಗೆ ತರಲು ಅನುಕೂಲವಾಗಲೆಂದೇ ಕಲ್ಲು, ಇಟ್ಟಿಗೆ, ಸೋಡಾ ಬಾಟ್ಲಿಗಳನ್ನು ನಿಮಗೆ ಒದಗಿಸಲಾಗಿದೆ. ಇವು ಮುಗಿದರೆ ಮತ್ತೆ ೫೦ ಟ್ರಕ್ಕುಗಳ ಸರಬರಾಜಿಗೆ ಸಿದ್ಧವಾಗಿ ನಿಂತಿವೆ. ಈ ಬಗ್ಗೆ ನಿಮಗೆ ಕಾಳಜಿ ಬೇಡ. ನೀವು ಮನಃ ಪೂರ್ತಿಯಾಗಿ ಹೋರಾಡಿರಿ."

"ಈ ಬ್ರೇನ್‌ಗಳು ವೀರರಾದ ನಿಮ್ಮ ವಿರುದ್ಧವಾಗಿ ನಿಂತಿಲ್ಲ. ನಿಮ್ಮಲ್ಲಿ ಯಾರೂ ಹೇಡಿಗಳಿಲ್ಲವೆಂದು ನಾನು ಗ್ರಹಿಸುತ್ತೇನೆ. ಆದರೂ ರಣಮುಖದಲ್ಲಿ ಕೆಲವರ ಧೈರ್ಯ ಕುಸಿಯುವ ಸಂಭವವುಂಟು. ಅಂಥವರು ರಣರಂಗದಿಂದ ಓಡಿಹೋಗಿ ಎರಡೂ ಪಕ್ಷಗಳ ಮುಖಗಳಿಗೆ ಮಸಿಬಳಿಯುವ ಸಾಧ್ಯತೆ ಇಲ್ಲದಿಲ್ಲ. ಆ ಪ್ರಕಾರ ಗೋಡೆ ಹಾರಿಯೋ ಮತ್ತಾವುದೇ ರೀತಿಯಿಂದಲೋ ಪಲಾಯನ ಪಸರಿಸಲು ಯತ್ನಿಸುವ ಜೀವಗಳ್ಳರ ದೇವರನ್ನು (ಈ ಪ್ರಯೋಗ ನೋಡಿದರೆ ತೊಗಲಖನು ಕುಮಾರವ್ಯಾಸನನ್ನು ಓದಿದಂತೆ ಭಾಸವಾಗುವುದು). ಸುಟ್ಟುಹಾಕಲು ಈ ಅಗ್ನ್ಯಸ್ತ್ರಗಳು ಇವೆ. ಹೇಡಿಗಳು ಯಾರಾದರೂ ಇದ್ದರೆ ಅವರಿಗೆ ಇದು ಎಚ್ಚರಿಕೆ. ಅವರ ಮೇಲೆ ಪಾಯಿಂಟ್-ಬ್ಲ್ಯಾಂಕ್ ಆಗಿ ಗುಂಡು ಹಾರಿಸಲಾಗುತ್ತದೆ. ಯಾಕೆಂದರೆ ಇದು ಇಡೀ ವಿದ್ಯಾರ್ಥಿವೃಂದದ ಆತ್ಮಗೌರವದ ಪ್ರಶ್ನೆ."

"ನನ್ನ ಅಭಿಪ್ರಾಯದಲ್ಲಿ ನೀವು ಎರಡೂ ಪಕ್ಷಗಳು ಪ್ರತ್ಯೇಕ ಪ್ರತ್ಯೇಕ ಲೈನುಗಳಾಗಿ

ನಿಂತು ನಿಮಗೆ ಒದಗಿಸಿದ ಆಯುಧಗಳಿಂದ ಹೋರಾಡುವುದು ಲೇಸು. ಮುಂದೆ ನಿಂತವರಿಗೆ ಗಾಯವಾಗಿ ಉರುಳಿದಾಗ ಹಿಂದಿನವರು ಮುಂದೆ ಬಂದು ಕಾಳಗ ಮುಂದುವರಿಸಬಹುದು. ಆದರೆ ನಿಮ್ಮ ರಣತಂತ್ರ ಬೇರೆಯೇ ಇರಬಹುದು. ಆದ್ದರಿಂದ ನಾನು ಹೇಳಿದಂತೆಯೇ ಹೋರಾಡಬೇಕೆಂದು ನಿರ್ಬಂಧವಿಲ್ಲ. ಹೋರಾಟದ ನಿರ್ಧಾರ ನಿಮ್ಮದು; ಸ್ಟ್ರಾಟಜಿಯೂ ನಿಮ್ಮದೇ."

"ಎಷ್ಟು ಹೊತ್ತು ಬೇಕಾದರೂ ಹೋರಾಡಲು ನೀವು ಸ್ವತಂತ್ರರು. ನೀವು ಯುದ್ಧವಿರಾಮ ಘೋಷಿಸಿದ ಕೂಡಲೆ ಗಾಯಾಳುಗಳನ್ನು ಆಸ್ಪತ್ರೆಗಳಿಗೆ ಸಾಗಿಸಲು ಅಂಬ್ಯುಲೆನ್ಸುಗಳು ಅಣಿಯಾಗಿವೆ. ಯಾರಾದರೂ ವೀರಮರಣ ಹೊಂದಿದರೆ ಅವರಿಗೆ ನಿಮ್ಮ ಸೇನಾಪಡೆಯವರು ವಿರೋಚಿತ ಅಂತ್ಯ ಗೌರವವನ್ನು ಅರ್ಪಿಸಿ ಸಂಬಂಧಿಕರಿಗೆ ಕಳೇಬರಗಳನ್ನು ಒಪ್ಪಿಸುವರು. ಪ್ರತಿಯೊಬ್ಬನಿಗೂ ಒಂದು ವೀರಗಲ್ಲು ನಿಲ್ಲಿಸಲಾಗುವುದು."

"ಸೈ! ಇನ್ನು ಪ್ರಾರಂಭವಾಗಲಿ!"

ಭಾಷಣ ನಿಂತಿತು. "ಕದಮ್ ಕದಮ್ ಬಢಾಯೆ ಜಾ ಖುಶೀಕಾ ಗೀತ ಗಾಯೆ ಜಾ" ಎಂದು ಮಿಲಿಟರಿ ಬ್ಯಾಂಡ್ ನುಡಿಯತೊಡಗಿತು.

ನಿಮಿಷ ಒಂದಾಯಿತು, ಐದಾಯಿತು, ಹತ್ತಾಯಿತು, ಹದಿನೈದಾಯಿತು. ಯಾರೊಬ್ಬರೂ ಮಿಸುಕಲಿಲ್ಲ. ಒಂದೇ ಒಂದು ಇಟ್ಟಿಗೆ ತುಂಡು, ಬೆಣಚುಕಲ್ಲು, ಖಾಲಿ ಸೋಡಾ ಬಾಟ್ಲಿಗೆ ಗಿರಾಕಿ ಬರಲಿಲ್ಲ. ಎಲ್ಲರ ಮನಸ್ಸೂ ಗೇಟಿನಕಡೆ ಧಾವಿಸುವಂತಿತ್ತು. ಆದರೆ ಧ್ವನಿವರ್ಧಕದಲ್ಲಿ ತೊಗಲಖನ ಧ್ವನಿ ಮೃದುವಾಗಿ ಎಚ್ಚರವಿತ್ತಿತ್ತು; "ನನ್ನ ತರುಣ ವೀರರೇ, ಗೇಟಿನ ದಿಕ್ಕಿಗೆ ಮಾತ್ರ ಹೆಜ್ಜೆ ಇಡಬೇಡಿ, ಭುಜಬಲದಿಂದಲೇ ವಿವಾದ ತೀರ್ಮಾನಿಸುವ ನಿಮ್ಮ ಇಚ್ಛೆಯನ್ನು ಜಾರಿಗೆ ತರಲು ಬ್ರೆನ್‌ಗಳು ಸಿದ್ಧವಾಗಿದೆ. ನಾನು ನಿಮ್ಮ ಸೇವಕ. ನಿಮ್ಮ ಧವಳ ಕೀರ್ತಿಗೆ ಹೇಡಿಗಳ ಭಯವಿಲ್ಲದಂತೆ ನೋಡಿಕೊಳ್ಳಲು ನಿಮಗೆ ನೆರವಾಗುತ್ತವೆ—ಈ ೨೫೦ ಬ್ರೆನ್‌ಗನ್ನುಗಳು, ಹಿಂಜರಿಯಬೇಡಿ."

ನೇಸರು ನೆತ್ತಿಗೇರಿ ಪಡ್ಡುವಲಿಗೆ ವಾಲಿತ್ತು. ವಿದ್ಯಾರ್ಥಿಗಳು ನಿಂತಲ್ಲೇ ನೀರಾದರು. ಸುದ್ದಿ ಕೇಳಿದ ಆಧ್ಯರೂ, ಉಚ್ಚ ಅಧಿಕಾರಿಗಳೂ ನಿಂತಲ್ಲೇ ಮರಗಟ್ಟಿದರು. ಯಾಕೆಂದರೆ ಕೀಚಕ ಮತ್ತು ಭುಜಬಲ ಭೀಮ ಇಬ್ಬರ ಪಕ್ಷಗಳಲ್ಲಿಯೂ ಅವರ ಅನೇಕ ರೌಡಿ ಮಕ್ಕಳಿದ್ದರು. ಅವರೇನಾದರೂ ತಪ್ಪು ಹೆಜ್ಜೆ ಇಟ್ಟರೆ ತೊಗಲಖನು ತನ್ನ ಮಾತನ್ನು ಅಕ್ಷರಶಃ ಪಾಲಿಸದೆ ಬಿಡನೆಂದು ಅವರಿಗೆ ಖಾತ್ರಿ ಇತ್ತು.

ಗಂಟೆ ಎರಡಾಯಿತು, ಮೂರಾಯಿತು. ಹೊಟ್ಟೆಗಳು ತಾಳಪ್ರಸ್ತಾರ ಪ್ರಾರಂಭಿಸಿದ್ದವು. ನಾಲಗೆಗಳು ಒಣಗಿದ್ದವು. ಕೀಚಕ ಬಲಭೀಮರಿಬ್ಬರ ಅನುಯಾಯಿಗಳೂ ಗುಂಪು ಗುಂಪಾಗಿ ಗುಜುಗುಜು ಆರಂಭಿಸಿದರು. ಪಕ್ಷದೊಳಗೇ ಪರಸ್ಪರ ದೋಷಾರೋಪಣೆಗಳು ನಡೆದಿದ್ದವಂತೆ. ಹುರಿದುಂಬಿಸಲು ಯಾವ ಮುಕ್ತವೇಣಿ ದ್ರೌಪದಿಯೂ ಮುಂದೆ ಬರಲಿಲ್ಲ.

ಐದು ಗಂಟೆ ಹೊತ್ತಿಗೆ ಎರಡೂ ಬಣಗಳು ಶರಣಾಗತಿ ಮನೋಭಾವಕ್ಕೆ

ಬಂದಿದ್ದವು. ಆದರೆ ಪ್ರಸಂಗವನ್ನು ಯಾವ ರೀತಿಯಲ್ಲಿ ಒಂದು ನಿಲುಗಡೆಗೆ ತರುವುದೆಂದು ಯಾರಿಗೂ ಹೊಳೆಯುತ್ತಿರಲಿಲ್ಲ.

"ನನ್ನ ವಿದ್ಯಾರ್ಥಿ ಮಿತ್ರರೇ!" ಎಂದು ಧ್ವನಿವರ್ಧಕ ವಿಷಾದಕಂಠದಲ್ಲಿ ಪ್ರಾರಂಭಿಸಿತು. "ನನಗೆ ಬಹಳ ವ್ಯಥೆಯಾಗಿದೆ. ನಿಮ್ಮ ಕಾಲ ಬುಡದಲ್ಲೇ ಕಲ್ಲು ಇಟ್ಟಿಗೆ ಸೋಡಾ ಬಾಟ್ಲಿಗಳು ರಾಶಿ ಬಿದ್ದಿದ್ದರೂ ಯಾರೊಬ್ಬರೂ ಒಂದನ್ನೆತ್ತಿ ವಿರೋಧಿಗಳ ಕಡೆಗೆ ಬೀರುವುದಕ್ಕೆ ಸಿದ್ಧರಾಗದ್ದು ನೋಡಿ ನನಗೆ ನಾಚಿಕೆಯಾಗುತ್ತಿದೆ. ಆದರೆ ನಿಮಗೆ ಇನ್ನೂ ಒಂದು ಗಂಟೆ ಪುರುಸೊತ್ತು ಕೊಡುತ್ತೇನೆ. ಸಂಜೆಯ ಚಳಿ ಆರಂಭವಾಗುವುದಕ್ಕೆ ಮೊದಲೇ ಮೈಚಳಿ ಕೊಡವಿ ರಣಾಗ್ರಕ್ಕೆ ತೊಡಗಿರಿ. ಮೊದಲ ಕಲ್ಲು ಬೀರುವವನಿಗೆ ಬಿರುದು ಬಾವಲಿ ದಯಪಾಲಿಸುತ್ತೇವೆ. ವೀರರೇ, ಯಾಕೆ ತಡ!"

ಸೂರ್ಯ ಮುಳುಗಡೆಗೆ ಬಂದ. ತೊಗಲಖನ ಸವಿಷಾದ ಧ್ವನಿ ವಿಜ್ಞಾನ ಕಾಲೇಜಿನ ಬಯಲಲ್ಲಿ ತರಂಗಿಸಿತು. "ಆಗಲಿ, ನೀವೆಲ್ಲ ಈಗ ಎದುರಾಳ್ತನ ಮರೆತು ಶಾಂತಿಯಿಂದಲೇ ನಿಮ್ಮ ವಿವಾದವನ್ನು ಬಗೆಹರಿಸುವ ನಿರ್ಧಾರಕ್ಕೆ ಬಂದಿದ್ದೀರೆಂದು ನಾನು ಭಾವಿಸುತ್ತೇನೆ. ಸುತ್ತಲೂ ಆಯುಧಗಳ ರಾಶಿ ಇದ್ದಾಗ ತಾನೇ ವೀರರಿಗೆ ಶಾಂತಿ ಮನೋಭಾವ ಉಂಟಾಗುತ್ತದೆಂದು ತೋರುತ್ತದೆ. ನಿಮ್ಮ ರಣೋದ್ಯಮಕ್ಕೆ ಹೇಗೋ ಹಾಗೆಯೇ ನಿಮ್ಮ ಸಂಧಿ ಪ್ರಯತ್ನಕ್ಕೂ ನೆರವಾಗಲು ನಿಮ್ಮ ಈ ಸೇವಕ ಸಿದ್ಧ. ಅದಕ್ಕೆ ಮೊದಲು ನಿಮ್ಮ ವೀರ ಕೀಚಕ ಮತ್ತು ಬಲಭೀಮ ಗುಂಪಿನಿಂದ ಹೊರಗೆ ಬಂದು ನಿಲ್ಲಲಿ."

ಇಬ್ಬರೂ ಪರಾಕ್ರಮಿಗಳನ್ನು ಅವರವರ ಅನುಯಾಯಿಗಳು ಹಿಂದಿನಿಂದ ತಳ್ಳುತ್ತ ಬಯಲಲ್ಲಿ ತಂದು ನಿಂದಿರಿಸಿದರು. ಇಷ್ಟೆಲ್ಲಕ್ಕೆ ಕಾರಣಳಾದ ದ್ರೌಪದಿಗೆ ಬುಲಾವಣೆ ಬಂತು. ಅವಳು ಅಲ್ಲಿರಲಿಲ್ಲವಾಗಿ ಅವಳ ಮನೆಗೆ ದೂತರನ್ನು ಅಟ್ಟಲಾಯಿತು. ಅವಳು ಬರುತ್ತಲೇ ತೊಗಲಖ್ ಜೀಪಿನಿಂದಿಳಿದು ಬಂದು ಹೇಳಿದ: "ಈಗಲೂ ಕಾಲ ಮಿಂಚಿಲ್ಲ. ನೀವಿಬ್ಬರೂ ನಿಮ್ಮ ಪಡೆಗಳನ್ನು ಬಲಿಕೊಡಲಿಚ್ಛಿಸದೆ ದ್ವಂದ್ವಯುದ್ಧದಿಂದ ನಿಮ್ಮ ನಿಮ್ಮ ಸಮರ್ಥನೆಗೆ ಸಿದ್ಧರಾಗಿದ್ದರೆ ಹಾಗೆಯೇ ಆಗಲಿ, ಇಲ್ಲದಿದ್ದರೆ ನಾನು ಸಂಧಿಕರಾರುಗಳನ್ನು ಹೇರಬೇಕಾಗುತ್ತದೆ."

ಇಬ್ಬರಲ್ಲಿಯೂ ಕದನ ಕುತೂಹಲ ಕಾಣಲಿಲ್ಲ. ಅವರು ಅನ್ನ ನೀರು ಕಂಡು ಒಂಭತ್ತು ತಾಸಾಗಿತ್ತು.

ತೊಗಲಖನು ದ್ರೌಪದಿಯ ಕಡೆ ತಿರುಗಿ ಕೇಳಿದ. "ನಿಜವೇನಮ್ಮ ಈತ ನಿನ್ನ ಮುಖಕ್ಕೆ ಸಿಗರೇಟು ಹೊಗೆ ಊದಿದ್ದು?"

"ಹೌದು ಜಹಾಂಪನಾ!" ಎಂದಳಾ ದ್ರೌಪದಿ ಮೊಗಲ್ ರೀತಿಯಲ್ಲಿ. "ಊಂಹುಂ, ನನ್ನನ್ನು ಜಹಾಂಪನಾ ಎನ್ನಬೇಡ ಹುಡುಗೀ. ನಾನು ಬರೇ ಯಹಾಂಪನಾಃ (ಜಹಾಂ ಪನಾಃ-ಜಗದ್ರಕ್ಷಕಃ ಯಹಾಂ ಪನಾಃ-ಇಲ್ಲಿಯ ರಕ್ಷಕ) ಎಂದು ತೊಗಲಖ ಅವಳನ್ನು ತಿದ್ದಿದ. ಆಮೇಲೆ, "ಅಲ್ಲವೇ ಹುಡುಗಿ, ಅಗ್ನಿಕನ್ಯೆ ದ್ರೌಪದಿ ಹೊಗೆಗೆ ಅಂಜಿದೊಡೆಂತವ್ವ?"

ಎಂದ. ಅವನ ಜೋಕಿಗೆ ಅವನಲ್ಲದೆ ಅವಳೂ ಮತ್ತು ಅಂಗೈಲಿ ಜೀವ ಹಿಡಿದುಕೊಂಡಿದ್ದ ಕೀಚಕ-ಭೀಮರೂ ನಗದಿರಲಿಲ್ಲ.

"ಹಾಗಾದರೆ ಇಲ್ಲಿ ಕೇಳಿ, ಕೀಚಕನು ಮೊದಲು ಇವಳ ಮುಂದೆ ತನ್ನ ಕಿವಿಗಳನ್ನು ಹಿಡಿದುಕೊಂಡು ಮೂರು ಸಲ ಕೂತು ಏಳಲಿ, ಇದೇನು ದೊಡ್ಡ ಅವಮಾನವಲ್ಲ. ನನಗೂ ಶಾಲೆಯಲ್ಲಿ ಮಾಸ್ತರು ಒಮ್ಮೆ ಇದೇ ಶಿಕ್ಷೆ ವಿಧಿಸಿದ್ದರು. ಆಮೇಲೆ ಕೀಚಕ—ಭೀಮರಿಬ್ಬರೂ ಕೈಕೈ ಹಿಡಿದು ಬರಲಿ, ಗೇಟಿನ ಬಳಿ ಇಬ್ಬರೂ ಬಗ್ಗಿ ತಂತಮ್ಮ ಮೂಗುಗಳಿಂದ ನೆಲದಲ್ಲಿ ಮೂರು ಮೂರು ಗೆರೆ ಎಳೆಯಲಿ, ಅಷ್ಟಾದೊಡನೆ ಬ್ರೆನ್‌ಗನ್ನುಗಳು ಹಿಂದೆ ಸರಿಯುತ್ತವೆ. ಗೇಟುಗಳು ತೆರೆಯುತ್ತವೆ."

ಈಗಲೇ ವರದಿ ಬಹಳ ಬೆಳೆದಿರುವುದರಿಂದ ಮುಂದಿನದನ್ನು ಓದುಗರ ಕಲ್ಪನಾಶಕ್ತಿಗೆ ಬಿಡುತ್ತೇನೆ. ಒಂದು ಮಾತ್ರ ಹೇಳುವುದುಳಿದೆ. ಸಂಬಂಧಪಟ್ಟ ಬಸ್ಸಿನ ಕಂಡಕ್ಟರ್ ಮತ್ತು ಚಾಲಕನಿಗೆ ಕರ್ತವ್ಯ ಲೋಪಕ್ಕಾಗಿ ಒಂದೊಂದು ಪೈಸೆ ದಂಡ ಹೇರಲಾಗಿದೆ ಎಂದು ಮರುದಿನ ಪೇಪರುಗಳಲ್ಲಿ ವರದಿ ಬಂತು.

❐

# ಯಾರಿಗಾಗಿ ಬದುಕುತ್ತೇವೆ?

ನಾವು ಯಾರಿಗೋಸ್ಕರ ಬದುಕುತ್ತೇವೆ? ಎಂಬ ಪ್ರಶ್ನೆಯನ್ನು ನಾನು ಆಗಾಗ್ಗೆ ಕೇಳಿಕೊಳ್ಳುವುದುಂಟು. ನಾನು ಪರೋಪಕಾರದ ವಿಚಾರ ಮಾತಾಡುತ್ತಾ ಇಲ್ಲ. ದೇಶಕ್ಕೋಸ್ಕರ ಜೀವವನ್ನು ತೇಯುವ ಅಥವಾ ಬಲಿಕೊಡುವ ವಿಚಾರವನ್ನೂ ಹೇಳುತ್ತಾ ಇಲ್ಲ. ಇವೆಲ್ಲ ಹಳೇ ಭಾವನೆಗಳು. ಈ ಕಾಲದಲ್ಲಿ ನಮಗೆ ಪರೋಪಕಾರಕ್ಕೆ ಪುರಸೊತ್ತು ಇಲ್ಲ. ಎಲ್ಲವನ್ನೂ ಉದ್ಧಾರ ಮಾಡುವುದಕ್ಕಾಗಿ ಟೊಂಕ ಕಟ್ಟಿ, ಎದೆ ತಟ್ಟಿ ನಿಂತಿರುವ ಸರಕಾರಗಳಿರುವಾಗ ನಾವು ವ್ಯಕ್ತಿಗಳಾಗಿ ಪರೋಪಕಾರ ಮಾಡುವ ಮಬ್ಬಿಗೆ ಬೀಳುವುದರಲ್ಲಿ ಅರ್ಥವಿಲ್ಲ. ನಾವೆಲ್ಲಾದರೂ ಪರೋಪಕಾರವನ್ನು ಸೀರಿಯಸ್ಸಾಗಿ ಮಾಡತೊಡಗಿದರೆ ಅದೇ ಕೆಲಸದಲ್ಲಿ ನಿರತವಾಗಿರುವ ಸರಕಾರಗಳು ನಮ್ಮನ್ನು ದಾಯಾದಿಗಳೆಂದು ತಿಳಿಯಬಹುದು. ಇನ್ನು ದೇಶಕ್ಕಾಗಿ ಜೀವ ಕೊಡುವುದು ಕೂಡ ಈ ಕಾಲದಲ್ಲಿ ಒಳ್ಳೇ ಫ್ಯಾಶನ್ ಅಲ್ಲ. ನಾವೆಲ್ಲರೂ ದೇಶಕ್ಕಾಗಿ ಇನ್ನೊಬ್ಬರ ರಕ್ತದ ಕೊನೆಯ ಹನಿಯವರೆಗೂ ಹೋರಾಡುವುದಕ್ಕೆ ಸಿದ್ಧರೇ ಹೊರತು ನಮ್ಮ ಸ್ವಂತ ರಕ್ತ ಹರಿಸುವುದಕ್ಕಲ್ಲ.

ಆದ್ದರಿಂದ ನಾವೆಲ್ಲ ಈ ಕಲಿಯುಗದಲ್ಲಿ ನಮ್ಮ ಸ್ವಂತಕ್ಕಾಗಿ ಬದುಕುತ್ತಿದ್ದೇವೆ, ಅಥವಾ ನಮ್ಮ ಹೆಂಡತಿ ಮಕ್ಕಳು ಬಂಧು-ಬಾಂಧವರ ಸಲುವಾಗಿ ಬಾಳುತ್ತಿದ್ದೇವೆ ಎಂದು ನೀವು ತಿಳಿದಿದ್ದರೆ ಅದೂ ತಪ್ಪು. ಈ ತಿಳಿವಳಿಕೆಯ ಯುಗದಲ್ಲಿ ಸ್ವಂತಕ್ಕಾಗಿ ಬದುಕುವುದೂ ಔಟ್ ಆಫ್ ಫ್ಯಾಶನ್ನೇ ಆಗಿದೆ. ನಾವು ಅಂಥ ಸ್ವಾರ್ಥಿಗಳಲ್ಲ. ನಮ್ಮ enlightened age ನಲ್ಲಿ ನಾವೆಲ್ಲರೂ ಪರರಿಗಾಗಿ—ಪರೋಪಕಾರಕ್ಕಾಗಿ ಅಲ್ಲ—ಬದುಕುತ್ತಿದ್ದೇವೆ.

ಮತ್ತು ಅದೇ ನಮ್ಮ ಯುಗದ ಅನೇಕ ಸಂಕಟಗಳ ಮೂಲವಾಗಿದೆ.

ತನ್ನ ಸ್ವಂತಕ್ಕಾಗಿ ಬದುಕುವವನು ಹೇಗೆ ಬದುಕುತ್ತಾನೆ? ಅವನು ಜೀವನದಲ್ಲಿ ಒಂದು ಗುರಿಯನ್ನಿಟ್ಟುಕೊಂಡಿರುತ್ತಾನೆ. ತನಗೆ ನಿಜವಾಗಿ ಮನಸ್ತೃಪ್ತಿಯನ್ನು ಕೊಡುವ ಸಂಗತಿಗಳೇನೆಂದು ನಿರ್ಧರಿಸಿಕೊಳ್ಳುತ್ತಾನೆ. ಒಬ್ಬನಿಗೆ ಕೇವಲ ಹಣಗಳಿಸುವುದು ತೃಪ್ತಿಯನ್ನು ಕೊಡಬಹುದು, ಇನ್ನೊಬ್ಬನಿಗೆ ಅಧ್ಯಾತ್ಮದಲ್ಲಿ ಆಸಕ್ತಿ ಇರಬಹುದು, ಮತ್ತೊಬ್ಬನಿಗೆ ಸಂಗೀತವೋ ಸಾಹಿತ್ಯವೋ ಸಂತೋಷವನ್ನು ಕೊಡಬಹುದು. ತನ್ನ ಸ್ವಂತಕ್ಕಾಗಿ ಬದುಕುವವನು ತನ್ನ ಗುರಿಯನ್ನು ಕುರಿತು ಜೀವಮಾನವೆಲ್ಲ ಪ್ರಯತ್ನದಲ್ಲಿ ನಿರತನಾಗುತ್ತಾನೆ. ಆ ಯತ್ನ ಕೊಂಚವಾದರೂ

ಕೈಗೂಡಿದರೆ ಅವನಿಗೆ ಆತ್ಮಸಮಾಧಾನವಾಗುತ್ತದೆ. ತನಗಾಗಿ ಬದುಕುವವನು ಬೇರೆಯವರು ತನ್ನ ಪ್ರಯತ್ನಗಳ ವಿಷಯದಲ್ಲಿ ಏನು ತಿಳಿದುಕೊಳ್ಳುತ್ತಾರೆಂಬ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ಪರೋಪಕಾರದ ವಿಷಯದಲ್ಲಿ ಕೂಡ, ತನಗಾಗಿ ಬಾಳುವವನು ಬಹಳ ಆಗ್ರಹ ತಾಳುವುದಿಲ್ಲ. ಇನ್ನೊಬ್ಬನಿಗೆ ತಾನು ಉಪಕಾರ ಮಾಡಿಯೇ ತೀರಬೇಕೆಂದಾಗಲಿ, ಉಪಕಾರ ಮಾಡಿಸಿಕೊಂಡವನು ತನಗೆ ಕೃತಜ್ಞನಾಗಿರಬೇಕೆಂದಾಗಲಿ, ಅವನಿಗೆ ಹಟವಿಲ್ಲ. ಏಕೆಂದರೆ ಅವನ ಕೆಲಸಗಳೆಲ್ಲ ಆತ್ಮಸಮಾಧಾನದ ಅಳತೆಗೋಲಿನಲ್ಲಿ ಅಳೆಯಲ್ಪಡುತ್ತವೆ.

ಆದರೆ ಇಂದಿನ ಯುಗದವರಾದ ನಾವು ಮಾತ್ರ ಈ ಪ್ರಕಾರ ನಮಗಾಗಿಯೇ ಬದುಕುವುದಕ್ಕೆ ಒಪ್ಪುವುದಿಲ್ಲ. ನಮಗೆ ಯಾವುದು ಒಳ್ಳೆಯದು, ಯಾವುದು ಅಗತ್ಯವಾದುದು ಎಂಬುದನ್ನು ನಾವು ಯೋಚಿಸುವುದೇ ಇಲ್ಲ. ನೆರೆಮನೆಯವರ ರೀತಿ-ನೀತಿಗಳು ನಮಗೆ ಧ್ಯೇಯಗಳಾಗುತ್ತವೆ.

ನೆರೆಮನೆಯವಳು ಓರೆ ಬೈತಲೆ ತೆಗೆಯುತ್ತಾಳೆ. ಅದು ತನಗೆ ಬಹಳ ಒಪ್ಪುತ್ತದೆ; ಅದರಿಂದ ತಾನು ಊರ್ವಶಿಯ ಹಾಗೆ ಕಾಣಿಸುತ್ತೇನೆ ಎಂದು ಅವಳು ನಂಬುತ್ತಾಳೆ. ಅದು ನಿಜವೂ ಇರಬಹುದು. ಅಥವಾ ಅವಳಿಗೆ ತಾನು ನೆರೆಮನೆಯವಳಿಗಿಂತ ಬೇರೆಯಾಗಿ ಕಾಣಬೇಕು ಎಂಬ ಆಕಾಂಕ್ಷೆ ಇರಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಪ್ರತಿ ವ್ಯಕ್ತಿಯೂ ತನ್ನದೇ ಒಂದು ವೈಶಿಷ್ಟ್ಯ ಬೇಕೆಂದು ಅಪೇಕ್ಷಿಸುವುದು ಸಹಜ. ಆದರೆ ಆಚೆ ಮನೆಯವಳು ಓರೆ ಬೈತಲೆ ತೆಗೆದು ಹೊರಗೆ ತಲೆ ತೋರಿಸಿದೊಡನೆಯೇ ಈಚೆ ಮನೆಯವಳಿಗೆ ತಾನೂ ಹಾಗೆಯೇ ಮಾಡಬೇಕೆಂಬ ತಡೆಯಲಾರದ ಚಪಲ ಹುಟ್ಟಿಕೊಳ್ಳುತ್ತದೆ. ತನಗೆ ಅದು ಒಪ್ಪುತ್ತದೆಯೇ ಎಂಬ ಪ್ರಶ್ನೆಯನ್ನು ಅವಳು ಕೇಳಿಕೊಳ್ಳುವುದೇ ಇಲ್ಲ. ಕೆಲವೇ ದಿನಗಳಲ್ಲಿ ಓರೆ ಬೈತಲೆ ಎಲ್ಲಾ ಮಹಿಳೆಯರ ತಲೆಗಳನ್ನು ಅಲಂಕರಿಸುತ್ತದೆ; ಇಲ್ಲವೇ ವಿಕಾರಗೊಳಿಸುತ್ತದೆ. ಯಾಕೆ ಓರೆ ಬೈತಲೆ ತೆಗೆಯುತ್ತೀರಿ ಎಂದು ಕೇಳಿದರೆ ಅವರಲ್ಲಿ ಹೆಚ್ಚಿನವರಿಗೆ ಸಮಾಧಾನಕರವಾದ ಉತ್ತರ ಹೇಳಲು ಬಾರದು. "ಎಲ್ಲರೂ"ಹಾಗೆ ಮಾಡುತ್ತಿರುವುದರಿಂದ ಅವರೂ ಮಾಡುತ್ತಾರೆ, ಇಷ್ಟೆ. ವನವಾಸಿ ರಾಮನ ಜಡೆಯನ್ನು ಹೋಲುವ, ತಲೆಯ ಮೇಲೆ ಒಂದು ಬುಟ್ಟಿಯನ್ನು ಮಗುಚಿ ಹಾಕಿದ ಹಾಗೆ ಕಾಣಿಸುವ, ತಲೆಯ ಮೇಲಿಂದ ಹಿಂದಿನ ದಿಕ್ಕಿಗೆ ಒಂದು ತುಪಾಕಿಯನ್ನು ನಿಲ್ಲಿಸುವಂತೆ ತೋರುವ ತಲೆಯ ಮೇಲೆ ಚಿಪ್ಪಿಗನ ಹಕ್ಕಿ ಗೂಡುಕಟ್ಟಿದ ಹಾಗೆ ಕಾಣಿಸುವ ಮತ್ತು ಇನ್ನೂ ಅಸಂಖ್ಯ ತರಹದ ಮೋಡಿಗಳು ಒಂದರ ಮೇಲೊಂದರಂತೆ ಕಾಳ್ಗಿಚ್ಚಿನ ಹಾಗೆ ಹಬ್ಬುವುದನ್ನು ನಾವು ನೋಡುತ್ತೇವೆ. ಐವತ್ತೈದು ದಾಟಿದವನಾದ ನಾನು ಸ್ತ್ರೀ ಸೌಂದರ್ಯವನ್ನು ಮನೋವಿಕಾರವಿಲ್ಲದೆ ಗಮನಿಸಬಲ್ಲವನಾಗಿದ್ದೇನೆ. ಕೆಲವರ ತಲೆಗಳ ಮೇಲೆ ಇವು ಬಲು ಮುದ್ದಾಗಿ ಕಾಣಿಸುತ್ತವೆ ಎಂದು ನಾನು ಒಪ್ಪುತ್ತೇನೆ. ಸಾಮಾನ್ಯವಾಗಿ ಅವರು ತಮಗೆ ಒಪ್ಪುವಂಥದನ್ನು ಆರಿಸಬಲ್ಲ ರಸಜ್ಞೆಯರಾಗಿರುತ್ತಾರೆ. ಹೆಚ್ಚಿನ ಮಹಿಳಾಮಣಿಯರಿಗೆ ಅದೊಂದು ವೇಷ ಕಟ್ಟಿದ ಹಾಗೆಯೇ ತೋರುತ್ತದೆ. ಆದರೆ ಅವರಿಗೆ ಅದರ ಪರಿವೆ ಇಲ್ಲ. ಏಕೆಂದರೆ ಇತರರು

ಮಾಡಿದ ಹಾಗೆ ತಾವೂ ಮಾಡಬೇಕೆಂಬ ಚಪಲವೇ ಅವರ ಮುಖ್ಯ ಪ್ರೇರಣೆ. ತಲೆಯ ಮೇಲಿನ ಫ್ಯಾಶನ್ನುಗಳಿಗೆ ಅನ್ವಯಿಸತಕ್ಕದ್ದನ್ನೇ ಕೆಳಗಿನ ಫ್ಯಾಶನ್ನುಗಳಿಗೂ ಅನ್ವಯಿಸಬಹುದು. ಲೋಕಟ್ ಬ್ಲೌಜುಗಳು, ಭುಜಪ್ರದರ್ಶಕ ಬ್ಲೌಜುಗಳು, ಹೊಕ್ಕುಳ ಕೆಳಗಿನ ನೀವಿಗಳು ಇವುಗಳಲ್ಲಿ ಯಾವುದನ್ನೂ ನಾನು ಅಶ್ಲೀಲವೆಂದು ಹೇಳುವುದಿಲ್ಲ. ಆದರೆ ಕೆಲವರ ಮೇಲೆ ಅವು ಅಶ್ಲೀಲವಾಗಿ ಕಾಣಿಸುತ್ತವೆ ಎಂದು ಮಾತ್ರ ಹೇಳಬಲ್ಲೆ. ತಮಗೆ ಯಾವುದು ಒಪ್ಪುತ್ತದೆ ಎಂಬುದನ್ನು ಅವರು ಯೋಚಿಸಿದರೆ ಅವರು ಆಚೆ ಮನೆಯವರ ಬಣ್ಣಕ್ಕೆ ಮೈಸುಟ್ಟುಕೊಳ್ಳುವ ಹುಚ್ಚಿಗೆ ಇಳಿಯುವುದಿಲ್ಲ ಎಂಬುದು ಖಂಡಿತ.

ಎಲ್ಲಾ ಮುದುಕರ ಹಾಗೆ ನಾನೂ ಹೆಂಗಸರ ಹೊಸ ರೀತಿಗಳ ಬಗ್ಗೆ ಆಡಿಕೊಳ್ಳುತ್ತಿದ್ದೇನೆ ಎಂದುಕೊಳ್ಳಬೇಡಿ. ಈ ಮನೋವೃತ್ತಿ ಅಬಲಾವರ್ಗಕ್ಕೇ ಮೀಸಲಾದ ದೌರ್ಬಲ್ಯವಲ್ಲ. ಪುರುಷವರ್ಗದ ಹೇರ್‌ಕಟ್ ಫ್ಯಾಶನ್, ವೇಷ ಭೂಷಣಗಳು ಕೂಡ ಇದೇ ಬಗೆಯ ಅನುಕರಣೆಯ ಮೋಹಕ್ಕೆ ಒಳಗಾದವುಗಳೇ. ಬಿದಿರಗಳಗಳಂಥ ಕಾಲುಗಳುಳ್ಳವರಿಗೆ ಕೊಳವೆ ಪ್ಯಾಂಟು ಬೆಲ್ಲದ ಬಯಲಿನ ಬೆರ್ಚಪ್ಪನನ್ನು ಅಣಕಿಸುವ ಸೌಂದರ್ಯವನ್ನು ನೀಡುತ್ತದೆ. ಆದರೆ ಅದು ತಮಗೆ ಹೇಗೆ ಕಾಣುತ್ತದೆಂದು ಯಾರಿಗಿದೆ ಚಿಂತೆ? ಅದು ಫ್ಯಾಶನ್.

ನಮ್ಮ ತಲೆಯ ಮೇಲಿನ ದೇವರು ಕೊಟ್ಟ ಕೂದಲನ್ನು ಹೇಗೆ ಇಟ್ಟುಕೊಂಡರೇನು? ಹೇಗೂ ತೊಡಲೇಬೇಕಾದ ಬಟ್ಟೆಯನ್ನು ಬಿಗಿಯಾಗಿ ತೊಟ್ಟರೇನು ಸಡಿಲಾಗಿ ತೊಟ್ಟರೇನು? ಎಂದು ಕೇಳುತ್ತೀರಿ. ಆದರೆ ನೆರೆಮನೆಯವರನ್ನು ಅನುಕರಿಸುವ ವೃತ್ತಿ ಇಷ್ಟಕ್ಕೇ ಮುಗಿಯುವುದಿಲ್ಲ. ಅದು ಇದಕ್ಕಿಂತ ವೆಚ್ಚದ್ದಾಗಿ ಪರಿಣಮಿಸುತ್ತಿದೆ.

ನೆರೆಮನೆಯವರು ರೇಡಿಯೊ ತಂದಿದ್ದಾರೆ ಮತ್ತು ತಂದದ್ದು ಜಗಜ್ಜಾಹೀರಾಗಬೇಕೆಂದು ಅದನ್ನು ಹಗಲೆಲ್ಲ ಗಟ್ಟಿಯಾಗಿ ಕಿರಿಚಿಸುತ್ತಾರೆ. ಬಹುಶಃ ಅವರ ಕೈಲಿ ಸ್ವಲ್ಪ ಉಳಿಕೆ ಹಣ ಇರಬೇಕು. ಅಥವಾ ರೇಡಿಯೋದಲ್ಲಿ ವ್ಯಾಪಾರಿ ಸುದ್ದಿಯನ್ನೋ ಕೃಷಿರಂಗದ ಪ್ರಗತಿಯನ್ನೋ ಕೇಳಿ ಅವರು ಪ್ರಯೋಜನ ಪಡೆಯುವ ಇರಾದೆ ಇರಿಸಿಕೊಂಡಿದ್ದಾರೆ. ಅಥವಾ ಸಂಗೀತ ದಲ್ಲಿ ಅವರಿಗೆ ತೀವ್ರ ಅಭಿರುಚಿ ಇದೆ. ಅದನ್ನು ಕೇಳಿ ಸಂತೋಷ ಪಡುವ ಇಲ್ಲವೆ ಅರ್ಥಮಾಡಿಕೊಂಡು ರಸಾನುಭವ ಪಡೆಯುವ ಶಕ್ತಿ ಅವರಿಗಿದೆ. ಆದರೆ ಅವರ ಮನೆಯಲ್ಲಿ ಎರಡು ದಿನ ರೇಡಿಯೋ ಕಿರಿಚಿತೋ ಸುತ್ತಮುತ್ತಲ ಮನೆಗಳಲ್ಲಿ ತುಮುಲ ಪ್ರಾರಂಭವಾಗುತ್ತದೆ. ತಮ್ಮ ಮನೆಗಳಿಗೆ ರೇಡಿಯೋ ಬಾರದಿದ್ದರೆ ತಾವು ಮನುಷ್ಯರೇ ಅಲ್ಲವೆಂದು ಗೃಹಿಣಿಯರು ಭಾವಿಸತೊಡಗುತ್ತಾರೆ. ಸಾಲವೋ ಸೋಲವೋ ಮಾಡಿ ರೇಡಿಯೋ ಬರುತ್ತದೆ. ರಾಗ ವೆಂದರೇನೆಂದು ಅರ್ಥವಾಗದವರು ಶಾಸ್ತ್ರೀಯ ಸಂಗೀತ ಊದಿಸುತ್ತಾರೆ. ಔರಂಗಜೇಬನನ್ನು ಮೀರಿಸುವ ರಸಜ್ಞರು ಸಿನೆಮ ಸಂಗೀತ ಹಚ್ಚುತ್ತಾರೆ. ಯಾರಾದರೊಬ್ಬರಿಗೆ ರೇಡಿಯೋ ತರುವುದು ಸಾಧ್ಯವಾಗದಿದ್ದರೆ ಅವರ ಹೆಂಡತಿ ಅಥವಾ ಮಕ್ಕಳು ಅವರನ್ನು ಅಪ್ರಯೋಜಕರೆಂದು ತೀರ್ಮಾನಿಸುತ್ತಾರೆ. ರೇಡಿಯೋ ತಮಗೆ ಅಗತ್ಯವೇ, ಕೊಳ್ಳುವ ಶಕ್ತಿ ತಮ್ಮ ಗಂಡರಿಗುಂಟೇ

ಎಂದು ವಿಚಾರಿಸುವುದು ಅಸಾಧ್ಯವಾಗುತ್ತದೆ. ರೇಡಿಯೋ ಬಂದಾಗಲೇ ನೆರೆಮನೆಯವರಿಗಿಂತ ತಾವು ಕಡಿಮೆಯವರಲ್ಲ ಎಂಬ ವಿಶ್ವಾಸ ಅವರಿಗೆ ಬರುವುದು.

ರೇಡಿಯೋದಿಂದ ಏನೊಂದು ಪ್ರಯೋಜನ ಹೊಂದಲಾರದ ಜನರು ಇಂದು ಟ್ರಾನ್ಸಿಸ್ಟರುಗಳನ್ನು ಹೆಗಲಿಗೇರಿಸಿಕೊಂಡು ನಾವು ಕೃತಾರ್ಥರಾದೆವೆಂದು ಬೀದಿಯಲ್ಲಿ ಅಲೆಯುವುದನ್ನು ನೋಡಬಹುದು. ಗಂಟೆ ಎಷ್ಟಾಯಿತೆಂದು ನೋಡಲಾರದವರು ರಿಸ್ಟ್ ವಾಚುಗಳನ್ನು ಕಟ್ಟಿಕೊಂಡು ತಿರುಗುವುದನ್ನು ನೋಡಬಹುದು. ನಾವು ಚಿಕ್ಕವರಿದ್ದಾಗ ರಿಸ್ಟ್‌ವಾಚುಗಳು ಕೌತುಕದ ಪದಾರ್ಥಗಳಾಗಿದ್ದವು. ಪಟ್ಟಣಗಳಲ್ಲಿ ಕೂಡ ಸಾವಿರಕ್ಕೊಬ್ಬರು ಅವುಗಳನ್ನು ಮುಂಗೈ ಮೇಲೆ ತೊಡುವ ಭಾಗ್ಯ ಪಡೆದಿದ್ದರೋ ಇಲ್ಲವೋ. ಆದರೂ ನಾವು ಶಾಲೆಗೆ ಸಕಾಲದಲ್ಲೇ ಹೋಗುತ್ತಿದ್ದೆವು. ಜನರು ಆಫೀಸುಗಳಿಗೆ ಸರಿಯಾಗಿ ಹಾಜರಾಗುತ್ತಿದ್ದರು. ಕೆಲವರು ತಡವಾಗಿಯೂ ಹೋಗುತ್ತಿದ್ದರು. ಇಂದು ಗಂಡಸರು ಹೆಂಗಸರು ಮಕ್ಕಳಾದಿಯಾಗಿ ಎಲ್ಲ ವರ್ಗಗಳ ಮುಂಗೈಗಳೂ ರಿಸ್ಟ್ ವಾಚುಗಳಿಂದ ಶೋಭಿಸುತ್ತಿವೆ. ಆದರೆ ಶಾಲೆ-ಕಾಲೇಜುಗಳಲ್ಲಾಗಲಿ ಕಚೇರಿಗಳಲ್ಲಾಗಲಿ ಜನರು ತಡವಾಗಿ ಹಾಜರಾಗುತ್ತಲೇ ಇದ್ದಾರೆ. ವಾಚ್ ಇಲ್ಲದ್ದಕ್ಕಲ್ಲ. ವಾಚನ್ನು ಬರೇ ಅಲಂಕಾರ ವಸ್ತುವೆಂದು ಅವರು ಭಾವಿಸುವುದರಿಂದ. ನೆರಮನೆಯವರು ಅಥವಾ ಅವಳು ಕೈಗಡಿಯಾರ ಹಾಕಿಕೊಳ್ಳುವುದರಿಂದ ಇವರಿಗೆ ಅದು ಬೇಕಾಗಿತ್ತಷ್ಟೇ ಹೊರತು ತಮಗೋಸ್ಕರ ಅಲ್ಲ. ಜಗತ್ತಿನಲ್ಲೇ ನಿಖರವಾಗಿ ಸಮಯ ತೋರಿಸುವ ಗಡಿಯಾರ ಕೂಡ ಅವರಿಂದ ಹೊತ್ತಿಗೆ ಸರಿಯಾಗಿ ಕೆಲಸ ಮಾಡಿಸಲಾರದು. ಆದರೆ ಕುರುಡನಿಗೆ ಬ್ಯಾಟರೀ ದೀಪ ಬೇಕಾದ ಹಾಗೆ ಅವರಿಗೂ ಅದು ಬೇಕು. ಸ್ವಲ್ಪ ಮೇಲಿನ ಸ್ತರಕ್ಕೆ ಹೋಗಿ ಕಾರು, ಸ್ಕೂಟರುಗಳ ವಿಚಾರ ತೆಗೆದುಕೊಳ್ಳಿ. ಕಾರು ಇಡುವುದು ಇಂದು ಪ್ರತಿಯೊಬ್ಬನ ಧ್ಯೇಯವಾಗಿದೆ. ಹೆಚ್ಚುಹೆಚ್ಚು ಜನರು—ಯಾವ ಮೂಲದಿಂದ ಎಂದು ಹೇಳುವುದು ಕಷ್ಟ—ಕಾರುಗಳನ್ನೂ ಸ್ಕೂಟರುಗಳನ್ನೂ ಇಡುತ್ತಿದ್ದಾರೆಂಬುದೂ ನಿಜ. ಇದು ನಮ್ಮ ದೇಶದ ಪ್ರಗತಿಯ ಲಕ್ಷಣವೆಂದು ಭಾವಿಸಲಾಗುತ್ತದೆ. ಆದರೆ ಸ್ಕೂಟರ್, ಮೋಟರ್ ಸೈಕಲ್ ಇಟ್ಟವರೆಲ್ಲರಿಗೂ ಅದರ ಅಗತ್ಯವುಂಟೇ ಎಂದು ಕೇಳಿದರೆ ಉತ್ತರ ಏನೆಂದು ಎಲ್ಲರಿಗೂ ಗೊತ್ತಿದೆ. ಮೋಟರ್ ಅಥವಾ ಸ್ಕೂಟರಿನ ಮೂಲಕ ಧಾವಿಸಿ ಉಳಿಸಿದ ಸಮಯವನ್ನು ಅವರು ಏತಕ್ಕೆ ವಿನಿಯೋಗಿಸುತ್ತಾರೆ? ಕೆಲಸಕ್ಕೆ ಬಾರದ ಹರಟೆಗಳಿಗೆ, ಅರ್ಥವಿಲ್ಲದ ಧಾವಂತಕ್ಕೆ ಅದರ ವಿನಿಯೋಗವಾಗುತ್ತದೆ. ಕೆಲವರಿಗಂತೂ ಧೂಳೆಬ್ಬಿಸುವುದೇ ಕಾರ್, ಸ್ಕೂಟರ್‌ಗಳ ಪ್ರಯೋಜನ. ಹೆಚ್ಚಿನ ಶ್ರೀಮಂತರೂ ಅವರ ಹೆಂಡರೂ ಕಾರಿನ ದೆಸೆಯಿಂದ ಚರ್ಬಿ ಬೆಳೆಸಿಕೊಂಡು ಅದರ ನಿವೃತ್ತಿಗೆ ಔಷಧ ತೆಗೆದುಕೊಳ್ಳುತ್ತಾರೆ. ಡಾಕ್ಟರರು ವಾಕಿಂಗ್ ಮಾಡಿರಿ ಎಂದರೆ ಕಾರಿನಲ್ಲೇ ಅವರು ವಾಕಿಂಗ್ ಹೋಗುತ್ತಾರೆ.

ನಲವತ್ತು ವರ್ಷಗಳ ಕೆಳಗೆ ಲುಂಗಿ ಉಟ್ಟು ಕಾಲೇಜಿಗೆ ಹೋಗಿ ಪಾಸಾದವರ ಮಕ್ಕಳು ಈಗ ಪ್ಯಾಂಟ್ ತೊಟ್ಟು ಕಾಲೇಜಿಗೆ ಹೋಗಿ ಫೇಲಾಗುತ್ತಾರೆ. ಪ್ಯಾಂಟ್

ತೊಟ್ಟಿದ್ದರಿಂದಲೇ ಅವರು ಫೇಲಾದರೆಂದು ನನ್ನ ವಾದವಲ್ಲ. ಆದರೆ ಪ್ಯಾಂಟು ಅವರಿಗೆ ಪಾಸಾಗಲು ನೆರವಾಗಲಿಲ್ಲವೆಂಬುದನ್ನು ನಾನು ಬೊಟ್ಟು ಮಾಡಿ ತೋರಿಸಬಯಸುತ್ತೇನೆ. ಉರಿಯುವ ಬೇಸಿಗೆಯಲ್ಲಿ ಫಿಟ್ ಪ್ಯಾಂಟ್ ಧರಿಸಿ ಕಷ್ಟಪಡುವವರನ್ನು ಕಂಡು ಅಯ್ಯೋ ಅನಿಸುತ್ತದೆ. ಆದರೆ ಯಾರಾದರೂ ಅಗಲ ಕಾಲಿನ ಪ್ಯಾಂಟುಗಳನ್ನು ಫ್ಯಾಶನ್ನಾಗಿ ಮಾಡುವವರೆಗೆ ಇವರೆಲ್ಲಾ ಫಿಟ್ ಪ್ಯಾಂಟಿನಲ್ಲಿ ಬೇಯಲೇ ಬೇಕು. ಯಾಕೆಂದರೆ “ಎಲ್ಲರೂ” ಅದನ್ನು ಧರಿಸುತ್ತಾರೆ.

ನಿಜ, ಲೋಕ ಬದಲಾಯಿಸುತ್ತಾ ಇದೆ. ಅದರ ಸಂಗಡ ನಾವೂ ಹೆಜ್ಜೆ ಹಾಕಬೇಕು. ಇಪ್ಪತ್ತು ವರ್ಷಗಳ ಹಿಂದೆ ಯಾವುದು ವಿಲಾಸ ಸಾಮಗ್ರಿ ಎನಿಸಿತ್ತೋ ಅದು ಅಗತ್ಯ ಇಂದು ವಸ್ತುವಾಗಿದೆ. ಇದು ಒಪ್ಪತಕ್ಕ ಮಾತು. ಇಂದೂ ಚಕ್ಕಡಿಗಾಡಿಯಲ್ಲಿ ಓಡಾಡಬೇಕೆಂದು ಯಾರೂ ಹೇಳಲಾರರು. ಕೆಲಸ ಮಾಡುವುದಕ್ಕೆ ಧೋತರಕ್ಕಿಂತ ಪ್ಯಾಂಟು ಅನುಕೂಲ ವಾಗಿದೆಯೆಂದು ನನಗೂ ಅನುಭವಕ್ಕೆ ಬಂದಿದೆ. ಆದರೆ ಇನ್ನೊಬ್ಬರಿಗೆ ಇದೆ ಎಂಬೊಂದೇ ಕಾರಣಕ್ಕೆ ನಮಗೂ ಬೇಕು ಎನ್ನುವ ಭಾವನೆಯಲ್ಲಿ ವಿಪತ್ತು ಅಡಕವಾಗಿದೆ.

ಆಧುನಿಕ ಜಗತ್ತಿನಲ್ಲಿ ಬೇಕಾಗಿ ಬೇಡವಾಗಿ ಪ್ರಚುರಪಡುತ್ತಿರುವ ಅನೇಕ ಪದಾರ್ಥಗಳನ್ನು ಸುತ್ತಲಿನವರು ಪಡೆದಿರುವುದರಿಂದ ನಮಗೂ ಅದು ಬೇಕು ಎಂದು ನಮಗಾಗಲಿ ನಮ್ಮ ಕುಟುಂಬದವರಿಗಾಗಲಿ ಅನಿಸಿದಾಗ ಅದು ತೀವ್ರವಾದ ಮನೋವೇದನೆಯನ್ನುಂಟು ಮಾಡುತ್ತದೆ. ಹೇಗಾದರೂ ಮಾಡಿ ಅದನ್ನು ಪಡೆದ ಹೊರತು ನಾವು ಮನುಷ್ಯರೇ ಅಲ್ಲ ಅನಿಸಿಬಿಡುತ್ತದೆ. ಇವೆಲ್ಲಕ್ಕೂ ಹಣ ಬೇಕು. ಹಣ ಇದ್ದರೆ ಕೊಳ್ಳುವುದರಲ್ಲಿ ಅನಾಹುತವಿಲ್ಲ. ಆದರೆ ಒಂದು ವಸ್ತು ನಮಗಿಲ್ಲವೆಂಬುದಕ್ಕಾಗಿ ತೀವ್ರವಾದ ಅಸಂತೋಷವನ್ನು ಅನುಭವಿಸುವುದಾದರೆ ಅದರಿಂದ ನಿವೃತ್ತಿ ಪಡೆಯುವುದಕ್ಕಾಗಿ ಅದಕ್ಕೆ ಬೇಕಾದ ಹಣವನ್ನು ಹೇಗಾದರೂ ಸಂಪಾದಿಸುವುದು ಅನಿವಾರ್ಯವಾಗುತ್ತದೆ.

ನನ್ನ ಅಭಿಪ್ರಾಯದಲ್ಲಿ ದೇಶದಲ್ಲಿ ಇಂದು ಕಾಣಬರುವ ಅನೇಕ ದುರ್ವ್ಯಾಪಾರಗಳಿಗೆ ಈ ಬಗೆಯ ತುಟ್ಟಿಯಾದ ಪರಾನುಕರಣೆಯೇ ಕಾರಣ. ಹಣಕ್ಕಾಗಿಯೇ ಹಣವನ್ನು ಅಪೇಕ್ಷಿಸುವ ಧನದಾಸರು ತೀರ ಕಡಿಮೆ. ಆದರೆ ನಾಲ್ಕು ಜನರಲ್ಲಿ ತಾನೂ ಒಬ್ಬ ಎನ್ನಿಸಿಕೊಳ್ಳುವುದಕ್ಕಾಗಿ ಅನಗತ್ಯ ಮತ್ತು ಯೋಗ್ಯತೆ ಮೀರಿದ ಪದಾರ್ಥಗಳನ್ನು ಸಂಗ್ರಹಿಸುವ ಹುಚ್ಚು ಲಂಚ, ಕಳ್ಳಪೇಟೆ ಮೊದಲಾದ ಅವ್ಯಾಪಾರಗಳಿಗೆ ಪೋಷಕವೂ ಹೌದು, ಪ್ರೇರಕವೂ ಹೌದು. ನಮ್ಮ ದೇಶದ ಒಂದು ದುರ್ದೈವವೆಂದರೆ ನಮ್ಮ ಅಪೇಕ್ಷೆಗಳು ಹೆಚ್ಚಾಗಿವೆ. ಆದರೆ ಅವುಗಳ ಸಾಧನೆಗಾಗಿ ಶ್ರಮಿಸುವ ಪ್ರವೃತ್ತಿ ಸಾಕಷ್ಟು ಇಲ್ಲ. ಇದರಿಂದ ನಾವು ಎಷ್ಟು ಭೋಗ ಸಾಮಗ್ರಿಗಳನ್ನು ಕಲೆಹಾಕುತ್ತೇವೋ ಅಷ್ಟು ಮಟ್ಟಿಗೆ ನೀತಿಯನ್ನು ಅಧೋಗತಿಗೆ ಇಳಿಸುತ್ತೇವೆ. ಇನ್ನೊಬ್ಬರಲ್ಲಿ ಉಂಟೆಂಬುದಕ್ಕಾಗಿ ನಮಗೂ ಬೇಕೆನ್ನುವುದು ಶುದ್ಧ ಮತ್ಸರದ ಮನೋವೃತ್ತಿ ಮತ್ತು ಸ್ವಬುದ್ಧಿಯ ಅಭಾವದ ಲಕ್ಷಣ. ಇದನ್ನೇ ನಾನು ಇನ್ನೊಬ್ಬರಿಗಾಗಿ ಬದುಕುವುದು ಅನ್ನುತ್ತೇನೆ. ನಮಗಾಗಿ ನಾವು ಬದುಕಿದರೆ ಇವೆಲ್ಲ

ಹೊಂಡಗಳಲ್ಲಿ ಬೀಳುವುದರಿಂದ ತಪ್ಪಿಸಿಕೊಳ್ಳಬಹುದು. ನಮಗೆ ಒಂದು ಪದಾರ್ಥ ಅತ್ಯಗತ್ಯವೆನಿಸಿದರೆ ಅದಕ್ಕಾಗಿ ದುಡಿಯಬಹುದು. ಅಗತ್ಯತೆ ಇನ್ನೊಬ್ಬರನ್ನು ನೋಡಿ ಹುಟ್ಟಿದ್ದಿದ್ದರೆ ಅದು ಸುಳ್ಳು ಅಭಿಮಾನದ ಪ್ರಶ್ನೆಯಾಗುತ್ತದೆ. ಯೇನಕೇನ ಪ್ರಕಾರೇಣ ಗಿಟ್ಟಿಸಿದರಾಯಿತು ಎಂಬ ಕೀಳುಮಟ್ಟಕ್ಕಿಳಿಯುತ್ತೇವೆ.

ಇದರಿಂದಾಗುವ ನೈತಿಕ ಪರಿಣಾಮಗಳನ್ನು ಅಲಕ್ಷಿಸಿದರೂ ಅದು ಮಾನವ ಕುಲದ ಒಟ್ಟು ದುಃಖವನ್ನು ಹೆಚ್ಚಿಸುವುದನ್ನು ಕಡೆಗಣಿಸಲಾಗುವುದಿಲ್ಲ. ಅಸುಖದ ಮೊತ್ತವನ್ನು ಹೆಚ್ಚಿಸುವುದು ಪ್ರಗತಿಯಲ್ಲ.

(೧೯೭೧)

❐

# ಸವಿಗನಸುಗಳು

ಮೊನ್ನೆ ವೈಜ್ಞಾನಿಕ ಪತ್ರಿಕೆಯೊಂದರಲ್ಲಿ ನಿದ್ದೆಯನ್ನು ಕುರಿತು ಓದುತ್ತಿದ್ದೆ. ನಿದ್ರೆಯ ಬಹುಭಾಗ ಸಮಯವನ್ನು ನಾವು ಕನಸು ಕಾಣುವುದರಲ್ಲಿ ಕಳೆಯುತ್ತೇವಂತೆ. ಮನುಷ್ಯ ಮಾತ್ರವಲ್ಲ, ಪ್ರಾಣಿಗಳೂ ಗಡದ್ದಾಗಿ ಕನಸು ಕಾಣುತ್ತವಂತೆ. ಆದರೆ ತಂಪು ರಕ್ತದ ಹಾವು, ಕಪ್ಪೆ ಮೊದಲಾದವುಗಳು ಮಾತ್ರ ಕನಸು ಕಾಣುವುದಿಲ್ಲ ಅಂತ ವಿಜ್ಞಾನಿಗಳ ಅಭಿಪ್ರಾಯ. ಬಿಸಿರಕ್ತದ ಪ್ರಾಣಿಗಳಿಗೆ ಕನಸುಗಳು ಬೇಕೇಬೇಕಂತೆ. ಕನಸು ಕಾಣದೆ ನಾವು ನಿದ್ರೆ ಮಾಡಿದರೂ ಸುಖ ಇಲ್ಲಂತೆ. ಎರಡು ಮೂರು ರಾತ್ರಿ ನಾವು ಕನಸುಕಾಣದ ಹಾಗೆ ಯಾರಾದರೂ ತಡೆದರೆ ನಮಗೆ ಹುಚ್ಚೇ ಹಿಡಿಯಬಹುದು.

ನಾವು ಥಂಡಾರಕ್ತದ ಪ್ರಾಣಿಯಾಗಿರದಿದ್ದ ಪಕ್ಷದಲ್ಲಿ ಕನಸು ಕಂಡದ್ದಕ್ಕೆ, ಕಾಣುತ್ತಿರುವುದಕ್ಕೆ, ನಾಚಿಕೆ ಪಡಬೇಕಾದ್ದೇನೂ ಇಲ್ಲ ಅಂದ ಹಾಗಾಯಿತು. ಮತ್ತೆ cold blooded ಅಂತ ಅನಿಸಿಕೊಳ್ಳಲಿಕ್ಕೆ ಯಾರಿಗೆ ಇಷ್ಟ ಇದ್ದೀತು, ಹೇಳಿ. ಬಿಸಿ ನೆತ್ತರಿಗೂ ಕನಸು ಕಾಣುವುದಕ್ಕೂ ಸಂಬಂಧ ಇದೆ ಅಂದ ಮೇಲೆ ರಕ್ತ ಬಿಸಿಯಾಗಿದ್ದಷ್ಟೂ ಕನಸುಗಳು ಹೆಚ್ಚಾಗಬೇಕಲ್ಲವೇ? ಬಿಸಿ ನೆತ್ತರ ತರುಣರು ಅಂತ ಅನಿಸಿಕೊಳ್ಳುವವರಿಗೆ ಕನಸೂ ಹೆಚ್ಚು ಅನ್ನುವುದು ಈ ಎಲ್ಲಾ ಚರ್ಚೆಯ ಫಲಿತಾಂಶವಾಯಿತು. ನಾವು ಬಿಸಿ ನೆತ್ತರಿನವರಾಗಿರುವಾಗ ನಮ್ಮ ಇರುಳು ಕನಸುಗಳು ಜಾಗ ಸಾಲದೆ ತುಳುಕಿ ಹರಿದು ಹಗಲುಗನಸುಗಳಾಗುತ್ತವೆ.

ನಿಮ್ಮ ವಿಚಾರ ಹೇಗೋ ನನಗೆ ಗೊತ್ತಿಲ್ಲ. ನಾನಂತೂ ನನ್ನ ಪ್ರಥಮ ತಾರುಣ್ಯದಲ್ಲಿ ಇರುಳುಗನಸುಗಳಿಗಿಂತ ಹಗಲುಗನಸುಗಳನ್ನೇ ಜಾಸ್ತಿಯಾಗಿ ಕಾಣುತ್ತಿದ್ದೆ. ಮತ್ತು ಇರುಳುಗನಸುಗಳಿಗಿಂತ ಹಗಲುಗನಸುಗಳೇ ಸವಿಯಾಗಿರುತ್ತಿದ್ದವು. ಇರುಳುಗನಸುಗಳು ಹೆಚ್ಚಿನ ಮಟ್ಟಿಗೆ ನಮ್ಮ ವಶದಲ್ಲಿಲ್ಲ. ಹಗಲುಗನಸುಗಳೋ ಪೂರ್ತಿ ನಮ್ಮ ಮನಸ್ಸಿನದೇ ಸೃಷ್ಟಿ. ಆದ್ದರಿಂದ ಅವು ನಮಗೆ ಇಷ್ಟವಾಗುವ ರೀತಿಯಲ್ಲೇ ಹರಿಯುತ್ತವೆ. ವೇದಾಂತಿಗಳು ಬದುಕನ್ನೇ ಒಂದು ಕನಸೆಂದು ಹೇಳುತ್ತಾರೆ. ರಾಬರ್ಟ್ ಬ್ರೌನಿಂಗನ ಪ್ರಕಾರ ನಮ್ಮ ಎಚ್ಚರ ಎಂಬುದೇ ಒಂದು ಹುಚ್ಚು ಕನಸು. ಈ ಕನಸಿನಿಂದ ಪೂರ್ತಿ ಎಚ್ಚೆತ್ತು ಚಿನ್ಮಯ ಅಂದರೆ ಎಚ್ಚರಿಕೆಯೇ ಆಗಿಬಿಡುವುದೇ ವೇದಾಂತಿಗಳ ಧ್ಯೇಯ. ಬಡಪಾಯಿಗಳು! ಬದುಕಿನ ಕನಸಿನಿಂದ ಸಂಪೂರ್ಣವಾಗಿ ಎಚ್ಚರಗೊಳ್ಳುವುದು ಅನ್ನೋದೇ ಒಂದು ಕನಸು. ಆದ್ದರಿಂದ

ವೇದಾಂತ ಎನ್ನುವುದು ಕನಸಿನೊಳಗಿನ ಕನಸು—ನಾಟಕದೊಳಗಿನ ನಾಟಕ ಇದ್ದ ಹಾಗೆ—ಅನ್ನೋದು ಅವರಿಗೆ ಗೊತ್ತಿಲ್ಲ. ನನಗೆ ಜಗತ್ತಿನಲ್ಲಿರುವ ಎಲ್ಲಾ ಹುಚ್ಚು ಕನಸುಗಳನ್ನು ಕಳಿಸಿರಿ. ಒಂದು ಕನಸು ಒಡೆದರೆ ನಾನು ಇನ್ನೊಂದರೊಳಗೆ ನುಸುಳುತ್ತೇನೆ. ಯಾಕೆಂದರೆ ಹುಚ್ಚು ಕನಸುಗಳೇ ಸವಿಗನಸುಗಳು. ಬದುಕೇ ಹುಚ್ಚು ಕನಸಾಗಿದ್ದರೆ ನಾನು ನೂರು ಬದುಕುಗಳನ್ನು ಅನುಭೋಗಿಸುವುದಕ್ಕೆ ಸಿದ್ಧನಾದೇನು.

ಆಹಾ! ಎಂಥೆಂಥ ಕನಸುಗಳನ್ನು ನಾನು ಸವಿದಿದ್ದೇನೆ! ತೀರ ಚಿಕ್ಕವನಾಗಿದ್ದಾಗ ನಾನು ಮೋಟರ್ ಡ್ರೈವರನಾಗುವ, ನನ್ನ ಮಾಸ್ತರರ ಕುರ್ಚಿಯ ಮೇಲೆ ಕೂತು ಮಾಸ್ತರರನ್ನು ಬೆಂಚಿನ ಮೇಲೆ ನಿಲ್ಲಿಸುವ, ಗಾಳೀಪಟದ ಬಾಲ ಹಿಡಿದುಕೊಂಡು ಹಾರುವ ಮುಂತಾದ ಕನಸುಗಳನ್ನು ಕಂಡದ್ದು ಇಲ್ಲಿ ಬೇಡ. (ಒಂದು ಕನಸಿನಲ್ಲಂತೂ ನಾನು ನಮ್ಮ ಶಾಲೆ ಸುಟ್ಟು ಹೋಗುವುದನ್ನು ಕಂಡಿದ್ದೆ ಮತ್ತು ನಾವೆಲ್ಲರೂ ಕೈ ತಟ್ಟುತ್ತಾ ಬೆಂಕಿಯ ಸುತ್ತ ಬೆಚ್ಚಗೆ ಕುಣಿಯುತ್ತಿದ್ದೆವು).

ಇನ್ನೊಂದು ಕನಸಿನಲ್ಲಿ ನಾನು ಗಾದೆಯಲ್ಲಿ ಹೇಳಿದ ಮಂಡಿಗೆಯನ್ನೇ ತಿಂದಿದ್ದೆ. ಅದಕ್ಕೆ ಮೊದಲು ನಾನು ಮಂಡಿಗೆ ತಿಂದೇ ಇದ್ದಿಲ್ಲ. (ಯಾಕೆಂದರೆ ನಮ್ಮ ಊರಿನಲ್ಲಿ ಮಂಡಿಗೆ ಮನಸ್ಸಿನಲ್ಲಿ ಇತ್ತೇ ಹೊರತು ಊಟದಲ್ಲಿ ಸಿಗೋದು ಅಪರೂಪ.) ನಾನು ಕನಸಿನಲ್ಲಿ ತಿಂದ ಮಂಡಿಗೆ ತುಂಬಾ ರುಚಿಯಾಗಿತ್ತು. ನಿಜವಾಗಿ ಅದು ನನ್ನ ಬಾಯಲ್ಲಿ ಬಹಳ ದಿನ ಎಚ್ಚರದಲ್ಲಿಯೂ ನೀರೂರಿಸುತ್ತ ಇತ್ತು. ಆದರೆ ಕೆಲ ತಿಂಗಳ ನಂತರ ಒಂದು ಮದುವೆಯಲ್ಲಿ ನಿಜವಾದ ಮಂಡಿಗೆ ನನಗೆ ತಿನ್ನಲಿಕ್ಕೆ ಸಿಕ್ಕಿತು. ಅಯ್ಯೋ ದೇವರೆ! ಮಂಡಿಗೆಯೆಂದರೆ ಇದೇನೇ! ಎಂದುಕೊಂಡೆ. ಈ ನನಸಿನ ಮಂಡಿಗೆ ಕನಸಿನ ಮಂಡಿಗೆಯಷ್ಟು ರುಚಿಯಾಗಿರಲಿಲ್ಲ. ಮುಂದಿನ ದಿನಗಳಲ್ಲಿ ಕನಸಿನ ಸುಖಗಳು ನನಸಿನ ಸುಖಗಳಿಗಿಂತ ಸಿಹಿ ಅನ್ನೋ ಅನುಭವ ನನಗೆ ಪುನಃ ಪುನಃ ಆಗಲಿಕ್ಕಿತ್ತು.

ಸ್ವಲ್ಪ ಪ್ರಬುದ್ಧನಾದಾಗ ಸವಿಗನಸುಗಳ ಸ್ವರೂಪ ಸ್ವಲ್ಪ ಬದಲಾಯಿತೇ ಹೊರತು ಕನಸು ಕಾಣುವುದೇನೂ ಬದಲಾಗಲಿಲ್ಲ. ಕೆಲವು ದಿನ ನಾನು ಮಹಾ ಸಂಗೀತಗಾರನಾಗುವ ಕನಸು ಕಾಣುತ್ತಿದ್ದೆ. ಮತ್ತು ದಾರಿಯಲ್ಲಿ, ತೊಡೆಯ ಮೇಲೆ ತಾಳಹಾಕುತ್ತ ಕೈಯನ್ನು ಒಮ್ಮೊಮ್ಮೆ ತಾರಮ್ಯ್ಯ ಮಾಡುತ್ತ ನಡೆಯುತ್ತಿದ್ದೆ. ಜನರು ನನ್ನ ನೋಡಿ ನಗತೊಡಗಿದ ಮೇಲೆ ನಾನು ಮಹಾಕವಿಯಾಗುವ ಕನಸುಗಳಲ್ಲಿ ವಿಹಾರ ಮಾಡತೊಡಗಿದೆ. ಮಹಾಕವಿ ಆಗುವುದಕ್ಕೆ ತಾಳ ತಂಬೂರಿ ತಾರಮ್ಯ್ಯ ಯಾವುದೂ ಬೇಡವಾದ್ದರಿಂದ ಅದು ತುಲನಾತ್ಮಕವಾಗಿ ಸುರಕ್ಷಿತ ಸವಿಗನಸಾಗಿತ್ತು. ಇದಕ್ಕೆ ಪ್ರಚೋದನೆ ಕೊಟ್ಟಿದ್ದು ರನ್ನ ಕವಿಯ ಮೇಲೆ ಬಿ.ಎಂ. ಶ್ರೀಕಂಠಯ್ಯನವರು ನಮ್ಮೂರಲ್ಲಿ ಕೊಟ್ಟ ಒಂದು ಭಾಷಣ. ನನಗೆ ಭಾಷಣ ಹೆಚ್ಚೇನೂ ತಿಳಿಯಲಿಲ್ಲ. ಆದರೆ "ಅಸುಹೃತ್ಸೇನೆಗೆ ಸಾಲ್ವನೋರ್ವನೆ ಗಡಂ ರುದ್ರಾವತಾರಂ ಗಡಂ" ಎಂದು ದುರ್ಯೋಧನನ ವಿಷಾದವನ್ನೂ "ನೆಲಕಿರಿವೆನೆಂದು ಬಗೆದಿರೆ? ಚಲಕಿರಿವೆಂ!" ಎಂದು ಅವನ ಪೌರುಷವನ್ನೂ ಬಿ.ಎಂ.ಶ್ರೀಯವರು ಸಾಭಿನಯವಾಗಿ ಅನುವಾದಿಸುತ್ತಿದ್ದುದು

ನನ್ನ ಮೇಲೆ ಬಹು ಪ್ರಭಾವ ಬೀರಿತ್ತು. ಈ ಹಗಲುಗನಸುಗಳ ದಿನಗಳಲ್ಲಿ ನಾನು ಅಂ ಇಂ ಉಂ ಗಡಂ ಬಡಂ ಎಂದು ಮುಂತಾಗಿ ಸಪ್ಪಳ ಮಾಡೋ ಎಷ್ಟೋ ಪದ್ಯಗಳನ್ನು ರಚಿಸಿದ್ದು ಉಂಟು. ಕವಿಯಾಗುವ ಕನಸು ನನ್ನನ್ನ ಪೂರ್ತಿ ಬಿಟ್ಟು ಹೋಗಲೇ ಇಲ್ಲ. ಆದರೆ ಗಣಿತ ಪಾಠ ನಡೆಯುತ್ತಿದ್ದಾಗ ಒಂದು ದಿನ ನಾನು ಡೆಸ್ಕಿನ ಒಳಗಿನ ಖಾನೆಯಲ್ಲಿ ಕಣ್ಣಿಟ್ಟು ಏನೋ ಮಾಡುತ್ತಿದ್ದುದು ಮಾಸ್ತರರ ಕಣ್ಣಿಗೆ ಬಿದ್ದು ಅವರು ಪ್ಲಾಟ್‌ಫಾರ್ಮಿನಿಂದ ಇಳಿದು ಬಂದು ನನ್ನ ಡೆಸ್ಕನ್ನು ಜಡ್ತಿಮಾಡಿ ಪದ್ಯಗಳನ್ನು ಜಪ್ತಿ ಮಾಡಿದರು. ಹೆಚ್ಚಿನ ಗಣಿತ ಮಾಸ್ತರರ ಹಾಗೆ ಅವರು ಕವಿತೆಯ ಭಯಂಕರ ದ್ವೇಷಿಗಳಾಗಿದ್ದರು. ಅವರು ನನ್ನನ್ನು ಎಂಥಾ ಲೇವಡಿಗೆ ಒಳಪಡಿಸಿದರೆಂದರೆ, ಕವಿಯಾಗುವ ಬಗ್ಗೆ ನನ್ನ ಹೃದಯದಲ್ಲಿ ಬಹಳ ದಿನ ಒಂದು ಚಳಿ ಸೇರಿಕೊಂಡುಬಿಟ್ಟಿತ್ತು.

ಇಂಥ ಕನಸುಗಳ ಯುಗ ದಾಟಿದನಂತರ ಇನ್ನೊಂದು ಬಗೆಯ ಕನಸುಗಳ ಯುಗ ಪ್ರಾರಂಭವಾಯಿತು. ಈ ಯುಗ ನಮ್ಮ ಬದುಕಿನಲ್ಲೇ ಅತಿತೀವ್ರವಾದ ಆದರೆ ಅರ್ಥವಾಗದ ಅಂತಃಸ್ಪಂದನಗಳಿಂದ ಪ್ರಾರಂಭವಾಗುತ್ತದೆ. ಜನಜಂಗುಳಿಯ ಮಧ್ಯದಲ್ಲಿಯೇ ನಮಗೆ ಒಂದು ತರದ ಒಂಟಿತನ ಅನಿಸತೊಡಗುತ್ತದೆ. ನಮ್ಮ ಸ್ನೇಹಿತರು, ಬಂಧುಬಳಗದವರು ಯಾರೂ ಆ "ನಿರ್ಬಯಲ"ನ್ನು ತುಂಬಲಾರರು ಅನಿಸುತ್ತದೆ.

ಇದೆಲ್ಲ ಏನು ಅಂತ ನಮ್ಮ ಸ್ವಯತಕ್ಕೆ ಬರುವ ಮೊದಲೇ ನಾವು ಅದರಲ್ಲಿ ಗಂಟಲಮಟ್ಟ ಮುಳುಗಿಬಿಟ್ಟಿರುತೇವೆ. ಈ ವಿಚಿತ್ರವಾದ ಒಂಟಿತನವನ್ನು ಗುಣಪಡಿಸುವುದಕ್ಕೆ ಪುರುಷಸ್ನೇಹ ಸಾಲದು. ಪ್ರತಿಲಿಂಗದ ಸಹಾಯಬೇಕು. ಬಹುಶಃ ಆಗಲೇ ನಮಗೆ ನಮ್ಮ ವ್ಯಾಕರಣ ಪುಸ್ತಕಗಳಲ್ಲಿ ಬರೆದ ಪುಲ್ಲಿಂಗ ಸ್ತ್ರೀಲಿಂಗಗಳ ನಿಜವಾದ ಪ್ರಜ್ಞೆ ಮೂಡುವುದು ಅನಿಸುತ್ತೆ ನನಗೆ!

ಈ ಒಂಟಿತನದ ಅನುಭವ ಪ್ರಥಮತಃ ನಮಗೆ ಬರುವ ಹೊತ್ತಿಗೆ ಸರಿಯಾಗಿ, ನಮ್ಮ ಹೈಸ್ಕೂಲಿನ ಇಂಗ್ಲಿಷ್ ಪಠ್ಯಪುಸ್ತಕದಲ್ಲಿ ಶೆಲ್ಲಿ ಕವಿಯ ಪ್ರಸಿದ್ಧ Love's Philosophy ಪ್ರೇಮತತ್ತ್ವ-ಪದ್ಯವನ್ನು ಕಲಿಸಿದರು. ಅದರಲ್ಲಿ ಕವಿ Nothing in the world is single ಅನ್ನುವ ತತ್ತ್ವಜ್ಞಾನವನ್ನು ಸಮರ್ಥಿಸುತ್ತ ಹೇಳುವುದು ಇದು:

*ಲೋಕದಲ್ಲಿ ಒಂಟಿಯೆಂಬುದೇ ಇಲ್ಲ*
*ಯಾವುದೋ ದೈವ ನಿಯಮದಿಂದೆಲ್ಲ*
*ಕೂಡಿಕೊಳ್ಳುವವು ಒಂದರೊಳಗೊಂದು*
*ನಾನಾಗಬಾರದೇ ನಿನ್ನಲ್ಲಿ ಒಂದು!*

ವ್ಹಾ! ಎಂಥ ದಿವ್ಯ ತತ್ತ್ವಜ್ಞಾನ. ನಮ್ಮೆಲ್ಲರ ಹೃದಯಗಳಲ್ಲಿ ವಿದ್ಯುತ್ಸಂಚಾರವಾಗದಿದ್ದೀತೆ? ಕ್ಲಾಸಿನಲ್ಲಿ ದುರ್ದೈವದಿಂದ ಒಬ್ಬಳೇ ಹುಡುಗಿ. ಕಾಳಿದಾಸ "ಕುಮಾರ ಸಂಭವ"ದಲ್ಲಿ ಹೇಳುವಹಾಗೆ "ಸಹಸ್ರಮಕ್ಷ್ಣಾಂ ಯುಗಪತ್ ಪಪಾತ"—ಸಾಸಿರೆ ಕಣ್ಣುಗಳೊಮ್ಮೆಲೆ

ಬಿದ್ದವು—ಆ ಹುಡುಗಿಯ ಮೇಲೆ. ಅವಳಿಗೆ ಶೆಲ್ಲಿಯ ತತ್ತ್ವಜ್ಞಾನ ಪಟಾಯಿಸಿತೋ ಇಲ್ಲವೋ ನಾ ಕಾಣೆ. ಆದರೆ ಅದು ತಟ್ಟಿತೆಂಬಲ್ಲಿ ಸಂಶಯವಿಲ್ಲ. ಯಾಕೆಂದರೆ ಅವಳು ತತ್‌ಕ್ಷಣ ಕಣ್ಣುಗಳನ್ನು ಕೆಳಗಿಳಿಸಿ ಮುಖ ಕೆಂಪುಮಾಡಿಕೊಂಡಳು.

ಶೆಲ್ಲಿ ನಮ್ಮ ಹಗಲುಗನಸುಗಳನ್ನು ಕೆದರಿಬಿಟ್ಟಿದ್ದ. ಕವಿತೆಗಳನ್ನು ಮೆಚ್ಚಲಾಗದವರು ಕೂಡ ಈ ಕವಿತೆಗೆ ಮಾರುಹೋದರು. ಮರುದಿನವೇ ಅದರ ಪ್ರಭಾವ ಪ್ರತ್ಯಕ್ಷವಾಯಿತು—ಬೆಳಿಗ್ಗೆ ನಮ್ಮ ಸಹವಿದ್ಯಾರ್ಥಿನಿ ಕ್ಲಾಸಿಗೆ ಬಂದು ಕೂತ ಕೂಡಲೇ ಸುಮಾರಾಗಿ ತನ್ನ ಪಾಡಿಗೆ ತಾನು ಇರುತ್ತಿದ್ದ ವಿದ್ಯಾರ್ಥಿಯೊಬ್ಬ, ದಿಗ್ಗನೆದ್ದು ಧೀರ ಹೆಜ್ಜೆಗಳಿಂದ ಅವಳ ಮುಂದೆ ಹೋಗಿ ನಿಂತು ಒಂದು ಅರಳಿದ ಗುಲಾಬಿಯನ್ನು ಅವಳ ಡೆಸ್ಕಿನ ಮೇಲಿರಿಸಿ, ಸರ್ರನೆ ರೈಟ್ ಅಬೌಟ್ ಟರ್ನ್ ಮಾಡಿ ತನ್ನ ಸ್ಥಾನಕ್ಕೆ ಬಂದು ಕುಳಿತ. ಪಾಪ! ನಮ್ಮೆಲ್ಲರಿಗಿಂತ ಹೆಚ್ಚಾಗಿ ಅವನು ಕನಸು ಕಂಡಿರಬೇಕು: ಮತ್ತು ಕನಸನ್ನೇ ನನಸೆಂದು ನಂಬಿ ಶೆಲ್ಲಿಯ ಅಭಿಸಂಧಿಯನ್ನು ಹೂವಿನ ಬಾಯಿಂದ ಹೇಳಿಸಿರಬೇಕು. ಮುಂದೆ ಎದ್ದ ಗಲಾಟೆ ಹೇಳಲುಂಟೆ? ನಮ್ಮ ಬಡ ಸಹಪಾಠಿ ಹೂವನ್ನು ಕೊಟ್ಟು ಮುಳ್ಳುಗಳನ್ನು ತೆಗೆದುಕೊಂಡ ಹಾಗಾಯಿತು. ಶಾಲೆಯಿಂದ ಹೊರಗೆ ಹಾಕಿಸಿಕೊಳ್ಳುವವರೆಗೂ ಹೋಗಿ ಹೇಗೊ ಉಳಿದುಕೊಂಡ. ಆ ಕಾಲದಲ್ಲಿ ವಿದ್ಯಾರ್ಥಿ ಸಂಘಟನೆ ಇದ್ದಿಲ್ಲ. ಆದ್ದರಿಂದ ನಮ್ಮ ಸಹಪಾಠಿಯ ಪರವಾಗಿ ಸಂಪುಗಿಂಪು ಹೂಡುವ ಧೈರ್ಯ ನಮಗೆ ಬರಲಿಲ್ಲ. ಆದರೂ ನಮಗೆ ಅವನಲ್ಲಿ ಒಂದು ಬಗೆಯ ಕಳ್ಳ ಸಹಾನುಭೂತಿ ಇತ್ತೆಂದು ಹೇಳದೆ ಇರಲಾರೆ. ಅವನ ಧೈರ್ಯದ ಬಗ್ಗೆ ಒಂದಿಷ್ಟು ಮತ್ಸರವೂ ಆಯಿತು ಅನ್ನಿ.

ಏಕಾಂಗಿತನ ತ್ಯಾಗದ ಹಂಬಲ ದಿನ ದಿನಕ್ಕೆ ತೀವ್ರವಾಗುತ್ತ ಹೋಗುತ್ತದೆ. ಅದರ ಪೂರ್ಣ ರಹಸ್ಯ ಅರ್ಥವಾಗದಿರುವುದರಿಂದಲೇ ಅದು ಹೆಚ್ಚು ಉತ್ಸಾಹದಾಯಕವಾಗಿರುತ್ತದೆ. ಈ ದಿನಗಳಲ್ಲಿ ನಾವು ಏನನ್ನು ಬೇಕಾದರೂ ಕಲ್ಪಿಸಿಕೊಳ್ಳಲಿಕ್ಕೆ ಸಮರ್ಥರಾಗುತ್ತೇವೆ. ಒಂದು ತರಹದ ಡಾನ್‌ಕ್ವಿಗ್ಸೂಟ್‌ತನ ನಮ್ಮಲ್ಲಿ ಮನೆಮಾಡಿಕೊಳ್ಳುತ್ತದೆ. ಕುವೆಂಪು ಅವರ ಒಂದು ಕಥೆಯಲ್ಲಿ ಒಬ್ಬ ಎಳೆ ತರುಣನಿಗೆ ತನ್ನ ಕಲ್ಪನೆಯ ಕನ್ನಡಕದಲ್ಲಿ ದೂರದಲ್ಲಿದ್ದ ಬೆಸ್ತರವನ ಅಜ್ಜಿ ಅಪ್ಪಟ ಸುಂದರಿಯಾಗಿ ಕಾಣಿಸುತ್ತಾಳೆ. ಬೆಸ್ತರವನ ಅಜ್ಜಿಯೇ ಯಾಕೆ, ಮರಮಟ್ಟು ಕಲ್ಲುಬಂಡೆಗಳು ಕೂಡ ತರುಣಿಯರಾಗಿ ಕಾಣಿಸುವುದುಂಟು.

ಒಂಟಿತನದಿಂದ ಜೋಡಿತನಕ್ಕೆ ಬದಲಾಯಿಸುವ ಹಂಬಲಕ್ಕೆ ಪಾಶ್ಚಾತ್ಯ ಸಮಾಜದಲ್ಲಿ ಅವಕಾಶವಿದೆ. ಆದರೆ ಭಾರತೀಯ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಅದೆಲ್ಲಿದೆ? ಅವಕಾಶ ಇಲ್ಲದ್ದರಿಂದ ನಾವು ಎಚ್ಚರಗನಸುಗಳ ಪ್ರಪಂಚದಲ್ಲಿ ಆಳಆಳವಾಗಿ ಸೇರಿಕೊಳ್ಳುತ್ತೇವೋ ಏನೋ. ನಾನು ಹೈಸ್ಕೂಲಿನಲ್ಲಿದ್ದಾಗ ರವೀಂದ್ರನಾಥ ಠಾಕೂರರ ಕೀರ್ತಿ ಕೇಳಿ ಅವರ ಕವಿತೆ ಓದಬೇಕಂತಲೇ ಬಂಗಾಲಿ ಕಲಿತೆ. ಅವರ ಒಂದು ಕವಿತೆ "ಆಮಿಜದಿ ಜೀಬತೇಭೋ ಕಾಲಿದಾಸೇರ್ ಕಾಲೇ" "ಕಾಳಿದಾಸನ ಕಾಲದಲ್ಲಿ ನಾನು ಬದುಕಿದ್ದಿದ್ದರೆ" ಅಂತ ಪ್ರಾರಂಭವಾಗುತ್ತದೆ. ಆಗ ಬದುಕಿದ್ದಿದ್ದರೆ ಉಜ್ಜಯಿನಿಯ ಪಟ್ಟಣದಲ್ಲಿ ಶಿಪ್ರಾನದಿಯ

ಸೋಪಾನದಲ್ಲಿ ಪ್ರಿಯಕರಿಯ ಸಂಗಡ ಕುಳಿತು ಕಾಲುಗಳನ್ನು ನೀರಲ್ಲಿ ಇಳಿಬಿಟ್ಟು— ಇತ್ಯಾದಿಯಾಗಿ ಕವಿತೆ ಓಡುತ್ತದೆ. ಒಡನೆಯೆ ನಾನು ಕಾಳಿದಾಸನ ಕಾಲಕ್ಕೆ ಟ್ರಾನ್ಸ್‌ಪೋರ್ಟ್ ಆಗುತ್ತಿದ್ದೆ; ಕಾಳಿದಾಸನೇ ಆಗುತ್ತಿದ್ದೆ. ಆ ಕಾಲದಲ್ಲಿ ಸಿನೆಮಗಳು ಇದ್ದಿಲ್ಲವಾಗಿ ಈಗಿನ ತರುಣರ ಹಾಗೆ ಪರಾನುಭವಗಳನ್ನು ಸ್ವಾನುಭವನಾಗಿ ಕಲ್ಪಿಸಿಕೊಳ್ಳುವ vicarious satisfaction ಸ್ವಾಯತ್ತೀಕರಣದ ಸಮಾಧಾನ ಕೂಡ ಇರಲಿಲ್ಲ. ನಮ್ಮ ಉತ್ತೇಜನವೆಲ್ಲ ಕಥೆಗಳಿಂದ ಬರಬೇಕಷ್ಟೇ. ಈ ವಯಸ್ಸಲ್ಲಿ ಕೆಲ ಕಥೆಗಳು ಅತ್ಯಂತ ಅಪಾಯಕರ ಎನ್ನುವಷ್ಟು ಪ್ರಭಾವಿಯಾಗುತ್ತವೆ. ಉದಾಹರಣೆಗೆ ದಿವಂಗತ ಆನಂದರ ಕಥೆಗಳು. ಅವರ "ಹೆಂಡತಿಯ ಕಾಗದ", "ನಾವೂ ಹಾಗೆಯೆ" ಎಂಬ ಕಥೆಗಳು ಮದುವೆ, ಜೋಡಿ ಜೀವನ, ವಿರಹ ಮಿಲನಗಳ ಬಗ್ಗೆ ಉಂಟುಮಾಡುವ ಭಾವನೆಗಳ ಬಂಗಾರದ ಮಂಜಿನ ತೆರೆ ಮದುವೆಯಾದ ಮೇಲೆ ಮಾತ್ರ ಹರಿಯಬೇಕಷ್ಟೇ. ಅವುಗಳನ್ನು ಓದಿದ ಬಿಸಿಯಲ್ಲಿ ಯಾರಾದರೂ ನನಗೆ ಹೆಣ್ಣು ಕೊಡಲು ಬರುತ್ತಿದ್ದರೆ ತತ್‌ಕ್ಷಣ ಒಪ್ಪಿಬಿಡುತ್ತಿದ್ದೆ ಅಂತ ನನಗೆ ಈಗಲೂ ಅನಿಸುತ್ತದೆ, ಪುಣ್ಯಕ್ಕೆ ಯಾರೂ ಮುಂದೆ ಬರಲಿಲ್ಲ!

ನಿಮ್ಮ ಒಂಟಿತನ ಕೊನೆಗೊಮ್ಮೆ ಪರಿಸಮಾಪ್ತಿಯಾಗುವವರೆಗೂ ಸುತ್ತಲ ಸಮಾಜ ಆ ಒಂಟಿತನಕ್ಕೆ ತಾತ್ಕಾಲಿಕ ಉಪಶಮನವನ್ನೇನೂ ಕೊಡದೆ, ಹೆಜ್ಜೆ ಹೆಜ್ಜೆಗೆ ಅದರ ಧಗೆಯನ್ನು ಹೆಚ್ಚಿಸುವ ಹಾಗೆ ವರ್ತಿಸುತ್ತದೆ. ಎಲ್ಲ ಮದುವೆಯಾಗದಿದ್ದ ಹುಡುಗಿಯರನ್ನೂ ನಿಮಗೆ ಹೆಂಡಂದಿರನ್ನಾಗಿ ಮಾಡಿ ನಗುತ್ತದೆ. ಈ ಹಿತವಾದ ನೋವನ್ನು ಹೆಚ್ಚಿಸುವುದರಲ್ಲಿ ಗಂಡಸರಿಗಿಂತ ಹೆಂಗಸರಿಗೇ ಹೆಚ್ಚು ಉತ್ಸಾಹ. ನಮ್ಮ ಹಾಗೆಯೇ ಹುಡುಗಿಯರೂ ಕನಸು ಕಾಣುತ್ತಾರೆಯೇ ನನಗೆ ಗೊತ್ತಿಲ್ಲ. ಹೆಂಗಸರಿಗೆ ನಿದ್ದೆ ಹೆಚ್ಚಂತೆ. ಕನಸುಗಳು ಹೆಚ್ಚೋ ಅಲ್ಲವೋ ಅಂತ ನಾನರಿಯೆ. ಇಂದಿನ ಅಂತಾರಾಷ್ಟ್ರೀಯ ಮಹಿಳಾ ವರ್ಷದಲ್ಲಿಯೂ ಹೆಂಗಸರ ಒಂದು ಪ್ರಮುಖ ಧ್ಯೇಯ ಗಂಡನ್ನು ಖೆಡ್ಡಾ ಬೇಟೆಯಾಡುವುದೇ ಆಗಿದೆಯೆಂದು ನನಗೆ ತೋರುತ್ತದೆ. ಒಂದು ಮಾತ್ರ ವಿಶೇಷ—ಅವರು ಬೇಟೆಯ ಹಿಂದೆ ಓಡುವುದಿಲ್ಲ. ಬೇಟೆಯನ್ನೇ ತಮ್ಮ ಹಿಂದೆ ಓಡುವಂತೆ ಮಾಡುತ್ತಾರೆ. ಆದರೆ ಅವರೂ ಕನಸಿನಲ್ಲಿಯೇ ಈ ಬೇಟೆಯಾಡುತ್ತಿದ್ದಾರೆಂದು ನನಗೆ ಸಂಶಯವಿದೆ. ಮತ್ತೆ ಅವರ ಕನಸುಗಳು ನಮ್ಮವುಗಳಿಗಿಂತ ಹೆಚ್ಚು ಬಲವತ್ತಾಗಿರುತ್ತವೆ. ಬಾಣಾಸುರನ ಮಗಳು ಉಷೆಯನ್ನೇ ನೋಡಿ. ಅವಳು ಕನಸಿನಲ್ಲಿ ಒಬ್ಬನನ್ನು ಕಂಡಳು. ತನ್ನ ಸಖಿಗೆ ಅವನ ಕಾಲ್ಪನಿಕ ಚಿತ್ರವನ್ನು ಕೊಟ್ಟು ಜಗತ್ತಿನಲ್ಲೆಲ್ಲ ಹುಡುಕಾಡಿಸಿದಳು. ಕೊನೆಗೆ ಅವಳ ಕನಸಿನ ತರುಣ ಅಸುರರ ವೈರಿ ಕೃಷ್ಣನ ಮೊಮ್ಮಗ ಅಂತ ಗೊತ್ತಾಯಿತು. ಅವಳು ಅಂಜಿದಳೇ? ಗುಟ್ಟಾಗಿ ಶತ್ರುವಿನ ಮೊಮ್ಮಗನನ್ನು ತಂದು ಅಂತಃಪುರದಲ್ಲಿಟ್ಟುಕೊಂಡು ಕನಸಿನಲ್ಲಿ ಕಂಡವನನ್ನ ನನಸಿನಲ್ಲಿ ವಶಪಡಿಸಿಕೊಂಡೇ ಬಿಟ್ಟಳು. ಶತ್ರುವನ್ನು ಪ್ರೀತಿಸಿರಿ ಎಂದು ಯೇಸುಕ್ರಿಸ್ತ ಹೇಳುವುದಕ್ಕೆ ಸಾವಿರ ವರ್ಷಗಳ ಹಿಂದೆಯೇ ಬಾಣಾಸುರನ ಮಗಳು ಶತ್ರುವನ್ನಲ್ಲದಿದ್ದರೂ ಶತ್ರುವಿನ ಮೊಮ್ಮಗನನ್ನು ಪ್ರೀತಿಸಿದ್ದಳು!

ಏಕಾಂಗಿತನವನ್ನು ಕೊನೆಗೊಳಿಸುವ ಈ ಸವಿಗನಸುಗಳ ಒಂದು ವಿಶೇಷ ಅಂದರೆ ಅವು ಪ್ರಾರಭದಶೆಯಲ್ಲಂತೂ ಬಹುಮಟ್ಟಿಗೆ impersonal ವ್ಯಕ್ತ್ಯತೀತ ಆಗಿರುವುದು. ನಿಮ್ಮನ್ನ ಒಂಟಿತನದಿಂದ ಬಿಡಿಸುವುದಕ್ಕೆ ಎಂಥವನು ಅಥವಾ ಎಂಥವಳು ಬೇಕು ಅಂತ ಕೇಳಿದರೆ ಪ್ರಾರಂಭದಲ್ಲಿ ಉತ್ತರ ಹೇಳುವುದು ಯಾರಿಗೂ ಕಷ್ಟವೇ ಆದೀತು. ಈ ವ್ಯಕ್ತ್ಯತೀತತ್ವದಿಂದಲೇ ಸವಿಗನಸುಗಳ ಸವಿಯೂ ಕಸುವೂ ಜಾಸ್ತಿಯಾಗುತ್ತದೆಯೋ ಏನೋ. ನಾವು ನಮ್ಮ ಭಾವಿ ಸಂಗಾತಿಯ ಬಗ್ಗೆ ಹೆಚ್ಚು ಖಚಿತ ಚಿತ್ರಣ ಮಾಡಿಕೊಂಡ ಹಾಗೆ ಅವುಗಳ ಅಗಲ ಕಮ್ಮಿಯಾಗುತ್ತದೆ ಆದರೆ ತೀವ್ರತೆ ಹೆಚ್ಚುತ್ತದೆ. ಒಂಟಿತನ ಕೊನೆಗೊಳಿಸುವ ಹಂಬಲದ ಕನಸುಗಳ ಅತಿ ಉತ್ಕಟವಾದ ಕಾಲಸುಮಾರು ೨೩ ವಯಸ್ಸಿನವರೆಗಿರುತ್ತದೆ. ನಿಮಗೆ ಒಬ್ಬನನ್ನು ಬ್ರಹ್ಮಚರ್ಯದಿಂದ ಹೊರಗೆಳೆಯಬೇಕು ಅಂತಿದ್ದರೆ ಆ ವಯಸ್ಸಿನೊಳಗೆ ಅವನನ್ನ ಹಿಡಿಯಿರಿ. ಪ್ರತಿಯೊಂದು ಮದುವೆಯನ್ನು ನೋಡಿದಾಗಲೂ ಅವನ ಕನಸಿನ ತಳ್ಳಂಕ ಹೆಚ್ಚಾಗಿ, ಪ್ರತಿಯೊಂದು ಮದುವೆಯಾದ ಜೋಡಿ ಒಟ್ಟೊಟ್ಟಾಗಿ ತಿರುಗುವುದನ್ನು ಕಂಡಾಗ ವಿರಾಡ್ರೂಪ ತಾಳಿರುತ್ತದೆ. ೨೩ರ ನಂತರ ಅವನ ಕಣ್ಣುಗಳು ಸ್ವಲ್ಪ ನಿಚ್ಚಳವಾಗುತ್ತವೆ. ಅವನ ಬಯಕೆಗಳಿಗೆ ಕೈಕಾಲು ಕಣ್ಣು ಮೂಗು ಮೂಡಿರುತ್ತವೆ. ಮದುವೆಯ ಬಗ್ಗೆ ಒಂದು ಭಯವೂ ಹುಟ್ಟಿರುತ್ತದೆ. ಆದರೆ ಅವನ ಆತಂಕವೇನೂ ಕಡಿಮೆಯಾಗುವುದಿಲ್ಲ. ಆ ಅವಸ್ಥೆಯಲ್ಲಿ ನೀವು ಏಕಕಾಲದಲ್ಲಿ ಮದುವೆಯಾಗಲಿಕ್ಕೂ ಒಂಟಿಯಾಗಿರಲಿಕ್ಕೂ ಬಯಸುತ್ತೀರಿ.

ಅಂತೂ ಎಲ್ಲದರ ಹಾಗೆ ಒಂಟಿತನವೂ ಒಂದು ದಿನ ಕೊನೆಗೊಳ್ಳುತ್ತದೆ. ಆದರೂ ಕೆಲ ಕಾಲ ನೀವು ಕನಸಿನ ಲೋಕದಿಂದ ಹೊರಬರುವುದಿಲ್ಲ. ಅದೇ ಮದುವೆಯಾಗಿ ಬಂದ ಜೋಡಿಗಳನ್ನು ನಾನು ನೋಡಿದ್ದೇನೆ. ಅವರು ಕಣ್ಣುಗಳಿಂದ ಸಂಭಾಷಿಸುವುದನ್ನು ಗುರುತಿಸಿದ್ದೇನೆ. ಆಗ ತಮ್ಮ ಹೊರಗೊಂದು ಪ್ರಪಂಚವಿದೆಯೆನ್ನುವುದರ ಸ್ವಯವೇ ಅವರಿಗಿರುವುದಿಲ್ಲ. ಆ ಸ್ಥಿತಿಯಲ್ಲಿ ಅವರಿಗೆ ಬೇರೆ ಪ್ರಪಂಚವೆಲ್ಲ ಆಗಂತುಕ ಪೀಡೆಯಹಾಗೆ ಭಾಸವಾಗುತ್ತದೆ. ಅವರು ತಮ್ಮ ಜಂಟಿ ಪ್ರಪಂಚದಲ್ಲಿ ಒಂಟಿಯಾಗಿರಲು ಹಾತೊರೆಯುತ್ತಾರೆ.

ಈ ಹೊಸ ಮದುವೆಯ ಜೋಡಿಗಳನ್ನು ನೋಡಿ ನಾನು ಮೆತ್ತಗೆ ನಿಟ್ಟುಸಿರು ಬಿಟ್ಟಿದ್ದೇನೆ. ಪಾಪ, ಅವರು ಬೇಗನೆ ಈ ಕನಸಿನ ಸವಿಲೋಕದಿಂದ ನೈಜತೆಯ ಲೋಕಕ್ಕೆ ಬರಬೇಕಲ್ಲ ಅಂತ ಪರಿತಾಪಪಟ್ಟಿದ್ದೇನೆ. ಆ ಪ್ರಪಂಚ ಅವರು ಅದೃಷ್ಟಶಾಲಿಗಳಾಗಿದ್ದರೆ ಸಪ್ಪಗಾಗಿರುತ್ತದೆ; ದುರದೃಷ್ಟವಂತರಾಗಿದ್ದರೆ ಕಟುವಾಗಿರುತ್ತದೆ. ಹಳೆಯ ಸವಿಯಂತೂ ಉಳಿಯುವುದಿಲ್ಲ ಎಂದು ನನಗೆ ಗೊತ್ತು. ಆದರೆ ಆ ಕನಸಿನ ಅಮಲು ಇರುವಷ್ಟು ಕಾಲ ಅವರ ಕಣ್ಣುಗಳು ಪ್ರಪಂಚದ ಅತಿ ಸುಂದರ ಪದಾರ್ಥಗಳೆಂದೂ ನನಗೆ ಭಾಸವಾಗಿದೆ.

ಮದುವೆಯ ಕಟು ಅನುಭವ ಬಂದ ಸಿನಿಕನೊಬ್ಬ ಮದುವೆಯನ್ನು ಮುತ್ತಿಗೆ ಬಿದ್ದ ಕೋಟೆಗೆ ಹೋಲಿಸಿದ್ದಾನೆ. ಅದರ ಒಳಗಿದ್ದವರೆಲ್ಲ ಹೊರಗೆ ಬರಲಿಕ್ಕೆ ತವಕಿಸುತ್ತಾರೆ; ಹೊರಗಿದ್ದವರೆಲ್ಲ ಒಳಗೆ ಬರಲಿಕ್ಕೆ ಹಾತೊರೆಯುತ್ತಾರೆ. ಶೇಕ್ಸ್‌ಪಿಯರ್ ಒಂದು ಕಡೆ ಎಷ್ಟು

ಮುಂದೆ ಹೋಗಿದ್ದಾನೆ ಎಂದರೆ ಅವನು good hanging prevents a bad marriage ಅನ್ನುತ್ತಾನೆ. ಸಕಾಲದಲ್ಲಿ ಗಲ್ಲಾದರೆ ಅನಿಷ್ಟ ಮದುವೆ ತಪ್ಪುತ್ತದೆಯಂತೆ.

ಐವತ್ತು ದಾಟಿದ ನಂತರ ನಾನು ಸಿಂಹಾವಲೋಕನಕ್ರಮದಿಂದ ಆ ಕನಸು, ಈ ನನಸು, ಅದರ ಹೊನ್ನು, ಇದರ ಮಣ್ಣು ಇವನ್ನೆಲ್ಲ ವಿಂಗಡಿಸಿ ಇದೆಲ್ಲ ಏನು ಎಂಬ ಪ್ರಶ್ನೆ ಕೇಳಿಕೊಂಡಿದ್ದೇನೆ. ಮತ್ತು ಎಷ್ಟೇ ಯೋಚಿಸಿದರೂ ಅನಾದಿಯಲ್ಲಿ ಬಲ್ಲವರು ಕಂಡಲ್ಲಿಗೇ ಬರುತ್ತೇನೆ. ಇದೆಲ್ಲ ಸೃಷ್ಟಿಯ ಮಾಯೆ. ಅದಕ್ಕೇ ವಾಲ್ಟರ್ ಡಿಲಾಮೇರ್ ಹೇಳುತ್ತಾನೆ: "ನಾವು ಪುರುಷರು ಬಹಳ ಹಳಬರು ನಮ್ಮ ಕನಸೆಲ್ಲ ನಂದನವನದ ಮಬ್ಬಿನಲ್ಲಿ ಆದಿಮಾನವ ಸಾಕಿದ ಗಿಳಿಗಳು ಹೇಳಿದ ಕಥೆಗಳು" ಅಂತ. ಹೌದು, ಆದಿಮಾನವಿಯ ಗಿಳಿಗಳ ಕಥೆಯೇ ಸೈ. ಆದರೆ ಈ ಸವಿಗನಸುಗಳನ್ನು ಕಂಡದ್ದಕ್ಕಾಗಿ ನಾನು ಎಂದೂ ಪಶ್ಚಾತ್ತಾಪಪಡುವುದಿಲ್ಲ. ದೇವತೆಗಳ ಕನಸುಗಳ ಹಾಗೆ ಅವು ಅವ್ಯಯ ಸತ್ಯ ಕನಸುಗಳಾಗಿರಲಿಕ್ಕಿಲ್ಲ, ಅವು ಮುರುಕು ಧರ್ಮಶಾಲೆಯಲ್ಲಿ ತಿರುಕ ಕಂಡ ಕನಸುಗಳೇ ಆಗಿರಬಹುದು. ಆದರೆ ಕನಸುಗಳಾದರೇನು? ಕನಸುಗಳೂ ಅವು ನಡೆಯುವಷ್ಟು ಕಾಲ ನನಸುಗಳೇ ಅಲ್ಲವೇ? ಕೊನೆಗೆ ಲೆಕ್ಕ ಹಾಕಿದರೆ ಸವಿಗನಸುಗಳ ಬಿಂದುಗಳೇ ಅಲ್ಲವೇ ನಮ್ಮ ಬದುಕಿನ ನಾಲಗೆಯಲ್ಲಿ ಉಳಿಯುವಂಥವು.

೧೯೭೫

□

# ಸಾಯಲಿಕ್ಕೆ ಪುರುಸೊತ್ತಾಗಲಿಲ್ಲ

ನನಗೆ ಹದಿನಾರು ತುಂಬಿದ್ದಾಗ ಬೈರನ್ನನ ಒಂದು ಪದ್ಯ ಓದಿದ್ದು ಮನಸ್ಸಿನಲ್ಲಿ ಪಳೆಯುಳಿಕೆಯಾಗಿ ಉಳಿದುಕೊಂಡಿದೆ.

ಅದರ ಛಾಯಾರ್ಥ ಹೀಗೆ:

ಎಣಿಸೆಣಿಸು ಬದುಕಿನಲಿ ನೀ ಕಂಡ ಸುಖಗಳನು,
ಎಣಿಸಿಕೋ ನೋವು ಸೋಂಕದ ಗಳಿಗೆಯೇಸು;
ಆಗ ನೋಡುವೆಯಂತೆ ಯಾರೆ ನೀನಾದರೂ,
ಇರುವುದಕ್ಕಿಂತ ಇರದಿರುವುದೇ ಲೇಸು.

ಆಹಾ! ಎಷ್ಟು ಸಂದರ! ಎಷ್ಟು ಸತ್ಯ! ನಾವು ಎಳೆಯರಾಗಿರುವಾಗ ಸಾವು ನಮಗೆ ಆಕರ್ಷಕವಾಗಿ ಕಾಣಿಸುತ್ತದೆ. ಬದುಕಿನಲ್ಲಿ ಏನೂ ಸುಖವಿಲ್ಲ ಎಂದು ಪುರಂದರದಾಸರ ಹಾಗೆ ನಾನು ಹೇಳದಿದ್ದರೂ ಬೈರನ್ನನು ಹೇಳಿದಂತೆ ಜಮಾ ಖರ್ಚಿನ ಲೆಕ್ಕ ನೋಡುವಾಗ ಖೋತಾ ಬಾಕಿಯೇ ಕಾಣುತ್ತದೆ ಎಂದು ಆ ವಯಸ್ಸಿನಲ್ಲೇ ನನಗೆ ಅನುಭವಕ್ಕೆ ಬಂದಾಗಿತ್ತು. ಹೆಚ್ಚಿನ ತರುಣರ ಹಾಗೆ ನನಗೂ ಸಾವಿನ ಭಯ ಇದ್ದಿಲ್ಲ. ಅದಕ್ಕಿಂತ ಮುಂಚೆನೇ ನಾನು ಒಂದೆರಡು ಸಾವುಗಳನ್ನು ನೋಡಿದ್ದೆ—ಸತ್ತವರನ್ನು ಮಾತ್ರವಲ್ಲ—ಸಾಯುತ್ತಿರುವವರನ್ನೂ. ಅವರು ತೇಲ್ಗಣ್ಣು ಮೇಲ್ಗಣ್ಣು ಮಾಡಿ ಒದ್ದಾಡುವುದನ್ನು ನೋಡಿ ತುಸು ನೋವಾದರೂ ಅವರ ಚಡಪಡಿಕೆಗಳು ಅಷ್ಟೇನೂ ಅಸಹನೀಯವಾಗಿ ಕಾಣಿಸಿರಲಿಲ್ಲ. ಹಾಗೆ ಕೇಳಿದರೆ ವರ್ಷಕ್ಕೆ ಒಂದೆರಡು ಸಲ ನನಗೆ ಬರುತ್ತಿದ್ದ ಹೊಟ್ಟೆನೋವಿನ ಸಮಯಗಳಲ್ಲಿ ನಾನು ಇದಕ್ಕಿಂತ ಜಾಸ್ತಿ ಕೈಕಾಲು ಒದೆಯುತ್ತಿದ್ದಿಲ್ಲವೇ!

ಕೆಲವಾರು ದಿನ ನನ್ನ ತಲೆಯಲ್ಲಿ ಬೈರನ್ನನ ಪದ್ಯದ ಗುಂಗು ಇತ್ತು. ಸಾಯುವುದು ಬಹಳ ಸರಳವಾಗಿ ಕಾಣಿಸುತ್ತಿತ್ತು. ಈ ನಡುವೆಯೇ ನನಗೆ ಶೆಲ್ಲಿಯ

ಮೃತ್ಯುವೆಷ್ಟು ಅದ್ಭುತ!
ಮೃತ್ಯುವೂ ಅವನ ತಮ್ಮ ನಿದ್ದೆಯೂ!

ಎಂದು ಪ್ರಾರಂಭವಾಗುವ ಸುದೀರ್ಘ ಪದ್ಯ ಓದಲು ಸಿಕ್ಕಿದ್ದು. ಮೃತ್ಯುವನ್ನೂ ನಿದ್ದೆಯನ್ನೂ

ಗಂಡಸರಾಗಿ ಮಾಡಿದ್ದು ನನಗೆ ಅಷ್ಟೇನೂ ಹಿಡಿಸಲಿಲ್ಲ. "ಮೃತ್ಯುವೂ ಅವಳ ತಂಗಿ ನಿದ್ದೆಯೂ" ಎಂದಿರಬೇಕಿತ್ತು ಅಂದುಕೊಂಡೆ. ಆದರೆ ಪಾಪ! ಶೆಲ್ಲಿಯೇನು ಮಾಡಲಾಪ! ಅವನ ಪದ್ಯದಲ್ಲಿ ಸತ್ತವಳು ಹುಡುಗಿಯಾಗಿದ್ದಳು. ಸಾವೂ ನಿದ್ದೆಯೂ ಹೆಣ್ಣಿಗಿಂತ ಗಂಡಾಗಿಯೇ ಇರುವುದು ಅವಳಿಗೆ ಇಷ್ಟವಾಗಿದ್ದೀತಲ್ಲವೆ? ನಾನು ಮೊದಲಿಂದಲೂ ಮಹಿಳಾ ಹಕ್ಕುಗಳ ಪಕ್ಷಪಾತಿ. ಇದರ ಮೇಲೆ ಕೀಟ್ಸನ ಆ ಹೆಸರಾಂತ ಸಾನೆಟ್ಟು ಓದಿದೆ. ತನ್ನ ಸುಂದರಿಯಾದ ಪ್ರಿಯಕರಿಯ ಎದೆಯ ಮೇಲೆ ಬಿದ್ದು—on my fair love's breast—ಸಾಯುವ ಐಡಿಯ ನನ್ನನ್ನು ಹಿಡಿದುಕೊಂಡಿತ್ತು. ಪಠ್ಯಪುಸ್ತಕದಲ್ಲಿ ಯಾವನೋ ಕಿಡಿಗೇಡಿ ಅದನ್ನು ಮಡಗಿದ್ದುದರಿಂದ ನಮ್ಮ ತರುಣ ಇಂಗ್ಲೀಷ್ ಮಾಸ್ತರು ತುಸು ನಾಚುತ್ತ ಅದನ್ನು ಪಾಠ ಹೇಳಿದ್ದರು. ನನಗೆ fair ಅಥವಾ unfair ಲವ್ ಇನ್ನು ಇದ್ದಿಲ್ಲವಾದರೂ ನಾನು ಕಾಯುವುದಕ್ಕೆ ತಯಾರಿದ್ದೆ.

ಹೌದು! ಇಟ್ ಈಸ್ ಸಮ್‌ಥಿಂಗ್ ಬೆಟರ್ ನಾಟ್ ಟು ಬಿ! ಈ ಸಾಲನ್ನು ಎಷ್ಟು ಸಲ ಗುಣುಗುಣಿಸಿದೆನೋ ಲೆಕ್ಕ ಇಟ್ಟಿಲ್ಲ. ಆ ಸಾಲಿನ ನಿದಿಧ್ಯಾಸದಲ್ಲಿ ಎಷ್ಟೋ ಯೋಚನೆಗಳು ಟಿಸಿಲೊಡೆದವು. ಇರುವುದಕ್ಕಿಂತ ಇಲ್ಲದಿರುವುದೇ ಲೇಸು—ಅನ್ನುತ್ತಾನಲ್ಲ; ನಾವು ಪ್ರಥಮತಃ ಇಲ್ಲದೇನೇ ಇದ್ದಿದ್ದರೆ ತೊಂದರೆಯೇ ಇದ್ದಿಲ್ಲ ಖರೆ; ಆದರೆ ಆಗ ಇಲ್ಲದಿರುವುದೇ ಲೇಸು ಅಂತ ನಮಗೆ ಹೇಗೆ ತಿಳಿಯಬೇಕು? ಬಹುಶಃ ಬೈರನ್ನನ ಅರ್ಥ "ಇಲ್ಲದಾಗುವುದೆ ಲೇಸು" ಎಂದಿರಬೇಕು.

ಇರಬೇಕು, ಇಲ್ಲದಾಗಬೇಕು; ಅಂದರೆ ಸಾಯಬೇಕು. ಸಾಯಬೇಕು ಅಂದಾಗ ನಾನು ಸತ್ತರೆ ಏನಾದೀತು? ವಿಶೇಷವಾಗಿ, ಆ ದಿನಗಳಲ್ಲಿ ತನ್ನ ಶತ್ರುವಾಗಿದ್ದ ಸುರೇಂದ್ರ ಕಾಮತ್ ಏನೆಂದುಕೊಳ್ಳಬಹುದು? ಅಥವಾ ಕ್ಲಾಸಿನಲ್ಲಿ ರ್‍ಯಾಂಕ್ ಗಿಟ್ಟಿಸುವುದರಲ್ಲಿ ನನ್ನ ಪ್ರತಿಸ್ಪರ್ಧಿಯಾದ ಶಂಕರ್‌ರಾವ್ ಮನಸ್ಸಿನಲ್ಲಿ ಏನೇನಾದೀತು? ಅವನು ಬಹಳ ಬುದ್ಧಿವಂತ. ಆದರೆ ಅವನು ಇಂಗ್ಲೀಷ್ ರೊಮ್ಯಾಂಟಿಕ್ ಕವಿಗಳ ಭಕ್ತನಲ್ಲ. ಸಾಯುವುದರಲ್ಲಿರುವ ಸೌಂದರ್ಯ, "ಅದ್ಭುತ" ಅವನಿಗೇನೂ "ಮನಂಬುಗು"ವಂತಿರಲಿಲ್ಲ. ಆದರೂ ಅವನಿಗೆ ನಾ ಸತ್ತರೆ ಸ್ವಲ್ಪವಾದರೂ ದುಃಖವಾಗದಿರಲಿಕ್ಕಿಲ್ಲ. ಮತ್ತೆ ನಮ್ಮ ಕ್ಲಾಸಿನ ಏಕ ಮಾತ್ರ ಹುಡುಗಿಗೆ ಹೇಗನಿಸೀತು? ಇವರೆಲ್ಲರ ಪ್ರತಿಕ್ರಿಯೆ ಕಂಡು ಹಿಡಿಯುವುದಾದರೆ ಒಳ್ಳೇ ಮಜಾನೇ ಸೈ! ಆದರೆ ಒಮ್ಮೆ ಸತ್ತರೆ ಆಮೇಲೆ ಅವರ ಪ್ರತಿಕ್ರಿಯೆ ನನಗೆ ಹೇಗೆ ತಿಳಿಯಬೇಕು? ಆತ್ಮಗಳ ಅಮರತ್ವದ ಬಗ್ಗೆ ನನಗೆ ಈಗ ಹೇಗೋ ಹಾಗೆ ಆಗಲೂ ಅಕ್ಷುಣ್ಣ ವಿಶ್ವಾಸ ಇರಲಿಲ್ಲ.

ಇವೆಲ್ಲ ಆತಂಕಗಳು "ಇರದಿರುವ" ನನ್ನ ಇಚ್ಛೆಯನ್ನೇನೂ ವಿಚಲಿತಗೊಳಿಸಲಿಲ್ಲ. ನಿಜವಾಗಿ ನನಗೆ ಸಾಯಲು ಬಲವಾದ ಇಚ್ಛೆ ಇತ್ತು ಮತ್ತು ಆ ಇಚ್ಛೆ ಇಂದಿಗೂ ಇದೆ. ಆದರೆ ನಾನು ಸಾಯಲಿಲ್ಲ. ಆಗಲೂ ಸಾಯಲಿಲ್ಲ—ಈಗಲೂ ಸತ್ತಿಲ್ಲ.

ತೊಂದರೆಯೆಂದರೆ, ನನಗೆ ಸಾಯಲು ಪುರಸೊತ್ತಾಗಲಿಲ್ಲ. ಈಗಲೂ ಪುರಸೊತ್ತಿಲ್ಲ ಅಥವಾ ನನಗೆ ಪುರಸೊತ್ತು ಇರುವಾಗ ಸಾಯುವ ಸಾಧನಗಳು ಲಭ್ಯವಾಗುವುದಿಲ್ಲ.

ಸಾಧನಗಳು ಸಿಕ್ಕಿದಾಗ ಪುರಸೊತ್ತು ಇರುವುದಿಲ್ಲ. ಎರಡೂ ಇರುವಾಗ ಯಾರಾದರೂ ಹತ್ತಿರ ಇರುತ್ತಾರೆ.

ನೋಡಿ ನನಗೆ ಇಟೀಸ್ ಸಮ್‌ಥಿಂಗ್ ಬೆಟರ್ ನಾಟ್ ಟು ಬಿ ಎಂಬುದು ಖಾತ್ರಿಯಾದಾಗ ನಾನು ಎಸ್.ಎಸ್.ಎಲ್.ಸಿ. ಕ್ಲಾಸಿನಲ್ಲಿ ಓದುತ್ತಿದ್ದೆ. ನಾನು ಸ್ಕಾಲರ್‌ಶಿಪ್ ವಿದ್ಯಾರ್ಥಿಯಾಗಿದ್ದೆ. ನಾನು ಆತ್ಮಹತ್ಯೆ ಮಾಡಿಕೊಂಡಿದ್ದರೆ ನನಗೆ ಸ್ಕಾಲರ್‌ಶಿಪ್ ಕೊಟ್ಟ, ಕೊಡಿಸಿದವರಿಗೆಲ್ಲ ನಾನು ದ್ರೋಹ ಬಗೆದಂತಾಗುತ್ತಿತ್ತು. ನಾನು ಉನ್ನತ ವರ್ಗದಲ್ಲಿ ಪಾಸಾಗುತ್ತೇನೆಂದು ಅವರು ನಿರೀಕ್ಷಿಸಿದ್ದರು. ಆ ನಿರೀಕ್ಷೆಯಿಂದ ಕೆಲ ಉಪಾಧ್ಯಾಯರು ನನಗೆ ಮನೆಯಲ್ಲಿ ಪುಕ್ಕಟೆಯಾಗಿ ಟ್ಯೂಶನ್ ಹೇಳುತ್ತಿದ್ದರು. ನಮ್ಮ ಕುಟುಂಬದಲ್ಲಿ ಇಂಗ್ಲೀಷ್ ಶಾಲೆಗೆ ಹೋದವರಲ್ಲಿ ನಾನೇ ಮೊದಲಿನವ. ನಾನು ಪಾಸಾಗುವ ಮೊದಲೇ ಸತ್ತಿದ್ದರೆ ನನ್ನ ತಾಯಿಯನ್ನೊಳಗೊಂಡು ಎಲ್ಲರಿಗೂ ತೀರ ನಿರಾಶೆಯಾಗುತ್ತಿತ್ತು. ಅದಕ್ಕಿಂತಲೂ ಹೆಚ್ಚಾಗಿ, ವೈದಿಕನಾಗಿ ಹುಟ್ಟಿ, ಇಂಗ್ಲೀಷ್ ಶಾಲೆಗೆ ಹೋಗಿ, ಹೊಲೆಯರ ಸಂಗಡ ಕೂತು ಓದಿದೆನೆಂದು ನಮ್ಮ ಮನೆತನವನ್ನೆ ಟೀಕಿಸುತ್ತಿದ್ದ ನಮ್ಮ ಹಗೆಗಳಿಗೆ ನಾನು ಸತ್ತಿದ್ದರೆ ಬಹಳ ಸಂತೋಷವಾಗುತ್ತಿತ್ತು. ನಮ್ಮ ಹಿತವರಿಗಾಗುವ ದುಃಖವನ್ನಾದರೂ ಅಲಕ್ಷಿಸಬಹುದು; ನಮ್ಮ ವಿರೋಧಿಗಳಿಗಾಗುವ ಸಂತೋಷವನ್ನು ಹೇಗೆ ಸಹಿಸಲಾದೀತು? ಅದು ನಮ್ಮ ಕುಲದ ಗೌರವದ ಪ್ರಶ್ನೆಯಾಗಿತ್ತು. ದುಃಖ ಏನು ಬಿಡಿ, ಯಾವಾಗಲೂ ಇದ್ದದ್ದೇ. ಕೆಲವು ದಿನಗಳಲ್ಲಿ, ಹೊಸ ದುಃಖ ಬಂದಾಗ, ಹಳೇ ದುಃಖ ಮರೆತುಹೋಗುತ್ತದೆ. ಆದರೆ ಕುಲದ ಗೌರವಕ್ಕೆಬಂದ ಕಳಂಕ ವಜ್ರ ಲೇಪವೇ ಸೈ. ಅದಕ್ಕಿಂತಲೂ ಕೆಟ್ಟದ್ದೆಂದರೆ, ಪಾಸಾಗುವ ಧೈರ್ಯವಿಲ್ಲದೆ ಜೀವ ತೆಗೆದುಕೊಂಡೆ ಅಂತ ಜನ ಆಡಿಕೊಳ್ಳಬಹುದು. ನಾನು ಹೇಡಿ ಅನಿಸಿಕೊಳ್ಳಲಿಕ್ಕೆ ತಯಾರಿದ್ದಿಲ್ಲ.

ಆದ್ದರಿಂದ ಎಸ್.ಎಸ್.ಎಲ್.ಸಿ. ಪಾಸಾಗುವವರೆಗೆ ಸಾಯುವುದನ್ನು ಮುಂದೆ ಹಾಕಿದೆ. ಒಂದೇ ಹೊಡೆತಕ್ಕೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ಅದು ಹೇಡಿತನದಿಂದಲ್ಲ, ಸ್ವಂತದ ನಿರ್ಧಾರದಿಂದ, ಅಪ್ರತಿಮ ಧೈರ್ಯದಿಂದ ಎಂದು ಸಿದ್ಧಪಡಿಸಿದಂತಾಗುತ್ತದೆ.

ಎಸ್.ಎಸ್.ಎಲ್.ಸಿ.ಲಿ ಒಳ್ಳೇ ಮಾರ್ಕು ಗಿಟ್ಟಿಸಿ ಪಾಸಾದ ದಿನವೇ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ಎಲ್ಲಾ ಸರಿಹೋಗಬಹುದಾಗಿತ್ತು. ಆದರೆ ರಜಾ ವೇಳೆಯಲ್ಲಿ ನಾನು ಎರಡು ಕೆಲಸಗಳನ್ನು ಮಾಡಿದ್ದೆ. ಒಂದು, ನನ್ನ ಪ್ರಿಯ ರೊಮ್ಯಾಂಟಿಕ್ ಕವಿಗಳ ಜೀವನಚರಿತ್ರೆ ಓದಿದ್ದು, ಎರಡು ಸ್ವತಃ ನಾನೇ ಕವಿತೆ ಬರೆಯುವ ಚಟ ಅಂಟಿಸಿಕೊಂಡದ್ದು.

ಕೀಟ್ಸ್, ಶೆಲ್ಲಿ, ಬೈರನ್ ಮೂವರೂ ಅಲ್ಪಾಯುಷ್ಯದಲ್ಲೇ ಸತ್ತಿದ್ದರು. ಕೀಟ್ಸ್ ೨೬ರಲ್ಲಿ ಸತ್ತಿದ್ದ. ಅವನ ಪ್ರಿಯಕರಿ ಫ್ಯಾನಿಯ ತುಂಬೆದೆಯ ಮೇಲಲ್ಲ; ಕ್ಷಯರೋಗದಿಂದ ಹಾಸಿಗೆಯ ಮೇಲೆಯೇ. ಶೆಲ್ಲಿ ೩೯ರಲ್ಲಿ ಸತ್ತ—ಸಮುದ್ರದಲ್ಲಿ ಮುಳುಗಿ. ಬೈರನ್ ಸಾಧ್ಯವಿದ್ದಷ್ಟು ಹುಡುಗಿಯರನ್ನು ಕೆಡಿಸಿ ಆಮೇಲೆ ಗ್ರೀಸಿಗೆ ಹೋಗಿ ಅದರ ಸ್ವಾತಂತ್ರ್ಯ

ಯುದ್ಧಕ್ಕೆ ಇಂಗ್ಲೀಷಿನಲ್ಲಿ ಪ್ರೋತ್ಸಾಹಕರ ಕವನಗಳನ್ನು ಹೆಣೆಯುತ್ತ ಸತ್ತ—ರೋಗದಿಂದ. ಮೂವರಲ್ಲಿ ಯಾರೂ ಆತ್ಮಹತ್ಯ ಮಾಡಿಕೊಂಡಿರಲಿಲ್ಲ. ಇದು ನನ್ನ ಉತ್ಸಾಹವನ್ನು ಸ್ವಲ್ಪ ತಣ್ಣಗೆ ಮಾಡದಿರಲಿಲ್ಲ. ಆದರೂ ಕೀಟ್ಸನಿಗಿಂತ ಶೆಲ್ಲಿ, ಬೈರನ್ ವಾಸಿ. ಶೆಲ್ಲಿಯ ಮೊದಲನೇ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಿದ್ದಳು; ಅವನ ಎರಡನೇ ಹೆಂಡತಿಯ ತಂಗಿ ಬೈರನ್ನನಿಗೆ ಮರುಳಾಗಿ ಅವನ ಹಾಸಿಗೆಯಲ್ಲಿ ಕೆಲಕಾಲ ಸ್ಥಳ ಪಡೆದು ಆಮೇಲೆ ಹೊರದೂಡಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಇದು ಕವಿಗಳ ಸ್ವಂತ ಆತ್ಮಹತ್ಯೆಯಷ್ಟು ಶ್ರೇಷ್ಠವಲ್ಲದಿದ್ದರೂ ಪ್ರಾಕ್ಸಿವೋಟಿನ ಹಾಗೆ ಸಿಂಧುವಾದ ಕ್ರಮ. ಈ ಮೂರು ಕವಿಗಳ ಸಮಗ್ರ ಕೃತಿಗಳ ಪುಸ್ತಕಗಳು ಸಿಕ್ಕಿದ ಮೇಲೆ ಅವರೇಕೆ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲವೆಂದು ನನಗೆ ಗೊತ್ತಾಯಿತು. ಅವರು ಕವಿತೆ ಬರೆಯುವುದರಲ್ಲಿ ಎಷ್ಟು ಬಿಜಿಯಾಗಿದ್ದರೆಂದರೆ ಆತ್ಮಹತ್ಯೆ ಮಾಡಿಕೊಳ್ಳಲು ಅವರಿಗೆ ಪುರುಸೊತ್ತೇ ಸಿಕ್ಕಿರಲಿಲ್ಲ.

ಈ ರೊಮ್ಯಾಂಟಿಕರ ಕೃತಿಗಳನ್ನು ಕುರಿತು ಇಂದಿಗೂ ಅವು ಶ್ರೇಷ್ಠ ಅಥವಾ ಕನಿಷ್ಠವೆಂದು ವಿಮರ್ಶಕರು ಹಗ್ಗಜಗ್ಗಾಟದ ಆಟ ಆಡುತ್ತಿರುವುದನ್ನು ನೋಡಿ ನಾನೂ ಮುಂದಿನ ವಿಮರ್ಶಕರಿಗಾಗಿ ಒಂದು ಉದ್ದನ್ನ ಹಗ್ಗವನ್ನು ಹೊಸೆದಿಟ್ಟು ಆಮೇಲೆ ಸಾಯುವುದೇ ಸೈ ಎಂದು ನಿಶ್ಚಯಿಸಿ ಕವಿತೆ ಬರೆಯತೊಡಗಿದೆ ಮತ್ತು ಆತ್ಮಹತ್ಯೆಯನ್ನು ಎರಡನೇ ಸಲ ಮುಂದಕ್ಕೆಹಾಕಿದೆ. ಮೊದಲೇ ಆತ್ಮಹತ್ಯೆ ಮಾಡಿಕೊಂಡರೆ ಭಾವೀ ಜನಾಂಗಗಳಿಗೆ ನಾನು ಹುಟ್ಟಿದ್ದಾಗಲಿ ನಿರ್ಭಯದಿಂದ ಆತ್ಮಹತ್ಯೆ ಮಾಡಿಕೊಂಡದ್ದಾಗಲಿ ಹೇಗೆ ತಿಳಿಯಬೇಕು?

"ಬುಭುಕ್ಷಿತೈರ್ವ್ಯಾಕರಣಂ ನ ಭುಜ್ಯತೇ"—ಅಂತ ಸಂಸ್ಕೃತ ಸುಭಾಷಿತಕಾರ ಹೇಳಿದ್ದಾನೆ. ನನಗೆ ವ್ಯಾಕರಣ ಎಂದೂ ಸರಿಯಾಗಿ ಜೀರ್ಣವಾಗಿಲ್ಲ; ಮಾತ್ರವಲ್ಲ ಕವಿತೆಯನ್ನು ಕೂಡ ತಿಂದು ಬದುಕುವುದು ಸಾಧ್ಯವಿಲ್ಲ ಎಂದು ತಡವಿಲ್ಲದೆ ತಿಳಿಯಿತು. ಶೆಲ್ಲಿಗೂ ಬೈರನ್ನನಿಗೂ ಈ ಸಮಸ್ಯೆ ಇದ್ದಿಲ್ಲ. ಅವರಿಗೆ ಸ್ವಂತ ಖಾಸಗಿ ಆದಾಯ ಇತ್ತು. ನನಗೆ ಇಲ್ಲ. ಆದ್ದರಿಂದ ಕವಿತೆ ಬರೆಯುವುದಕ್ಕಾಗಿ ಮತ್ತು ಅನಂತರ ಸಾಯುವುದಕ್ಕಾಗಿ ನಾನು ಬೇರೆ ಕೆಲಸ ಮಾಡಬೇಕಾಯಿತು. ಆದರಿಂದ ಕವಿತೆ ಬರೆಯುವುದಕ್ಕೆ ಕಡಿಮೆ ಸಮಯ ಉಳಿಯತೊಡಗಿತು. ಹೀಗಾಗಿ ಬೈರನ್ನನಷ್ಟು ಬಿಡಿ, ಕೀಟ್ಸ್‌ನಷ್ಟು ಕಾವ್ಯ ರಾಶಿಯನ್ನಾದರೂ ಬಿಟ್ಟು ಹೋಗಬೇಕಾದರೆ ನನಗೆ ಅವನಿಗಿಂತಲೂ ಹೆಚ್ಚು ವರ್ಷಗಳು ಬೇಕಾಗುವವೆಂದು ವಿದಿತವಾಯಿತು.

ನಾನು ನನ್ನ ಆತ್ಮಹತ್ಯೆಯನ್ನು ಮುಂದೆ ಹಾಕುತ್ತಲೇ ಹೋಗಬೇಕಾಯಿತು. ಈ ದರಿದ್ರ ದೇಶದಲ್ಲಿ ಕವಿಗಳಿಗೆ ತಗಲಿಕೊಳ್ಳುವ ಹೆಣ್ಣುಗಳು ಸಿಗುವುದೂ ದುಷ್ಕರ. ನನಗಂತೂ ಸಿಗಲಿಲ್ಲ ಅನ್ನಿ. ಕುಂಟ ಬೈರನ್ನನಿಗೆ ಬಳಸಿ ಒಗೆಯುವಷ್ಟು ಹೆಣ್ಣುಗಳು ಲಭಿಸಬೇಕು. ಎರಡೂ ಕಾಲು ಸರಿಯಾಗಿರುವ ನನಗೆ ಒಂದೂ ಸಿಗಬಾರದು—ಇದು ಶುದ್ಧ ಅನ್ಯಾಯ. ಇದರ ಫಲವಾಗಿ ನನ್ನ ಪರವಾಗಿ ಪ್ರಾಕ್ಸಿಯಿಂದ ಆತ್ಮಹತ್ಯೆ ಮಾಡಿಕೊಳ್ಳುವವರೂ ನನಗೆ ಸಿಗಲಿಲ್ಲ. ನಾನೂ ಬದುಕುತ್ತಲೇ ಹೋಗುವುದು ಅನಿವಾರ್ಯವಾಯಿತು.

ಆಮೇಲೆ ನಾನು ಮದುವೆ ಮಾಡಿಕೊಂಡೆ. ಮತ್ತೆ ಯಾವ ಉದ್ದೇಶದಿಂದಲೂ ಅಲ್ಲ; ನನ್ನ ತಾಯಿ ನನಗೆ ಗಂಟುಹಾಕಬೇಕೆಂದಿದ್ದ ಹುಡುಗಿಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ. ನಾನೇ ಬೇರೆ ಹುಡುಗಿ ಹುಡುಕಿ ಲಗ್ನವಾದೆ. "ಒಮ್ಮೆ ಮದುವೆ ಮಾಡಿಕೊಂಡುಬಿಟ್ಟರೆ ಮತ್ತೆ ನಿಮ್ಮ ಕೈಲಿ ಏನೂ ಉಳಿಯುವುದಿಲ್ಲ—ಆತ್ಮಹತ್ಯೆಯ ದಾರಿ ಕೂಡ. ನೀವು ಉಪಾಯವಿಲ್ಲದೆ ಸಜ್ಜನರಾಗಬೇಕಾಗುತ್ತದೆ". ಅಂತ ರಾಬರ್ಟ್ ಲುಯಿ ಸ್ಟೀವನ್‌ಸನ್ ಹೇಳಿದ್ದಾನಲ್ಲ. ಸಂಕ್ಷೇಪದಲ್ಲಿ ಹೇಳಬೇಕಾದರೆ ನಾನು ಪುನಃ ಸಾಯುವುದನ್ನು ಮುಂದೆ ಹಾಕಬೇಕಾಯಿತು. ಹೆಂಡತಿಯು ಮೇಲೆ ಕರುಣೆಯಿಂದ ಮಾತ್ರವಲ್ಲ—ಕವಿಗಳು ಹೆಂಡಂದಿರ ಮೇಲೆ ಕರುಣಾಳುಗಳಾಗಿರುವುದು ಅಷ್ಟು ಶಿಷ್ಟಾಚಾರವಲ್ಲವೆಂದು ನಿಮಗೆ ಗೊತ್ತಿರಬಹುದು. ಆದರೆ ಮದುವೆಯಾದ ಮೇಲೆ ನನಗೆ ಕವಿತೆ ಬರೆಯುವುದಕ್ಕೆ ಇನ್ನೂ ಕಡಿಮೆ ಸಮಯ ಉಳಿಯುತ್ತಿತ್ತು ಮತ್ತು ಶೆಲ್ಲಿಯಷ್ಟು ಕವಿತಾರಾಶಿಯನ್ನು ಬಿಟ್ಟು ಹೋಗಲು ನಾನು ಅವನಿಗಿಂತ ಹೆಚ್ಚು ಕಾಲ ಬದುಕದೆ ವಿಧಿ ಇರಲಿಲ್ಲ.

ಈ ನಡುವೆ ನನಗೆ ನನ್ನ ಪ್ರಯತ್ನವಿಲ್ಲದೇ ಸಾಯುವ ಸಂದರ್ಭಗಳು ಬಾರದೆ ಇರಲಿಲ್ಲ. ಉದಾಹರಣೆಗೆ, ಆ ಮಧ್ಯಾಹ್ನ ಗದ್ದೆಗಳ ನಡುವೆ ನಾನು ಬರುತ್ತಿದ್ದಾಗ ನನಗೆ ಹಾವು ಕಡಿದ್ದದು. ಅದು ನಾಗರಹಾವೋ ಅಥವಾ ಕಾಳಿಂಗನೋ ಮತ್ತೇನೋ ಎಂದು ಕಂಡುಹಿಡಿಯುವ ಮೊದಲೇ ಹೇಡಿಯಂತೆ ಕಣ್ಮರೆಸಿಕೊಂಡು ಬಿಟ್ಟಿತು. ನಾನು ಹೆದರಲಿಲ್ಲ. ನನ್ನ ಬಗ್ಗೆ ನನಗೆ ತುಸು ಮರುಕ ಅನ್ನಿಸಿತು ಮಾತ್ರ. ಕನ್ನಡ ಕಾವ್ಯ ಪ್ರಪಂಚದ ಮೇಲೆ ನನ್ನ ಅಳಿಸಲಾರದ ಮುದ್ರೆಯನ್ನು ಒತ್ತುವ ಮೊದಲೇ ವಿಧಿ ನನ್ನನ್ನು ಇಲ್ಲಿಂದ ಕರೆದುಕೊಂಡು ಹೋಗುವುದೆ? ಕನ್ನಡ ಸಾಹಿತ್ಯದ ಅದೃಷ್ಟದ ಬಗ್ಗೆಯೂ ನನಗೆ ಅಷ್ಟಿಷ್ಟು ಮರುಕಬಾರದೆ ಇರಲಿಲ್ಲ. ನಾನು ಮನೆಗೆ ಹೋದೆ. ಹಾವು ಕಡಿದದ್ದನ್ನು ಎಲ್ಲರಿಗೂ ಹೇಳಿದೆ. ಎಲ್ಲರೂ ಗಾಬರಿಯಾಗಿ ವೈದ್ಯರ ಕಡೆ ಓಡಿದರು. ನಾನೋ ಧೈರ್ಯವಾಗಿ ಸಾವನ್ನು ಸ್ವಾಗತಿಸಲು ಅಣಿಯಾದೆ. ಕಾಲು ಜುಮು ಜುಮು ಎನ್ನುತ್ತಿತ್ತು. ನನಗೆ ಒಮ್ಮೆಲೇ ಕಡಂಗೋಡ್ಲು ಶಂಕರಭಟ್ಟರ, "ಮಾದ್ರಿ ಮಡಿದಳಿಲ್ಲ, ಅವಳ ಕಡಿದ ಮೃತ್ಯು ಮಡಿಯಿತು", ಎಂಬ ಸಾಲು ನೆನಪಾಯಿತು. ಆದರೆ ನನ್ನ ಬಗ್ಗೆ ಇಂಥ ಪಂಕ್ತಿಯನ್ನು ಯಾರು ಬರೆಯುವರು? ಶೆಲ್ಲಿ ಕೀಟ್ಸ್‌ನ ಮೇಲೆ ಬರೆದ ಹಾಗೆ ನನ್ನ ಬಗ್ಗೆ ಸುದೀರ್ಘ ಚರಮಗೀತೆ ಬರೆಯುವವರಾರು? ಓ ವೀಪ್ ಫೋರ್ ಅಡೋನೈಸ್! ಎನ್ನುವವರುಂಟೆ? ನನ್ನ ಹೆಂಡತಿ ಮಾತ್ರ ನನ್ನ ಹತ್ತಿರ ಬಿಳಿಚಿದ ಮುಖ ಹಿಡಿದುಕೊಂಡು ಕುಳಿತಿದ್ದಳು. ಅವಳೂ ಕೂಡ ಕಣ್ಣೀರು ಸುರಿಸುತ್ತಿರಲಿಲ್ಲ.

ಆದರೆ ಇಲ್ಲ, ಪಾದ ಜುಮುಗುಟ್ಟುವುದು ಕಮ್ಮಿಯಾಯಿತು. ವೈದ್ಯರು ಬಂದರು. ಹಲ್ಲಿನ ಗುರುತು ನೋಡಿದರು. "ಓ! ಇದು ಬರೇ ಒಳ್ಳೇ ಹಾವು ಇರಬೇಕು" ಎಂದು ಗಾಯಕ್ಕೆ ಅರಸಿನ ಹಚ್ಚಿ ಹೊರಟು ಹೋದರು. ಮೃತ್ಯುವಿಗೆ ನನ್ನನ್ನು ಕಡಿದು ತಾನೇ ಸಾಯುವ ಅಪೇಕ್ಷೆ ಇದ್ದಂತೆ ಕಾಣಲಿಲ್ಲ. ಅದು ನನ್ನ ಜೀವವನ್ನು ಕಳೆದುಕೊಳ್ಳುವುದಕ್ಕೆ

ನನಗೇ ಚಾನ್ಸ್ ಕೊಡಬೇಕೆಂದು ನಿರ್ಧರಿಸಿತ್ತೋ ಏನೋ. ನನಗೆ ಪುನಃ ನನ್ನ ಬಗ್ಗೆ ಯಾರೂ ಚರಮಗೀತೆ ಬರೆಯಲಿಕ್ಕಿಲ್ಲೆಂದು ನಾನೆಣಿಸಿದ್ದು ಸರಿಯೆ? ನನ್ನ ಕವಿ ಮಿತ್ರ—ರಾಜರು ಇದ್ದರು. ನನ್ನ ಕವಿತೆಗಳ ಬಗ್ಗೆ ಅವರಿಗೇನೂ ಅಷ್ಟು ಒಳ್ಳೇ ಅಭಿಪ್ರಾಯ ಇರಲಿಲ್ಲ, ನಿಜ. ಆದರೆ ಅವರು ನನ್ನ ಬಗ್ಗೆ ಕೆಲ ಪಂಕ್ತಿಗಳನ್ನು ಬರೆಯಲಾರದಷ್ಟು ವಚನಜಿಪುಣರಾಗಿರಲಿಲ್ಲ. ನಾನು ನನಗೆ ಹಾವು ಕಡಿದ ಸುದ್ದಿ ಅವರಿಗೆ ಹೇಳಿದಾಗ ಅವರಾಗಿಯೇ, "ಸಾಯದೆ ನೀವು ನನಗೆ ಅನ್ಯಾಯ ಮಾಡಿದಿರಿ, ನಾನು ನಿಮ್ಮ ಮೇಲೆ ಒಂದು ಮಹಾ ಚರಮಗೀತೆ ಬರೆದು ಅಮರನಾಗುತ್ತಿದ್ದೆ—ಆ ಚಾನ್ಸ್ ತಪ್ಪಿಸಿದಿರಿ!" ಎಂದರು. ನನಗೆ ಆಗ ಸಾವಿನ ಮೇಲೆ ತುಂಬಾ ಸಿಟ್ಟು ಬಂತು.

ಇದಾದ ಮೇಲೆ ನನ್ನ ಜೀವನದಲ್ಲಿ ಅನೇಕ ಬಿಕ್ಕಟ್ಟುಗಳು ಉದ್ಭವಿಸಿ ನಾನು ಸಾವಿನ ಬಗ್ಗೆ ಹೆಚ್ಚು ಆಲೋಚನೆ ಮಾಡುವಂತಾಯಿತು. ಯಾರಾದರೂ ಚರಮಗೀತೆ ಬರೆಯಲಿ ಬಿಡಲಿ, ನಾನು ಆತ್ಮಹತ್ಯೆ ಮಾಡಿಕೊಳ್ಳಲೇಬೇಕು. ಆದರೆ ಹೇಗೆ? ತುಂಬಾ ತೊಂದರೆಗಳಿದ್ದವು. ರಾಬರ್ಟ್ ಕ್ಲೈವನ ಹಾಗೆ ಗುಂಡುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದು ಉತ್ತಮ ಪಕ್ಷ. ಆದರೆ ಬ್ರಿಟಿಷರು ಭಾರತೀಯರಿಗೆ ಬಂದೂಕಿನ ಹಕ್ಕು ನಿರಾಕರಿಸಿದ್ದರು. ಬಾವಿಗೋ ಕೆರೆಗೋ ಹಾರಿ ಜೀವ ತೆಗೆದುಕೊಳ್ಳುವುದು ನನ್ನಂಥ ನಿರುದ್ಯೋಗಿಗೆ ತಕ್ಕ ಖರ್ಚಿಲ್ಲದ ವಿಧಾನ. ಈ ವಿಧಾನದಲ್ಲಿ ಎರಡು ಅನಾನುಕೂಲಗಳುಂಟು. ಒಂದು, ನೀವು ಬೇಕೆಂದೇ ಆತ್ಮಹತ್ಯೆ ಮಾಡಿಕೊಂಡಿರೆಂದು ಜಗತ್ತಿಗೆ ತಿಳಿಯದೆ ಹೋಗಬಹುದು—ನೀವು ಜಾರಿ ನೀರಿಗೆ ಬಿದ್ದಿರಬಹುದಲ್ಲ! ನನ್ನ ಮಟ್ಟಿಗೆ ಇದ್ದದ್ದು ಇನ್ನೊಂದು ತೊಂದರೆ; ನನಗೆ ಈಸಲು ಬರುತ್ತಿತ್ತು. ಹಗ್ಗ ಹಾಕಿಕೊಂಡು ಸಾಯುವುದಾದರೆ ಹೇಗೆ? ಒಂದೆಂದರೆ ಮನೆ ತುಂಬಾ ಜನ, ಮನೆ ಸಣ್ಣದು, ವಿರಾಮವಾಗಿ ಹಗ್ಗ ಹಾಕಿಕೊಳ್ಳುವುದಕ್ಕೆ ಜಾಗವೇ ಇರಲಿಲ್ಲ; ಇನ್ನೊಂದೆಂದರೆ, ಹಗ್ಗ ಹಾಕಿಕೊಂಡು ಸತ್ತವರಿಗೆ ಜನ್ಮ ಜನ್ಮಾಂತರಗಳಲ್ಲಿಯೂ ಉಬ್ಬಸ ರೋಗಬರುತ್ತದೆಂದು ನಮ್ಮ ತಾಯಿ ಹೇಳಿದ್ದರು. ರೈಲಿನ ಅಡಿಗೆ ಬೀಳಬಹುದಿತ್ತು. ಆದರೆ ನಮ್ಮೂರಲ್ಲಿ ಆಗ ರೈಲು ಇರಲಿಲ್ಲ. ರೈಲಿರುವ ಊರಿಗೆ ಹೋಗುವಷ್ಟು ಬಸ್ ಚಾರ್ಜು ನನ್ನ ಜೇಬಿನಲ್ಲಿರಲಿಲ್ಲ.

ಈ ವಿಷಯದಲ್ಲಿ ಏನಾದರೂ ನಿಶ್ಚಯ ಮಾಡುವ ಮೊದಲೇ ನನಗೆ ಒಂದು ಹೋಟೆಲಿನಲ್ಲಿ ಕೆಲಸ ಸಿಕ್ಕಿತು. ದಿನಕ್ಕೆ ೧೬ ಗಂಟೆ ದುಡಿತ. ಕವಿಗೆ ಹೋಟೆಲ್ ಚಾಕರಿ ತೀರ ಅಯೋಗ್ಯ. ಆಗಾಗ್ಗೆ ಆತ್ಮಹತ್ಯೆಯ ವಿಚಾರ ಸುಳಿದು ಹೋಗುತ್ತಲೇ ಇತ್ತು. ಆದರೆ ಪ್ಲಾನ್ ಮಾಡುವುದಕ್ಕೆ ವೇಳೆಯೇ ಇರಲಿಲ್ಲ.

ಆ ಮೇಲೆ ನಾನು ಒಂದು ಪೇಪರಿನಲ್ಲಿ ಕೆಲಸ ಗಿಟ್ಟಿಸಿದೆ ಮತ್ತು ಕವಿತೆ ಬರೆಯುವುದು ಕಮ್ಮಿ ಮಾಡಿ ನಗೆಬರಹ ಬರೆಯತೊಡಗಿದೆ. ಯಾರನ್ನೂ ಕೇಳದೆ ಅವುಗಳನ್ನು ಪೇಪರಿನಲ್ಲಿ ಪ್ರಕಟಿಸತೊಡಗಿದೆ. ಕೇಳದೆ ಯಾಕೆ ಹರಟೆ ಪ್ರಿಂಟು ಮಾಡಿಸಿದಿ ಅಂತ ಸಂಪಾದಕರು ಅತ್ತೆಯ ಅಧಿಕಾರ ಚಲಾಯಿಸುತ್ತಾರೆ, ಆಗ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ (ಯಾಕೆಂದರೆ

ಈಗ ರೈಲು ಕಂಬೀ ಹತ್ತಿರವೇ ಮನೆ ಮಾಡಿದ್ದೆ)—ಅಂದುಕೊಂಡಿದ್ದೆ. ದುರ್ದೈವದಿಂದ ಸಂಪಾದಕರು ಅತ್ತೆಯ ಅಧಿಕಾರ ಚಲಾಯಿಸುವ ಅನುಗ್ರಹ ತೋರಿಸಲೇ ಇಲ್ಲ. ಸಂಪಾದಕರ ಅಸಡ್ಡೆಯಿಂದಾಗಿ ನಾನು ಸುಪ್ರಸಿದ್ಧನಲ್ಲದಿದ್ದರೂ ಕುಪ್ರಸಿದ್ಧನಾಗತೊಡಗಿದೆ. ಇದೇ ತರಹದಲ್ಲಿ ನನ್ನ ಬರವಣಿಗೆಯೂ ಕುಪ್ರಸಿದ್ಧಿಯೂ ಹೆಚ್ಚಿಕೊಂಡರೆ ನಾನು ನಾಳಿನ ವಿಮರ್ಶಕರಿಗೆ ಜೀಕುವುದಕ್ಕೆ ಸಾಕಷ್ಟು ಸಾಹಿತ್ಯ ರಾಶಿಯನ್ನು ಅಣಿ ಮಾಡುವುದು ಖಂಡಿತ.

—ಅಷ್ಟಾದರೆ ಆತ್ಮಹತ್ಯೆಯನ್ನು ಸೀರಿಯಸ್ಸಾಗಿ ವಿಚಾರಿಸಬಹುದಿತ್ತು. ಆದರೆ ಹರಟೆ ಬರೆಯುವ ಮನೋವೃತ್ತಿಯೂ ಆತ್ಮಹತ್ಯಾ ಮನೋವೃತ್ತಿಯೂ ಒಂದೇ ತಲೆಯೊಳಗೆ ಸಹಜೀವನ ಮಾಡುವುದು ಕಷ್ಟ. ಹರಟೆ ಮನೋವೃತ್ತಿ ಆತ್ಮಹತ್ಯಾ ಮನೋವೃತ್ತಿಯನ್ನು ಗೇಲಿಮಾಡಿ ಹಾರಿಸಿ ಬಿಡುತ್ತದೆ. ನಾನು ಕವಿತೆಗೆ ವಾಪಸ್ಸು ಬರಬಹುದಾಗಿತ್ತು. ಆದರೆ ಈಗ ಕವಿತೆಯ ಫ್ಯಾಶನ್ನು ಬದಲಾಗಿಬಿಟ್ಟಿತ್ತು. ರೊಮ್ಯಾಂಟಿಕ್ ಕವಿತೆ ಕವಿತೆಯೇ ಅಲ್ಲ. ನವ್ಯ ಕವಿತೆಯೇ ಕವಿತೆ ಎಂದಾಗಿಬಿಟ್ಟಿತ್ತು. ಈ ನವ್ಯ ಕವಿತೆ ಮೊದಲನೆಯದಾಗಿ ನನಗೆ ದಕ್ಕುವ ಕೂಳಲ್ಲ; ಎರಡನೆಯದಾಗಿ ದಕ್ಕಿದರೂ ಅದು ಆತ್ಮಹತ್ಯೆಗೆ ಪ್ರೋತ್ಸಾಹಕವಲ್ಲ. ನವ್ಯ ಕವಿಗಳಲ್ಲಿ ಹೆಚ್ಚಿನವರು ಅಸ್ತಿತ್ವವಾದಿಗಳು—ಹೀಗೆ ಗದ್ಯದಲ್ಲಿಯೂ ಪದ್ಯದಲ್ಲಿಯೂ ಆತ್ಮಹತ್ಯೆ ಫ್ಯಾಶನೇಬಲ್ ಆಗಿ ಉಳಿದಿಲ್ಲ. ಈಗ ಯಾರೂ ಶೆಲ್ಲಿ ಬೈರನ್ನುಗಳನ್ನು ಓದುವುದೇ ಇಲ್ಲ.

ಆದರೆ ಆತ್ಮಹತ್ಯೆಯ ಕೈಯನ್ನು ನಾನು ಪೂರ್ತಿ ಬಿಡಲಿಲ್ಲ. ನೋಬೆಲ್ ಕಾದಂಬರಿಕಾರ ಹೆಮಿಂಗ್ವೇ ಆತ್ಮಹತ್ಯೆ ಮಾಡಿಕೊಂಡಾಗ ನನ್ನ ಉತ್ಸಾಹ ಮತ್ತೊಮ್ಮೆ ಉಕ್ಕಿತು. ಅವನಿಗೆ ಡಾಕ್ಟರು ಗುಣವಾಗದ ರೋಗ ಇದೆಯೆಂದು ಹೇಳಿದ್ದರಿಂದ, ಸಾವು ತನ್ನನ್ನು ಹಿಡಿದುಕೊಳ್ಳುವ ಮೊದಲೇ ಅವನು ಸಾವನ್ನು ಹಿಡಿದುಕೊಂಡನೆಂದು ಕೇಳಿದೆ. ನನ್ನ ಹತ್ತಿರ ರಿವಾಲ್ವರು ಇದ್ದಿದ್ದರೆ ಖಂಡಿತ ನಾನೂ ಒಂದು ಬೆಳಗ್ಗೆ ನನಗೆ ಪ್ರಿಯವಾದ ಆದರೆ ನನ್ನ ಹೆಂಡತಿಗೆ ಅಪ್ರಿಯವಾದ ನೀರುಳ್ಳಿ ಬಜೆ ತಿಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ. ನನ್ನ ಹತ್ತಿರ ರಿವಾಲ್ವರು ಇದ್ದಿಲ್ಲ. ಫಾಲಿಡಾಲ್ ನುಂಗಬಹುದಿತ್ತು. ಆದರೆ ಅದರ ವಾಸನೆ ನನಗೆ ಏನೇನೂ ಸೇರುವುದಿಲ್ಲ. ಸಾಲದ್ದಕ್ಕೆ ನಾನಾಗ ಒಂದು ವಿಶೇಷ ಸಂಚಿಕೆಗೆ ತಯಾರಿ ನಡೆಸುತ್ತಿದ್ದುದರಿಂದ ಅದು ಮುಗಿದಮೇಲೆ ನೋಡೋಣ ಎಂದು ಮತ್ತೆ ಮುಂದೆ ಹಾಕಿದೆ. ಆಮೇಲೆ ಆತ್ಮಹತ್ಯೆಯ ವಿಚಾರ ಕೆಲ ಕಾಲ ನೆನಪಿಗೇ ಬರಲಿಲ್ಲ.

ಪುನಃ ನೆನಪಾದದ್ದು ಕರ್ನಾಟಕದ ಒಬ್ಬ ಪ್ರಸಿದ್ಧ ತತ್ವಜ್ಞಾನಿಗಳು ಆತ್ಮಹತ್ಯೆಯನ್ನು ಸಮರ್ಥಿಸಿ ಪತ್ರಿಕೆಗಳಲ್ಲಿ ಲೇಖನ ಬರೆದಾಗ, ಅವರಿಗೆ ತಮ್ಮ ಮಗನಿಂದ ತುಂಬಾ ತೊಂದರೆಯಾಗಿತ್ತೆಂದು ನನಗೆ ಗೊತ್ತಿತ್ತು. ಅವರಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಒಳ್ಳೇ ಕಾರಣವಿತ್ತು. ಅವರು ತಮ್ಮ ಲೇಖನದ ಪ್ರತಿಪಾದನೆಯನ್ನು ಕೃತಿಗಿಳಿಸಿ ತೋರಿಸುವರೆಂದು ನಿರೀಕ್ಷಿಸಿದ್ದೆ. ನನಗೆ ಅವರ ಮೇಲೆ ತುಂಬಾ ಗೌರವವಿದ್ದುದರಿಂದ ಅವರು ಮುಂದಾಳ್ತನ ಕೊಟ್ಟಿದ್ದರೆ ನಾನೂ ಅವರನ್ನು ತೊಂಭತ್ತು ಪಾಲು ಅನುಸರಿಸುತ್ತಿದ್ದೆ. ಆದರೆ ಅವರು ಬರೆದದ್ದು ಪರರ ಹಿತಾರ್ಥವಾಗಿ; ಯಾರಿಗಾದರೂ ಆತ್ಮಹತ್ಯೆ ಪಾಪ ಅಥವಾ ಅನೈತಿಕ

ಎಂಬ ಪೂರ್ವಗ್ರಹಪೀಡೆ ಇದ್ದರೆ ಅದನ್ನು ನಿವಾರಿಸಿ ಅವರ ಮನಸ್ಸನ್ನು, ಧುಮುಕಲು ಸಿದ್ಧಗೊಳಿಸುವುದಕ್ಕಾಗಿ—ಎಂಬುದು ನನಗೆ ಸುಮಾರು ದಿನಗಳ ನಂತರ ಹೊಳೆಯಿತು. ಸ್ವಂತದ ಮಟ್ಟಿಗೆ—ಅವರು ಪರೋಪದೇಶ ಬರೆಯುವುದರಲ್ಲಿ ತೀರ ಬಿಜಿ ಆಗಿದ್ದರು. ಮತ್ತೆ ನಾನಾದರೂ ತುಂಬ ಬಿಜಿಯೇ ಆಗಿದ್ದೆ.

ಈಗಲೂ ನನಗೆ ಒಮ್ಮೊಮ್ಮೆ ಆತ್ಮಹತ್ಯೆಯ ವಿಚಾರ ಬರುತ್ತದೆ. ಆದರೆ ಈಗ ಅದರಿಂದೇನು ಪ್ರಯೋಜನ? ನನಗೆ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಅರ್ಥರಹಿತವಾಗಿ ಮಾಡುವಷ್ಟು ವಯಸ್ಸಾಗಿದೆ. ಕೆಲ ವರ್ಷಗಳಿಂದ ನಾನು ಆತ್ಮಹತ್ಯೆಯ ಪರ್ಯಾಯವೊಂದರ ಬಗ್ಗೆಯೂ ಚಿಂತಿಸುತ್ತಿದ್ದೇನೆ. ಅದೆಂದರೆ ನನ್ನ ಹರಟೆಗಳಿಂದ ನಾನು ಮನನೋಯಿಸಿದ ರಾಜಕಾರಣಿಗಳು, ಧರ್ಮಾಭಿಮಾನಿಗಳು—ಇವರಲ್ಲಿ ಯಾರಾದರೂ ನನ್ನ ಕೊಲೆ ಮಾಡಬಹುದು ಅಂತ. ಹಾಗಾದರೆ ನಾನು ಹತಾತ್ಮನ ಬದಲು ಹುತಾತ್ಮನಾಗಬಹುದು. ಅದು ಇನ್ನೂ ಮೇಲ್ಪಟ್ಟಿದ. ಪದವಿ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ವಯಸ್ಸು ಮೀರಿತು ಅನ್ನುವುದಿದೆ. ಹುತಾತ್ಮನಾಗುವುದಕ್ಕೆ ವಯಸ್ಸು ಮೀರಿತೆಂಬುದಿಲ್ಲ. ಗಾಂಧಿಯನ್ನು ಕೊಂದದ್ದು ಯಾವ ವಯಸ್ಸಿನಲ್ಲಿ? ಆದರೆ ನನ್ನ ಹಂತಕರು ತೀರ ಆಲಸಿಗಳಾಗಿರುವಂತೆ ಕಾಣುತ್ತದೆ.

ಅಮೆರಿಕದ ಮಹರ್ಷಿ ಬೆಂಜಮಿನ್ ಫ್ರಾಂಕ್ಲಿನ್ "ಹತ್ತರಲ್ಲೊಂಭತ್ತು ಜನ ಆತ್ಮಹತ್ಯಾಕಾರಿಗಳು", ಅಂದಿದ್ದಾರೆ. ಈ ಒಂಭತ್ತೂ ಜನ ಆತ್ಮಹತ್ಯಾಕಾರಿಗಳು ಆತ್ಮಹತ್ಯೆ ಮಾಡಿಕೊಂಡರೆ ನಮ್ಮ ಸಂಜಯ ಗಾಂಧಿಗಳಿಗೆ ಏನೂ ಕೆಲಸ ಇರುತ್ತಿದ್ದಿಲ್ಲ. ಆದರೆ ಅವರಲ್ಲಿ ಹೆಚ್ಚಿನವರು ಒಂದೋ ತೀರ ಆಲಸಿಗಳು. ಇಲ್ಲವೇ ನನ್ನ ಹಾಗೆ ತೀರ ಪುರುಸೊತ್ತಿಲ್ಲದವರಾಗಿರುವಂತೆ ಕಾಣುತ್ತದೆ. ಆದ್ದರಿಂದ ಜನಸಂಖ್ಯೆ ಗಮ್ಮತ್ತಿನಿಂದ ಅಭಿವೃದ್ಧಿ ಹೊಂದುತ್ತಾ ಇದೆ.

# ಮಂಗಾಯಣಂ

ಮಂಗಗಳ ಕ್ಷೇಮ ಸಮಾಚಾರ ತೆಗೆದುಕೊಳ್ಳುವವರು ಆಗಿಂದಾಗ್ಗೆ ನಮ್ಮ ಸಂಸತ್ಸಭೆಗಳಲ್ಲಿ ಇದ್ದೇ ಇರುತ್ತಾರೆ. ಪ್ರತಿವರ್ಷ ಮಂಗಗಳ ಆಯಾತ ನಿರ್ಯಾತದ ಬಗ್ಗೆ ಆಸೆಯಿಂದ ಪ್ರಶ್ನೆ ಕೇಳುತ್ತಾರೆ. ಮೊನ್ನೆ ರಾಜ್ಯಸಭೆಯಲ್ಲಿ ಒಬ್ಬ, ಸದಸ್ಯರು ಕೇಳಿದ ಪ್ರಶ್ನೆಗುತ್ತರವಾಗಿ ಕಳೆದವರ್ಷ ಭಾರತದಿಂದ ೧,೩೧,೭೨೧ ಮಂಗಗಳನ್ನು ನಿರ್ಯಾತ ಮಾಡಲಾಯಿತೆಂದು ತಿಳಿಯಿತು. ಭಾರತದಲ್ಲಿ ಏನು ಜರುಗಿದರೂ ಸಹಸಾ ಆಶ್ಚರ್ಯಚಕಿತರಾಗದ ಲಾಂಗೂಲಾಚಾರ್ಯರಿಗೆ ಈ ಸಂಖ್ಯೆಯನ್ನು ನೋಡಿ ನಿಜವಾಗಿ ಆಶ್ಚರ್ಯವಾಯಿತು. ಇಷ್ಟೆಲ್ಲ ಮಂಗಗಳನ್ನು ನಾವು ಹೊರಗೆ ಕಳಿಸುವದು ಯೋಗ್ಯವೆ? ಈ ಮಂಗಗಳಿಂದ ಕಳೆದ ವರ್ಷ ೫೦ ಲಕ್ಷ ರೂಪಾಯಿ ಆದಾಯ ಭಾರತಕ್ಕೆ ಬಂತೆಂದು ಕೇಳಿ ಸ್ವಲ್ಪ ಸಮಾಧಾನ ತಾಳಬಹುದು. ಮಂಗಗಳಿಗೆ ತಲಾ ಸರಾಸರಿ ೩೮ ರೂಪಾಯಿ ಬೆಲೆ ಸಿಕ್ಕಿತೆಂದರೆ ಅಷ್ಟೇನೂ ಕೆಟ್ಟ ಅಲ್ಲ. ಮಂಗನು ಮನುಷ್ಯನ ಪ್ರಪಿತಾಮಹನಲ್ಲವೆ? ನಮ್ಮಲ್ಲನೇಕರು ನಮ್ಮ ಪ್ರಪಿತಾಮಹರನ್ನೇಕೆ, ಮುದಿ ಪಿತಾಮಹರನ್ನು ಕೂಡ ಸಂತೋಷದಿಂದ ಇಷ್ಟು ಬೆಲೆಗೆ ನಿರ್ಯಾತ ಮಾಡಲು ಸಿದ್ಧರಿರಬಹುದು.

* * *

ಆದರೆ ಮಂಗ ನಿರ್ಯಾತದಲ್ಲಿ ಇಷ್ಟೇ ಪ್ರಶ್ನೆ ಅಡಕವಾಗಿಲ್ಲ. ಕೆಲ ಸದಸ್ಯರು ಈ ಬಗ್ಗೆ ಚಿಂತಾಕ್ರಾಂತರಾಗಿದ್ದಾರೆಂದು ಪ್ರಶ್ನೆಗಳಿಂದ ವ್ಯಕ್ತವಾಯಿತು. ಪ್ರಧಾನ ಮಂತ್ರಿಗಳೇ ಈ ಮಂಗಪ್ರಶ್ನೆಯಲ್ಲಿ ಪ್ರವೇಶಿಸಬೇಕಾಯಿತೆಂದಮೇಲೆ ಸಭೆಯ ಭಾವನೆ ಉಗ್ರವಾಗಿದ್ದಿರಬೇಕೆಂದು ಇಷ್ಟು ದೂರದಿಂದ ಕೂಡ ಲಾಂಗೂಲಾಚಾರ್ಯರಿಗೆ ಖಂಡಿತವಾಗಿದೆ. ಯಾಕೆಂದರೆ ತಮ್ಮ ಮಂತ್ರಿಗಳಿಗೆ ಸಭೆಯನ್ನು ಸಮಾಧಾನ ಪಡಿಸುವುದು ಕಷ್ಟವಾದಾಗಲೆಲ್ಲ ಪ್ರಧಾನ ಮಂತ್ರಿಗಳು ಹಗ್ಗಜಗ್ಗಾಟದಲ್ಲಿ ಕೈಕೊಡುವರೆಂದು ಯಾರಿಗೆ ಗೊತ್ತಿಲ್ಲ? ನಿರ್ಯಾತವಾದ ಮಂಗಗಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿದೆಯೆಂದು ಅವರು ಅಧಿಕೃತವಾಗಿ ಸಭೆಗೆ ಭರವಸೆ ಕೊಟ್ಟರು. ಆದರೆ ಸದಸ್ಯರು ಈ ವಿಷಯದಲ್ಲಿ ಅಷ್ಟು ಚಿಂತಿತರಾಗಿದ್ದರೇ? ಆಚಾರ್ಯರ ಮನಸ್ಸಿಗೆ ಹಾಗೆ ಅನಿಸುವುದಿಲ್ಲ. ಮುಖ್ಯ ಪ್ರಶ್ನೆಯೆಂದರೆ ಇಷ್ಟೆಲ್ಲ ಮಂಗಗಳನ್ನು

ನಾವು ಹೊರಗೆ ಕಳಿಸಿದರೆ ನಮಗೆ ಪೂರೈಸಿತೇ? ಕೆಲವರ್ಷಗಳ ಮೇಲೆ ನಮ್ಮ ದೇಶದಲ್ಲಿ ಕಪಿಸಂತತಿ ತೀರ ಇಳಿದು ಹೋದರೇನು ಗತಿ?

* * *

ಈ ದೇಶದಲ್ಲಿ ಒಟ್ಟು ೫ ಕೋಟಿ ಕಪಿಗಳಿರಬೇಕೆಂದು ಅಂದಾಜು ಖಾನೇಶುಮಾರಿ ಇದೆ. ಇದು ವಿಭಜನಾಪೂರ್ವದ ಸಂಖ್ಯೆ. ಇದರಲ್ಲಿ ಪಾಕಿಸ್ತಾನದ ಪಾಲಿಗೆ ಎಷ್ಟು ಹೋಗಿದೆಯೆಂದು ಸರಿಯಾಗಿ ಗೊತ್ತಿಲ್ಲ ಜನಸಂಖ್ಯೆಯ ವಿಭಜನೆಯ ಅಂದಾಜಿನಂತ ಮಂಗವಿಭಜನೆಯನ್ನೂ ಲೆಕ್ಕಿಸಿದರೆ ಕನಿಷ್ಠ ಒಂದು ಕೋಟಿ ಕಪಿಗಳಾದರೂ ಪಾಕಿಸ್ತಾನಕ್ಕೆ ಹೋಗಿರಬೇಕು. ಪಾಕಿಸ್ತಾನದಿಂದ ಮಾನವನಿರಾಶ್ರಿತರು ಭಾರತಕ್ಕೆ ಬಂದಂತೆ ವಾನರ ನಿರಾಶ್ರಿತರು ಬಂದರೆಂದು ಯಾರೂ ಕೇಳಿಲ್ಲ. ಅಂದ ಮೇಲೆ ವಿಭಜನೋತ್ತರ ಕಾಲದಲ್ಲಿ ನಮಗೆ ೪ ಕೋಟಿ ಮಂಗಗಳು ಮಾತ್ರ ಉಳಿದಂತಾಯಿತು. ಭಾರತದಲ್ಲಿ ನರರ ಸಂಖ್ಯೆ ಬೆಳೆದಷ್ಟು ತೀವ್ರವಾಗಿ ವಾನರರ ಸಂಖ್ಯೆ ಬೆಳೆಯುತ್ತಿರುವ ದಾಖಲೆಯಿಲ್ಲ—ಹಲವು ಸರಕಾರಗಳು ಈಗ ನಿರ್ಯಾತಕ್ಕಾಗಿ ಮಾತ್ರವಲ್ಲ, ಕೊಲ್ಲಿಸಲು ಕೂಡ ಮಂಗಗಳನ್ನು ಹಿಡಿಸುತ್ತಿವೆ. ಹೀಗಾಗಿ ವಿಭಜನೆಯಲ್ಲಿ ನಮ್ಮ ಪಾಲಿಗೆ ಬಂದದ್ದಕ್ಕಿಂತ ಇಂದು ನಮ್ಮಲ್ಲಿ ಹೆಚ್ಚು ಮಂಗಗಳಿವೆಯೆಂದು ನಂಬುವುದು ಮಿತಿಮೀರಿದ ಆಶಾವಾದವೇ ಸೈ ವರ್ಷವರ್ಷವೂ ಲಕ್ಷಾಂತರ ಮಂಗಗಳನ್ನು ನಿರ್ಯಾತ ಮಾಡುತ್ತ ಹೋದರೆ ಕಡೆಗೆ ಇಲ್ಲಿ ಮಂಗಗಳ ಅತ್ಯಂತಿಕ ಕೊರತೆಯೆನಿಸಬಹುದು.

* * *

ಏನು ತಪ್ಪಾಯಿತು? ಎಂದು ನೀವು ಸವಾಲು ಹಾಕುತ್ತೀರಿ. ವಿಚಾರ ಅಷ್ಟು ಸುಲಭವಿಲ್ಲ. ನಮ್ಮ ಹಲಕೆಲವು ರಾಜಕಾರಣಿಗಳು ತಮ್ಮ ಕಾಯಕಗಳನ್ನು ಯಾರಿಂದ ಕಲಿಯಬೇಕು ಎಂಬ ಮಹಾ ಪ್ರಶ್ನೆಯನ್ನು ಬದಿಗಿರಿಸಿದರೂ ಬೇರೆ ಹಲವು ಭಾವನಾತ್ಮಕ ಹಾಗು ಆರ್ಥಿಕ ಪ್ರಶ್ನೆಗಳು ಮಂಗಾಭಾವದಿಂದ ಧುತ್ತೆಂದು ಒಮ್ಮೆಲೇ ಎದ್ದುನಿಲ್ಲಬಹುದು. ಮಂಗಗಳು ಈ ದೇಶದ ಮೂಲನಿವಾಸಿಗಳ ಬಳಗದಲ್ಲಿ ಸೇರಿದ್ದು ಈ ನೆಲ ನೀರು ಗಾಳಿಗಳ ಮೇಲೆ—ಮತ್ತು ವೃಕ್ಷಗಳ ಮೇಲೆ—ಅವುಗಳಿಗೆ ಕನಿಷ್ಠ ನಮ್ಮಷ್ಟೇ ಹಕ್ಕು ಇದೆಯೆಂಬ ಮೂಲಭೂತ ನೈತಿಕ ವಿಚಾರವನ್ನು ನಾವು ಅಲ್ಲಗಳೆಯುವಂತಿಲ್ಲ. ನಮಗೂ ಲಂಕಾದ್ವೀಪ ದವರಿಗೂ ಹಿಂದೆ ಯುದ್ಧವಾದಾಗ ವಾನರರು ನಮ್ಮ ಪಕ್ಷದಲ್ಲಿ ನಿಂತು ಹೋರಾಡಿ ಪ್ರಾಣವನ್ನರ್ಪಿಸಿದರೆಂದು ನಾವು ಮರೆತರೆ ಕೃತಘ್ನರಾದೇವು. ಯುದ್ಧಕಾಲದಲ್ಲಿ ಇದಕ್ಕಿಂತಲೂ ಎಷ್ಟೋ ಚಿಕ್ಕ ಉಪಕಾರ ಮಾಡಿದ್ದಕ್ಕಾಗಿ ಬ್ರಿಟಿಷರು ಮುಸ್ಲಿಂಲೀಗಿಗೆ ಪಾಕಿಸ್ತಾನವನ್ನು ಕೊಟ್ಟರೆಂದು ನೆನೆದುಕೊಂಡರೆ ಪ್ರಭುಗಳು ಆಶ್ರಿತರನ್ನು ಹೇಗೆ ನಡೆಸಿಕೊಳ್ಳಬೇಕೆಂಬ ಪಾಠವನ್ನು ನಾವು ಮನಗಾಣಬಲ್ಲೆವು.

ಮಂಗಗಳೊಡನೆ ನಮ್ಮ ಭಾವನಾತ್ಮಕ ಸಂಬಂಧವೂ ಕಡಿಮೆಯದಲ್ಲ. ಅರ್ಜುನನು ಕಪಿಧ್ವಜನಾಗಿದ್ದುದರಿಂದಲೇ ಲೋಕೋತ್ತರವೀರನಾದ ಕರ್ಣನನ್ನು ಕೊಲ್ಲಲು ಅವನಿಗೆ ಸಾಧ್ಯವಾಯಿತು. ಮತ್ತಾವ ಧ್ವಜಕ್ಕೂ ಮಂಗಧ್ವಜದ ಶಕ್ತಿ ಬರಲಾರದು. ಮಂಗಗಳನ್ನು ಭಾರತೀಯ ಸಂಸ್ಕೃತಿಯ ಸಂಕೇತಗಳೆಂದೇ ಹೇಳಬೇಕು. ಮಂಗಗಳು ಸುಲಕ್ಷಣದ ಜೀವಿಗಳೆಂದೊಪ್ಪುವವರು ನಾವು ಮಾತ್ರವಲ್ಲ. ಬ್ರಿಟೀಷ ಸರಕಾರ ಕೂಡ ಒಪ್ಪುತ್ತದೆ. ಸ್ಪೇನ್ ದೇಶದ ತುದಿಯಲ್ಲಿರುವ ಜಿಬ್ರಾಲ್ಟರು ಬ್ರಿಟೀಷರ ವಶದಲ್ಲಿ ಇಂದಿಗೂ ಇದೆಯಷ್ಟೇ. ಅಲ್ಲಿನ ಮಹಾ ಬಂಡೆಗಲ್ಲ ಮೇಲೆ ಒಂದು ಮಂಗಕುಲವಿದೆ. ಇವು ಕಪಿಶೂನ್ಯವಾದ ಯುರೋಪಿನಲ್ಲಿ ಹೇಗೆ ಬಂದವು ಎಂದು ಯಾರಿಗೂ ಗೊತ್ತಿಲ್ಲವಂತೆ. ಆದರೆ ಕೆಲ ವರ್ಷಗಳ ಹಿಂದೆ ಅವುಗಳ ಕುಲ ಕ್ಷಯವಾಗುತ್ತಿರುವುದು ಬ್ರಿಟೀಷ್ ಸರಕಾರದ ಗಮನಕ್ಕೆ ಬಂತು. ಅದು ಗಾಬರಿಯಾಯಿತು. ಜಿಬ್ರಾಲ್ಟರಿನಿಂದ ಮಂಗಸಂತತಿ ಎಂದು ಕಣ್ಮರೆಯಾಯಿತೋ ಅಂದಿಗೆ ಅದರ ಮೇಲಿನ ಬ್ರಿಟೀಷ ಪ್ರಭುತ್ವವೂ ನಾಮಶೇಷವಾಗುವುದೆಂದು ನಂಬಲಾಗಿದೆ. ಸುಮಾರು ೧೦ ವರ್ಷಗಳ ಹಿಂದೆ ಅಲ್ಲಿ ೧೬ ಮಂಗಗಳು ಮಾತ್ರ ಉಳಿದಿದ್ದು ಅವುಗಳನ್ನು ಉಳಿಸಿ ಸಂಖ್ಯೆ ಬೆಳೆಸಲು ಬ್ರಿಟೀಷ್ ಸರಕಾರ ವಿಶ್ವಪ್ರಯತ್ನ ಮಾಡುತ್ತಿದೆಯೆಂದೂ ಅದಕ್ಕಾಗಿ ಪ್ರತಿವರ್ಷ ಸಾವಿರಾರು ಪೌಂಡು ವೆಚ್ಚ ಮಾಡುತ್ತಿದೆಯೆಂದೂ ಕೇಳಿದ್ದೆವು. ನಮ್ಮ ಸರಕಾರವೂ ಇಂಥ ಪ್ರಸಂಗ ತಂದುಕೊಳ್ಳಲಿಚ್ಛಿಸುತ್ತಿದೆಯೆ?

* * *

ನಾವಿಂದು ವನಮಹೋತ್ಸವದಿಂದ ಪ್ರತಿವರ್ಷ ಲಕ್ಷಗಟ್ಟಲೆ ಹೊಸ ವೃಕ್ಷಗಳನ್ನು ನೆಡುತ್ತಿದ್ದೇವೆ. ಕೆ. ಎಂ. ಮುನಶಿಯವರು ಮರವನ್ನು ತಮ್ಮ ಏಳನೇ ಮಗನೆಂದು ಸ್ವೀಕರಿಸಿ ದಂದಿನಿಂದ ಈ ಹತ್ತು ವರ್ಷಗಳಲ್ಲಿ ಸಾವಿರಗಟ್ಟಲೆ ವೃಕ್ಷಗಳು ಪ್ರಾಯಕ್ಕೆ ಬಂದಿರಬೇಕು. ಇವುಗಳಿಗಾಗಿ ಸಾಕಷ್ಟು ಮಂಗಗಳಿವೆಯೋ ಎಂದು ನಾವು ಎಂದಾದರೂ ವಿಚಾರಿಸಿದ್ದೇವೆಯೆ? **"ಪತಿಗಂ ಪತ್ನಿಯೆ ಭೂಷಣಂ, ರಜಕಗಂ ಸುಖ್ಯಾತ ಗಾರ್ಧಭ್ಯ ಸಂತತಿ ತಾಂ ಭೂಷಣ, ರಾಜಕಾರಣಿ ಕುಲಕ್ಕಂ ಸುಳ್ಳೆ ಸಂಭೂಷಣಂ"** ಮತಿಹೀನರ್ಗಧಿಕಪ್ರಸಂಗಮೆ ಗಡಾ ಸೌಭೂಷಣಂ ಮಂಗ ಸಂಗತಿಯೇ ವೃಕ್ಷಕೆ ಭೂಷಣಂ ಹರಹರಾ ಆಗುಂಬೆ ಸೋಮೇಶ್ವರಾ" ಎಂದು ಕವಿ ಹೇಳಿದ್ದು ಸುಮ್ಮನೆ ಅಲ್ಲ. ಮರಗಳನ್ನು ಬೆಳೆಸಿ ಮಂಗಗಳು ಸಾಕಷ್ಟಿಲ್ಲದಾಗುವ ಪರಿಸ್ಥಿತಿಯು ಮನೆಗಳನ್ನು ಕಟ್ಟಿಸಿ ಅದರಲ್ಲಿರಲು ಮನುಷ್ಯರಿಲ್ಲದ ಪರಿಸ್ಥಿತಿಯಷ್ಟೇ ವಿಕಟವೂ ಹಾಸ್ಯಾಸ್ಪದವೂ ಆಗುವುದು. ಅಥವಾ ದೇವರಿಲ್ಲದ ಗುಡಿಯೂ ಸತಿಯಿಲ್ಲದ ಪತಿಯೂ ಮಂಗನಿಲ್ಲದ ಮರವೂ ಒಂದೇ ವರ್ಗಕ್ಕೆ ಸೇರುವುವೆನ್ನಲು ಹಿಂಜರಿಯಬೇಕಾಗಿಲ್ಲ. ನಮ್ಮ ಅರಣ್ಯಗಳು ನಿರ್ಮರ್ಕಟವಾಗುವಂಥ ಪರಿಸ್ಥಿತಿಯನ್ನು ನಾವೆಂದೂ ಸ್ವಾಗತಿಸಲಾರೆವು.

* * *

ಆದರೆ ಕಳೆದವರ್ಷ ಇಲ್ಲಿಂದ ಹೊರಗೆ ಹೋದ ಒಂದು ಲಕ್ಷ ಮೂವತ್ತೆರಡು ಸಾವಿರ ಮಂಗಗಳು ಪರದೇಶಗಳಲ್ಲಿ ಏನು ಮಾಡುತ್ತವೆ? ಪ್ರಧಾನ ಮಂತ್ರಿಗಳು ಕೆಲ ವಿವರಗಳನ್ನು ಕೊಟ್ಟರು. ಅವು ಪೋಲಿಯೋ ಮೊದಲಾದ ಘನರೋಗಗಳಿಗೆ ಪ್ರತಿಕಾರೋಪಾಯ ಕಂಡುಹಿಡಿಯಲು ಸಂಶೋಧಕರಿಗೆ ನೆರವಾಗುತ್ತಿವೆಯಂತೆ. ಇವು ನಮ್ಮ ಮೆಡಿಕಲ್ ರಾಯಭಾರಿಗಳೆಂದರೂ ಸಲ್ಲುವುದು. ಅನೇಕ ದೇಶಗಳಲ್ಲಿ ಬಿದ್ದುಕೊಂಡಿರುವ ನಮ್ಮ ರಾಜಕೀಯ ರಾಯಭಾರಿಗಳಿಗಿಂತಲೂ ಇವು ಚೆನ್ನಾಗಿ ಕೆಲಸ ಮಾಡುತ್ತಿರಬೇಕು. ವಿದೇಶಗಳಿಗೆ ಹೋದ ಭಾರತೀಯರು ನಮ್ಮ ರಾಜಕೀಯ ರಾಯಭಾರಿಗಳನ್ನು ಯಾವಾಗಲೂ ದೂರುತ್ತಿದ್ದರೂ ಮರ್ಕಟ ರಾಯಭಾರಿಗಳ ಮೇಲೆ ಒಮ್ಮೆಯೂ ದೂರುಕೊಟ್ಟಿಲ್ಲೆಂಬುದು ಗಮನಾರ್ಹವಾಗಿದೆ. ಆದರೆ ಮುರಾರ್ಜಿ ದೇಸಾಯಿಯವರು ಒಂದು ಸಂದೇಹಜನಕವಾದ ವಿಚಾರವನ್ನು ಸಭೆಯ ಮುಂದೆ ವಿವರಿಸಿದರು. ಪೊಲೀಯೋ ಮೊದಲಾದ ರೋಗಗಳು ಈಗೀಗ ಹಿಡಿತಕ್ಕೆ ಬರುತ್ತಿರುವುದರಿಂದ ಇನ್ನು ಬಹಳ ವರ್ಷಗಳವರೆಗೆ ಮಂಗಗಳಿಗೆ ಇದೇ ತರದ ಬೇಡಿಕೆ ಉಳಿಯಲಿಕ್ಕಿಲ್ಲ—ಎಂದು. ಮೇಲ್ಗಡೆ ವಿವರಿಸಿದ ಕಾರಣಗಳಿಗಾಗಿ ಮಂಗಕನ್ಸರ್ವೇಷನ್ನಿಗೆ ನಮ್ಮ ಅಖಂಡ ಬೆಂಬಲವಿದ್ದರೂ ಮಂಗಗಳಿಗೆ ಬೇಡಿಕೆ ನಿಂತು ಹೋದ ಮೇಲೆ ಅರ್ಧ ಕೋಟಿ ರೂಪಾಯಿಯಷ್ಟು ವಿದೇಶಿ ವಿನಿಮಯದ ಉತ್ಪನ್ನ ಕಡಿಮೆಯಾದರೆ ಅದನ್ನು ಹೇಗೆ ಎದುರಿಸಬೇಕೆಂದು ಕೃಷ್ಣಮಾಚಾರಿಯವರು ಯೋಚಿಸಿರುವರೆ?

□

# ಕಪ್ಪು ಕಪ್ಪೆಂದೇಕೆ ಬೀಳುಗಳೆವಿರಿ?

ನಮ್ಮೀ ಭಾರತ ಭೂಮಿ ಸ್ವರಾಜ್ಯ ಪಡೆದು ನಲವತ್ತು ವರ್ಷಗಳಾದುವು. ಕೊನೆಯ ಬಿಳಿಯ ಅಧಿಕಾರಿಗಳು ಇಲ್ಲಿಂದ ಕಾಲುಕಿತ್ತು ಮುವ್ವತ್ತೆಂಟು ಮಳೆಗಾಲಗಳಾದವು—ಮಳೆಗಾಲದ ಅಮಾಸೆಯಲಲ್ಲವೇ ಅವರು ತಮ್ಮ ಝಂಡಾ ಇಳಿಸಿ ಇಲ್ಲಿಂದ ಗಂಟು ಮೂಟೆ ಕಟ್ಟಿದ್ದು? ಆದರೆ ಇನ್ನೂ ಬಿಳಿಯರ ಕಲ್ಪನೆಗಳ ಗುಲಾಮಗಿರಿ ನಮ್ಮ ಇದ್ದಬಿದ್ದ ಮಿದುಳನ್ನು ಬಿಟ್ಟು ಹೋಗಿಲ್ಲ. ಇಲ್ಲದಿದ್ದರೆ ಕಪ್ಪು ಕೃಷ್ಣನ ಈ ದೇಶದಲ್ಲಿ ಬಿಳಿ ಬಣ್ಣದ ಹುಚ್ಚು. ಕಪ್ಪು ಬಣ್ಣದ ಬಗ್ಗೆ ರೊಚ್ಚು ಇನ್ನೂ ಅಳುತ್ತಿದೆಯಲ್ಲಾ, ಏನಂತೀರಿ ಇದಕ್ಕೆ?

ಪಾಂಡವರೇ ಕಪ್ಪು ಬಣ್ಣದ ದ್ರೌಪದಿಯನ್ನು ಮಾಡಿಕೊಂಡರು. (ಅವಳು ಕೃಷ್ಣೆ ಅಲ್ಲವೇ?) ಅವರಿಗೆಲ್ಲ ಆ ಬಣ್ಣ ಅತೀವ ಮೆಚ್ಚಿಕೆಯಾಗಿರಬೇಕು. ಇಲ್ಲದಿದ್ದರೆ ಐದೂ ಜನ ಅವಳು ತನಗೆಬೇಕು. ತನಗೆ ಬೇಕು ಎಂದು ತಗಾದೆ ಹಚ್ಚುತ್ತಿದ್ದರೆ? ಕೃಷ್ಣ ಪರಮಾತ್ಮನಿಗೆ ದ್ರೌಪದಿ ಅಷ್ಟು ಪ್ರಿಯ ಭಕ್ತಳಾಗುವುದಕ್ಕೆ ಅವಳೂ ತನ್ನ ಬಣ್ಣದವಳೇ ಆಗಿದ್ದುದು ಒಂದು ಕಾರಣ ಇರಬೇಕು.

ಆದರೆ ನಮ್ಮ ತರುಣರಿಗೆ, ಅದೂ ಹಿರಿಯರು ಹುಡುಕುವುದಾದರೆ, ಬಿಳಿ ಹುಡುಗಿಯರೇ ಬೇಕು. ತಮ್ಮ ಬಣ್ಣ ಇಂಡಿಯನ್ ಇಂಕಿನ ಎಷ್ಟು ಕೋಟಿಂಗ್ ಯುಕ್ತವಾಗಿದ್ದರೆ ಕೂಡ ದೀಪ ನಂದಿಸಿದ ಮೇಲೆ ಎಲ್ಲ ಬಣ್ಣವೂ ಕಪ್ಪೇ ಅನ್ನೋ ಸತ್ಯ ಅವರಿಗೆ ಹೊಳೆಯುವುದಿಲ್ಲ.

ದಕ್ಷಿಣದವರು ನಮ್ಮೀ ಭಾರತ ಭೂಮಾತೆಯ ಪ್ರಧಾನಮಂತ್ರಿ ಈವರೆಗೂ ಆಗದೆ ಇರೋದಕ್ಕೆ ದಕ್ಷಿಣದವರು ಕಪ್ಪಾಗಿರೋದೇ ಕಾರಣವಿರಬೇಕೆಂದು ನನಗೆ ಸಾಧಾರಣ ಅನುಮಾನ ಇದೆ. ಸ್ವತಃ ಕಾಮರಾಜರು ಉತ್ತರ ಪ್ರದೇಶದವರಲ್ಲದೆ ಯಾರೂ ಈ ದೇಶದ ಪ್ರಧಾನಮಂತ್ರಿಯಾಗಲಾರರು ಅನ್ನುತ್ತಿದ್ದರಂತೆ. ಮತ್ತೆ ಕಾಮರಾಜರು ಗ್ಯಾರಂಟಿ ಕಪ್ಪಿನವರು. ನೆಹರೂ ಕುಲದ ಮೂರನೇ ತಲೆಗೆ ಪ್ರಧಾನಿತ್ವದ ಮುಕುಟ ಏರಲಿಕ್ಕೆ ಈ ವರ್ಣಭ್ರಾಂತಿ ಮುಖ್ಯ ಕಾರಣವಲ್ಲದಿದ್ದರೆ ಮತ್ತೇನು ಎಂದು ಯಾರಾದರೂ ಹೇಳಲಿ! ರಾಜೀವ ಗಾಂಧಿ ಇಟೆಲಿಯ ಹುಡುಗಿಯನ್ನು ಮಾಡಿಕೊಂಡಿದ್ದರಿಂದ ಮುಂದಿನ ಪ್ರಧಾನಮಂತ್ರಿ ಇನ್ನಷ್ಟು ಬಿಳಿಯಾಗಿರುವುದು ನಿಶ್ಚಿತವಾಗಿದೆ.

ಯಾಕೆ ಬಂತೂ ಅಂದರೆ, ನಮ್ಮೀ ಹೊಸ ಪ್ರಧಾನಮಂತ್ರಿ ಅಧಿಕಾರಕ್ಕೆ ಬಂದು ಇನ್ನೂ ಕುರ್ಚಿ ಸರಿಯಾಗಿ ಬೆಚ್ಚಗಾಗಿಲ್ಲ. ಕಪ್ಪು ಹಣದ ಮೇಲೆ ಧಾಳಿ ಆರಂಭಿಸಿ ಹಣಪ್ರಪಂಚದಲ್ಲಿ ಕೂಡ ವರ್ಣದ್ವೇಷದ ಬೀಜ ಬಿತ್ತುತ್ತಿದ್ದಾರೆ. ಕಪ್ಪು ಪೇಟೆಯನ್ನು ಮಟ್ಟಹಾಕುವ ಇರಾದೆಯೂ ಅವರಿಗುಂಟಂತೆ. ಇದು ಉತ್ತರದ ಆರ್ಯರ ಪ್ರಭುತ್ವವನ್ನು ವಿಸ್ತರಿಸಿ ಹಿಡಿತ ಬಿಗಿ ಮಾಡುವುದಕ್ಕೆ ಮಂಗಳಾಚರಣೆ ಅಥವಾ ಅಮಂಗಳಾಚರಣೆ ಎಂದು ಭಾವಿಸುವುದು ತರ್ಕಬದ್ಧವಾಗಿದೆ. ದಕ್ಷಿಣದ, ಪೂರ್ವದ ಎಲ್ಲ ಕೇಡುಗಳ ಕಪ್ಪು ಜನರು ಕಣ್ಣು ತಿಕ್ಕಿಕೊಂಡು ಎದುರುನಿಲ್ಲಬೇಕಾದ ಸನ್ನಿವೇಶ ಒದಗಿದೆ.

ನಮ್ಮ ಹಣಕ್ಕೆ ರೂಪಾಯಿ ಎಂದು ಹೆಸರಿರುವುದರಿಂದ ಅದು ಬಿಳಿದೇ ಇರಬೇಕೆಂಬುದು ಈ ಮಡಿವಂತರ ಹೇಳಿಕೆಯೇ? ರೂಪ್ಯ ಎಂದರೆ ಬೆಳ್ಳಿ, ಬೆಳ್ಳಿ ಎಂದರೆ ಬಿಳಿ ಸೈ. ಆದರೆ ಬೆಳ್ಳಿ ರೂಪಾಯಿಯನ್ನು ನಮ್ಮ ಪ್ರಮಾಣಿತ ನಾಣ್ಯವಾಗಿ ಮಾಡಿದವರು ಭಾರತೀಯರಲ್ಲ. ೧೬ನೇ ಶತಮಾನದ ಮುಸಲ್ಮಾನ ಸಿಂಹಾಸನಾಪಹಾರಕ ರಾಜನಾದ ಶೇರ್‌ಶಾಹನೆಂದು ಇವರಿಗೆ ನೆನಪಿಸಬೇಕಾಗಿದೆ. ಬಿಳಿಯರಿಗೆ ಇದು ತಮ್ಮ ಬಣ್ಣದ ಸಂಕೇತವಾಗಿದ್ದುದರಿಂದ ಅದನ್ನು ಹಾಗೆಯೇ ಮುಂದುವರಿಸಿದರು. ಆದರೂ ವರ್ಣದ್ವೇಷಗಳಲ್ಲದ ಬಂಗಾಲಿಗಳು ಇದನ್ನು ರುಪಾಯಿಯೆಂದು ಕರೆಯಲೇ ಇಲ್ಲ. 'ಟಾಕಾ' ಅಂದರೆ ಟಂಕ ಹೊಡೆದದ್ದು ಎಂಬ ಸಾರ್ಥಕ ಹೆಸರನ್ನೇ ಅದಕ್ಕೆ ಇಟ್ಟರು.

ತಮಾಷೆಯೆಂದರೆ ಬೆಳ್ಳಿಯಲ್ಲಿ ಟಂಕ ಹೊಡೆಯುತ್ತಿದ್ದ ರೂಪಾಯಿಯನ್ನು ಬೆಳ್ಳಿಯ ಸಂದು ಕೂಡ ಮುಟ್ಟದಂತೆ ನಿಕೆಲ್ ಸಂಮಿಶ್ರ ಲೋಹದಲ್ಲಿ ತಯಾರು ಮಾಡುತ್ತಿರುವ ಜನರೇ ಈಗ ಕಪ್ಪು ಹಣದ ವಿರುದ್ಧ ಕತ್ತಿ ಕಟ್ಟುತ್ತಿರುವುದು, ಜನರ ಕೈಸೇರಿದ ಕೆಲ ದಿನಗಳಲ್ಲೇ ಮಸುಕಾಗಿ ಕಪ್ಪಿಗೂ ಬಿಳಿಗೂ ನಡುವಣ ಒಂದು ಅನಿಶ್ಚಿತ ಬಣ್ಣಕ್ಕೆ ತಿರುಗುವ ನಿಮ್ಮ ರೂಪಾಯಿಗೇ ಕಪ್ಪು ಹಣವಲ್ಲದಿದ್ದರೂ ಮುಚ್ಚಂಜೆ ಹಣ—ಬೇಗನೇ ಪೂರ್ಣ ಕಪ್ಪುತನಕ್ಕೆ ತಿರುಗುವ ಹಣ. ನೀವು ಅಚ್ಚಿಸುತ್ತಿರುವ ಕಾಗದದ ರೂಪಾಯಿ ಬಿಳಿ ಕಾಗದವನ್ನು ಕಪ್ಪು ಮಾಡಿದ್ದೇ ಅಲ್ಲವೇ? ಈಗಂತೂ ಈ ಹಣವೂ ಜನರ ಕೈ ತಾಗಿ ತಾಗಿ ಪೂರಾ ಕಪ್ಪಾಗಿ ಅದರ ಮೇಲಿನ ಮುದ್ರಣದ ಗುರುತೂ ಹತ್ತದ ಹಾಗಾಗಿದೆ. ಸ್ವಾಮೀ, ಕಪ್ಪು ಹಣದ ಮೇಲೆ ಕೈ ಎತ್ತುವ ಮುಂಚೆ ನೀವು ಸಾಚಾ ಬೆಳ್ಳಿಯಲ್ಲಿ ನಮ್ಮ ಚಕ್ರವರ್ತಿನಿಯಾಗಿದ್ದ ವಿಕ್ಟೋರಿಯಮ್ಮನಂತೆ ಬಿಳಿ ರೂಪಾಯಿ ಟಂಕ ಹೊಡೆಯಿರಿ.

ಅಹೋ ರಾಜೀವ ಗಾಂಧೀ ಮಹಾಭಾಗರೇ, ಪ್ರಪಂಚದಲ್ಲಿ ಹಣವೆಂಬುದು ಬಣ್ಣಗುರುಡು ಪದಾರ್ಥವಲ್ಲವೆ? ಬಿಳಿ ಹಣವೆಂಬುದು ಬೇರೆ ಉಂಟೇ? ಹಣವೆಂದರೆ ಹಣ; ಅದರಲ್ಲಿ ಬಿಳಿಕಪ್ಪು ಬೇರೆ ಇಲ್ಲ. ನೀವು ಹೀಗೆ ವರ್ಣಭೇದ ಮಾಡುವುದಾದರೆ ಕೆಂಪು ಹಣ, ಹಳದಿ ಹಣ. ಹಸುರು ಹಣ ಎಂದೆಲ್ಲ ಮಾಡಬೇಕಾದೀತು. ಅಮೇಧ್ಯಾದಪಿ ಕಾಂಚನಮ್, ಸ್ತ್ರೀ-ರತ್ನಂ ದುಷ್ಕುಲಾದಪಿ ಹೆಣ್ಣು ಎಲ್ಲಿ ಹುಟ್ಟಿದರೂ ಶುದ್ಧಳೇ. ಹಣ ಹೇಗೆ ಬಂದರೂ ಶುದ್ಧವೇ. ಇದು ನಾನು ಹೇಳುವುದಲ್ಲ. ಪ್ರಾಚೀನ ಮುನಿಗಳೇ ಅಪ್ಪಣೆ ಕೊಡಿಸಿದ್ದು.

ನನಗೆ ಗೊತ್ತು, ನೀವೂ ನಿಮ್ಮ ಟ್ಯಾಕ್ಸ್ ಹೌಂಡುಗಳೂ ಕೊಡುವ ಕಪ್ಪು ಹಣದ ಡೆಫಿನಿಶನ್ ತೆರಿಗೆ ತಪ್ಪಿಸಿದ ಹಣವೇ ಕಪ್ಪು ಹಣ—ಅಂತ. ನಾನು ಹೇಳುತ್ತೇನೆ—ನಿಮ್ಮ ಅಮರೀಭೂತ ಮಾತೋಶ್ರೀಯವರ ಒಂದು ಮಾತನ್ನು ಎರವಲು ತೆಗೆದುಕೊಂಡು—ತೆರಿಗೆ ತಪ್ಪಿಸುವುದು ವರ್ಲ್ಡ್‌ವೈಡ್ ಫಿನಾಮಿನನ್, ಅರ್ಥಾತ್ ಜಗದ್ಭರಿತ ವಿಷಯ ಅಂತ. ಜಗತ್ತಿನಲ್ಲೆಲ್ಲ ಇರುವಂಥಾದ್ದು ಕಪ್ಪು ಹೇಗಾದೀತು. ಅದೂ ಅಲ್ಲದೆ ನಿಮ್ಮ ಖ್ಯಾತ ತಾಯಮ್ಮನವರು ಕಪ್ಪು ಹಣವನ್ನು ಬಿಳಿದು ಮಾಡುವ ಒಂದು ಯಜ್ಞವನ್ನು ಕೂಡ ಮಾಡಿದ್ದರು—ಪುರಾತನ ಪುರೋಹಿತರು ಅನಾರ್ಯರನ್ನು ಆರ್ಯರನ್ನಾಗಿ ಮಾಡುವುದಕ್ಕೆ ಆರ್ಯಷ್ಟೋಮವೋ ಮತ್ತೆ ಯಾವುದೋ ಸತ್ರವನ್ನು ಮಾಡುತ್ತಿದ್ದರಂತಲ್ಲ—ಹಾಗೆ. ಕುರ್ವಂತೋ ವಿಶ್ವಮಾರ್ಯಮ್. ದಕ್ಷಿಣೆ ಕೊಟ್ಟುಬಿಟ್ಟರೆ ಕಪ್ಪು ಇದ್ದದ್ದೆಲ್ಲ ಬಿಳಿಯದು ಅಂತ ನಿಮ್ಮ ತೆರಿಗೆ ಇಲಾಖೆಯವರು ಸರ್ಟಿಫೈ ಮಾಡುತ್ತಾರೆ ಎಂದಲ್ಲವೇ ನೀವು ಹೇಳೋದು? ಆದರೆ ಎಲ್ಲ ಅನಾರ್ಯರೂ ಆರ್ಯರಾಗಲಿಕ್ಕೆ ಮುಂದೆ ಬರಲೂ ಇಲ್ಲ, ಎಲ್ಲ ಕೃಷ್ಣವಿತ್ತದವರು ತಮ್ಮ ಕಪ್ಪು ನಾಯಿಗಳನ್ನು ಬಿಳಿಯದಾಗಿ ಮಾಡಿಸಿಕೊಳ್ಳಲೂ ಸಾಧ್ಯವಿಲ್ಲ. ಅವರಿಗೆ ತಮ್ಮ ಹಣದ ಬಣ್ಣದ ಬಗ್ಗೆ ಎಷ್ಟು ಆತ್ಮಸಂತುಷ್ಟಿ ಇರುವಾಗ ನೀವಾರಯ್ಯ ಅದಕ್ಕೆ ವೈಟ್ ವಾಶ್ ಕೊಡುತ್ತೇವೆನ್ನುವವರು?

ಒಂದು ವೇಳೆ ನಿಮ್ಮ ದಾಳಿಗಳು ಯಶಸ್ವಿಯಾಗಿ ಕಪ್ಪು ಹಣವೆಲ್ಲ ಹೊರಗೆ ಬಂತೆಂದು ಇಟ್ಟುಕೊಳ್ಳೋಣ. ಅದರಿಂದ ಹುಟ್ಟುವಳಿಯಾದ ತೆರಿಗೆ ಎಷ್ಟು ಆಗಾಧವಾದೀತೆಂದರೆ ನಿಮ್ಮನ್ನು ಒಳಗೊಂಡು ಇಡೀ ದೇಶವೇ ಆ ಮಹಾಪೂರದಲ್ಲಿ ಕೊಚ್ಚಿಕೊಂಡು ಹೋದೀತು. ಅರಬ್ಬೀ ಸಮುದ್ರ ಮತ್ತು ಬಂಗಾಳಕೊಲ್ಲಿಯ ಮಟ್ಟ ಕೆಲವು ನೂರು ಅಡಿ ಏರಿಬಿಟ್ಟು ಹಣ ಪ್ರಳಯವಾದೀತು. ನಿಮ್ಮ ಸರಕಾರದಲ್ಲಿಯೂ ಕಾರ್ಪೊರೇಷನ್ನುಗಳಲ್ಲಿಯೂ ಇರುವ ನೀರಡಿಸಿದ ಅಗಸ್ತ್ಯರೆಲ್ಲ ಸೇರಿ ಕುಡಿದರೂ ಈ ಸಮುದ್ರ ಇಂಗಲಾರದು.

ಅಲ್ಲಾ ನಿಮ್ಮ ತಲೆಯಲ್ಲಿ ಈ ಕಪ್ಪು ಹಣದ ಗುಂಗೀಹುಳ ಯಾಕೆ ಹೊಕ್ಕಿದೆ—ಅಂತ? ನೀವು, ನಾವು, ತಿಮಿಂಗಿಲಗಳು, ಬಂಗುಡೆಗಳು, ಶಾರ್ಕುಗಳು, ಶ್ರೀಪುಗಳು—ಎಲ್ಲರೂ ಈ ಕಪ್ಪು ಸಮುದ್ರದಲ್ಲಿ ಸುಖವಾಗಿ ಬದುಕೋದಿಕ್ಕೆ ಅಭಿವೃದ್ಧಿ ಹೊಂದೊದಕ್ಕೆ ಕಲಿತಿದ್ದೀವಲ್ಲ? ಈ ಕಪ್ಪು ಹಣವನ್ನೆಲ್ಲ ಯಾಕೆ, ಅದರ ಒಂದಂಶವನ್ನು ನೀವು ಕದಾಚಿತ್ ಇಂಗಿಸಲು ಸಮರ್ಥರಾದರೂ ನಮ್ಮ ದೇಶದಲ್ಲಿ ಸತ್ಕರ್ಮಗಳೆಲ್ಲ ನಿಂತು ಹೋಗುವುದು ಖಂಡಿತ. ದೇವರುಗಳ ಹುಂಡಿಗಳಿಗೆ ಬಂಡಲ್ ಗಟ್ಟಲೆ ನೋಟುಗಳು ಬಂದು ಬೀಳುವುದು ಸಾಧ್ಯವೆ? ನಮ್ಮ ಸಾಧುಗಳಿಗೆ, ಸಂನ್ಯಾಸಿಗಳಿಗೆ, ವಿರಕ್ತರಿಗೆ, ಬ್ರಹ್ಮಚಾರಿಗಳಿಗೆ, ಮಹರ್ಷಿಗಳಿಗೆ, ಆಧ್ಯಾತ್ಮಿಕರಿಗೆ, ಸ್ವಾಮಿಗಳಿಗೆ, ಯೋಗಿಗಳಿಗೆ ಜೋಳಿಗೆ ತುಂಬುವುದು ಹೇಗೆ? ನಮ್ಮ ದೇವಾಲಯಗಳು ಜೀರ್ಣೋದ್ಧಾರವಾಗುವುದು ಹೇಗೆ? ಚರ್ಚುಗಳು ಮಸೀದಿಗಳು ತಲೆಯೆತ್ತುವುದು ಹೇಗೆ? ನಮ್ಮ ಹಳ್ಳಿಪಳ್ಳಿಗಳಲ್ಲಿ, ನಗರ ಪಟ್ಟಣಗಳಲ್ಲಿ, ಗುಡ್ಡ ಬೆಟ್ಟಗಳಲ್ಲಿ ಇದ್ದ ದೇವರ ಮನೆಗಳೆಲ್ಲ ಈ ಕಪ್ಪು ಹಣದಿಂದಲ್ಲವೇ ಈಗ ಎರಡು ಹೊತ್ತು ಪೂಜೆ,

ಶಂಖ, ಜಾಗಟೆ, ನಗಾರಿ, ರಥ, ಪಲ್ಲಕಿ, ಉತ್ಸವ ಉಪಚಾರ ಕಾಣುತ್ತಿರುವುದು? ಗಾಂಧೀ ಮಹಾಭಾಗರೇ, ನೀವು ಈಚೆಗೆ ತಾನೆ ಕಣ್ಣು ಬಿಟ್ಟಿದ್ದೀರಿ. ಮೂವತ್ತರ ದಶಕದಲ್ಲಿ ಎಲ್ಲಾ ಹಣ ಬಿಳಿದಾಗಿದ್ದಾಗ ಈ ಮಠ ದೇವಾಲಯ ದೇವರ ಮನೆಗಳು ಇದ್ದ ಪರಿಯನ್ನು ನೀವು ನೋಡಿಲ್ಲ. ನಾನೂರು ವರ್ಷ ಹಿಂದೆ ಇದ್ದ ಪುರಂದರದಾಸರು "ಧರ್ಮಕ್ಕೆ ಕೈ ಬಾರದೀ ಕಾಲ" ಎಂದೂ "ಚಿಲುಕ ಅಲ್ಲಾಡುತಿದೆ ನೋಡಿ" ಎಂದೂ ಹಾಡಿ ಹಾಡಿ ಅತ್ತಾಗ ಕೂಡ ಬಿಳಿ ಹಣವೇ ಇದ್ದದ್ದರಿಂದ ಆ ಅವಸ್ಥೆ ಬಂದಿತ್ತು. ದಾಸರು ಇಂದು ಇರಬೇಕಾಗಿತ್ತು. ಇಂದು ಧರ್ಮಕ್ಕೆ ಬೇಕಾದಷ್ಟು ಕೈ ಬರುತ್ತಿದೆ ನೋಡಿ. ಪ್ರತಿಯೊಂದು ದೇವಾಲಯದಲ್ಲಿರುವ ಧ್ವನಿವರ್ಧಕಗಳು ಧರ್ಮದ ಈ ಉಚ್ಛ್ರಾಯವನ್ನು ಊರೇ ಕೇಳು ದೇಶವೇ ಕೇಳು ಎಂದು ಸಾರಿ ಸಾರಿ ಕೂಗುತ್ತಿವೆ. 'ಕೃಷ್ಣವರ್ಣಂ ಕಲೌ' ಕಲಿ ಕಾಲದಲ್ಲಿ ಕಪ್ಪು ಬಣ್ಣವೇ ತಾರಕ ಎಂದು ಪುರಾಣದಲ್ಲಿ ಹೇಳಿದ ಭವಿಷ್ಯ ಸತ್ಯವಾಗಿದೆ.

ಈಶ ಸೇವೆಯನ್ನು ಧಾರಾಳವಾಗಿ ಮಾಡುತ್ತಿರುವ ಕಪ್ಪು ಹಣ ದೇಶ ಸೇವೆ ಸಮಾಜ ಸೇವೆಯನ್ನು ಕೈಬಿಟ್ಟೀತೆ? ನಮ್ಮ ದೇಶಭಕ್ತರ ತಲೆ ಮೈಗಳನ್ನು ಬಿಳಿ ಬಟ್ಟೆ ಆಚ್ಛಾದಿಸಿರುವಾಗ ಹೊಟ್ಟೆಯೊಳಗಿರುವುದೆಲ್ಲ ಕಪ್ಪು ಹಣದ ಔದಾರ್ಯದ ಫಲವಲ್ಲವೇ? ನಾಳೆ ಕಪ್ಪು ಹಣಕ್ಕೆ ಬರಗಾಲ ಬಂದರೆ ಸೇವೆ ಮಾಡುವವರು ಯಾರು?

ಸ್ಟಾಲಿನ್ನನ ಊಟದ ಮೇಜಿಗೆ ವ್ಯವಸ್ಥಿತವಾಗಿ ಇಡಿ ಇಡೀ ಹಂದೀಮರಿಗಳೇ ಬರುತ್ತಿದ್ದುದರಿಂದ ದೇಶದಲ್ಲಿ ಬರಗಾಲವೇ ಇರಲಿಲ್ಲ ಎಂಬ ಭಾವನೆ ಅವನಿಗಾಗಿತ್ತಂತೆ. ನಿಮಗೂ ದಿನವೂ ಮಡಿಮಾಡಿದ ಬಿಳೀ ಬಟ್ಟೆ ಬರುತ್ತಿರುವುದರಿಂದ ದೇಶವೆಲ್ಲ ಬಿಳಿದು ಎಲ್ಲೋ ಚಾರು ಚೂರು ಕಪ್ಪು ಇದೆ ಎಂಬ ತಿಳಿವಳಿಕೆ ಇರಬಹುದು. ಅದನ್ನು ಸುಲಭದಲ್ಲಿ ತೊಡೆದು ಹಾಕುತ್ತೇನೆಂದು ಕೊಂಡಿರಬಹುದು. ಕತ್ತಲಾದ ಮೇಲೆ ಆಕಾಶ ನೋಡಿ ಕತ್ತಲಿನ ಅಗಾಧ ರಾಶಿಯಲ್ಲಿ ಬಿಳೀ ನಕ್ಷತ್ರಗಳು ಆವರಿಸಿರುವ ಸ್ಥಳ ಎಷ್ಟು? ಹಾಗೆಯೇ ಈ ದೇಶದ ಕಪ್ಪು ಹಣದ ಮಹಾಪಟದ ಮೇಲೆ ಬಿಳಿ ಹಣದ ಚುಕ್ಕಿಗಳು ಅಲ್ಲೊಂದಿಲ್ಲೊಂದು ಇರೋದು. ಇನ್ನು ಕೆಲ ವರ್ಷಗಳಲ್ಲಿ ಬಿಳೀ ಹಣವನ್ನು ಹುಡುಕಿ ತೆಗೆಯೋಕೆ ಇಲೆಕ್ಟ್ರಾನ್ ಮೈಕ್ರೊಸ್ಕೋಪುಗಳು ಬೇಕಾಗುತ್ತವೆ. ಅವುಗಳಿಗಾಗಿ ಈಗಲೇ ಆರ್ಡರು ಕೊಟ್ಟುಬಿಡಿ.

ಆವರೆಗೆ ಈ ಕಪ್ಪು ಹಣದ ಜೇನು ಹುಟ್ಟಿಗೆ ಕೋಲು ಹಾಕಲು ಹೋಗಬೇಡಿ. ಮುಂಬರುವ ದಿನಗಳಿಗಾಗಿ ನಾನು ನಿಮಗೆ ಕೆಲ ಘೋಷಣೆಗಳನ್ನು ಕೊಡುತ್ತೇನೆ:

* ಕಪ್ಪು ಕಪ್ಪೆಂದೇಕೆ ಬೀಳುಗಳೆವಿರಿ ಬೆಪ್ಪುತಕ್ಕಡಿ ಗಾವಿಲರೇ!
* ವಿಶ್ವದಲ್ಲಿರುವುದೆಲ್ಲ ಕಪ್ಪು!
* ಕಪ್ಪೇ ಬಿಳಿದು ಬಿಳಿದೇ ಕಪ್ಪು!
* ಕಪ್ಪೇ ಸುಂದರ, ಕಪ್ಪೇ ಬಂಧುರ!
* ಕಪ್ಪಿಲ್ಲ ಬಿಳುಪಿಲ್ಲ, ಹಣವೆಂದರೆ ಹಣ!

□

# ಯದ್ವಾತದ್ವಾ ಯೆಂಕಣ್ಣಯ್ಯನವರು

ನೀವು ಯದ್ವಾತದ್ವಾ ಯೆಂಕಣ್ಣಯ್ಯನವರನ್ನು ನೋಡಿರುವ ಸಂಭವ ಬಹಳ ಕಡಿಮೆ. ತಪ್ಪು ಅವರದಲ್ಲ. ನಿಮ್ಮಲ್ಲಿ ಹೆಚ್ಚಿನವರು ತೀರ ತಡವಾಗಿ ಹುಟ್ಟಿದ್ದೀರಿ. ಅವರೇ ತಡವಾಗಿ ಹುಟ್ಟಬೇಕಾಗಿತ್ತು ಅನ್ನಬೇಡಿ. ಮೊದಲನೆಯದಾಗಿ, ಅವರನ್ನು ನೋಡಬೇಕೆಂಬವರು ಅವರ ಸೌಕರ್ಯ ನೋಡಿಕೊಂಡು ಹುಟ್ಟಬೇಕೇ ಹೊರತು ಅವರೇ ನಿಮ್ಮ ಪುರುಸೊತ್ತು ನೋಡಿಕೊಂಡು ಅವತರಿಸಬೇಕೆಂದು ನಿರೀಕ್ಷಿಸುವುದು ಶಿಷ್ಟಾಚಾರವಲ್ಲ. ಎರಡನೆಯದಾಗಿ, ಯೆಂಕಣ್ಣಯ್ಯನವರು ನಿಮಗೋಸ್ಕರ ಎರಡೋ ಮೂರೋ ದಶಕ ತಡಮಾಡಿ ಹುಟ್ಟಿದ್ದರೆ ಅವರು "ಯದ್ವಾತದ್ವಾ" ಆಗಿ ರೂಪುಗೊಳ್ಳುವ ಸಂಭವ ಇರಲಿಲ್ಲ. ಪ್ರತಿಯೊಂದು ಜೀನಿಯಸ್ಸೂ ತನ್ನ ಕಾಲಕ್ಕೇ ಅವತರಿಸುತ್ತದೆ; ಆ ಕಾಲ ತಪ್ಪಿದರೆ ಆ ಜೀನಿಯಸ್ಸು ಆ ಸ್ವರೂಪ ಹೊಂದುವುದಿಲ್ಲ. ಜೀನಿಯಸ್ಸು ಕಾಲದ ಮಗು. ನೀವು ನಾವು ಮಾತ್ರ ಯಾವ ಕಾಲದಲ್ಲಿ ಹುಟ್ಟಿದರೂ ಅಷ್ಟೆ, "ಪುಟ್ಟವೇ ಸಾಯವೇ ಜಗದೊಳ್ ಅತ್ತಿಯಪ್ಪಣ್ಣೊಳ್ ಎನಿತ್ತೊ ಜಂತುಗಳ್?"

ಎಲ್ಲ ಜೀನಿಯಸ್ಸುಗಳ ಹಾಗೆ ಯೆಂಕಣ್ಣಯ್ಯನವರೂ ಸರಿಯಾದ ಕಾಲ ನೋಡಿ ಮಾತ್ರವಲ್ಲ, ಸರಿಯಾದ ಅಜ್ಜನನ್ನು ನೋಡಿ ಹುಟ್ಟಿದ್ದರು. ಅವರ ಅಜ್ಜ—ಅಂದರೆ ತಾಯಿಯ ತಂದೆ—ವಿದ್ವಾಂಸರಾದರೂ ಹಣವನ್ನು ಹೇಗೆ ಮಾಡಬೇಕೆಂದಲ್ಲದೆ ಹೇಗೆ ಕೂಡಿಡಬೇಕೆಂದೂ ಬಲ್ಲವರು. "ವೇದಾಂತದಿಗ್ಗಜ", "ತರ್ಕತ್ರಿಣೇತ್ರ", "ಮೀಮಾಂಸಾ ಲವಣಾರ್ಣವ" ಮೊದಲಾದ ಬಿರುದುಗಳಿಂದ ಭೂಷಿತರಾದ ಪ್ರದ್ಯುಮ್ನ ಭಟ್ಟೋಪಾಧ್ಯಾಯರು ಅರ್ಧ ಡಜನ್ ರಾಜಸಭೆಗಳಲ್ಲಿ ಸಭಾಭೂಷಣರಾಗಿ ಕನಕಾಭಿಷೇಕ ಮಾಡಿಸಿಕೊಂಡಿದ್ದವರು. ತಮ್ಮ ಎಂಬತ್ತು ವರ್ಷಗಳ ಜೀವಮಾನದಲ್ಲಿ ಸಾವಿರಾರು ಶಿಷ್ಯರಿಂದ ಅವರು ಪಡೆದಿದ್ದ ಗುರುದಕ್ಷಿಣೆ ಕೂಡ ಸ್ವಲ್ಪವಾಗಿರಲಿಲ್ಲ. ಅವರು ತಮ್ಮ ಮನೆಯಲ್ಲೇ ಉಂಡದ್ದನ್ನು ಯಾರೂ ನೋಡಿರಲಿಲ್ಲ. ಯಾವಾಗಲೂ ಅವರಿಗೆ ಭೋಜನ ಆಮಂತ್ರಣ ಇದ್ದೇ ಇರುತ್ತಿತ್ತು. ದಾನವಾಗಿ ಬಂದ ಒಂದು ಮಾವಿನಹಣ್ಣು, ಎಳನೀರನ್ನು ಕೂಡ ಮನೆಗೆ ಒಯ್ಯದೆ ಅಂಗಡಿಗೆ ಹಾಕಿ ಒಂದೆರಡು ಕಾಸು ತೆಗೆದುಕೊಂಡು ಕಿರುವಂಟಿಗೆ ಸೇರಿಸಿದವರಂತೆ. ಸಾಲವಾಗಿ ಹೊರತು ಯಾರಿಗೂ ಅವರು ಒಂದು ಕಾಸು ಕೊಟ್ಟದ್ದನ್ನೂ ನೋಡಿದವರಿರಲಿಲ್ಲ;

ಚೊಕ್ಕ ಬಂಗಾರ ಒತ್ತೆ ಇಟ್ಟುಕೊಳ್ಳದೆ ಯಾರಿಗಾದರೂ ಸಾಲ ಕೊಟ್ಟದ್ದೂ ಇರಲಿಲ್ಲ ಅವರು. ಇಂದಿನಂತೆ ಸಾಲ ಮುಳುಗಿಸುವ ಕಾನೂನುಗಳು ಆಗ ಇರಲಿಲ್ಲವೆಂದು ನೀವು ನೆನಪಿಡಬೇಕು. ಅದಕ್ಕೇ ನಾನು ಹೇಳುವುದು—ಜೀನಿಯಸ್ಸು ಕಾಲದ ಮಗು ಅಂತ.

ಭಟ್ಟೋಪಾಧ್ಯಾಯರಿಗಿದ್ದವಳು ಒಬ್ಬಳೇ ಮಗಳು. ಅದೂ ತಡವಾಗಿ ಹುಟ್ಟಿದವಳು. ಅವಳಿಗೂ ತಡವಾಗಿ ಒಬ್ಬ ಮಗನಾದ ಕೂಡಲೆ ಓಲೆಭಾಗ್ಯ ಕಳೆದುಹೋಗಿತ್ತು. ಈ ಪುತ್ರೋತ್ತಮನಿಗೆ ಚಿಗುರುಮೀಸೆ ಒಡೆಯುವಾಗ ಪ್ರದ್ಯುಮ್ನ ಭಟ್ಟೋಪಾಧ್ಯಾಯರು ಇಹಲೋಕವ್ಯಾಪಾರವನ್ನು ಪರಿಸಮಾಪ್ತಿ ಮಾಡಿದರು. ಹೀಗೆ ಹದಿನೆಂಟನೇ ವಯಸ್ಸಿಗೆ ಒಂದು ಲಕ್ಷ ಮೇಲ್ಪಟ್ಟ ಸಂಪತ್ತಿಗೆ ಉತ್ತರಾಧಿಕಾರಿಯಾದವರೇ ನಮ್ಮ ಯೆಂಕಣ್ಣಯ್ಯನವರು. ಒಂದು ಲಕ್ಷ ಏನು ಮಹಾ? ಅಂತ ಅಲಕ್ಷ್ಯ ಮಾಡಬೇಡಿ. ಅದು ಈಗಿನ ಕಾಗದದ ಹಣವಲ್ಲ. ಬಂಗಾರದ ಆಧಾರವಿಲ್ಲದೆ ನೋಟುಗಳನ್ನು ಹ್ಯಾಂಡ್‌ಬಿಲ್ಲುಗಳ ಹಾಗೆ ಮುದ್ರಿಸಲು ಸಾಧ್ಯವುಂಟೆಂದು ತಿಳಿದುಕೊಳ್ಳುವಷ್ಟು ಬುದ್ಧಿವಂತಿಕೆ ಆಗಿನ ಸರಕಾರಗಳಿಗೆ ಇರಲಿಲ್ಲ. ಆಗಿನ ಒಂದು ಪೈ ಈಗಿನ ರೂಪಾಯಿಗೆ ಸಮವಾಗಿತ್ತು.

ಪ್ರದ್ಯುಮ್ನ ಭಟ್ಟೋಪಾಧ್ಯಾಯರು ಮೊಮ್ಮಗನಿಗೆ ಕಲಿಸಿದ ಮೊದಲನೇ ಶ್ಲೋಕವೆಂದರೆ, "ಕರಾಗ್ರೇ ವಸತೇ ಲಕ್ಷ್ಮೀ" ಅನ್ನುವುದು. "ಮಗಾ, ಲಕ್ಷ್ಮೀ ಅಂದರೆ ಹಣ. ಅದು ಕರಾಗ್ರೇ ಅಂದರೆ ಬೆರಳ ತುದಿಯಲ್ಲಿರುತ್ತೆ. ಸ್ವಲ್ಪ ಕೈ ಅಲುಗಿದರೆ ಅದು ಬಿದ್ದುಹೋಗುತ್ತೆ. ಆದ್ದರಿಂದ ಹಣವನ್ನು ಕೈಲಿ ಇಟ್ಕೊಳ್ಳೋದು ಜಾಣತನವಲ್ಲ. ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟು ತಿರುಗಾಡಲಿಕ್ಕೆ ಹೋಗೋದು ಕ್ಷೇಮ. ಆಗ ಖರ್ಚು ಮಾಡುವ ಚಪಲವನ್ನು ತಡಕೊಳ್ಳಲಿಕ್ಕೆ ಸುಲಭವಾಗುತ್ತೆ" ಎಂಬುದಾಗಿ ಶ್ಲೋಕಕ್ಕೆ ವ್ಯಾಖ್ಯಾನ ಕೂಡ ಮಾಡಿದ್ದರು. "ಆದರೆ ಅಜ್ಜಾ, ಖರ್ಚು ಮಾಡಬಾರದು ಅಂತಿದ್ದರೆ ಹಣ ಯಾಕೆ ಕೂಡಿಹಾಕಬೇಕು?" ಅಂತ ಬಾಲಕ ಯೆಂಕಣ್ಣಯ್ಯ ಬಾಲಮಾತ್ರ ಸುಲಭವಾದ ತರ್ಕದಿಂದ ಪ್ರಶ್ನಿಸಿದ್ದರಂತೆ. ತರ್ಕತ್ರಿಣೇತ್ರ ಪ್ರದ್ಯುಮ್ನ ಭಟ್ಟೋಪಾಧ್ಯಾಯರಿಗೆ ಈ ತರ್ಕಕ್ಕೆ ಸಮಾಧಾನ ಹೇಳುವುದು ಸಾಧ್ಯವಾಗಲಿಲ್ಲ. ಈ ಹುಡುಗನ ಭವಿಷ್ಯ ಹೇಗೋ ಅಂತ ಚಿಂತೆಯಾಗಿ ಯೆಂಕಣ್ಣಯ್ಯನ ಜಾತಕವನ್ನು ಊರಿನ ಪ್ರಮುಖ ಜ್ಯೋತಿಷಿಗೆ ತೋರಿಸಿದ್ದರಂತೆ. ಭಟ್ಟೋಪಾಧ್ಯಾಯರು ಕಾಸು ಬಿಚ್ಚುವವರಲ್ಲವೆಂದು ಗೊತ್ತಿದ್ದದ್ದರಿಂದಲೇ ಇರಬೇಕು, ಜೋಯಿಸರು ಜಾತಕವನ್ನು ಸರಿಯಾಗಿ ವಿಮರ್ಶಿಸದೆ ನಿಮ್ಮ ಮೊಮ್ಮಗನಿಗೆ ಕುಬೇರಯೋಗವುಂಟೆಂದು ಹೇಳಿಕಳಿಸಿದ್ದರು.

ಶ್ರೀಮಂತ ಮಾತಾಮಹನದ್ದೌಹಿತ್ರರಾದ ಬಾಲಕ ಯೆಂಕಣ್ಣಯ್ಯನವರ ಕೈಗೆ ಒಂದು ಕಾಸು ಕೂಡಾ ಖರ್ಚಿಗೆ ಸಿಗುತ್ತಿರಲಿಲ್ಲ. ಅದರಿಂದ ಖರ್ಚು ಮಾಡುವ ವಿಧಾನಗಳನ್ನು ಮನಸ್ಸಿನಲ್ಲೇ ಕಲ್ಪಿಸಿಕೊಳ್ಳುವುದಕ್ಕೆ ಮೊಮ್ಮಗನಿಗೆ ಏನೂ ಆತಂಕವಾಗಲಿಲ್ಲ. ಏಕಾದಶಿ ಉಪವಾಸ ಮಾಡುವವರಿಗೆ ಆ ರಾತ್ರಿ ಕನಸಿನಲ್ಲಿ ದೋಸೆ-ಬೆಣ್ಣೆ ತಿಂದ ಕನಸೇ ಬೀಳುತ್ತದಂತೆ. (ಅದಕ್ಕೇ ಏಕಾದಶಿ ಜಾಗರಣೆ ಮಾಡಬೇಕು ಅಂತ ಹೇಳುವುದು; ಕನಸಿನಲ್ಲಿ ವ್ರತಭಂಗ ಆಗಬಾರದಲ್ಲವೆ?) ಯೆಂಕಣ್ಣಯ್ಯನವರು ಹಣ ಖರ್ಚು ಮಾಡುವ ಕನಸು

ಕಂಡರು. ಅಜ್ಜ ಬೇಗ ಸಾಯಲಿ ಎಂಬುದಾಗಿ ಅವರು ಪ್ರಾರ್ಥಿಸುತ್ತಿದ್ದರು ಎಂದು ಯಾರೂ ಆರೋಪಿಸುವುದನ್ನು ನಾನು ಕೇಳಿಲ್ಲ. ಆದರೆ ಒಂದು ಅಮಾವಾಸ್ಯೆ ದಿನ ಅಜ್ಜ ಕೂತಲ್ಲೇ ಅನಾಯಾಸೇನ ಮರಣವನ್ನು ಅಪ್ಪಿದಾಗ ಮೊಮ್ಮಗನಿಗೆ ಅಸಹನೀಯ ದುಃಖವಾಯಿತೆಂದು ಹೇಳಿದರೆ ಮಾತ್ರ ಅತಿಶಯೋಕ್ತಿಯಾದೀತು ಮತ್ತು ಪ್ರದ್ಯುಮ್ನ ಭಟ್ಟೋಪಾಧ್ಯಾಯರ ವೈಕುಂಠ ಸಮಾರಾಧನೆಯ ದಿನಕ್ಕೆ ಸರಿಯಾಗಿ ಯೆಂಕಣ್ಣಯ್ಯನವರಿಗೆ ೧೮ ತುಂಬಿ ಅವರು ದೌಹಿತ್ರ ಸಂಬಂಧದಿಂದ ಅಜ್ಜನ ಸಕಲ ಸ್ಥಿರ-ಚರಾಸ್ತಿಗಳಿಗೆ ಏಕಮಾತ್ರ ಪ್ರಾಯಪ್ರಬುದ್ಧ ಉತ್ತರಾಧಿಕಾರಿಯಾದದ್ದು ಯೋಗಾಯೋಗವೇ ಆಗಿತ್ತು.

ವೈಕುಂಠ ಸಮಾರಾಧನೆಯ ಮರುದಿವಸವೇ ಯೆಂಕಣ್ಣಯ್ಯ ಅಜ್ಜನ ಸಂಪತ್ತಿನ ವಿನಿಯೋಗದಲ್ಲಿ ಸೀರಿಯಸ್ಸಾಗಿ ತೊಡಗಿದರು. ಸೇಠ್ ಕುಬೇರ ಮಲ್ ಕಾಂಚನಮಲ್ ವಿಶ್ವಾಸಿಯಾದ ಅವರ ಜವಳಿ ಅಂಗಡಿಗೆ ತಮ್ಮ ಮೂವರು ಲಂಗೋಟಿ ಗೆಳೆಯರ ಸಂಗಡ ನುಗ್ಗಿದರು. (ಇವರ ಸಂಗಡ ತಾನೆ ಯೆಂಕಣ್ಣಯ್ಯನವರು ತಮ್ಮ ಧನವಿನಿಯೋಗ ಮಸೂದೆಯನ್ನು ಒಂದು ವರ್ಷ ಕಾಲದಿಂದ ಚರ್ಚಿಸುತ್ತ ಇದ್ದದ್ದು.) ಸೇಠ್ ಕುಬೇರಮಲ್ಲರು ಒಂದು ಮೈಲು ದೂರದಿಂದಲೇ ಬೇಟೆಯ ವಾಸನೆ ಹಿಡಿಯಬಲ್ಲವರು. ಯೆಂಕಣ್ಣಯ್ಯನವರು ಇನ್ನೂ ಅಜ್ಜ ಅವರಿಗಿತ್ತಿದ್ದ ದೊಡ್ಡ ಮಗ್ಗದ ಪಾಣಿಪಂಚೆಯಲ್ಲೆ ಇದ್ದರೂ ಸೇಠರು ಆದರದಿಂದ ಅವರನ್ನು ಕರೆದು ತಮ್ಮ ಗಾದಿಯ ಮೇಲೆ ಲೋಡಿಗೆ ಆನಿಸಿ ಕೂರಿಸಿಕೊಂಡು, "ಕ್ಯಾ ಸೇವಾ ಕರೂಂ ವೆಂಕಟಕೃಷ್ಣಯ್ಯ ಮಹಾರಾಜ್?" ಎಂದರು. ವೆಂಕಟಕೃಷ್ಣಯ್ಯ ಎನ್ನುವ ಪೂರ್ಣ ಹೆಸರಿನಿಂದ ಅವರನ್ನು ಯಾರಾದರೂ ಸಂಬೋಧಿಸಿದ್ದು ಅದೇ ಮೊದಲನೇ ಸಲವಾಗಿತ್ತು.

"ನಿಮ್ಮಲ್ಲಿರುವ ಅತಿ ಹೆಚ್ಚು ಬೆಲೆಯ ಮದ್ರಾಸ್ ಮಲ್ ತೋರಿಸಿ, ಕುಬೇರಮಲ್ಲರೇ" ಎಂದರು ವೆಂಕಟಕೃಷ್ಣಯ್ಯ. ಮದ್ರಾಸು ಮಲ್ಲು ಆಗಿನ ಫ್ಯಾಶನೇಬಲ್ ಶ್ರೀಮಂತರ ಧೋತ್ರದ ಆದರ್ಶ ಫ್ಯಾಬ್ರಿಕ್ ಆಗಿತ್ತು.

ಸೇಠ್‌ಜಿ ಭಕ್ತಿಪೂರ್ವಕವಾಗಿ ಕಪಾಟಿನಿಂದ ಒಂದು ಥಾನ್ ಮದ್ರಾಸ್ ಮಲ್ ಹೊರತೆಗೆದು ಯೆಂಕಣ್ಣಯ್ಯನ ಮುಂದೆ ಹರವಿದರು. ಯೆಂಕಣ್ಣಯ್ಯನೂ ಅವರ ಮಿತ್ರರೂ ನಯವಾದ ಅದರ ಮೈಯನ್ನು ಕ್ಷಣಕಾಲ ಬೆರಳುಗಳಿಂದ ಪರೀಕ್ಷಿಸಿ ತೃಪ್ತಿ ಸೂಚಿಸಿದರು.

"ಎಷ್ಟು ವಾರ್ ಕೊಡಲಿ, ಸ್ವಾಮಿ?" ಸೇಠ್‌ಜಿ ಕೇಳಿದರು.

ಯೆಂಕಣ್ಣಯ್ಯ ಶಾಂತವಾಗಿ, "ನಿಮ್ಮಲ್ಲಿ ಎಷ್ಟು ಥಾನ್ ಇದೆ?" ಎಂದು ಪ್ರಶ್ನಿಸಿದರು.

ಮನುಷ್ಯ ಸ್ವಭಾವವನ್ನು ಅಂಗೈನೆಲ್ಲಿಯಂತೆ ಬಲ್ಲ ಸೇಠ್ ಕುಬೇರಮಲ್ಲರಿಗೆ ಕೂಡ ಒಮ್ಮೆ ವಿಸ್ಮಯವಾಯಿತು. ಅವರು ಮೆಲ್ಲಗೆ ಎದ್ದು ಕಪಾಟು ತೆರೆದು ಎಣಿಸಿ, "ಐದು ಥಾನು ಇದೆ" ಎಂದು ಹೇಳಿದರು.

"ಅಷ್ಟೇ ತಾನೆ!" ಎಂದರು ಯೆಂಕಣ್ಣಯ್ಯ "ಎಲ್ಲವನ್ನೂ ತೆಗೆದು ಐದೈದು ವಾರಿನ ಧೋತ್ರದ ತುಂಡುಗಳಾಗಿ ಮಾಡಿ!"

ಸೇಠ್‌ಜಿ ಸ್ವಲ್ಪ ಅನುಮಾನಿಸಿದ್ದು ಕಂಡು ಯೆಂಕಣ್ಣಯ್ಯ ಮೀಸೆಯಲ್ಲೇ ನಕ್ಕು ಪಾಕೀಟಿನಿಂದ ಕೆಲ ನೋಟುಗಳನ್ನು ತೆಗೆದು ಸೇಠ್‌ಜಿಯ ಮುಂದೆ ಇಟ್ಟರು. ಮನುಷ್ಯರಿಗಿಂತ ಹಣ ಚೆನ್ನಾಗಿ ಮಾತಾಡುತ್ತದೆ. ಸೇಠ್‌ಜಿ ತತ್‌ಕ್ಷಣ ಆಜ್ಞಾಪಾಲನೆ ಮಾಡಿದರು. ಯೆಂಕಣ್ಣಯ್ಯ ಧೋತ್ರದ ತುಂಡುಗಳಲ್ಲಿ ಮೂರು ಮೂರನ್ನು ತಮ್ಮ ಮಿತ್ರರಿಗೆ ಬರೆದರು. ಉಳಿದದ್ದನ್ನು ಹಾಗೇ ಇರಲಿ ಎಂದು ಹೇಳಿ ಮುಂದಿನ ಖರೀದಿಯ ಮಾತೆತ್ತಿದರು.

ಸಂಕ್ಷೇಪವಾಗಿ ಹೇಳುವುದಾದರೆ ಯೆಂಕಣ್ಣಯ್ಯ ಸೇಠ್ ಮಳಿಗೆಯಿಂದ ಹೊರ ಬೀಳುವುದರೊಳಗೆ ಆ ಕಾಲದ ಐನೂರಾನಲವತ್ತು ರೂಪಾಯಿಗಳ ಖರೀದಿ ಆಗಿತ್ತು. ಅದರಲ್ಲಿ ರೇಶ್ಮೆ ಶಲ್ಯಗಳು, ಶ್ರೇಷ್ಠ ಉಣ್ಣೆ ಶಾಲುಗಳು, ರೇಶ್ಮೆ ಸೀರೆಗಳು, ವಿಧವೆಯರು ಉಡುವ ಪಟ್ಟೆಮಡಿಗಳು ಇತ್ಯಾದಿ ಇದ್ದವು. ಅವುಗಳನ್ನೆಲ್ಲಾ ಗಂಟು ಕಟ್ಟಿಸಿ ಇಟ್ಟರು. ಆಳುಗಳ ತಲೆ ಮೇಲೆ ಹೊರಿಸಿಕೊಂಡು ಯೆಂಕಣ್ಣಯ್ಯ ಮನೆಯ ಕಡೆ ಹೊರಟರು. ಸೇಠ್‌ಜಿ ಮನಸ್ಸಿನಲ್ಲೇ ಆವೊತ್ತು ಬೆಳಗ್ಗೆ ಅಂಗಡಿಗೆ ಹೊರಟಾಗ ಮೊದಲು ಯಾರ ಮುಖ ನೋಡಿದೆ ಎಂದು ಯೋಚಿಸಿ, ಮನೇ ಬಾಗಿಲಲ್ಲೇ ಎದುರಾದ ಭಿಕ್ಷುಕನನ್ನು ನೆನೆದುಕೊಂಡು, ಅವಲಕ್ಷಣ ಶನಿಮುಂಡೆಮಗ ಅಂತ ಬೈದದ್ದಕ್ಕೆ ಪಶ್ಚಾತ್ತಾಪಪಟ್ಟು, ಅವನಿಗೆ ಇನ್ನೊಂದು ಸಲ ಬಂದಾಗ ಎರಡು ಪೈ ಭಿಕ್ಷೆ ಹಾಕಬೇಕೆಂದು ಸಂಕಲ್ಪಿಸಿಕೊಂಡರು.

ಯೆಂಕಣ್ಣಯ್ಯನಿಗೆ ದಾರಿಯಲ್ಲಿ ಸಂಕಣ್ಣಭಟ್ಟರು ಎದುರಾದರು. ಎಂದಿನಂತೆಯೇ ಮಾತಾಡದೆ ದಾಟಿಹೋದರು. ಯೆಂಕಣ್ಣಯ್ಯ ಒಂದು ಕ್ಷಣ ಕಾದು, "ಓ ಸಂಕಣ್ಣ ಭಟ್ರೇ! ಏನು, ಒಡವನ ಗುರ್ತೇ ಸಿಕ್ಕಲಿಲ್ಲವೇ?" ಕೂಗಿದರು.

"ಗುರ್ತು ಸಿಕ್ಕದೆ ಏನು, ಯೆಂಕಣ್ಣ! ಏನೂ ಜಂಬರ ಇರಲಿಲ್ಲ, ಮಾತಾಡಲಿಲ್ಲ" ಎಂದರು ಭಟ್ಟರು—ತಮಗೆ ಲಾಭವಿಲ್ಲ, ಹಾನಿಯೂ ಇಲ್ಲ ಎಂದಾಗ ಬಡವರು ತೋರಿಸುವ ಧಿಮಾಕಿನಿಂದ—ನಿಂತಲ್ಲಿಂದಲೇ.

"ಓಡಬೇಡಿ ಭಟ್ರೇ! ಏನು, ಕೆಸುವಿನ ಕಾಲಿಗೆ ಕರು ಕಟ್ಟಿ ಬಂದಿದ್ದೀರಾ? ನಿಲ್ಲಿ ಸ್ವಲ್ಪ!" ಎಂದು ಯೆಂಕಣ್ಣಯ್ಯ ತಾವೇ ಅವರಿದ್ದಲ್ಲಿಗೆ ನಡೆದು ಹೋಗಿ, "ತಕೊಳ್ಳಿ! ನಿನ್ನೆ ನೀವು ನಮ್ಮಲ್ಲಿಗೆ ವೈಕುಂಠಕ್ಕೆ ಬರಲಿಲ್ಲ. ಇಟ್ಟುಕೊಳ್ಳಿ!" ಎಂದು ಒಂದು ಬೆಳ್ಳಿ ರೂಪಾಯಿಯನ್ನು ಸಂಕಣ್ಣಭಟ್ಟರ ಕೈಯಲ್ಲಿಟ್ಟರು. ದುರ್ದಾನ ಹಿಡಿದು ಬದುಕುವ ಭಟ್ಟರು ಈ ಔದಾರ್ಯದಿಂದ ತಲೆ ತಿರುಗಿ ಮಾತ್ರ ಬೀಳಲಿಲ್ಲ. ಅವರಿಗಾದ ಶಾಕ್ ಇಳಿದು, "ಧನಿಗಳ ಮನಸ್ಸು ದೊಡ್ಡದು!" ಎಂದು ತೊದಲುವುದರೊಳಗೆ ಯೆಂಕಣ್ಣಯ್ಯನವರು ಮುಂದೆ ಸಾಗಿದ್ದರು.

ಯೆಂಕಣ್ಣಯ್ಯನವರಿಗೆ "ಯದ್ವಾತದ್ವಾ ಯೆಂಕಣ್ಣಯ್ಯ" ಎಂದು ಅಡ್ಡ ಹೆಸರು ಕೊಟ್ಟವರು ಈ ಸಂಕಣ್ಣಭಟ್ಟರೆ ಎಂದು ಹೇಳುತ್ತಾರೆ. ಸ್ವಲ್ಪ ಮುಂದೆ ಈ ತಂಡಕ್ಕೆ ಸೊಡಲೆಸೊರಪ್ಪ ಸಿಕ್ಕಿದ. ಅವನು ಕುಡಿತಕ್ಕೆ ಬಹಳ ಹೆಸರಾದವನು. ಯೆಂಕಣ್ಣಯ್ಯ ಅವನನ್ನು ಕರೆದು ಒಂದು ರೂಪಾಯಿ ಕೊಟ್ಟರು. ಅವನು ಕಣ್ಣುಕಣ್ಣು ಬಿಡುತ್ತಿದ್ದಂತೆ ಯೆಂಕಣ್ಣಯ್ಯನ ಒಬ್ಬ ತೈನಾತಿ ಸುಬ್ಬಪ್ಪಯ್ಯ, "ಏನು ನೋಡುತ್ತಿ, ಸೂರಪ್ಪ? ಧನಿಗಳ

ಹೆಸರು ಹೇಳಿ ಹೆಂಡಕುಡಿ!" ಎಂದು ಸೂಚಿಸಿದ. "ಬಿದ್ದೆ ಬುದ್ಧಿ!" ಎಂದು ಆತ ಬೀದಿಯಲ್ಲೇ ಸಾಷ್ಟಾಂಗ ಹಾಕಿದ.

ಮನೆ ಮುಟ್ಟುತ್ತಲೇ ಯೆಂಕಣ್ಣಯ್ಯ ಗಂಟು ಬಿಚ್ಚಿ ತಾಯಿಗೆ ರೇಶ್ಮೆ ಮಡಿಗಳನ್ನು ಕೊಟ್ಟು ಇನ್ನು ದಿನಾ ಇದನ್ನೇ ಉಟ್ಟುಕೊಳ್ಳಬೇಕು ಎಂದು ತಾಕೀತು ಮಾಡಿದರು. ಎಂದೂ ಅಂಥಾದ್ದನ್ನು ಕಾಣದ ಮಹಾತಾಯಿ "ನನಗೆ ಯಾಕೆ ಮಗಾ, ಇದೆಲ್ಲ!" ಎಂದರೆ, "ಉಟ್ಟುಕೋ ಅಮ್ಮಾ, ನೀನು ಯಾವಾಗ ಸುಖಪಡುವುದು ಮತ್ತೆ!" ಎಂದರು ಮಗ. "ಇದು ಅವಳಿಗೆ ಕೊಡು" ಎಂದು ಸೀರೆಗಳನ್ನು ಅವರ ಮುಂದಿಟ್ಟರು, ಇನ್ನೂ ಹನ್ನೆರಡು ವರ್ಷದ ಹೆಂಡತಿಯನ್ನು ನಿರ್ದೇಶಿಸಿ.

ಸಂಜೆ ಅವರು ನೂತನ ವಸ್ತ್ರಭೂಷಿತರಾಗಿ ಪೇಟೆಗೆ ಬರುವಷ್ಟರೊಳಗೆ ಪ್ರದ್ಯುಮ್ನ ಭಟ್ಟೋಪಾಧ್ಯಾಯರ ಮೊಮ್ಮಗನ ಯಜಮಾನಿಕೆಯ ಆರಂಭೋತ್ಸವ ಗಾಳಿಯ ಕೈಲಿ ಕೊಟ್ಟ ಇಂಗು ಆಗಿಬಿಟ್ಟಿತ್ತು. ಸೇಠ್ ಮಳಿಗೆಯಲ್ಲಿ ಅವರು ಕೊಂಡ ಜವಳಿಯ ಬೆಲೆ ಹತ್ತರಿಂದ ಗುಣಿಸಿಕೊಂಡು ಐದು ಸಾವಿರವಾಗಿತ್ತು; ಸೂರಪ್ಪನಿಗೆ ಹೆಂಡ ಕುಡಿಯುವುದಕ್ಕೆ ಕೊಟ್ಟ ಹಣ ಒಂದರ ಬದಲು ಹತ್ತು ರೂಪಾಯಿಯಾದದ್ದಕ್ಕೆ ಅವನು ಹೆಂಡ ಕುಡಿದ ಮೇಲೆ ಯೆಂಕಣ್ಣಯ್ಯನವರ ಔದಾರ್ಯವನ್ನು ಹತ್ತುಮಡಿ ಮಾಡಿ ಹೊಗಳಿದ್ದು ಕಾರಣವಾಗಿತ್ತು. ಅವರು ಕೊಂಡುಕೊಂಡಿದ್ದ ಕಾಶೀ ಪೀತಾಂಬರ ಊರಿನ ಟಾಪ್ ವೇಶ್ಯೆ ಉಪರಂಭೆಗೋಸ್ಕರ ಎಂದು ಸುದ್ದಿಯಾದ್ದದು ತತ್ಕಾಲಕ್ಕೆ ಶುದ್ಧ ಸುಳ್ಳಾಗಿದ್ದರೂ ಹನ್ನೆರಡು ವರ್ಷದ ಹುಡುಗಿಗೆ ಅಂಥಾ ಸೀರೆ ಯಾವ ರಸಿಕ ಕೊಂಡುಕೊಂಡಾನು? ಎಂಬ ತರ್ಕದ ಫಲವಾಗಿತ್ತು. ಜನ ಹೇಳಿ ಹೇಳಿ ಲೇವಡಿ ಮಾಡುತ್ತಿದ್ದರು. ಆದರೆ ಯೆಂಕಣ್ಣಯ್ಯನವರೂ ಅವರ ತೈನಾತಿಗಳೂ ಮದ್ರಾಸ್ ಮಲ್, ಸಿಲ್ಕ್ ಸೆಲ್ಲೆ ವೇಷಭೂಷಿತರಾಗಿ ಅಂಗಡಿ ಬೀದಿಯಲ್ಲಿ ಕಾಲಿಟ್ಟಾಗ ಮಾತ್ರ ಕುಣಿಯುವ ನಾಲಿಗೆಗಳು ಸ್ತಬ್ಧವಾಗಿ, ಅಭಿನಯಮಗ್ನವಾದ ಕೈಗಳು ನಮಸ್ಕಾರಮುದ್ರೆಯನ್ನು ಧರಿಸಿದವು. ತಾವು ಹೊಡೆದ ಛಾಪಿನಿಂದ ಯೆಂಕಣ್ಣಯ್ಯನವರಿಗೆ ಅತೃಪ್ತಿಯೇನೂ ಆಗಲಿಲ್ಲ.

ಯೆಂಕಣ್ಣಯ್ಯ—ಅಥವಾ ಈಗ ಎಲ್ಲರೂ ಅವರೆದುರು ಕರೆಯುತ್ತಿದ್ದ ಹಾಗೆ ವೆಂಕಟಕೃಷ್ಣಯ್ಯನವರು ಕೊಂಡುಕೊಂಡಿದ್ದ ಶರ್ಟಿಂಗ್ ಕೋಟಿಂಗ್ ಬಟ್ಟೆಯನ್ನು ಹೊಲಿಯುವ ಯೋಗ್ಯತೆಯುಳ್ಳವರು ನಮ್ಮೂರಿನಲ್ಲಿ ಇಲ್ಲವೆಂದು ಅವರ ಮಿತ್ರರ ಏಕಾಭಿಪ್ರಾಯ ವಾಗಿದ್ದುದರಿಂದ ಅವರು ಅನೂಯಾಯಿ ಸಮೇತರಾಗಿ ಜಿಲ್ಲಾ ರಾಜಧಾನಿಗೆ ಸ್ಪೆಶಲ್ ಜಟಕಾಸವಾರಿ ಮಾಡಿ ಹೊರಟರು. ಬೊಂಬಾಯಿಯಿಂದ ತರಬೇತಾಗಿ ಬಂದಿದ್ದ ಬಸ್ತ್ಯಾಂ ಸೋಜಾ ಮಾಸ್ಟರ್ ಟೇಲರ್ ಕೇವಲ ಭುಜದ ಅಳತೆ ಮಾತ್ರ ತೆಗೆದುಕೊಂಡು ನಿಮ್ಮ ಶರ್ಟುಕೋಟುಗಳನ್ನು ದೇವರೇ ನಿಮ್ಮ ಮೈಗೆ ಸರಿಯಾಗುವಂತೆ ಸಿದ್ಧಪಡಿಸಿದ್ದನೊ ಎಂಬ ಹಾಗೆ ಹೊಲಿದು ಕೊಡುತ್ತಾನೆಂದು ಫ್ಯಾಶನ್ ಲೋಕದಲ್ಲಿ ಪ್ರತೀತಿ ಇತ್ತು. ವೆಂಕಟಕೃಷ್ಣಯ್ಯನವರು ಅವನಲ್ಲಿ ಶರ್ಟು ಕೋಟು ಹೊಲಿಯಲು ಹಾಕಿದರು. ತಮ್ಮ ಮಿತ್ರರನ್ನೂ ಮರೆಯಲಿಲ್ಲ

ಎನ್ನಿ. ಸೋಜನಲ್ಲಿ ಯಾವಾಗಲೂ ಆರು ತಿಂಗಳ ಆರ್ಡರುಗಳು ರಿಜರ್ವಾಗಿರುತ್ತಿದ್ದುದರಿಂದ ಡಬಲ್ ಚಾರ್ಜು ಕೊಟ್ಟರೂ ತಿಂಗಳು ಕಾಲ ಕಾಯಲೇಬೇಕಾಗುತ್ತಿತ್ತು. ವೆಂಕಟಕೃಷ್ಣಯ್ಯ ಅವನಿಗೆ ಡಬಲ್ ಅಲ್ಲ, ಟ್ರಿಬಲ್ ಚಾರ್ಜು ಕೊಟ್ಟು ಬೆರಗುಗೊಳಿಸಿದರು. ಈ ಶರ್ಟು ಕೋಟು ಮೊದಲ ಸಲ ಧರಿಸಿದಾಗ ಅವರಿಗೆ ಜನ್ಮ ಸಾರ್ಥಕವೆನಿಸಿರಬೇಕು. ಅವರ ಅಜ್ಜನಾಗಲಿ ಅಪ್ಪನಾಗಲಿ ಅವರಾಗಲಿ ಹಿಂದೆ ಎಂದೂ ಅಂಗಿ ಹಾಕಿದವರಲ್ಲ.

ಅವರ ವೇಷ ವಿಲಾಸ ಪ್ರಕರಣವನ್ನು, ಮೂರು ತಿಂಗಳೊಳಗೆ ಬಗೆಬಗೆಯ ಎರಡೂವರೆ ಡಜನ್ ಶರ್ಟು ಕೋಟು ಧೋತ್ರ ವಲ್ಲಿ ಸೆಟ್ಟುಗಳು ಅವರಲ್ಲಿ ಸಂಗ್ರಹವಾಗಿದ್ದವೆಂದು ಸಂಕ್ಷೇಪವಾಗಿ ಹೇಳಿ ಮುಗಿಸಬೇಕಾಗಿದೆ. ಯಾಕೆಂದರೆ ಅಷ್ಟೇ ಮಹತ್ವದ ಇತರ ಸಂಗತಿಗಳಿಗೂ ಸ್ಥಾನ ಬೇಕಲ್ಲ.

ಅವರ ಅಜ್ಜ ಅಡವಿಟ್ಟುಕೊಂಡು ಸಾಲಗಾರರು ಬಿಡಿಸಲಾರದೆ ಬಿಟ್ಟಿದ್ದ ಕೆಲವು ಸೇರು ಚಿನ್ನ ಮನೆಯೊಳಗೆ ಕೊಳೆಯುವುದು ಅನ್ಯಾಯ ಅಂತೆನಿಸಿ ಯೆಂಕಣ್ಣಯ್ಯ ತಮ್ಮ ಎಲ್ಲಾ ಕೈಬೆರಳುಗಳಿಗೆ ನವರತ್ನಗಳಿಂದ ಖಚಿತವಾದ ಉಂಗುರಗಳನ್ನು ಮಾಡಿಸಿಕೊಂಡು ಮೆರೆಯತೊಡಗಿದಾಗ ಅದನ್ನು ಮಾಡಿಕೊಟ್ಟ ಅಕ್ಕಸಾಲಿಗ ಶಂಕರ ಶೆಟ್ಟರೇ "ಯದ್ವಾತದ್ವಾ ಯೆಂಕಣ್ಣಯ್ಯನಿಗೆ ಹತ್ತೇ ಕೈಬೆರಳು ಇರುವುದು ಮಹಾ ಅನ್ಯಾಯ" ಎಂದು ಬೆನ್ನ ಹಿಂದೆ ಲೇವಡಿ ಮಾಡಿದ್ದರಂತೆ. ಮೂರು ತಿಂಗಳ ಅವಧಿಯಲ್ಲಿ ಯೆಂಕಣ್ಣಯ್ಯ ಮೂರು ಸಲ ಅವರಲ್ಲಿಗೆ ಬಂದು ಎಲ್ಲಾ ಉಂಗುರಗಳನ್ನು ಮೂರು ಸಲ ಅಳಿಸಿ ಹೊಸ ತರಹದಲ್ಲಿನ ಉಂಗುರಗಳನ್ನು ಮಾಡಿಸಿಕೊಂಡಮೇಲೆ ಶೆಟ್ಟರಿಗೆ ಹೊಸದಾಗಿ ಏನು ಲೇವಡಿ ಮಾಡಬೇಕೆಂದು ಬಗೆಹರಿಯದೆ, ಅವರು ಆ ಹವ್ಯಾಸವನ್ನೇ ಬಿಟ್ಟು, ಉಂಗುರ, ವಂಕಿ, ಸರ, ಅವರ ಹೆಂಡತಿಗೆ ಬಳೆಗಳು, ಮೂಗುಬೊಟ್ಟು, ಬೆಂಡೋಲೆ ಮೊದಲಾದುವುಗಳನ್ನು ಹೊಸಹೊಸದಾಗಿ ಮಾಡಿಕೊಡುವುದರಿಂದಲೇ ತೃಪ್ತಿ ಹೊಂದಬೇಕಾಯಿತು. ಹೊಸ ಹೊಸ ಮಾದರಿಗಳನ್ನು ಕಲಿಯಲು ಅವರು ಬೆಂಗಳೂರು ಬೊಂಬಾಯಿವರೆಗೂ ಹೋಗಬೇಕಾಯಿತಂತೆ.

ದುರ್ದೈವದಿಂದ ಇನ್ನೂ ಇಂಡಿಯಕ್ಕೆ ಕಾರುಗಳು ಬಂದಿರಲಿಲ್ಲ. ಆದ್ದರಿಂದ ಯೆಂಕಣ್ಣಯ್ಯ ಕುಂಞ ಕೋಯಾಸಾಹೇಬನ ಜಟಕಾಕ್ಕೆ ಖಾಯಂ ಗಿರಾಕಿಯಾದರು. ಅವನು ಚಾರ್ಜು ಮಾಡುವುದರಲ್ಲಿ ಎತ್ತಿದ ಕೈ. ಅವರ ಮನೆಯಿಂದ ಅಂಗಡಿಪೇಟೆಗೆ ಬರೇ ಒಂದೇ ಒಂದು ಫರ್ಲಾಂಗು ದೂರ. ಆದರೆ ಬೆಳಗ್ಗೊಮ್ಮೆ ಸಂಜೆ ಒಮ್ಮೆ ಯೆಂಕಣ್ಣಯ್ಯ ಜಟಕಾದಲ್ಲಿಯೇ ಮಿತ್ರ ಸಮೇತ ಬಂದು ಇಳಿಯಬೇಕು. ಒಂದು ಫರ್ಲಾಂಗು ಯಾಕೆ? ಅವರಿದ್ದ ಮನೆಯಿಂದ ಐದನೆಯದು ಅವರ ಮಾವನ ಮನೆ. ಅಲ್ಲಿಗೆ ಹೆಂಡತಿಯೊಡನೆ ಹೋಗಬೇಕಾದರೂ ಜಟಕಾ ಸವಾರಿಯಲ್ಲೇ ಗಮನ. "ಯೆಂಕಣ್ಣಯ್ಯ ಕಕ್ಕಸಕ್ಕೆ ಮಾತ್ರ ಜಟಕಾದಲ್ಲಿ ಹೋಗುವುದಿಲ್ಲ" ಅಂತ, ಊರ ಹಿರಿಯ ಸಾವುಕಾರ ರಂಗೋಜಿಯವರು ಲೇವಡಿ ಮಾಡುತ್ತಿದ್ದರಂತೆ. ಸ್ವಾಭಾವಿಕವೇ ಇತ್ತನ್ನಿ. ಊರಿನ ಎರಡೇ ಜಟಕಾಗಳಲ್ಲಿ ಒಂದು ದಿನವಿಡೀ ಯೆಂಕಣ್ಣಯ್ಯನವರ ಮನೆ ಮುಂದೆಯೇ ಇದ್ದರೆ ರಂಗೋಜಿಯವರಿಗೆ ಹೊಟ್ಟೆ

ಉರಿಯದೆ ಇರುತ್ತದೆಯೇ? ಬದಲಾವಣೆಗಾಗಿ ಯೆಂಕಣ್ಣಯ್ಯನವರಿಗಾಗಿದ್ದ ಹಂಬಲ ಎಷ್ಟೆಂದರೆ ಕನಿಷ್ಠ ಐದು ಸಲ ಅವರೇ ಹಣ ಕೊಟ್ಟು ಜಟಕಾದ ಕುದುರೆ ಬದಲಾಯಿಸಿದರಂತೆ.

ಊರಿನ ಟಾಪ್ ವೇಶ್ಯೆಗಾಗಿ ಯೆಂಕಣ್ಣಯ್ಯ ಕಾಶಿ ಪೀತಾಂಬರ ತೆಗೆದುಕೊಂಡರು ಎಂಬ ಮಿಥ್ಯಾಪವಾದ ಬಂದ ಸಮಾಚಾರ ಹೇಳಿದೆನಲ್ಲ. ಆ ಅಪವಾದ ಬಹಳ ಕಾಲ ಮಿಥ್ಯೆಯಾಗಿ ಉಳಿಯಲಿಲ್ಲ. ನಾನು ಅಶ್ಲೀಲಕ್ಕೆ ಇಳಿಯುತ್ತಿದ್ದೇನೆಂದು ತಿಳಿಯಬೇಡಿ. ಯಾವ ಗೃಹಸ್ಥನೂ ಸೂಳೆಯನ್ನು ಇಟ್ಟುಕೊಳ್ಳದೆ ತಾನು ಸದ್ಗೃಹಸ್ಥನಾದೆನೆಂದು ಎಣಿಸದೆ ಇದ್ದ ಕಾಲ ಅದು. ಯೆಂಕಣ್ಣಯ್ಯ ಒಂದು ಹುಣ್ಣಿಮೆ ಸಂಜೆ ಉಪರಂಭೆಯ ಮನೆಗೆ ಜಟಕಾದಲ್ಲಿ ಬಂದಿಳಿದರು. ಒಳಗೆ ಪ್ರವೇಶಿಸುತ್ತ ಹತ್ತರ ನೋಟೊಂದನ್ನು ಸಿಗರೇಟಿಗೆ ಸುತ್ತಿ ಕಡ್ಡಿಗೀರಿ ಹೊತ್ತಿಸಿ ಎರಡು ದಂ ಎಳೆದು ಗಾಡಿಯಲ್ಲಿ ಆಸೀನರಾದರು. ಅವಳು ಏನೆಂದು ಯೋಚಿಸುವುದರೊಳಗಾಗಿ ಜೇಬಿನಿಂದ ಅತ್ತರಿನ ಒಂದು ಸೀಸೆ ತೆರೆದು ಅವಳ ಮೇಲೆರಚಿದರು. ಬನಾರಸಿ ಬುಗುಟದ ಪೀತಾಂಬರವೊಂದನ್ನು ಬಗಲಿನಿಂದ ಬಿಡಿಸಿ ಅವಳ ಮೇಲೆ ತೂರಿ ಈ ರಾತ್ರಿ ತಮ್ಮ ಸಂಗಡ ಬರೆ ಜಟಾಕದಲ್ಲಿ ಕೂತು ಬೆಳದಿಂಗಳಲ್ಲಿ ಊರಿಗೆ ಒಂದು ಸುತ್ತು ಹೊಡೆದು ಬರುವುದಕ್ಕೆ ಇಷ್ಟು ಸಾಕೆ? ಎಂದು ನೂರರ ಒಂದು ನೋಟು ತೋರಿಸಿದರು. ಆವೊತ್ತು ಅವಳಲ್ಲಿಗೆ ರಂಗೋಜಿಯವರು ಬರುವವರಿದ್ದರು. ಆದರೆ ಯೆಂಕಣ್ಣಯ್ಯನವರು ತಮ್ಮ ಪ್ರೇಮದ ಪ್ರಮಾಣವನ್ನು ಹೆಚ್ಚು ಮನವರಿಕೆಯಾಗುವ ಹಾಗೆ ಪ್ರಕಟಿಸಿದ್ದರಿಂದ ಉಪರಂಭೆಯ ತಾಯಿ ಈವೊತ್ತು ತನ್ನ ಮಗಳಿಗೆ ಅಸ್ವಸ್ಥವೆಂದು ರಂಗೋಜಿಗೆ ಹೇಳಿಕಳಿಸಿದಳು—ಮತ್ತು ಅಂದು ಮಲ್ಲಿಗೆಮಾಲೆಗಳಿಂದ ಅಲಂಕೃತವಾದ ಸಾರೋಟಿನಲ್ಲಿ ಚಂದ್ರಿಕಾವಿಹಾರ ಹೊರಟು ಯೆಂಕಣ್ಣಯ್ಯ ತಾವು ಸದ್ಗೃಹಸ್ಥಶಿರೋಮಣಿಯೆಂದು ಸಿದ್ಧಪಡಿಸಿದರು.

ಯದ್ವಾತದ್ವಾ ಯೆಂಕಣ್ಣಯ್ಯನವರ ಬಿಡುಗೈದೊರೆತನವನ್ನು ಕುರಿತು ನಾನು ಕೇಳಿದ ಕಥೆಗಳನ್ನೆಲ್ಲ ನಿಮಗೆ ಹೇಳುವ ಉದ್ದೇಶ ನನಗಿಲ್ಲ. ಮೇಲೆ ಕೊಟ್ಟವುಗಳು ಕೆಲ ಸ್ಯಾಂಪಲ್ಲುಗಳು. ಆದರೆ ಇವು ಅವರ ವ್ಯಕ್ತಿತ್ವದ ಒಂದು ಮುಖ ಮಾತ್ರ. ಒಂದು ಸಲ ಯಾರೋ ಒಬ್ಬರು ಅವರನ್ನು ಯದ್ವಾತದ್ವಾ ಯೆಂಕಣ್ಣಯ್ಯ ಅನ್ನುತ್ತಿರುವುದು ಅವರ ಕಿವಿಗೇ ನೇರವಾಗಿ ಬಿತ್ತು. ಅವರು ಆ ವ್ಯಕ್ತಿಯ ಹತ್ತಿರ ಜಟಕಾದಿಂದಿಳಿದು ಅವರನ್ನು ಹತ್ತಿರ ಕರೆದರು. ಅವರ ಕೈಲಿ ಐದು ರೂಪಾಯಿ ಇಟ್ಟರು. ಆಮೇಲೆ, "ನೋಡಿ, ನೀವೀಗ ಹೇಳಿದಿರಲ್ಲ ನನ್ನ ಬಿರುದನ್ನು. ಅದನ್ನು ಇನ್ನು ನೂರು ಸಲ ಗಟ್ಟಿಯಾಗಿ ಹೇಳಿದರೆ ನಿಮಗೆ ನಿಂತ ಮೆಟ್ಟಿಗೇ ನೂರು ರೂಪಾಯಿ ಕೊಡುತ್ತೇನೆ!" ಎಂದರು. ಆ ವ್ಯಕ್ತಿ ಉಭಯಸಂಕಟಕ್ಕೆ ಸಿಕ್ಕಿದ. ಆದರೆ ಯೆಂಕಣ್ಣಯ್ಯ ಬಿಡಲಿಲ್ಲ. ಅವನಿಂದ ನೂರು ಸಲ ತಮ್ಮ ಬಿರುದು ಪುನಶ್ಚರಣೆ ಮಾಡಿಸಿ ನೂರು ರೂಪಾಯಿ ಕೊಟ್ಟು ಕಳಿಸಿದರು!

ಯದ್ವಾತದ್ವಾ ಯೆಂಕಣ್ಣಯ್ಯನವರಿಗೆ ಯಾವೊಂದು ಪದಾರ್ಥದ ಮೇಲೂ ಮೋಹ ಇರಲಿಲ್ಲ. ಒಂದು ಸಲ ಪೇಟೆಗೆ ಉಪ್ಪು ತರಲು ಹೋಗುವಾಗ ಅವರು ಚೀಲ

ಮರೆತಿದ್ದರಂತೆ. ಮತ್ತು ತಾವು ಹೊದೆದಿದ್ದ ಜರತಾರಿ ರೇಶ್ಮೆ ಶಾಲಿನಲ್ಲಿ ಉಪ್ಪು ಕಟ್ಟಿಕೊಂಡು ಬಂದರಂತೆ.

ಅಜ್ಜ ಕೊಡಿಟ್ಟ ಸಂಪತ್ತನ್ನು ಈ ದರದಲ್ಲಿ ಖರ್ಚು ಮಾಡಿದರೂ ಅದು ಪೂರ್ತಿ ಕರಗುವುದಕ್ಕೆ ಹತ್ತು ವರ್ಷ ಹಿಡಿಯಿತು. ಎಂದರೆ ಕಾಲ ಎಷ್ಟು ಅಪ್ರಗತಿಶೀಲವಾಗಿತ್ತು ಎಂದು ನೀವೇ ಊಹಿಸಬಲ್ಲಿರಿ. ಸಿನೆಮಾ ಇರಲಿಲ್ಲ. ಕಾರು ಇರಲಿಲ್ಲ. ಏನೂ ಇರಲಿಲ್ಲ. ಮತ್ತೆ ನಾಲ್ಕು ರೂಪಾಯಿಗೆ ಚೀಲ ಅಕ್ಕಿ ಸಿಗುತ್ತಿತ್ತು. ಹಣ ಖರ್ಚು ಮಾಡಲು ನಿಜವಾದ ಜೀನಿಯಸ್ಸು ಬೇಕಾಗಿತ್ತು.

ಎಲ್ಲಾ ಸಂಪತ್ತು ಮುಗಿದ ಮೇಲೆ ಯದ್ವಾತದ್ವಾ ಯೆಂಕಣ್ಣಯ್ಯ ಮನೆಯನ್ನೂ ಮಾರಿದರು, ತಮ್ಮ ಮತ್ತು ಹೆಂಡತಿಯ ಆಭರಣಗಳನ್ನೂ ಮಾರಿದರು. ಆಮೇಲೆ ಒಂದು ದಿನ ಅವರು ತಮ್ಮ ಬಾಡಿಗೆ ಬಿಡಾರದ ತೊಲೆಗೆ ನೇಣು ಹಾಕಿಕೊಂಡು.....

ಇಲ್ಲ, ನಿಮ್ಮ ಊಹೆ ತಪ್ಪು. ಯದ್ವಾತದ್ವಾ ಯೆಂಕಣ್ಣಯ್ಯನವರನ್ನು ಅಪರೂಪ ಪುರುಷನನ್ನಾಗಿ ಮಾಡಿದ್ದು ಅವರ ದುಂದುಗಾರಿಕೆಯಲ್ಲ—ಅವರ ನಿರಹಂಕಾರ. ಎಲ್ಲವನ್ನು ದುಂದುಮಾಡಿದಮೇಲೆ ಅವರು ಸೇಠ್ ರಖಂ ದಾಸರ (ಹುಕುಂ ದಾಸ್ ಎಂದಿದ್ದದ್ದು ಜನರ ಬಾಯಲ್ಲಿ ಹಾಗಾಗಿತ್ತು) ಹೊಸ ಜವಳಿ ಅಂಗಡಿಯಲ್ಲಿ ಸೇಲ್ಸ್‌ಮನ್ ಆಗಿ ಸೇರಿ ತಿಂಗಳಿಗೆ ಹತ್ತು ರೂಪಾಯಿ ಗಳಿಸತೊಡಗಿದರು. ವಾರಕ್ಕೊಂದು ಅಂಗಿ ಹೊಲಿಸುತ್ತಿದ್ದವರು ಅನಂಗಿಗಳಾಗಿಯೇ ನಿರ್ಭಯವಾಗಿ ಓಡಾಡಿದರು.

ಇದೆಲ್ಲಾ ನಡೆದದ್ದು ನನಗೆ ಸುದ್ದಿ ತಿಳಿಯುವ ಮೊದಲು. ನಾನು ಅವರ ಕಥೆ ಕೇಳಿದಾಗ ಯದ್ವಾತದ್ವಾ ಯೆಂಕಣ್ಣಯ್ಯ—ನಮ್ಮೂರು ಬಿಟ್ಟಾಗಿತ್ತು. ಕೆಲವು ವರ್ಷಗಳನಂತರ ಒಂದು ದಿನ ಅವರು ಊರಿಗೆ ಮರಳಿದರು. ಆಗ ಅವರು ಸಿಲ್ಕ್ ಧೋತ್ರ ಉಟ್ಟಿದ್ದರು. ಸರ್ಜ್‌ಕೋಟ್ ಹಾಕಿದ್ದರು. ಸೊಲ್ಲಾಪುರದಲ್ಲಿ ಏನೆಲ್ಲಾ ಏಜನ್ಸಿ ಹಿಡಿದು ಅವರು ಸಾಕಷ್ಟು ಹಣ ಗಳಿಸಿದ್ದರಂತೆ.

ನಾನು ಅವರನ್ನು ನೋಡಿದ್ದು ಆಗ. ಆಗ ಅವರಿಗೆ ಅರವತ್ತು ಮೀರಿತ್ತು. ನಾನು ಕೆಲಸ ಮಾಡುತ್ತಿದ್ದ ಅಂಗಡಿಯ ಮುಂದೆ ತರಕಾರಿ ಮಾರುತ್ತಿದ್ದವಳಿಂದ ಎಂಟಾಣೆಯ ಬೆಂಡೆಕಾಯಿ ತೆಗೆದುಕೊಂಡು ಚಿಲ್ಲರೆಗಾಗಿ ಕಿಸೆ ತಡಕಾಡಿದ್ದನ್ನು ಕಂಡೆ. ತರಕಾರಿಯವಳ ಹತ್ತಿರ, "ಚಿಲ್ಲರೆ ಇದೆಯಾ?" ಎಂದು ಕೇಳಿದರು. "ಇಲ್ಲ ಒಡೆಯಾ!" ಎಂದಳು ಅವಳು.

ಐದು ರೂಪಾಯಿ ನೋಟನ್ನು ತರಕಾರಿಯವಳಿಗೆ ಕೊಟ್ಟು ಅವರು ಚಿಲ್ಲರೆ ಕೇಳದೆಯೆ ಹೊರಟುಹೋದರು. ನಾನು ಬೆರಗಾಗಿ ನೋಡುತ್ತಿದ್ದಂತೆ ನನ್ನ ಹಿರಿಯ ಸ್ನೇಹಿತರು, "ಇವರೇ ನೋಡಿ—ಆ ಹೆಸರು ಹೋದ ಯದ್ವಾತದ್ವಾ ಯೆಂಕಣ್ಣಯ್ಯ!" ಎಂದು ನನ್ನ ಕಿವಿಯಲ್ಲಿ ಪಿಸುಗುಟ್ಟಿದರು.

□

# ಹೆಂಗಸರನ್ನು ಹೇಗೆ ಅರ್ಥಮಾಡಿಕೊಳ್ಳಬೇಕು?

ಹೆಂಗಸರನ್ನು ಎಲ್ಲರಿಗಿಂತ ಚೆನ್ನಾಗಿ ತಿಳಿದವರು ಬ್ರಹ್ಮಚಾರಿ ಎಂದು ಹೇಳಿದ ಮಹಾನುಭಾವ ಯಾರೋ ನಾನರಿಯೆ. ಅವನು ಬ್ರಹ್ಮದೇವರ ಮಗನಾಗಿದ್ದರೂ ಅವನ ಈ ಮಾತನ್ನು ಒಪ್ಪಲಾರೆ, ಅವನದು ಒಂದು ತರಹದ ಸ್ತ್ರೀ-ತರ್ಕ. ಮತ್ತು ಸ್ತ್ರೀ-ತರ್ಕವೆಂಬ ಆ ವಿಶಿಷ್ಟ ತರ್ಕಶಾಸ್ತ್ರ ಪುರುಷರ ಬಾಯಲ್ಲಿ ಎಂದೂ ಸೊಗಸುವುದಿಲ್ಲ. "ನಿಮಗೆ ದೋಸೆ ಸೇರುವುದಿಲ್ಲೆಂದು ನನಗೆ ಗೊತ್ತಿತ್ತು. ಆದರೆ ಅಂಗಡಿಯಲ್ಲಿ ನಿನ್ನೆ ಉದ್ದು ಸಿಗಲಿಲ್ಲ, ಅದಕ್ಕೇ ಇವೊತ್ತು ದೋಸೆ ಮಾಡಲಿಲ್ಲ"—ಈ ತರಹದ ತರ್ಕ ಹೆಂಗಸರ ತಾರಸ್ವರದಲ್ಲೇ ಹೆಚ್ಚು ಸೊಗಸುತ್ತದೆ.

ಗಂಡಸರ ತರ್ಕಶಾಸ್ತ್ರದ ಪ್ರಕಾರ ಹೋಳಿಗೆ ತಿಂದರೇನೇ ಅದರ ರುಚಿ ತಿಳಿಯುತ್ತದೆ. ಆ ಪ್ರಕಾರ ಹೆಂಗಸರನ್ನು ತಿಳಿಯಬೇಕಾದರೆ ಒಬ್ಬಳನ್ನು ಮದುವೆ ಮಾಡಿಕೊಳ್ಳುವುದೇ ಉತ್ತಮ ಉಪಾಯ. ನಾನು ಮದುವೆಮಾಡಿಕೊಂಡಿದ್ದೇನೆ. ನಿಮಗೂ ಮಾಡಿಕೊಳ್ಳಲು ಉಪದೇಶಿಸುತ್ತೇನೆ. ೨೫ ವರ್ಷಗಳ ವಿವಾಹಿತ ಜೀವನದಲ್ಲಿ ನಾನು ಪಡೆದ ಅನುಭವಗಳನ್ನು ನಾನಿಲ್ಲಿ ಸಂಗ್ರಹಿಸುತ್ತೇನಾದರೂ ಪರೋಪದೇಶದಿಂದ ತಿಳಿಯಲಾರದ ಸಂಗತಿಗಳಲ್ಲಿ ಇದೊಂದಾಗಿರುವುದರಿಂದ ನಿಮಗೂ ನಾನು ಸ್ವಾನುಭವ ಪಡೆಯಲು ಸೂಚಿಸುತ್ತಿರುವುದು.

ಸುದೈವದಿಂದ ನನ್ನೀ ಸೂಚನೆಯನ್ನು ಅನುಸರಿಸುವುದಕ್ಕೆ ನಿಮಗೆ ವಿಶೇಷ ಕಷ್ಟವಾಗಲಾರದು. ಏಕೆಂದರೆ ನೀವು ಮದುವೆಯಾಗಬೇಕೆಂದಿದ್ದರೆ ನಿಮಗೆ ಧಾರಾಳ ಸಹಕಾರ ಸಿಗುವುದು ಖಂಡಿತ. ನಿಜ ಹೇಳುವುದಾದರೆ ನಿಮ್ಮೊಡನೆ ಸಹಕರಿಸಲು ತುದಿಗಾಲ ಮೇಲೆ ಹುಡುಗಿಯರು ನಿಂತಿರುತ್ತಾರೆ. ಕನಿಕರವಿಲ್ಲದ ಜನರು, ಹುಡುಗಿಯರು ಗಂಡಂದಿರಿಗಾಗಿ ಬೇಟೆಯನ್ನೇ ಆಡುತ್ತಿರುತ್ತಾರೆಂದು ಹೇಳುವುದುಂಟು. ಮದುವೆ ಎಂಬುದು ಬೇಟೆಯಾಗಿದ್ದರೆ ಸಿಕ್ಕಿಬಿದ್ದ ಪ್ರಾಣಿಯೂ (ಕೆಲ ದಿನವಾದರೂ) ಸಿಕ್ಕಿಸಿ ಹಾಕಿದ ಪ್ರಾಣಿಯಷ್ಟೇ ಸಂತುಷ್ಟವಾಗಿರುವ ಬೇಟೆ ಇದೊಂದೇ ಎನ್ನಬಹುದು.

ಜಗತ್ತಿನ ಬಲೆಗಾರರಲ್ಲಿ ಹೆಂಗಸರ ಸಂಖ್ಯೆ ಇಷ್ಟೇಕೆ ಹೆಚ್ಚು ಎಂದು ಕೇಳಿದರೆ ಮಾತೃತ್ವದ ಭಾವನೆ ಎಂದು ಉತ್ತರಬರುತ್ತದೆ. ಆದರೆ ಒಮ್ಮೊಮ್ಮೆ ತನಗೆ ಬೇರೆಯೆ ಸಂಶಯ ಬಂದಿದೆಯೆಂದು ಒಬ್ಬಾನೊಬ್ಬ ಲೇಖಕ ಹೇಳಿದ್ದಾನೆ. ಬ್ರಿಟಿಷರು ಸಾಮ್ರಾಜ್ಯವನ್ನು

ಗೆಲ್ಲಬೇಕಾದರೆ ನಾಗರಿಕತೆಯನ್ನು ಪ್ರಸಾರ ಮಾಡುವ ಪ್ರೇರಣೆ ಎಷ್ಟಿತ್ತೊ ಅಷ್ಟೇ ಹೆಂಗಸಿಗೆ ಮದುವೆಯಾಗುವುದರಲ್ಲಿ ಮಾತೃತ್ವಭಾವನೆಯ ಪ್ರೇರಣೆ ಇದೆಯೆಂದು ಅವನೆಣಿಕೆ. ಮುಖ್ಯ ಆಸೆ, ನಿರಂಕುಶ ಪ್ರಭುತ್ವದ್ದು-ಚಿಕ್ಕ ಸಂಸಾರದ ಮೇಲೆಯೆ ಇರಲೊಲ್ಲದೇಕೆ.

ಇದರಲ್ಲಿ ತಪ್ಪೇನೂ ಇಲ್ಲವೆನ್ನಿ. ಬೆಳಗ್ಗೆ ಆಫೀಸಿಗೆ ಹೊರಡುವಾಗ ಈವೊತ್ತು ಅಂಗಿ ಬದಲಿಸಬೇಕೋ ಬೇಡವೋ ಎಂದು ನಿರ್ಣಯಿಸಲಾರದ ಗಂಡಸರೆಷ್ಟೋ ಇದ್ದಾರೆ. ಅದನ್ನು ನಿರ್ಧರಿಸುವ ಜವಾಬ್ದಾರಿ ಹೊರುವ ಹೆಂಡತಿ ಹತ್ತಿರ ಇರುವುದರಿಂದ ಅವರ ಬುದ್ಧಿಶಕ್ತಿಯ ಮೇಲೆ ಬೀಳುವ ಭಾರ ಅಷ್ಟು ಮಟ್ಟಿಗೆ ಕಡಿಮೆಯಾಗುತ್ತದೆ. "ಕರಣೇಷು ಮಂತ್ರೀ" ಎಂದು ಹೆಂಡಂದಿರನ್ನು ಒಪ್ಪಲು ಗಂಡಸರು ಯಾವಾಗಲೂ ಸಿದ್ಧರೇ. ಮಾತ್ರ ಇಂಗ್ಲೆಂಡಿನ ರಾಣಿಗೆ ಪ್ರಧಾನಮಂತ್ರಿ ಮ್ಯಾಕ್ಮಿಲನ್ನರು ಸಲಹೆ ಕೊಡುವ ಹಾಗೆ ಹೆಂಡಂದಿರೂ ಏಕಾಂತದಲ್ಲಿ ಸಲಹೆ ಕೊಡಬೇಕೆಂದಷ್ಟೇ ಅವರು ಅಪೇಕ್ಷಿಸುತ್ತಾರೆ. ಆದರೆ ಗಂಡಸರ ಮಂತ್ರಿಗಳು ಕೆಲ ವೇಳೆ ಮಂತ್ರಿತ್ವದ ಈ ಮರ್ಯಾದೆಯನ್ನು ಮೀರಿ, ನಿಜವಾದ ಯಜಮಾನ(ತಿ) ಯಾರೆಂದು ಬಹಿರಂಗವಾಗಿ ಪ್ರದರ್ಶಿಸುವುದರಿಂದ ಎಷ್ಟೋ ತೊಡಕುಗಳು ಉತ್ಪನ್ನವಾಗುತ್ತವೆ.

ನಾನು ಸ್ತ್ರೀವಿರೋಧಿಯೆಂದು ಮಾತ್ರ ತಿಳಿಯಬೇಡಿ. ಸ್ತ್ರೀಯರು ಇಲ್ಲದಿದ್ದರೆ ಯಾವುದರಲ್ಲಿಯೂ ಸ್ವಾರಸ್ಯವಿಲ್ಲೆಂದು ನನಗೆ ಗೊತ್ತಿದೆ. ನಾನು ಕೇಳಿಕೊಳ್ಳುವುದಿಷ್ಟೇ. ಎಲ್ಲರಿಗೂ ಗೊತ್ತಿರುವ ಒಂದು ರಹಸ್ಯವು ಬಯಲಾಗದಂತೆ ಅವರು (ಸ್ತ್ರೀಯರು) ನೋಡಿಕೊಳ್ಳುವುದು ಒಳಿತು, ಎಂದು. ಇದನ್ನೇ ಗಂಡಸರು ಕೌಟುಂಬಿಕ ಸಾಮರಸ್ಯ ಎಂಬ ಸ್ವಲ್ಪ ಉದ್ದವಾದ ಹೆಸರಿನಿಂದ ಕರೆಯುವುದು.

ಹೆಂಗಸರ ಮೇಲೆ ಇರುವ ಆರೋಪಗಳು ಅನಾದಿಕಾಲದಿಂದ ಇದ್ದವುಗಳೇ. ಅವರಿಗೆ ತರ್ಕ ತಿಳಿಯುವುದಿಲ್ಲ. ಅವರ ವಿಚಾರಗಳನ್ನು ಊಹಿಸಲು ಸಾಧ್ಯವಿಲ್ಲ. ಇತರ ಹೆಂಗಸರನ್ನು ಕಂಡರೆ ಅವರಿಗಾಗುವುದಿಲ್ಲ. ಇಲ್ಲದ ತೊಂದರೆಗಳನ್ನು ಉಂಟುಮಾಡಿಕೊಂಡು ತೊಂದರೆ ಗಳಿಗಾಗಿ ವ್ಯಥೆಪಡುವುದೆಂದರೆ ಅವರಿಗೆ ಸುಖ. ಎಲ್ಲಕ್ಕೂ ಹೆಚ್ಚಾಗಿ ಕೊನೆಯ ಮಾತು ಅವರದಾಗಬೇಕೆಂಬುದಕ್ಕಾಗಿ ಉಳಿದ ಎಲ್ಲ ಮಾತುಗಳಲ್ಲೂ ಅವರು ತಮ್ಮ ಪಾಲಿಗಿಂತ ಹೆಚ್ಚನ್ನು ತೆಗೆದುಕೊಳ್ಳುತ್ತಾರೆ.

ಅವರಿಗೆ ತರ್ಕ ತಿಳಿಯುವುದಿಲ್ಲ ಎಂಬುದು ಅವರ ತರ್ಕ ತನಗೆ ತಿಳಿಯುವುದಿಲ್ಲ ಎಂದು ಹೇಳುವ ಗಂಡಸಿನ ರೀತಿಯೆಂದು ತೋರುತ್ತದೆ. ನನ್ನ ಹೆಂಡತಿಯೂ ಎಲ್ಲ ಹೆಂಡಿ ರಂತೆ ಸ್ತ್ರೀತರ್ಕದ ಪರಿಚಯವನ್ನು ಮಾಡಿಕೊಟ್ಟಿದ್ದಾಳೆ. ಅವಳಿಗೆ ನನ್ನ ಮೇಲೆ ಸಿಟ್ಟು ಬಂದಾಗಲೆಲ್ಲ ಅವಳು ಮಕ್ಕಳನ್ನು ಬಡಿಯುತ್ತಿರುತ್ತಾಳೆ. ಒಮ್ಮೆ ನನಗೆ ಅವಳ ಮೇಲೆ ಸಿಟ್ಟು ಬಂದಾಗ ನಾನೂ ಮಗುವನ್ನು ಬಡಿದೆ. ಅವಳು ಉರಿದೆದ್ದಳು. ಈ ಕೆಳಗಿನ ಧಾಟಿಯಲ್ಲಿ ಸಂವಾದ ಮುಂದುವರಿಯಿತು.

ಅವಳು: "ಕೊಂದುಬಿಡಿರಿ ಮಗುವನ್ನ."

ನಾನು: "ನೀನು ಎಷ್ಟು ಹೊಡೆಯುತ್ತೀಯಲ್ಲ, ನಾನು ಒಮ್ಮೆ ಕೈ ತಗಲಿಸಿದರೆ ಇಷ್ಟು ಕೂಗಾಟ."

ಅವಳು: "ಹಾಗೇ ಮಾಡಿರಿ. ಇಬ್ಬರೂ ಹೊಡೆದು ಕೊಂದುಬಿಡೋಣ ಅದನ್ನು."

ಈ ತರ್ಕ ನನಗೆ ಅರ್ಥವಾಗಲಿಲ್ಲ ಎಂದು ನಾನು ಪ್ರಾಂಜಲವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಅದಕ್ಕಾಗಿ ಅದು ತರ್ಕವೇ ಅಲ್ಲ ಎಂದು ಹೇಳಲು ನಾನು ಸಿದ್ಧನಿಲ್ಲ. ಐನ್‌ಸ್ಟೈನರ ಸಾಪೇಕ್ಷತಾ ಸಿದ್ಧಾಂತವೂ ನನಗೆ ಅರ್ಥವಾಗುವುದಿಲ್ಲ. ಸಾಪೇಕ್ಷತಾ ಸಿದ್ಧಾಂತದ ಗಣಿತವೇ ಬೇರೆಯಿದೆಯಂತೆ. ಅದರಲ್ಲಿ ತ್ರಿಕೋಣದ ಮೂರು ಕೋಣಗಳ ಮೊತ್ತ ೧೮೦೦ ಆಗುವುದಿಲ್ಲವಂತೆ. ಹಾಗೆಯೇ ಸ್ತ್ರೀಯರದೇ ಒಂದು ತರ್ಕಶಾಸ್ತ್ರವಿರಬೇಕೆಂದೂ ಆದರ ಗೋಪ್ಯಗಳು ಪುರುಷರಿಗೆ ಮೀರಿದವೆಂದೂ ನಾನು ಊಹಿಸಿದ್ದೇನೆ. ಅದರಲ್ಲಿ ಎರಡು+ಎರಡು ೪ ಆಗುವುದಿಲ್ಲವಿಷ್ಟೇ ಅಲ್ಲ, ಕೆಲ ವೇಳೆ ೩ ಮತ್ತು ಕೆಲ ವೇಳೆ ೫, ೬, ೭ ಏನು ಬೇಕಾದರೂ ಆಗಬಲ್ಲದು. ಯಾವ ವೇಳೆ ಎಷ್ಟು ಎಂಬುದು ಮಾತ್ರ ಅವರದೇ ಗುಟ್ಟು.

ಇದನ್ನೇ ಹೆಂಗಸರ ದುರೂಹ್ಯತನ ಎನ್ನುವುದು. ಇದು ಹಣದ ವಿಚಾರದಲ್ಲಿ ಪ್ರಕಟಕ್ಕೆ ಬರುವಷ್ಟು ಬೇರಾವುದರಲ್ಲಿಯೂ ಬರುವುದಿಲ್ಲ. ಅವರು ಹೇಳುವ ರೂ. ೨೦೦ರ ಬನಾರಸ್ ಸೀರೆ ತಂದುಕೊಟ್ಟರೆ ನಿಮಗೆ ಅದಕ್ಕಾಗಿ ಬಿದ್ದ ಹೆಚ್ಚಿನ ವೆಚ್ಚವನ್ನು ಅವರು ಮೂರೇ ತಿಂಗಳಲ್ಲಿ ತರಕಾರಿ ಒಂದರಲ್ಲೇ ಉಳಿಸಿಕೊಡುತ್ತಾರೆ. ಏಕೆಂದರೆ ನೀವು ತರಕಾರಿ ಪೇಟೆಯಲ್ಲಿ ಅಂಗಡಿಯವನು ಹೇಳಿದಷ್ಟು ಹಣ ಕೊಟ್ಟು ತರುತ್ತೀರಿ. ನಾಳೆಯಿಂದ ಅವರೇ ಪೇಟೆಗೆ ಹೋಗಿ ಸಾಕಷ್ಟು ಚರ್ಚೆ ಮಾಡಿ ತರಕಾರಿ ತಂದು ಹಣ ಉಳಿಸುವರು. ನೀವು ದಿನಕ್ಕೆ ಸರಾಸರಿ ಐದಾಣೆಗಿಂತ ಹೆಚ್ಚು ತರಕಾರಿಗೆ ವೆಚ್ಚ ಮಾಡುವುದಿಲ್ಲೆಂದೂ ಅಷ್ಟನ್ನೂ ಉಳಿಸಿದರೂ ಮೂರು ತಿಂಗಳಿಗೆ ೯೧ ದಿನವೆಂದು ಹಿಡಿದು ಒಟ್ಟು ರೂ. ೨೮-೪೪ ನ. ಪೈಸೆ ಮಾತ್ರ ಉಳಿಯಬಲ್ಲದೆಂದೂ ವಾದಿಸುತ್ತೀರಿ. ಆದರೆ ಅವರಿಗೆ ಮನವರಿಕೆಯಾಗುವುದಿಲ್ಲ. ನೀವು ಶುದ್ಧ ಜಿಪುಣರು ಮತ್ತು ಸ್ವಾರ್ಥಿಗಳು, ನೀವು ಸುಡುವ ಸಿಗರೇಟುಗಳ ವೆಚ್ಚಗಳ ಅರ್ಧ ಉಳಿಸಿದರೆ ವರ್ಷಕ್ಕೆ ನಾಲ್ಕು ಬನಾರಸ್ ಸೀರೆ ತೆಗೆದುಕೊಳ್ಳಬಹುದು. ಆದರೆ ಇದೆಲ್ಲದರ ಚೋದ್ಯವೆಂದರೆ. ಅವರ ಗಣಿತವನ್ನೇ ಕಡೆಗೆ ನೀವೊಪ್ಪಿಕೊಳ್ಳುತ್ತೀರಿ ಮತ್ತು ಸೀರೆ ಬರುತ್ತದೆ.

ಹೆಂಗಸರ ಹತ್ತಿರ ಹಣ ಉಳಿಸುವ ಅತ್ಯಂತ ಮೌಲಿಕ ವಿಧಾನಗಳಿವೆ. ಈಚೆಗೆ ಹಣ ಉಳಿಸುವ ಉಪಾಯಗಳನ್ನು ಕುರಿತು ಗೃಹಿಣಿಯರ ಲೇಖನ ಸ್ಪರ್ಧೆಯಲ್ಲಿ ಒಬ್ಬರು ಪೇಟೆಯಲ್ಲಿ ಸಾಮಾನು ಕಟ್ಟಿಕೊಡುವ ದಾರವನ್ನೆಲ್ಲ ತೆಗೆದಿಟ್ಟು ಗಂಡನ ಬನೀನು, ಅಂಡರ್‌ವೇರ್‌ಗಳನ್ನು ಹೊಲಿದು ನೂಲಿನ ಖರ್ಚು ಉಳಿಸುತ್ತಿರುವುದಾಗಿ ಬರೆದಿದ್ದಾರೆ. ಅವರು ಬ್ಯಾಂಕಿನಲ್ಲಿ ಈ ಮೂಲಕ ಬಹಳ ದೊಡ್ಡ ಮೊತ್ತವನ್ನು ಕೂಡಿಟ್ಟಿರಬೇಕು! ಗಂಡನು ಪ್ರತಿ ವರ್ಷ ನೂಲಹುಣ್ಣಿಮೆಯಲ್ಲಿ ತೆಗೆದುಹಾಕಿದ ಜನಿವಾರವನ್ನೆಲ್ಲ ಹೊಂದಿಸಿ ಹೊಸೆದು ಬಾವೀಹಗ್ಗದ ಖರ್ಚು ಉಳಿಸುವ ವಿಚಾರ ಯಾವ ಮಹಿಳೆಗಾದರೂ ಹೊಳೆದರೂ

ಹೊಳೆಯಬಹುದು. ಹೊಳೆಯದಿದ್ದರೆ ಹೊಳೆಯಲಿಕ್ಕೂ ಇಲ್ಲ. ಏಕೆಂದರೆ ಹೆಂಗಸರ ವಿಚಾರಗಳು ದುರೂಹ್ಯವಾದವು.

ಒಬ್ಬ ಹೆಂಗಸು ಇನ್ನೊಬ್ಬಳನ್ನು ಮೆಚ್ಚುವುದಿಲ್ಲ ಎಂಬ ಮಾತಿನಲ್ಲಿ ತಥ್ಯವಿದೆ. ಒಬ್ಬ ಹೆಂಗಸಿಗೆ ಇನ್ನೊಬ್ಬ ಹೆಂಗಸು ಒಬ್ಬ ನವ್ಯಕವಿಗೆ ಇನ್ನೊಬ್ಬ ನವ್ಯಕವಿಯ ಕವಿತೆ ಅರ್ಥವಾಗುವಷ್ಟೇ ಅರ್ಥವಾಗುವುದು ಇದಕ್ಕೆ ಕಾರಣವಿರಬಹುದು, ಇಬ್ಬರು ಹೆಂಗಸರು ಮಾತಾಡುವುದನ್ನು ನೀವು ಕೇಳಿದರೆ ಅವರಲ್ಲಿ ಒಬ್ಬರ ಭಾಷೆ ಇನ್ನೊಬ್ಬರಿಗೆ ಅರ್ಥವಾಗುವುದೇ ಎಂಬ ಸಂಶಯ ಬಂದೇ ಬರುತ್ತದೆ. ಆದರೆ ನನ್ನ ಎಣಿಕೆ ಪೂರ್ತಿ ತಪ್ಪಾಗಿದ್ದರೂ ಇರಬಹುದು. ಹೆಂಗಸರು ಹೆಂಗಸರನ್ನು ಮೆಚ್ಚದಿರಲು ಹೆಂಗಸು ಹೆಂಗಸಿಗೆ ಪೂರ್ತಿ ಅರ್ಥವಾಗುತ್ತಿರುವುದೇ ಕಾರಣವಾಗಿದ್ದರೂ ಇರಬಹುದು.

ಅಥವಾ ಈ ಅಪ್ರೀತಿಗೆ ಹೆಂಗಸರ ವಾಚಾಳಿತನ ಕಾರಣವಾಗಿರುವ ಸಂಭವವೂ ಇಲ್ಲದಿಲ್ಲ. ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಮಾತಾಡುತ್ತಿದ್ದರೆ ಕೇಳುವುದನ್ನೆಲ್ಲ ಅವನೂ ಹೇಳುವುದನ್ನೆಲ್ಲ ಅವಳೂ ಮಾಡುತ್ತಿರುತ್ತಾರೆ. ಆದರೆ ಇಬ್ಬರು ಹೆಂಗಸರು ಮಾತಾಡುತ್ತಿದ್ದರೆ ಹೇಳುವುದರ ಗುತ್ತಿಗೆಗಾಗಿ ಇಬ್ಬರಲ್ಲೂ ಸ್ಪರ್ಧೆಯೇಳುತ್ತದೆ. ಇದು ಪರಸ್ಪರ ಮೆಚ್ಚಿಕೆಗೆ ಅಷ್ಟು ಹಿತಾವಹವಲ್ಲ ತಾನೇ?

ಈ ಎಲ್ಲ ಚರ್ಚೆಯ ನಂತರ ನೀವು ಹೆಂಗಸರ ವಿಷಯ ಮೊದಲಿದ್ದುದಕ್ಕಿಂತ ಹೆಚ್ಚು ಜಾಣರಾಗಿಲ್ಲೆಂದು ನೀವು ನನ್ನನ್ನು ದೂರಬಹುದು. ಆದರೆ ಸುದೈವದಿಂದ ಹೆಂಗಸು ನಿಮಗೆ ಅರ್ಥವಾಗದೇನೇ ನಿಮ್ಮನ್ನು ಸಂತೋಷಗೊಳಿಸಬಲ್ಲಳು. ಅಜ್ಞಾತದ ಮೋಹಕತೆಯನ್ನೆಲ್ಲ ಅವಳು ತನ್ನಲ್ಲಿ ಅಳವಡಿಸಿಕೊಂಡಿದ್ದಾಳೆ. ಅದಕ್ಕೇ ನಿಮಗೆ ಉಪದೇಶಿಸಿದ್ದು, ಹೆಂಗಸನ್ನು ಅರಿಯಬೇಕಾದರೆ, ಅಥವಾ ಅರಿಯದಿರಬೇಕಾದರೆ, ಒಬ್ಬಳನ್ನು ಮದುವೆಯಾಗಿ ಅಂತ!

❐

# ಶ್ರೀ ಗಣೇಶಾಯ ನಮಃ

ಹೋಟೆಲುಗಳಿಗೆ ಇಡಬಹುದಾದ ಹೆಸರುಗಳಲ್ಲಿ "ಗಣಪತಿ ವಿಲಾಸ" ಅಥವಾ ನೀವು ಪ್ರಾಸಪ್ರಿಯರಾಗಿದ್ದರೆ "ವಿನಾಯಕ ವಿಲಾಸ"ಕ್ಕಿಂತ ಔಚಿತ್ಯಪೂರ್ಣವಾದುದು ಬೇರೊಂದು ಸಿಗಲಾರದೆಂದು ನನ್ನ ದೃಢವಾದ ಅಭಿಪ್ರಾಯ. ಲಕ್ಷ್ಮೀ ವಿಲಾಸ, ಸರಸ್ವತೀ ನಿವಾಸ, ಕೃಷ್ಣ ನಿಕೇತನ ಇತ್ಯಾದಿ ಹೆಸರುಗಳಲ್ಲಿ ಯಾವ ಅರ್ಥವೂ ಇಲ್ಲ. ನನಗೆ ವಿಶೇಷವಾಗಿ ಒಪ್ಪದ ಹೆಸರೆಂದರೆ ಲಕ್ಷ್ಮೀ ವಿಲಾಸ. ನನ್ನ ಜೇಬಿನಲ್ಲಿ ಅಷ್ಟು ನೆಮ್ಮದಿಯಿಂದ ಇಲ್ಲದ ಲಕ್ಷ್ಮಿಯನ್ನು ಮಾಲೀಕನ ಪೆಟ್ಟಿಗೆಗೆ ವರ್ಗಾಯಿಸುವುದೇ ಈ ವಿಲಾಸದ ಉದ್ದೇಶವೆಂಬ ನೆನವರಿಕೆಯನ್ನು ತಂದುಕೊಡುವುದರಿಂದ ನಾನೆಂದೂ ಆ ಹೆಸರುಳ್ಳ ಅಂಗಡಿಯನ್ನು ಪ್ರವೇಶಿಸಿಲ್ಲ—ಬಿಲ್ಲು ತೀರಿಸುವ ಮಹಾನುಭಾವರು ಇತರರಾಗಿದ್ದ ಪ್ರಸಂಗಗಳಲ್ಲಿ ಹೊರತು. ಗಣಪತಿಯಲ್ಲಿ ಅದಾವುದೂ ಅಪ್ರಿಯ ಛಾಯೆ ಇಲ್ಲ. ಉಂಡು ತಿಂದು ನಿಶ್ಚಿಂತೆಯಿಂದಿರುವ ಅವನ ವ್ಯಕ್ತಿತ್ವ ಸುಖಜೀವನದ ಆದರ್ಶವಾಗಿದೆ.

ನಮ್ಮ ಮೂವತ್ತಮೂರು ಕೋಟಿ ದೇವತೆಗಳಲ್ಲಿ ಗಣಪತಿ ಅತ್ಯಂತ ಜನಪ್ರಿಯನಾಗಿದ್ದಾನೆ. ದೇಹಸೌಂದರ್ಯದ ವಿಚಾರದಲ್ಲಿ ಗಣಪತಿ ಅಷ್ಟೇನೂ ಆದರ್ಶಪ್ರಾಯನಲ್ಲ. ಇದರ ಅರ್ಥವೆಂದರೆ, ನಿಮ್ಮ ಜನಪ್ರಿಯತೆಗೆ ನಿಮ್ಮ ಕುರೂಪ ಅಡ್ಡಬರುವುದಿಲ್ಲ ಎಂದು. ಒಂದು ಮಿತಿಯವರೆಗೆ ವಿಕರಾಳ ರೂಪ ನಿಮ್ಮ ಜನಪ್ರಿಯತೆಗೆ ಪೋಷಕವಾಗುತ್ತದೆ. ವಿಶೇಷವಾಗಿ, ಕೊಬ್ಬಿದ ಮೈಯಲ್ಲಿ ಉಬ್ಬಿದ ಹೊಟ್ಟೆ ಯಾವಾಗಲೂ ಜನಪ್ರಿಯತೆಯನ್ನು ಆಕರ್ಷಿಸುತ್ತದೆ. ಗಣಪತಿ ತನ್ನ ರೂಪದ ಬಗ್ಗೆ ಕಿಂಚಿತ್ತಾದರೂ ಅತೃಪ್ತನಾಗಿಲ್ಲ. ಅಲ್ಲೇ ಇದೆ ಅವನ ಜನಪ್ರಿಯತೆಯ ಗುಟ್ಟು. ಕುರೂಪಿಯಾಗಿರುವುದು ಪಾಪವಲ್ಲ, ಕುರೂಪಿಯಾಗಿದ್ದೇನಲ್ಲಾ ಎಂದು ಹಳಹಳಿಸುವುದು ಪಾಪ.

ಗಣಪತಿ ಉಂಟಾದದ್ದು ನಮ್ಮ ಅನೇಕ ತಮಾಷೆಗಳು ಉಂಟಾದ ರೀತಿಯಲ್ಲಿಯೇ. ಯಾರಿಗೋ ಮಾಡಲು ಏನೂ ಕೆಲಸವಿರುವುದಿಲ್ಲ ಮತ್ತು ಅದರಿಂದ ಬೇಸರಿಕೆ ಬಂದಿದೆ—ತಕೋ ಏನಾದರೊಂದು ವಿಕಲ್ಪ! ಪಾರ್ವತಿಗೆ ಒಂದು ದಿನ ತಲೆಬೇಸರಿಕೆ ಬಂತು. ಇದಕ್ಕೆ ಕಾರಣ ಅರಸಲು ದೂರ ಹೋಗಬೇಕಾಗಿಲ್ಲ. ಅವಳ ಗಂಡ ಬಹುಕಾಲದಿಂದ ಮನೆಯ ಕಡೆ ನಿಗಾ ಕಡಿಮೆ ಮಾಡಿದ್ದ. ಇದು ತುಂಬಾ ಅನ್ಯಾಯ; ಅದೂ ಹೆಂಡತಿ

ತರುಣಿಯಾಗಿರುವಾಗ, ವಾಸ್ತವಿಕವಾಗಿ ಎರಡನೇ ಹೆಂಡತಿಯೊಡನೆ ಈ ರೀತಿ ವ್ಯವಹರಿಸುವುದೆಂದರೆ ತೀರ ಲೋಕವಿರುದ್ಧ.

ಆದರೆ ಶಿವನಿಗೆ ಯಾವಾಗಲೂ ಭಕ್ತರ ಕಾಟ. ಅವರ ಸಂಖ್ಯೆಯೋ ವಿಪರೀತ. ಅವರಿಗೆಲ್ಲ ಬೇಕುಬೇಕಾದ ವರಗಳನ್ನು ಕೊಡುತ್ತ, ಕೆಲವೊಮ್ಮೆ ಅದರಿಂದ ತಾನೇ ತೊಂದರೆಪಡುತ್ತ, ತಿರುಗಾಡುವ ಅವನಿಗೆ ಎರಡನೇ ಹೆಂಡತಿಯ ಸಂಗಡ ಕೂಡ ಹೆಚ್ಚು ಸಮಯ ಕಳೆಯಲು ಸಾಧ್ಯವಾಗುತ್ತಿರಲಿಲ್ಲ.

ಪರಿಣಾಮವಾಗಿ, ನಾನು ಹೇಳಿದ ಆ ದಿನ, ಗಂಡನಿಲ್ಲದ ವೇಳೆ ಮಿತಿಮೀರಿದ ಬೇಸರವನ್ನು ತಾಳದವಳಾದ ಲೋಕಮಾತೆಯು ಕಾಲಹರಣ ಮಾಡಲು ತನ್ನ ಮೈಯ ಬೆವರು ಬೆರೆತ ಕಲ್ಮಷವನ್ನೆಲ್ಲ ಕಲೆಹಾಕಿ ಅದರಿಂದ ಒಂದು ಬೊಂಬೆಯನ್ನು ಸೃಷ್ಟಿಸಿದಳು. ಒಂದು ಬೊಂಬೆಯನ್ನು ಮಾಡುವಷ್ಟು ಮಣ್ಣು ಪಾರ್ವತಿಯ ಮೈಯಲ್ಲಿ ಎಲ್ಲಿಂದ ಬಂತು ಎಂದು ಕೆಲವರು ಪ್ರಶ್ನಿಸುತ್ತಾರೆ. ಆದರೆ ಪಾರ್ವತಿಯ ನಿವಾಸವು ಕೈಲಾಸಪರ್ವತದಲ್ಲಿತ್ತೆಂದೂ ಅಲ್ಲಿ ಅತಿರೇಕ ಚಳಿ ಇರುವುದರಿಂದ ಯಾರಾದರೂ ನಿತ್ಯ ಸ್ನಾನ ಮಾಡಬೇಕೆಂದು ಅಪೇಕ್ಷಿಸುವುದು ತಪ್ಪಾಗುತ್ತದೆಂದೂ ನಾವು ನೆನಪಿನಲ್ಲಿಡಬೇಕು.

ಅಂತೂ ಬೊಂಬೆ ತಯಾರಾಯಿತು. ಸ್ವಾಭಾವಿಕವಾಗಿಯೇ ಮನುಷ್ಯಾಕೃತಿಯ ಆ ಬೊಂಬೆ ಪಾರ್ವತಿಗೆ ಬಲು ಮುದ್ದಾಗಿ ಕಂಡಿತು. ಯಾವ ಕಲಾವಿದನಿಗೆ ತಾನೇ ತನ್ನ ಕೃತಿ ಚೆನ್ನಾಗಿ ಕಾಣಿಸುವುದಿಲ್ಲ! ಆದರೂ ಈ ನಿಟ್ಟಿನಲ್ಲಾದರೂ ಶಿವನು ಮನೆಗೆ ಮರಳಿದ್ದರೆ ಮುಂದಿನ ಕಥೆ ಹಾಗೆಯೆ ಉಳಿಯುತ್ತಿತ್ತೋ ಏನೊ. ಆತ ಮರಳಲಿಲ್ಲ. ಬೊಂಬೆಯನ್ನು ಸುತ್ತೂ ಕಡೆಯಿಂದ ನೋಡಿ ಮೆಚ್ಚುತ್ತಿದ್ದಂತೆ ಕೊನೆಗೊಮ್ಮೆ ಪಾರ್ವತಿಗೆ ಕೋಲ್ಮಿಂಚಿನಂತೆ ಒಂದು ಸ್ಫೂರ್ತಿ ಬಂತು. ಈ ಬೊಂಬೆಗೆ ಜೀವವಿದ್ದರೆ ಚೆನ್ನಾಗುತ್ತಿರಲಿಲ್ಲವೆ? ಅವಳು ಬೊಂಬೆಯ ಬಾಯಲ್ಲಿ ತನ್ನ ಉಸಿರನ್ನು ಊದಿದಳು. ಅದು ನಿಜವಾದ ಹುಡುಗನಾಗಿಬಿಟ್ಟಾಗ ಅವಳ ಉತ್ಸಾಹ ಕೇಳಬೇಕೆ!

ಆ ಮೇಲೆ ಪಾರ್ವತಿಗೆ ಯಾಕೋ ಏನೋ ಸ್ನಾನ ಮಾಡಬೇಕೆಂಬ ಲವಲವಿಕೆ ಹುಟ್ಟಿಕೊಂಡಿತು. ಅವಳು ತನ್ನ ಜೀವಂತ ಬೊಂಬೆಯನ್ನು ಸ್ನಾನದ ಮನೆಯ ಬಾಗಿಲಲ್ಲಿ ನಿಲ್ಲಿಸಿ, "ಯಾರನ್ನೂ ಒಳಗೆ ಬಿಡಬೇಡ" ಎಂದು ಅಪ್ಪಣೆಕೊಟ್ಟು ಬಾಗಿಲು ಮುಂದೆ ಮಾಡಿಕೊಂಡು ಅಭ್ಯಂಜನದಲ್ಲಿ ತೊಡಗಿದಳು. ಒಳಗಿಂದ ಅಗಳಿ ಹಾಕಿಕೊಂಡಿದ್ದರೆ ಸಾಲುತ್ತಿರಲಿಲ್ಲವೆ? ಬಾಗಿಲಲ್ಲಿ ಕಾವಲು ನಿಲ್ಲಿಸುವ ಅಗತ್ಯವೇನಿತ್ತು? ಇತ್ಯಾದಿ ಪ್ರಶ್ನೆಗಳಿಗೆ ಸರಿಯಾದ ಉತ್ತರ ನನಗೆ ಗೊತ್ತಿಲ್ಲ. ಅಗಳಿ ಮುರಿದಿರಬೇಕೆಂದೂ ಎಷ್ಟು ನೆನಪುಕೊಟ್ಟರೂ ಶಿವನು ಅದನ್ನು ದುರಸ್ತಿ ಮಾಡಿಸಿರಲಿಕ್ಕಿಲ್ಲವೆಂದೂ ಸ್ವಾನುಭವದ ಅಳತೆ ಕೋಲಿನಿಂದ ನಾನು ಊಹಿಸಿದ್ದೇನೆ. ಆದರೆ ಇದು ಬರಿ ಊಹೆ. ಮಾನವರ ಅಳತೆಕೋಲಿನಿಂದ ದೇವತೆಗಳನ್ನು ಅಳೆಯುವುದು ಸರಿಯಲ್ಲ ಎಂದು ನಾ ಬಲ್ಲೆ.

ಪಾರ್ವತಿ ಇನ್ನೂ ಪೂರ್ತಿ ಮೈತೊಳೆದುಕೊಂಡಿರಲಿಲ್ಲ. ಶಿವ ಮಹಾರಾಯ ಮನೆಗೆ

ಬಂದೇಬಿಟ್ಟ. ಬಹಳ ಹೊತ್ತು ಹೊರಗೆ ತಿರುಗಾಡಿ ಮರಳುತ್ತಿರುವಾಗ ಒಮ್ಮೆಲೇ ವಿರಹದ ನೆನಪು ಬಂದು ಹೊಸಲು ದಾಟಿದ ಕೂಡಲೆ ಹೆಂಡತಿಯ ಮೇಲೆ ತನ್ನ ಸಕಲ ಪ್ರೇಮದ ಸ್ಟಾಕನ್ನೂ ತೀರಿಸಿ ಬಿಡಬೇಕೆನ್ನುವ ಕಳ್ಳಮನಸ್ಸಿನ ಗಂಡಂದಿರ ಹಾಗೆ ಶಿವನೂ ಒಳಹೊಕ್ಕೊಡನೆ ಪಾರ್ವತಿಯನ್ನು ಕಾಣಲು ಧಾವಿಸಿದ. ಬಚ್ಚಲು ಮನೆಯ ಬಾಗಿಲಲ್ಲಿ ನಿಂತಿದ್ದ ಹುಡುಗನನ್ನು ಕಂಡು ನಮನಿಮಗಾಗಿದ್ದರೆ ಮೊದಲು ಈ ಹೊಸಮುಖ ಯಾರು? ಎಂಬ ಪ್ರಶ್ನೆ ತಲೆಯಲ್ಲಿ ಮೂಡುತ್ತಿತ್ತು. ಆದರೆ ಶಿವ ಭಲೇ ಏಕಾಗ್ರಚಿತ್ತ. ಈ ಪ್ರಶ್ನೆ ಅವನಿಗೆ ಹೊಳೆಯಲೇ ಇಲ್ಲ. "ಏ ಎಲ್ಲಿದ್ದಾಳೋ ಪಾರ್ವತಿ?" ಎಂದು ಕೇಳಿದ.

ಹುಡುಗ ಬಲು ಘಾಟಿ. ಬಚ್ಚಲ ಮನೆಯ ಮುಚ್ಚಿದ ಬಾಗಿಲನ್ನು ಬೆರಳಿಂದ ತೋರಿಸಿದ. ಈ ಸನ್ನೆ ಭಾಷೆ ಶಿವನಿಗೆ ಮನಸ್ಸಿಗೆ ಬಾರದಿದ್ದುದರಲ್ಲಿ ಆಶ್ಚರ್ಯವಿಲ್ಲ. ಶಿವ ದೇವತೆಗಳಲ್ಲೆಲ್ಲ ಸೀದಾ ದೇವರು. ವಿಷ್ಣುವಿನ ಮಾಯಾವಿತನ ಅವನಿಗಿಲ್ಲ. ಆದರೆ ಸದ್ಯ ಅವನ ಚಿತ್ತ ಪಾರ್ವತಿಯ ಕಡೆಗೆ ವೇಧಿಸಿದ್ದುದರಿಂದ ಆತ ಈ ಹುಡುಗನ ವಕ್ರ ಬುದ್ಧಿಯನ್ನು ಗಮನಿಸದೆ ನೇರವಾಗಿ ಬಚ್ಚಲು ಮನೆಯನ್ನು ಹೋಗಲಿಕ್ಕೇ ಮುನ್ನುಗ್ಗಿದ. ಹುಡುಗನಿಗೆ ಈತ ಪಾರ್ವತಿಯ ಗಂಡ ಎಂದು ಗೊತ್ತಿದ್ದರೆ ಅವನು ಸುಮ್ಮನಿರುತ್ತಿದ್ದನೋ ಏನೊ. ಆದರೆ ಶಿವನನ್ನು ಆತ ನೋಡುವುದು ಅದೇ ಮೊದಲು. ಈ ಅಜ್ಞಾತಪುರುಷನ ದುಡುಕನ್ನು ಕಂಡು ಕೆರಳಿದ ಆತ ಬಾಗಿಲಿಗೆ ಅಡ್ಡ ನಿಂತು "ಪ್ರವೇಶಿಸಲು ಅಪ್ಪಣೆ ಇಲ್ಲ" ಎಂದ.

ಶಿವ ತನ್ನ ಜ್ಞಾನದೃಷ್ಟಿಯನ್ನು ತೆರೆದು ನೋಡುವ ತೊಂದರೆ ತೆಗೆದುಕೊಂಡಿದ್ದರೆ ಮುಂದಾಗಲಿದ್ದ ದುರಂತ ತಪ್ಪಬಹುದಾಗಿತ್ತೆಂದು ಪಶ್ಚಾತ್ ಪಾಂಡಿತ್ಯವನ್ನು ಪ್ರಕಟಿಸುವವರಿದ್ದಾರೆ. ಆದರೆ ಒಂದು ಚಿಕ್ಕ ಅಹೇತುಕ ಲೋಪ, ಒಂದು ಚಿಕ್ಕ ಅತಿರೇಕ—ದುರಂತಗಳ ರಚನೆಗೆ ಇದೇ ಅಲ್ಲವೆ ಕಚ್ಚಾ ಸಾಮಗ್ರಿ? ತನ್ನ ಮನೆಯಲ್ಲಿ, ತನ್ನ ಹೆಂಡತಿಯನ್ನು ಕಾಣಲು, ತಾನು ಹೋಗುವಾಗ ಯಾರೋ ಒಬ್ಬ ಹುಡುಗ ತಡೆಯುತ್ತಿದ್ದರೆ ಇದರ ಕಾರಣವೇನೆಂದು ತಿಳಿಯಲು ತನ್ನ ಜ್ಞಾನದೃಷ್ಟಿಯನ್ನು ತೆರೆದು ನೋಡಬೇಕೆಂದು ಶಿವನಿಗೆ ಹೊಳೆಯಲೇ ಇಲ್ಲ. ಶಿವನಲ್ಲಿ ನನಗೆ ಸಂಪೂರ್ಣ ಸಹಾನುಭೂತಿ ಇದೆ. ಇದೇ ಪ್ರಸಂಗದಲ್ಲಿ ನಾನು ಇದ್ದಿದ್ದರೆ ಮತ್ತು ನನಗೆ ಜ್ಞಾನದೃಷ್ಟಿ ಇದ್ದಿದ್ದರೆ ಅದನ್ನು ತೆರೆದು ನೋಡುವ ಗೋಜಿಗೆ ನಾನು ಹೋಗುತ್ತಿರಲಿಲ್ಲೆಂದು ನನಗನಿಸುತ್ತದೆ.

ಆದರೆ ಮುಂದೆ ಶಿವ ಕೈಗೊಂಡ ಕ್ರಮ ಮಾತ್ರ ತುಸು ದುಡುಕಿನದಾಯಿತೆಂದು ನನ್ನೆಣಿಕೆ. ಅವನು ತನ್ನ ತ್ರಿಶೂಲವನ್ನು ಎಳೆದು ಹುಡುಗನ ಕೊರಳಿಗೆ ಕೊಟ್ಟ ಏಟಿಗೆ ಅವನ ರುಂಡ ಹಾರಿಹೋಯಿತು. ಅದೇ ಕ್ಷಣಕ್ಕೆ ಪಾರ್ವತಿ ಶುಚಿಸ್ನಾತಳಾಗಿ ಬಚ್ಚಲ ಬಾಗಿಲು ತೆರೆದು ಹೊರಬಂದಳು. ಗಂಡನ ಉಗ್ರಾವತಾರ ಮತ್ತು ತನ್ನ ಬೊಂಬೆಮಗನ ಕಬಂಧಾವಸ್ಥೆಯನ್ನು ನೋಡಿ ಅವಳು ಹುಡುಗನ ಶರೀರದ ಮೇಲೆ ಕುಸಿದುಬಿದ್ದು ಗೋಳಾಡತೊಡಗಿರಬೇಕು. ಅನಂತರ ಅವರಲ್ಲಿ ಈ ಕೆಳಗಿನಂತೆ ಸಂಭಾಷಣೆಗೆ ಜರುಗಿತೆಂದೂ ತರ್ಕಿಸಬಹುದಾಗಿದೆ.

ಪಾರ್ವತಿ: ಅಯ್ಯೋ, ನನ್ನ ಮಗುವನ್ನು ಕೊಂದೇಬಿಟ್ಟಿರಾ? ಏನು ಕಟುಕರಪ್ಪಾ ನೀವು

ಶಿವ: (ರಮಿಸುವ ದನಿಯಿಂದ) ಅಲ್ಲೇ, ನನಗೆ ಹೇಗೆ ತಿಳಿಯಬೇಕು ಅಂತ....?

ಪಾರ್ವತಿ: (ಮತ್ತಷ್ಟು ಅಳುತ್ತ) ನಿಮಗೆ ಹೇಗೆ ತಿಳಿದೀತು ಪಾಪ! ಆರು ತಿಂಗಳಿಗೊಮ್ಮೆ ಸಹಿತ ಮನೆಯ ಕಡೆ ಇದ್ದಾಳೋ ಸತ್ತಿದ್ದಾಳೊ ಅಂತ ಬಂದು ನೋಡಲಿಕ್ಕೆ ಪುರುಸೊತ್ತು ಇಲ್ಲದವರಿಗೆ....

ಶಿವ: ಅಲ್ಲೆ, ಪಾಪ, ಯಾರೋ ಭಕ್ತ ಬಹಳ ಭಕ್ತಿ ಮಾಡತಾ ಇದ್ದ. ಅವನ ಪೂಜೆ ತೆಗೆದುಕೊಳ್ಳಲಿಕ್ಕೆ ಅಂತ ಕನ್ಯಾಕುಮಾರಿ ಕಡೆ ಹೋಗಿದ್ದೆ. ಬರಲಿಕ್ಕೆ ಸ್ವಲ್ಪ ತಡ.....

ಪಾರ್ವತಿ: ಹೌದು ಹೌದು, ನಿಮಗೆಲ್ಲ ಹಿಂಡು ಹಿಂಡು ಭಕ್ತರಿದ್ದಾರೆ. ಮನೆ ಕಡೆ ಬರೋ ಗರಜಿ ಆದರೂ ಏನು? ಹೇಳಿಕೇಳಿ ಬೂದಿಬಾವಾ. ನಾನೇ ಮೂರ್ಖಳು, ನೀವೇ ಗತಿ ಅಂತ ನಂಬಿ ತಪಸ್ಸು ಮಾಡಿದೆ. ಈಗ ತಿಳೀತು. ಮೊದಲಿನವಳು ಯಾಕೆ ಬೆಂಕಿಗೆ ಹಾರಿಕೊಂಡಳು ಅಂತ.....

ಶಿವನಿಗೆ ಮೊದಲ ಹೆಂಡತಿಯ ಪ್ರಸ್ತಾಪ ಎತ್ತಿದರೆ ಮನಸ್ಸು ಪೂರಾ ಕರಗಿಹೋಗುತ್ತಿತ್ತು. (ಎರಡನೇ ಮದುವೆಯಾದ ಮೇಲೆ ಎಲ್ಲರಿಗೂ ಹೀಗೇ.) ಅಲ್ಲದೆ ಮಳೆಗಾಲ, ಚಳಿಗಾಲ ನೋಡದೆ ಒಂದು ವರ್ಷ ನಿರಾಹಾರ ತಪಸ್ಸು ಮಾಡಿಸಿ ಪಾರ್ವತಿಯನ್ನು ನೋಯಿಸಿದ್ದು ತನ್ನ ತಪ್ಪು ಅಂತಲೂ ಅವನ ಒಳ ಮನಸ್ಸು ಹೇಳುತ್ತಿತ್ತು.

ಒಂದು ಮಾತಿನಲ್ಲಿ, ಹುಡುಗನನ್ನು ಪುನಃ ಇಡಿ ಮಾಡಿ ಕೊಡುತ್ತೇನೆಂದು ಪಾರ್ವತಿಯನ್ನು ಒಡಂಬಡಿಸಿ ಅವಳ ಕಣ್ಣೀರ ಕಾಲುವೆಯನ್ನು ತಡೆಗಟ್ಟಬೇಕಾದರೆ ಶಿವನಿಗೆ ಏಳೂಹನ್ನೊಂದೂ ಆಯಿತು. ಮುಂದೇನಾಯಿತೆಂದು ನಿಮಗೆ ಗೊತ್ತು. ಉತ್ತರಕ್ಕೆ ತಲೆಹಾಕಿ ಮಲಗಿದವರ ತಲೆಕಡಿದು ತಾ ಎಂದು ಶಿವ ತನ್ನ ಬಂಟನಿಗೆ ಹೇಳಿದ; ಆತ ಎಲ್ಲೆಲ್ಲಿ ಹುಡುಕಿದರೂ ಉತ್ತರಕ್ಕೆ ತಲೆ ಹಾಕಿ ಮಲಗಿದವವನ್ನು ಕಾಣದೆ ಕಡೆಗೆ ಒಂದು ಆನೆ ಹಾಗೆ ಮಲಗಿದ್ದುದನ್ನು ನೋಡಿ ಅದರ ತಲೆ ಕತ್ತರಿಸಿ ತಂದ; ಅದನ್ನು ಹುಡುಗನ ಮುಂಡಕ್ಕೆ ತಗಲಿಸಿ ಶಿವ ಪುನಃ ಜೀವಕಳೆ ಊದಿದ; ಇತ್ಯಾದಿ.

ತನ್ನ ಮಾನವಾಕೃತಿಯ ಮಗುವಿಗೆ ಆನೆಯ ತಲೆ ಹಚ್ಚಿದ್ದನ್ನು ನೋಡಿ ಪಾರ್ವತಿಗೆ ಮೆಚ್ಚಿಕೆಯಾಯಿತೋ ಇಲ್ಲವೊ ದಾಖಲೆ ಇಲ್ಲ. ಆದರೆ ತನ್ನ ಪ್ರೀತಿಯ ಮಗನೇ ಇಲ್ಲದಿರುವುದಕ್ಕಿಂತ ಆನೆ ತಲೆಯವನಾದರೂ ಇರಲಿ ಎಂದು ಅವಳು ಸಮಾಧಾನ ಪಟ್ಟುಕೊಂಡಿರಬೇಕೆಂದು ನಾವು ಎಣಿಸಬಹುದು. ಆದರೆ ನನಗೆ ಅರ್ಥವಾಗದಿರುವ ಸಂಗತಿಯೆಂದರೆ ಇದು. ಈ ಹುಡುಗನಿಗೆ ಅವನದೇ ಕಳಚಿದ ರುಂಡವನ್ನು ಹಚ್ಚಲು ಏನು ಆತಂಕವಿತ್ತು? ಆ ರುಂಡ ಏನಾಯಿತು? ಆನೆಯ ರುಂಡವನ್ನೇಕೆ ತರಬೇಕಾಯಿತು? ನನ್ನ ಆರು ವರ್ಷದ ಮಗಳು ಗಣಪತಿಯ ಕಥೆ ಕೇಳಿದಾಗ ಈ ಪ್ರಶ್ನೆಗಳನ್ನು ಎತ್ತುವವರೆಗೆ ನನಗೂ ಅವು ಹೊಳೆದಿರಲಿಲ್ಲ. ನನ್ನೆಣಿಕೆಯಲ್ಲಿ, ದೇವತೆಗ್ರಳಿಗೆ ಕೆಲವೊಮ್ಮೆ ಬಹಳ ಸರಳವಾದ ವಿಷಯಗಳೇ ಹೊಳೆಯುವುದಿಲ್ಲ! ಸಾಮಾನ್ಯ ಸಮಸ್ಯೆಗಳಿಗೆ ಅಸಾಮಾನ್ಯ

ಪರಿಹಾರವನ್ನು ಅವಲಂಬಿಸುವುದರಿಂದಲೇ ಅವರನ್ನು ದೇವತೆಗಳೆಂದು ಕರೆಯುತ್ತಾರೋ ಏನೊ.

ಸೊಂಡಿಲು ಆಡಿಸುತ್ತ ಮನೆಯೊಳಗೆ ಹಗಲೆಲ್ಲ ಓಡಾಡುವ ಈ ಕಿಡಿಗೇಡಿ ಹುಡುಗನನ್ನು ಬಹುಕಾಲ ಹೀಗೇ ಬಿಡುವುದು ಸಾಧ್ಯವಿರಲಿಲ್ಲ. ಬೇಗನೆ ಅವನನ್ನು "ಗಣಪತಿ"ಯನ್ನಾಗಿ ಮಾಡಿ ಶಿವನು ಅವನ ಉಪಟಳವನ್ನು ಕಡಿಮೆ ಮಾಡಿಕೊಂಡನು.

ಈ "ಗಣಪತಿ" ಎಂದರೆ ಏನು? ಎಂದು ಪಂಡಿತರು ಬಹಳವಾಗಿ ಬಿಳಿಕಾಗದವನ್ನು ಕಪ್ಪು ಮಾಡಿದ್ದಾರೆ. ಶಿವನ ಪರಿವಾರಗಣಗಳಿಗೆ ಅವನನ್ನು ಒಡೆಯನಾಗಿ ಮಾಡಿದ ಎಂದು ಪುರಾಣಗಳು ಹೇಳುವುದನ್ನು ಅನೇಕರು ಒಪ್ಪುವುದಿಲ್ಲ. ಹಿಮಾಲಯದ ತಪ್ಪಲಿನಲ್ಲಿ ಅನೇಕ ಗಣರಾಜ್ಯಗಳು, ಅಂದರೆ ನಾವೀಗ ಪ್ರಜಾರಾಜ್ಯ ಎನ್ನುತ್ತೇವಲ್ಲ ಅಂಥ ಪಂಚಾಯಿತಿ ರಾಜ್ಯಗಳಿದ್ದವೆಂದೂ ಅವುಗಳಲ್ಲಿ ಒಂದಕ್ಕೆ ಇವನನ್ನು ಗವರ್ನರನನ್ನಾಗಿ ನೇಮಿಸಲು ಶಿವನು ತನ್ನ ಪ್ರಭಾವವನ್ನು ಉಪಯೋಗಿಸಿರಬೇಕೆಂದೂ ಕೆಲವರ ಅಭಿಪ್ರಾಯವಾಗಿದೆ. ಇದು ನಿಜವಾಗಿದ್ದರೆ ರಾಜಕೀಯ ದೃಷ್ಟಿಯಿಂದ ಉಪದ್ರವಕಾರಿಗಳಾಗಿದ್ದವರನ್ನು ಗನವರ್ನರರಾಗಿ ನೇಮಿಸಿ ಪಾರಾಗುವ ಪದ್ಧತಿ ಆಗಲೂ ಇತ್ತೆಂದು ಹೇಳಿದ ಹಾಗಾಯಿತು.

ಆದರೆ ವಿಘ್ನರಾಜ, ಸಿದ್ಧಿವಿನಾಯಕ ಮೊದಲಾದ ಅವನ ಅಭಿದಾನಗಳನ್ನು ನೋಡಿದರೆ ನನಗೆ ಬೇರೆಯೇ ಸಂಶಯ ಬರುತ್ತದೆ. ಅವನನ್ನು ನಾಯಕ ಎನ್ನದೆ ವಿನಾಯಕ ಎಂದುದರಿಂದ ಅವನುಸ್ವತಃ ನಾಯಕನಾಗಿರದೆ ನಾಯಕನ ಹಿಂದಿರುವ ಪ್ರಬಲ ಶಕ್ತಿಯಾಗಿರಬೇಕು. ಸ್ವತಃ ನಾಯಕನಾಗಿರದೆ ವಿಘ್ನವನ್ನು ತಂದೊಡ್ಡಬಲ್ಲವರು ಯಾರು? ಹಳ್ಳಿಯಲ್ಲಿ ಶಾನುಭೋಗ-ಪಟೇಲನಿಗೆ ಅವನು ವಿ-ನಾಯಕ, ಕಲೆಕ್ಟರ ಕಚೇರಿಯಲ್ಲಿ ಹೆಡ್-ಮುನಿಶಿ, ಕಾಂಗ್ರೆಸ್ ಕಚೇರಿಯಲ್ಲಿ ಸೆಕ್ರೆಟರಿ, ಕಮ್ಯುನಿಸ್ಟ್ ಪಕ್ಷಗಳಲ್ಲಿ ಜನರಲ್ ಸೆಕ್ರೆಟರಿ, ಇವರೆಲ್ಲರೂ ವಿ-ನಾಯಕರು. ಅವರನ್ನು ಪ್ರಥಮತಃ ತೃಪ್ತಿಪಡಿಸದೆ ನಿಮ್ಮ ಕೆಲಸ ಒಂದಂಗುಲ ಕೂಡ ಮುಂದೆ ಚಲಿಸದು.

ಗಣಪತಿಯು ಇಂಥ ಯಾವನೋ ಒಬ್ಬ ಮಹಾ ಶಾನುಭೋಗನಾಗಿರಬೇಕು. ಅವನು ಬಲು ವೇಗವಾಗಿ ಬರೆಯುತ್ತಿದ್ದದ್ದರಿಂದಲೇ ವ್ಯಾಸ ಋಷಿ ಅವನನ್ನು ತನ್ನ ಮಹಾಭಾರತ ಬರೆಯಲು ನೇಮಿಸಿಕೊಂಡನು. ಪಾಂಡವರು ಅವನಿಗೆ ಅಗ್ರ ಪುರಸ್ಕಾರವನ್ನು ಕೊಟ್ಟಿದ್ದರೆಂದೂ ಕೌರವನು ಕೊಟ್ಟಿರಲಿಲ್ಲೆಂದೂ ಪುರಂದರ ದಾಸರುಹೇಳಿದ್ದಾರೆ. ಬಹುಶಃ ಈ ಕಾರಣದಿಂದಲೇ ಅವನು ಮಹಾಭಾರತವನ್ನು ವ್ಯಾಸರು ಹೇಳಿದ ಹಾಗೆ ಬರೆಯದೆ ಕೌರವನ ಪಕ್ಷದ ಒಳ್ಳೇ ಅಂಶಗಳನ್ನು ಮರೆಮಾಡಿ ಪಾಂಡವರನ್ನು ಹಿರಿದು ಮಾಡಿ ಬರೆದಿರಲು ಸಾಕು.

ಗಣಪತಿಯನ್ನು ಶಾನುಭೋಗನನ್ನಾಗಿ ನೇಮಿಸುವ ಮೊದಲು ಶಿವನು ಒಂದು ಪರೀಕ್ಷೆ ತೆಗೆದುಕೊಂಡಂತೆಯೂ ಆದರಲ್ಲಿ ಶಿವನ ಹಿರಿ ಮಗ ಷಣ್ಮುಖನೂ ಭಾಗವಹಿಸಿ ದಂತೆಯೂ ಅರ್ಥವಾಗುತ್ತದೆ. ಆದರೆ ಷಣ್ಮುಖ ಅದರಲ್ಲಿ ತೀರ ಕೀಳ್ತರದಿಂದ ಸೋತುಹೋದ.

ಆ ಪರೀಕ್ಷೆಯಲ್ಲಿ ಶಿವ ಇಬ್ಬರಿಗೂ ಹೀಗೊಂದು ಸವಾಲು ಹಾಕಿದ: "ಇಬ್ಬರಲ್ಲಿ ಯಾರು ಪ್ರಥಮತಃ ವಿಶ್ವಕ್ಕೆ ಒಂದು ಸುತ್ತುಹಾಕಿ ಬರುವಿರೋ ಅವರನ್ನು ಶಾನುಭೋಗನಾಗಿ ಮಾಡುತ್ತೇನೆ". ಷಣ್ಮುಖ ಒಡನೆ ಹೊರಟು ರಭಸದಿಂದ ಲೋಕ ಪ್ರದಕ್ಷಿಣೆಯಲ್ಲಿ ಪ್ರವೃತ್ತನಾದ. ಗಣಪತಿ ಅಣ್ಣ ಕಣ್ಮರೆಯಾಗುವವರೆಗೆ ಹಾಗೇ ನಿಂತು ಬಳಿಕ ಶಿವನಿಗೊಂದು ಸುತ್ತು ಹಾಕಿ, "ನಾನೇ ಗೆದ್ದಿದ್ದೇನೆ. ಕೊಡು ನನಗೆ ನೌಕರಿ" ಎಂದ. "ಅದು ಹೇಗೊ?" ಎಂದು ಶಿವ ಕೇಳಿದರೆ, "ವಿಶ್ವವೆಲ್ಲ ನಿನ್ನ ಹೊಟ್ಟೆಯಲ್ಲಿದೆಯಂತಲ್ಲ. ನಿನಗೆ ಸುತ್ತು ಬಂದರೆ ಲೋಕ ಸುತ್ತಿದಂತಾಯಿತಲ್ಲ" ಎಂದ ಗಣಪತಿ ಹಲ್ಲು ಕಿರಿಯುತ್ತ. ಷಣ್ಮುಖ ಲೋಕ ಪ್ರದಕ್ಷಿಣೆ ಮುಗಿಸಿ ಮರಳಿದಾಗ ಗಣಪತಿ ಶಾನುಭೋಗನಾಗಿ ಎಷ್ಟೋ ವರ್ಷ ಸಂದಿತ್ತು.

ಇಂಥ ಸೂಕ್ಷ್ಮ ಶಾನುಭೋಗರಾದವರಿಗಲ್ಲದೆ ಬೇರೆಯವರಿಗೆ ಸಾಧ್ಯವೇ ಇಲ್ಲ. ಕೇಳಿಲ್ಲವೇ ನೀವು ಯೂರೋಪಿಯನ್ ಸಾಹೇಬನೊಬ್ಬನನ್ನು ಚಕಿತಗೊಳಿಸಿದ ಹಿಂದೂ ಶಾನುಭೋಗನ ಕಥೆ? ಸಾಹೇಬ ಶಾನುಭೋಗನ ಪರೀಕ್ಷೆ ತೆಗೆದುಕೊಳ್ಳುತ್ತ, ಒಂದು ವರ್ತುಲವನ್ನು ಬರೆದು ಇದನ್ನು ಅಳಿಸದೇ ಚಿಕ್ಕದಾಗಿ ಮಾಡಬಲ್ಲೆಯಾ ಎಂದು ಕೇಳಿದ. ಓಹೋ! ಎಂದು ಶಾನುಭೋಗ ಆ ವರ್ತುಲದ ಸುತ್ತ ಇನ್ನೊಂದು ದೊಡ್ಡ ದುಂಡು ಸುತ್ತಿ ಈಗ ಮೊದಲಿನದು ಚಿಕ್ಕದಾಯಿತಲ್ಲ ಎಂದನಂತೆ!

ದೇವಲೋಕದಲ್ಲಿ ಶಾನುಭೋಗನಾದ ಗಣಪತಿಗೆ ತ್ರಿಲೋಕಗಳಲ್ಲಿಯೂ ಪ್ರಥಮ ಪೂಜೆ ಸಿಗಲು ತಡವಾಗಲಿಲ್ಲ. ಪೂಜೆ ಸಲ್ಲಿಸಲು ತಡಮಾಡಿದವರ ಆಸ್ತಿಗಳು ದಾಖಲೆಗಳಲ್ಲಿ ಸಕಾಲದಲ್ಲಿ ಪೂಜೆ ಮಾಡಿದವರ ಹೆಸರಿಗೆ ಆಗಿಬಿಡುತ್ತಿದ್ದವು. ರಾವಣನ ರಾಜ್ಯ ವಿಭೀಷಣನಿಗೆ ಸೇರಿದ್ದು ಹೀಗೆಯೇ ಅಂತೆ. ಗಣಪತಿ ಒಮ್ಮೆ ಬರೆದನೆಂದರೆ ಅದರ ಮೇಲೇ ಅಪೀಲೇ ಇರಲಿಲ್ಲ.

ಎಲ್ಲ ಕಡೆಗಳಿಂದಲೂ ಮಾಮೂಲು ಬರತೊಡಗಿದಂತೆ ಗಣಪತಿಗೆ ಪದಾರ್ಥಗಳ ಮೇಲೆ ಮೋಹ ಹೆಚ್ಚಿತು. ಇದಕ್ಕೆ ಅವನ ತಲೆ ಆನೆಯದಾಗಿದ್ದುದೂ ಕಾರಣವಾಗಿರಬಹುದು. ಕುಳಿತು ಬರೆಯುವುದು ಮತ್ತು ಸಿಹಿ ತಿನ್ನುವುದು ಇವುಗಳಿಂದ ಅವನ ಹೊಟ್ಟೆ ಬಹಳ ಬೆಳೆದಿರಬೇಕು. ಅವನ ಹುಟ್ಟಿದ ದಿನ ಅವನನ್ನು ಕರೆದು ಪೂಜಿಸುವವರ ಸಂಖ್ಯೆ ಅಪಾರವಾಗಿತ್ತು. ಗಣಪತಿ ದಾಕ್ಷಿಣ್ಯಶೀಲ; ಎಲ್ಲ ಶಾನುಭೋಗರಂತೆ ಅವನೂ ಪ್ರೀ(ಭೀ)ತಿ ಯಿಂದ ಜನ ಕೊಟ್ಟದ್ದನ್ನು ಒಲ್ಲೆನೆಂದು ಕಲ್ಪನ ಮಾಡಲಾರದ ಉದಾರಿ. ಇಂಥಾ ಒಂದು ದಿನವೇ ಅವನು ತನ್ನ ಇಲಿಯ ಮೇಲೆ ಅವಸರವಸರವಾಗಿ ಪೂಜೆಗೊಳ್ಳಲು ಹೊರಟಿದ್ದಾಗ ಹೊಟ್ಟೆ ಭಾರದಿಂದ ಮುಂಭಾರವಾಗಿ ಬಿದ್ದದ್ದು. ಅವನ ಹೊಟ್ಟೆ ಯಾವುದೋ ಹರಿತವಾದ ಪದಾರ್ಥಕ್ಕೆ ತಾಗಿರಬೇಕು. ಅದು ಹರಿದು ಹೋಯಿತು. ಈ ಘಟನೆಯ ಪರಿಣಾಮವಾಗಿ ಚಂದ್ರನಿಗೆ ಶಾಪ ಬಂದದ್ದು ಮತ್ತು ಸ್ವತಃ ಗಣಪತಿಯ ಒಂದು ದಾಡೆ ಹೋಗಿ ಅವನಕೈಯಲ್ಲಿ ಕುಳಿತದ್ದು ನಿಮಗೆ ಗೊತ್ತೇ ಇದೆ.

ಗಣಪತಿ ತನ್ನ ಜೀವನದಲ್ಲಿ ಮಾಡಿದ ದಡ್ಡ ಕೆಲಸ ಇದೊಂದೇ ಎನ್ನಬಹುದು. ತನ್ನ

ಹಲ್ಲನ್ನು ಮುರಿದು ತನ್ನ ಶತ್ರುವನ್ನು ಹೊಡೆಯಹೋಗುವುದು ಯಾವ ಶಾನುಭೋಗನಿಗೂ ಶೋಭಿಸುವ ಕೆಲಸವಲ್ಲ. ಅವನ ಕಾರ್ಯಸಾಧನೆಯೆಲ್ಲ ಇತರರ ಹಲ್ಲು ಕೀಳಿಸಿ ತಾನು ಲಾಭ ಪಡೆಯುವುದರಲ್ಲೇ ಇರುತ್ತದೆ. ಆಗ ಮುರಿದುಕೊಂಡ ದಾಡೆಯನ್ನು ಏನು ಮಾಡುವುದೆಂದು ಇಂದಿಗೂ ಅವನಿಗೆ ಬಗೆಹರಿಯದೆ ಅದನ್ನು ಕೈಯಲ್ಲೇ ಹಿಡಿದುಕೊಂಡಿದ್ದಾನೆ. ಆದರೆ ಹೋದ ತಲೆಯ ಸ್ಥಳಕ್ಕೆ ಇನ್ನೊಂದನ್ನು ಇರಿಸಿಕೊಟ್ಟ ತಂದೆಗೆ ಹೇಳಿ ತನ್ನ ದಾಡೆಯನ್ನು ಆತ ಪುನಃ ಏಕೆ ಜೋಡಿಸಿಕೊಳ್ಳಲಿಲ್ಲ ಎಂದು ನನಗೆ ತಿಳಿಯದಾಗಿದೆ.

ಇದೊಂದು ಘಟನೆಯನ್ನು ಬಿಟ್ಟರೆ ಗಣಪತಿ ಅತ್ಯಂತ ಬುದ್ಧಿಶಾಲಿ ದೇವತೆಯೇ ಸೈ. ಅವನ ಬುದ್ಧಿವಂತಿಕೆಗೆ ಎಲ್ಲಕ್ಕಿಂತ ದೊಡ್ಡ ನಿದರ್ಶನವೆಂದರೆ ಅವನು ಮದುವೆಯಾಗದಿರುವುದು. ಆದ್ದರಿಂದಲೇ ಇರಬೇಕು, ಎಲ್ಲ ಬಂಜೆಯರೂ ಅವನ ಮೇಲೆ ನಂಬಿಕೆಯಿಟ್ಟಿದ್ದಾರೆ.

ಪರಮೇಶ್ವರನ ಇಚ್ಛೆಯನ್ನು ಯಾರೂ ಊಹಿಸಲಾರರೆಂದು ನಮ್ಮ ನಾಯಕರೊಬ್ಬರ ಅಭಿಪ್ರಾಯ.

ಅದಕ್ಕೆ ಕಾರಣವೆಂದರೆ ಪಾರ್ವತಿಯ ಇಚ್ಛೆಯ ದುರೂಹ್ಯತೆ, ಅಲ್ಲವೆ?

❐

# ಸೀರೆ ಮತ್ತು ಮಹಾಭಾರತ

ಭಾರತದ ಅಧ್ಯಾತ್ಮ, ಆನೆ ಮತ್ತು ಆಗಾಖಾನರ ನಂತರ ಪಾಶ್ಚಾತ್ಯರನ್ನು ಎಲ್ಲಕ್ಕಿಂತ ಹೆಚ್ಚು ಮರುಳು ಮಾಡಿದ ಇನ್ನೊಂದು ಭಾರತೀಯ ವಸ್ತುವೆಂದರೆ ಸೀರೆ. ಕೆಲ ವರ್ಷಗಳ ಹಿಂದೆ ಮದ್ರಾಸಿನಲ್ಲಿ ಸೇರಿದ ಒಂದು ವಿಶ್ವಪರಿಷತ್ತಿಗೆ ಬಂದ ವಿದೇಶಿ ಕಾರ್ಯಕರ್ತೆಯರು ಇಲ್ಲಿನ ಸೀರೆಗಳಿಗೆ ಮರುಳಾಗಿ ಹೋದರು. ಅಮೇರಿಕದ ಫ್ಯಾಶನ್ ತಜ್ಞಳೊಬ್ಬಳು ಹೊನಲುಲುವಿನಲ್ಲಿದ್ದ ತನ್ನ ಫ್ಯಾಶನ್ ಅಂಗಡಿಗಳಿಗಾಗಿ ಬನಾರಸಿನ ಸೀರೆಗಳನ್ನು ಖರೀದಿ ಮಾಡಲು "ಕಾಶೀ ಯಾತ್ರೆ" ಮಾಡಿದಳು. ದಿವಂಗತ ಸ್ಟಾಫರ್ಡ್ ಕ್ರಿಪ್ಸರ ಮಗಳು ಸೀರೆಯ ಭಕ್ತಳಾಗಿ ಸಭೆ ಸಮ್ಮೇಳನಗಳಿಗೆ ಸೀರೆಯುಟ್ಟೇ ಹೋಗಿ ಎಲ್ಲರ ಕಣ್ಣುಗಳನ್ನು ತನ್ನ ಕಡೆಗೆ ಸೆಳೆದುಕೊಳ್ಳುತ್ತಿದ್ದಳು.

ಜಗತ್ತಿನ ಸೌಂದರ್ಯ ರಾಣಿಯ ಪಟ್ಟದ ಸ್ಪರ್ಧೆಗಾಗಿ ಅಮೇರಿಕಕ್ಕೆ ಹೋದ ಇಂದ್ರಾಣಿ ರಹಮಾನಳಿಗೆ ಜಗದೇಕಸುಂದರಿ ಬಿರುದು ಸಿಗದಿದ್ದರೂ ಅವಳ ಸೀರೆ ಸ್ಯಾನ್‌ಫ್ರಾನ್ಸಿಸ್ಕೋದ ಫ್ಯಾಶನ್ ರಮಣಿಯರನ್ನು ಮುಗ್ಧಗೊಳಿಸಿಬಿಟ್ಟಿತಂತೆ. ಸ್ಯಾನ್‌ಫ್ರಾನ್ಸಿಸ್ಕೋದ ಸೌಂದರ್ಯಪರೀಕ್ಷಕರು ಸೀರೆಗಿಂತಲೂ ಆಳವಾಗಿ ಪರೀಕ್ಷೆ ಮಾಡುವ ಹಟಕ್ಕೆ ಬೀಳದಿದ್ದರೆ ಖಂಡಿತ ನಮ್ಮ ಇಂದ್ರಾಣಿಗೇ ೧೯೫೨ರ ವಿಜಯಮಾಲೆ ಬೀಳುತ್ತಿತ್ತೆಂಬುದರಲ್ಲಿ ನನಗೆ ಸಂಶಯವಿಲ್ಲ. ಯುರೋಪಿನ ಯಾವ ದೇಶದಲ್ಲಾಗಲಿ ಸೀರೆಯುಟ್ಟು ಹೋದರೆ ಯಾವ ದರ್ಪಶೀಲ ಫ್ಯಾಶನ್ ಅಂಗಡಿಯಲ್ಲೂ ತತ್‌ಕ್ಷಣ ನಿಮಗೆ ಗಮನ ದೊರೆಯುವುದೆಂದು ಅಮಿತಾ ಮಲ್ಲಿಕ್ ಹೇಳುತ್ತಾಳೆ.

ಸೀರೆಯ ಗಂಡು ಅವತಾರವಾದ ಧೋತರವು—ಅದನ್ನೂ ಕುಮಾರವ್ಯಾಸ ಸೀರೆಯೆಂದೇ ಕರೆದಿದ್ದಾನೆ—ವಿದೇಶೀಯರನ್ನು ಅಷ್ಟಾಗಿ ಆಕರ್ಷಿಸದಿದ್ದರೂ ಅವರನ್ನು ಆಶ್ಚರ್ಯದಿಂದ ಬಾಯಿಬಿಡಿಸದೆ ಇಲ್ಲ. ರಾಜಾರಾಮ ಮೋಹನರಾಯರು ಇಂಗ್ಲೆಂಡಿಗೆ ಹೋದಾಗ ವಿಕ್ಟೋರಿಯಾರಾಣಿ ಅವರನ್ನು ಸಂದರ್ಶನಕ್ಕಾಗಿ ಆದರದಿಂದ ಕರೆಸಿಕೊಂಡಳು. ಇದು ಈ ಭಾರತೀಯ ದೇಶ ವತ್ಸಲನನ್ನು ಕಾಣುವ ತೀವ್ರ ಅಭಿಲಾಷೆಯಿಂದಲೇ ಎಂದು ಜನ ಮೊದಲು ಭಾವಿಸಿದ್ದರು. ಆದರೆ ನಿಜವಾದ ಗುಟ್ಟು ಆಮೇಲೆಯೇ ಹೊರಬಿತ್ತು. ಸೂರ್ಯಾಸ್ತವೇ ಇಲ್ಲದ ಸಾಮ್ರಾಜ್ಯದ ಈ ಒಡತಿಗೆ ಈ ಬಂಗಾಲಿ ಬ್ರಾಹ್ಮಣನ ಹೊಟ್ಟೆಯ

ಮೇಲೆ ಯಾವ ಟೊಂಕ ಪಟ್ಟಿಯೂ ಇಲ್ಲದೆ ಹತ್ತು ಮೊಳಉದ್ದದ, ಹೊಲಿಗೆ ಇಲ್ಲದ, ಬಟ್ಟೆ ಹೇಗೆ ನಿಲ್ಲುವುದೆಂದು ನೋಡುವ ಕುತೂಹಲ ತಾಳದಾಗಿತ್ತಂತೆ.

ಸೀರೆಯು ಭಾರತೀಯರ ಕಲಾದೃಷ್ಟಿಯ ಜೀವಂತ ಪ್ರತೀಕವಾಗಿದೆಯೆಂಬಲ್ಲಿ ಸಂದೇಹವಿಲ್ಲ. ನಿಷ್ಕಲಂಕವಾದ ಬಿಳಿಸೀರೆಯುಟ್ಟು ಹಿಂದೆಲೆಯನ್ನು ತಂತುಮಾತ್ರದಿಂದ ಆಧರಿಸಿ ನಿಂತ ಸೆರಗು ಜಾರಿ ಬೀಳದಂತೆ ಬ್ಯಾಲನ್ಸ್ ಮಾಡಿ ರಸ್ತೆಯ ಮೇಲೆ ತೇಲುತ್ತಿರುವಂತೆ ನಡೆಯುವ ಗುರ್ಜರ ನಾರಿಯರು ಯಾವಾಗಲೂ ನನಗೆ ಸುಳಿಸುಳಿಯಾಗಿ ತೇಲುವ ಸಿಗರೇಟಿನ ಹೊಗೆಯನ್ನು ಜ್ಞಾಪಕಕ್ಕೆ ತರುತ್ತಾರೆ. ಎರಡೂ ಸೌಂದರ್ಯಗಳೂ ಅಷ್ಟೇ ಅವರ್ಣನೀಯ. ಅಷ್ಟೇ ಅಸ್ಪರ್ಶಲಭ್ಯ ಆದರೂ ಅತ್ಯಂತ ದರ್ಶನೀಯ. ನಾನು ಶೇಕ್ಸ್‌ಪಿಯರನಾಗಿದ್ದರೆ "ಸೀರೆಯೇ, ನಿನ್ನ ಹೆಸರೇ ಲಾವಣ್ಯ!" ಎಂದು ಉದ್ಗಾರ ತೆಗೆಯುತ್ತಿದ್ದೆ.

ಫ್ರಾಕ್ ಧಾರಿಣಿಯರಾದ ಯುರೋಪಿಯನ್‌ರಮಣಿಯರು ಸುಂದರಿಯರಾಗಿರುತ್ತಾರೆ. ಆದರೆ ಆ ಸೌಂದರ್ಯ ಗದ್ಯಗಂಧಿಯಾಗಿ ಕಾಣಿಸುತ್ತದೆ. ನೀವೆಂದಾದರೂ ಒಂದು ಆಸ್ಪತ್ರೆಯಲ್ಲಿ ಸೀರೆಯುಟ್ಟ ನರ್ಸಮ್ಮಗಳ ಪಕ್ಕದಲ್ಲಿ ಯುರೋಪಿಯನ್ ಮಾದರಿಯ ಫ್ರಾಕ್‌ಧರಿಸಿದ ನರ್ಸಮ್ಮಗಳು ನಿಂತದ್ದನ್ನು ನೋಡಿದ್ದಿರಾ? ನೋಡಿರದಿದ್ದರೆ ಅಂಥ ಸನ್ನಿವೇಶಗಳಿಗಾಗಿ ಕಣ್ತೆರೆದಿರಿ, ಇಬ್ಬರೂ ಶುಭ್ರವಸ್ತ್ರ ಧಾರಿಣಿಯರು. ಇಬ್ಬರೂ ದಯಾಧರ್ಮದ ಅನುಸಾರಿಣಿಯರು. ಆದರೂ ನಿಮ್ಮ ಮೇಲೆ ಇಬ್ಬರೂ ಬೀರುವ ಪ್ರಭಾವ ಬೇರೆ ಬೇರೆ. ಫ್ರಾಕ್ ಧಾರಿಣಿಯಲ್ಲಿ ನೀವು ಚಟುವಟಿಕೆಯನ್ನು ಕಾಣುತ್ತೀರಿ. ಆದರೂ ನಿಮ್ಮ ರುಗ್ಣ ಮನಸ್ಸಿನ ಮೇಲೆ ಹೆಚ್ಚು ಶಾಂತವಾದ ಪ್ರಭಾವಬೀರುವವಳು ಸೀರೆಯುಟ್ಟವಳೇ.

ಸ್ತ್ರೀ ಲಾವಣ್ಯದ ಆದರ್ಶ, ಕಾವ್ಯದ ಹಾಗೆಯೇ, ದೃಷ್ಟಿಗಿಂತಲೂ ಭಾವವೇದ್ಯ ವಾಗಿರುವುದು. ಫ್ರಾಕು ನಾರಿಯ ತನುವಿನ ಏರುಪೇರುಗಳನ್ನು ತೀರ ಒತ್ತಿ ಹೇಳುತ್ತದೆ. ದೇವರು ಕೊಟ್ಟ ಚರ್ಮದ ಮೇಲೆ ಮತ್ತೊಂದು ಚರ್ಮ ಹಚ್ಚಿದಂತೆ ಅದು. ಸ್ಥೂಲಾಂಗಿಯರಂತೂ ಅದರಲ್ಲಿ ಭಯಾನಕರಾಗಿ ಕಾಣುತ್ತಾರೆ. ಆದರೆ ಸೀರೆಯೋ, ದೇವರು ಬರೆದ ಜೀವಂತ ಕವಿತೆಯ ಸುಂದರ ಪಂಕ್ತಿಗಳ ಕೆಳಗೆ ಕೆಂಪುಗೆರೆ ಹಾಕಿ ಇಡೀ ಕವಿತೆಯ ಸೌಂದರ್ಯದಿಂದ ನಮ್ಮ ಮನಸ್ಸನ್ನು ಅದು ವ್ಯಸ್ತಗೊಳಿಸುವುದಿಲ್ಲ. ಅದು ಇಡೀ ಕವಿತೆಯ ಸುತ್ತ ಒಂದು ಬಳ್ಳಿಯನ್ನು ಬಿಡಿಸುತ್ತದೆ. ಎಂತೆಯೇ ಅದು ಸ್ಥೂಲ ದೇಹವನ್ನು ಮತ್ತಷ್ಟು ಒತ್ತಿ ಹೇಳುವುದಿಲ್ಲ.

ಗೌನಿನ ಸೌಂದರ್ಯ ಸಿಂಪಿಗನು ಕೊಟ್ಟ ಮೋಡಿ. ಅದನ್ನು ಲಾವಣ್ಯವೆಂದು ಕರೆಯಲು ಸಾಧ್ಯವಿಲ್ಲ. ಅದರಲ್ಲಿ ಸಿಂಪಿಗನ ವ್ಯಕ್ತಿತ್ವವಿದ್ದೀತಾಗಲಿ ಅದನ್ನು ಧರಿಸಿದವಳ ವ್ಯಕ್ತಿತ್ವ ಪ್ರಕಟವಾಗದು. ಸೀರೆಯಲ್ಲಾದರೊ ಅಂಚು ಸೆರಗುಗಳ ಸೌಂದರ್ಯವನ್ನು ನೇಕಾರ ಕೊಟ್ಟನಾಗಲಿ, ಅದನ್ನು ಧರಿಸಿದ ರೀತಿ ಆಯಾ ನಾರಿಯದೇ. ಒಬ್ಬಾಕೆ ಸೀರೆಯುಟ್ಟ ಮೋಡಿಯಿಂದಲೇ ನೀವು ಅವಳ ಸ್ವಭಾವವನ್ನು ಓದಿಬಿಡಬಹುದು. ಅವಳ ವಕ್ಷದ ಮೇಲೆ

ಸ್ತ್ರೀ-ಜಾತಿಯ ಸಮಸ್ತ ವಕ್ರತೆಯನ್ನು ಪ್ರತಿಬಿಂಬಿಸಿ ಸುತ್ತಿಸುಳಿದು ಹೋದ ಸೆರಗಿನ ಮೋಡಿ ಮತ್ತು ಅದರ ಅಂಚು ನಿಂತ ನಿಲುವಿನ ಮೇಲಿಂದ ಇವಳು ಸರಳೆಯೊ ವಿಲಾಸಪ್ರಿಯಳೊ ದುರ್ಲಕ್ಷದವಳೋ ಎಚ್ಚರಿಕೆಯವಳೋ ಹೇಳಿಬಿಡಬಹುದು. ಅವಳ ಸೀರೆಯ ಪದರುಗಳ ಮಡಿಕೆ ಮಡಿಕೆ ನಿರಿ ನಿರಿಯೂ ತನ್ನದೇ ಕನ್ನಡಿ ಹಿಡಿಯುವುದು. ಅವಳ ಸೀರೆಯ ಒಪ್ಪ ಓರಣಗಳ ಮೇಲಿಂದಲೇ ನೀವು ಅವಳ ಮನೆಯ ವ್ಯವಸ್ಥೆ ಅವ್ಯವಸ್ಥೆಗಳನ್ನು ಊಹಿಸಿ ಬಿಡಬಹುದು. ಅವಳ ಸೌಂದರ್ಯಪ್ರಿಯತೆಗೂ ಅದು ಸಾಕ್ಷಿ ಹೇಳುವುದು. ಎಂಥ ಸೀರೆಯುಟ್ಟರೂ ಒಬ್ಬಳಿಗೆ ಒಪ್ಪುತ್ತದೆ, ಇನ್ನೊಬ್ಬಳಿಗೆ ಒಪ್ಪುವುದಿಲ್ಲ. ಒಬ್ಬಳು ಅಲಕ್ಷ್ಯದಿಂದ ಉಟ್ಟಳೋ ಎನ್ನುವ ಹಾಗೆ ಉಡುತ್ತಾಳೆ. ಆದರೆ ಸೀರೆ ಅವಳ ಮೈಮೇಲೆ ಸಂತೋಷದಿಂದಲೇ ನಿಲ್ಲುತ್ತದೆ. ಇನ್ನೊಬ್ಬಳು ಬಲು ಯತ್ನದಿಂದ ಮಡಿಕೆಗಳನ್ನು ತಿದ್ದಿ ತೀಡಿ ಉಡುತ್ತಾಳೆ. ಆದರೂ ಅದರಲ್ಲಿ ಕೃತಕತೆ ಕಾಣುತ್ತದೆ. ಒಂದು ಯಶಸ್ವಿಯಾದ ಅಶಿಕ್ಷಿತ ಪಟುತ್ವ, ಇನ್ನೊಂದು ಸುಶಿಕ್ಷಿತವಾದರೂ ಅಯಶಸ್ವಿ ಪಟುತ್ವ. ಸೀರೆ ಫ್ರಾಕಿನಂತೆ ದೇಹದ ಬಹಳಾಂಶವನ್ನು ಪ್ರಕಟಗೊಳಿಸದೆ ಬುದ್ಧಿಯ ಒಂದಂಶವನ್ನು ಪ್ರಕಟಪಡಿಸುತ್ತದೆ.

ಸೀರೆಯಿಂದ ಉಪಯೋಗಗಳು ಹಲವು. ಹಳೆಯದಾದ ಮೇಲೆ ಅದನ್ನು ಹಾಸಿ ಮಲಗಬಹುದು. ಒಂದು ಅಂಚು ಹೊಲಸಾದರೆ ಮೇಲೆ ಕೆಳಗೆ ಮಾಡಿ ಉಟ್ಟುಕೊಳ್ಳುವ ಸೌಕರ್ಯ ಫ್ರಾಕಿಗೆ ಎಂದಾದರೂ ಬಂದೀತೆ? ಹರಿದ ಮೇಲೆ ಕೌದಿ ಹೊಲಿಯಲಿಕ್ಕೂ ಫ್ರಾಕು ನಿಷ್ಪ್ರಯೋಜಕ.

ಮೂಢ ನಳಮಹಾರಾಯ ರಾಜ್ಯವನ್ನೂ ಆಮೇಲೆ ಬಟ್ಟೆಯನ್ನೂ ಕಳೆದುಕೊಂಡ ಸಮಯದಲ್ಲಿ ಅವನ ಮಾನ ಉಳಿಸಿದ್ದು ಅವನ ಹೆಂಡತಿಯ ಸೀರೆ, ದಮಯಂತಿ ಗಂಡನ ಮಾನ ಮುಚ್ಚಲು ತನ್ನ ಸೀರೆಯಿಂದೊಂದು ತುಂಡು ಹರಿದುಕೊಟ್ಟಂತೆ ಫ್ರಾಕ್‌ಧಾರಿಣಿ ಮಾಡಲಾಪಳೇ? ಒಂದು ಫ್ರಾಕಿನಿಂದ ಏಕಕಾಲದಲ್ಲಿ ಇಬ್ಬರ ಮಾನ ಮುಚ್ಚುವುದು ಅಶಕ್ಯ.

ಭಾರತದ ಇತಿಹಾಸದಲ್ಲಿ ಸೀರೆಯ ಸ್ಥಾನ ಅದ್ವಿತೀಯವಾದದ್ದು. ಸೀರೆಯಿಲ್ಲದಿದ್ದರೆ ಮಹಾಭಾರತವೇ ಆಗುತ್ತಿರಲಿಲ್ಲವೆಂದು ನನ್ನ ದೃಢವಾದ ಅಭಿಪ್ರಾಯ. ದ್ರೌಪದಿಯು ಸೀರೆಯ ಬದಲು ಫ್ರಾಕ್ ಹಾಕಿಕೊಂಡಿದ್ದರೆ ವಸ್ತ್ರಾಪಹರಣವು ಅಸಾಧ್ಯವಾಗಿ ಬಿಡುತ್ತಿತ್ತು. (ತಮಿಳರ ಪದ್ಧತಿಯಿಂದ ಉಟ್ಟಿದ್ದರೆ ಮಾತ್ರ ಎಲ್ಲಿಂದ ಪ್ರಾರಂಭಿಸಬೇಕೆಂದರಿಯದೆ ದುಶ್ಶಾಸನ ಅಪ್ರತಿಭನಾಗುತ್ತಿದ್ದನೇನೊ)! ಆಗ ಭೀಮಾರ್ಜುನ ದ್ರೌಪದಿಯರ ಪ್ರತಿಜ್ಞೆಯೂ ಅಸಂಭವವಾಗುತ್ತಿತ್ತು. ಎಲ್ಲಕ್ಕಿಂತ ಅಹಮದಾಬಾದಿನ ಗಿರಣಿ ಮಾಲಿಕರನ್ನು ನಾಚಿಸುವಂತೆ ಢೀಗುಗಟ್ಟಳೆ ವಸ್ತ್ರಗಳನ್ನು ಅವಳಿಗೆ ಪೂರೈಸಿ ತನ್ನ ಮಾಯಾವಿತವನ್ನು ಪ್ರದರ್ಶಿಸುವ ಸಂಧಿ ಕೃಷ್ಣನಿಗೆ ದೊರೆಯುತ್ತಿರಲಿಲ್ಲ. ಅರ್ಥಾತ್ ಭಾರತಯುದ್ಧವೇ ನಡೆಯುತ್ತಿರಲಿಲ್ಲ.

❒

# ಹಾಸ್ಯ ಮೀಮಾಂಸೆ

ಹಾಸ್ಯ ಎಂದರೇನು? ಏಕೆಬೇಕು? ಒಳ್ಳೇ ಮಲಾಮತ್ತಿನ ಪ್ರಶ್ನೆಗಳು.

ಹೂ ಎಂದರೇನು? ಹೋಳಿಗೆ ಎಂದರೇನು? ಅಥವಾ ಪ್ರೇಮ ಎಂದರೇನು? ಎಂದು ಕೇಳಿದ್ದರೆ ಆಗ ನಾನು ವೈಜ್ಞಾನಿಕವಾಗಿ-

ಹೂ ಎಂದರೆ ಶೇ. ೯೦ ನೀರು, ಶೇ. ೯.೯ ರಸ, ಶೇ. ೦.೦೦೧ ಚಂಚಲತೈಲ, ಶೇ. ೦.೦೦೦೦೧ ಪರಿಮಳ ದ್ರವ್ಯ, ಶೇ. ೦.೦೧ ವರ್ಣಕಣಗಳು, ೦.೦೮೮೯ ಇತರ ಎಂದೂ,

ಹೋಳಿಗೆ ಎಂದರೆ ಅ ಶೇ. ಮೈದಾ, ಬ.ಕ.ಶೇ. ಕಡಲೆಬೇಳೆ, ಡ.ಇ.ಶೇ. ಸಕ್ಕರೆ, ಎಫ್ ಶೇ. ನೀರು, ಶೇ. ಜಿ. ಬಣ್ಣ, ೦.೦೦ ಎಚ್.ಶೇ.ˎಯಾಲಕ್ಕಿ ಇತ್ಯಾದಿ, ಐಶೇ. ಎಣ್ಣೆ.... ಮತ್ತು ರಾಶಿಗಟ್ಟಳೆಯಲ್ಲಿ ಬರಿಮೈ ಬಾಣಸಿಗರು ತಯಾರಿಸಿದ್ದ ಪಕ್ಷದಲ್ಲಿ ೦.೦ಜೆ. ಬೆವರ ಹನಿ ಎಂದೂ ಹೇಳಬಹುದಿತ್ತು.

ಮತ್ತೆ ಪ್ರೇಮ ಎಂದರೆ, ಪ್ರಜಾಪತಿ ಬ್ರಹ್ಮನು ತನ್ನ ಉದ್ದೇಶಕ್ಕಾಗಿ ಗಂಡು-ಹೆಣ್ಣುಗಳಿಗೆ ತಾತ್ಕಾಲಿಕವಾಗಿ ಹಿಡಿಸಿದ ಹುಚ್ಚು ಎಂದೂ ಹೇಳುತ್ತಿದ್ದೆ.

ಈ ಪರ್ಸೆಂಟೇಜುಗಳು ಹೂವೂ ಆಗಲಾರವು, ಹೋಳಿಗೆಯೂ ಆಗಲಾರವು. ಹೂವನ್ನು ನೋಡಬೇಕು. ಮೂಸಬೇಕು; ಹೋಳಿಗೆಯನ್ನು ತಿನ್ನಬೇಕು. (ಯಾರಾದರೂ ಮಾಡಿಸಿ ಹಾಕಿದರೆ); ಪ್ರೇಮವನ್ನು ಅನುಭವಿಸಬೇಕು. (ಅನುಭವಿಸಿ ಮುಗಿಸಿ ಬಹಳ ದಿನಗಳ ನಂತರ ಹಿಂದಕ್ಕೆ ತಿರುಗಿ ನೋಡಿದರೆ ಅದು ಹಾಸ್ಯವಾಗಿಯೂ ತೋರಬಹುದು, ಅನ್ನಿ.)

ಹಾಸ್ಯವನ್ನಾದರೂ ನೋಡಿ, ಕೇಳಿ ಅಥವಾ ಓದಿ ನಗಬೇಕು. ಅದಕ್ಕಿಂತ ಹೆಚ್ಚಿನ ಪರಿಶೀಲನೆಗೆ ಹೋಗಬಾರದು.

ಯಾಕೆಂದರೆ ಸ್ವಾಮಿ, ಲಕ್ಷಣವಾಕ್ಯಗಳು ಲಕ್ಷ್ಯಗಳನ್ನು ನಾಶಮಾಡುತ್ತವೆ.

ಆದರೂ ನಿಮಗೆ ಲಕ್ಷಣವಾಕ್ಯದ ಹಟವೇ ಇದ್ದರೆ ಪ್ರಯತ್ನ ಮಾಡುವಾ:

"ಹಾಸ್ಯ ಎಂದರೆ, ಬಹುತರವಾಗಿ, ಮನುಷ್ಯ ಎಂಬ ಪಶುವಿನ ಮುಖವೆಂಬ ಅವಯವವನ್ನು ನಿಯಂತ್ರಿಸುವ ಸುಮಾರು ೨೦೦ ಸ್ನಾಯುಗಳ ಆಕುಂಚನ-ಪ್ರಸರಣಗಳಿಂದ ಉಂಟಾಗಬಲ್ಲ ವಿಶಿಷ್ಟ ಮುಖವಿಕಾರವನ್ನೂ, ಕೆಲವೇಳೆ ಅದರ ಸಂಗಡವೇ ಅದೇ

ಪಶುವಿನ ಶ್ವಾಸಕೋಶಗಳೆಂಬ ಗಾಳಿ ಚೀಲಗಳ ಜಾಲದಿಂದ, ಗಂಟಲೆಂಬ ಸುರಂಗದೊಳಗಿನ ಧ್ವನಿಪೆಟ್ಟಿಗೆಯ ಮೂಲಕ ಬಾಯಿ ಎಂಬ ಬಿಲದ್ವಾರದಿಂದ ಸಶಬ್ದವಾದ ವಾಯು ವಿಸ್ಫೋಟವನ್ನೂ ಉತ್ಪಾದಿಸಲು ಕಾರಣವಾಗುವಂಥ ಮಾತು ಅಥವಾ ಸನ್ನಿವೇಶ"

ಇದು ನನಗೆ ಸಾಧ್ಯವಿದ್ದಷ್ಟು ನಿಖರವಾದ ವೈಜ್ಞಾನಿಕ ಲಕ್ಷಣವಾಕ್ಯ. ಇದಕ್ಕೆ ಕೆಲ ವಿವರಣೆಗಳನ್ನು ಜೋಡಿಸಬೇಕಾಗಿದೆ. "ಮುಖವಿಕಾರ" ಎಂಬ ಪದಗಳಲ್ಲಿ "ವಿಕಾರ"ಕ್ಕೆ ನೀವು ಆಕ್ಷೇಪಿಸಬಹುದು. ಆದರೆ ಹಾಸ್ಯದ ಪರಿಣಾಮ ನರಪಶುವಿನ ಮೇಲೆ ಜಬರ್ದಸ್ತಾಗಿ ಆದಾಗ ಉಂಟಾಗುವ ಮುಖಲಕ್ಷಣದ ಬದಲಾವಣೆ ಬಹುತರವಾಗಿ ವಿಕಾರವಾಗಿಯೇ ಇರುತ್ತದೆ. "ನಸುನಗೆ" ಎಂದು ಕರೆಯುವ ಚಹರೆ ಬದಲಾವಣೆ ಮಾತ್ರ, ಸರಿಯಾದ ಮುಖವಿದ್ದಲ್ಲಿ, ಸುಂದರವಾಗಿರಬಲ್ಲದು. ಆದರೆ ನಸುನಗೆ ನಿಮ್ಮ ಶತ್ರುವಿಗೆ ಅಪಘಾತವಾದಾಗ ಕೂಡ ಉಂಟಾಗಬಲ್ಲದು; ಮತ್ತು ಅಪಘಾತದ ಸುದ್ದಿಯನ್ನು ಹಾಸ್ಯವೆಂದು ವರ್ಗೀಕರಿಸಲು ನನ್ನ ಮನಸ್ಸು ಒಪ್ಪುವುದಿಲ್ಲ. ಅದಲ್ಲದೆ, ಸುಂದರವಾಗಿದ್ದರೂ ಸಂಸ್ಕೃತಕೋಶದ ಪ್ರಕಾರ ಎಲ್ಲ ಬದಲಾವಣೆ "ವಿಕಾರ"ವೇ.

ಹಾಸ್ಯದ ಲಕ್ಷಣ ಹೇಳುವಾಗ ಬಹುತರವಾಗಿ ಮನುಷ್ಯನೆಂಬ ಪಶುವಿಗೆ ಹಾಸ್ಯವನ್ನು ತಳಕುಹಾಕಿದ್ದೇನೆ. ಮನುಷ್ಯನನ್ನು "ನಗುವ ಪಶು" ಎಂದು ಕೆಲವರು ಕರೆದಿದ್ದರೂ ನನಗೆ ಮನವರಿಕೆ ಆಗಿಲ್ಲ. ಇದೇ ಒಂದು ತಾಸು ಮುಂಚೆ ಸುಂದರಿ ಎಂಬ ನಮ್ಮ ಕುರೂಪಿ ಬೆಕ್ಕನ್ನು ನಾಯಿಯೊಂದು ಅಟ್ಟಿಕೊಂಡು ಬಂತು; ಜೀವ ಉಳಿದರೆ ಕದ್ದು ಬೆಣ್ಣೆ ತಿಂದು ಬದುಕಿಯೇನು ಅಂತ ಓಡಿದ ಬೆಕ್ಕು ನಮ್ಮ ಬೇಲಿಯ ಬೇವಿನ ಮರದ ಬುಡಕ್ಕೆ ಬಂದು ಹಿಂತಿರುಗಿ ನೋಡಿ, ಹಾಗೇ ನಿಂತು, ನಾಯಿ ತೀರ ಹತ್ತಿರ ಬರುವವರೆಗೆ ಕಾದು, ಅದು ಹಿಡಿಯಬೇಕು ಎಂದಾಗ ಜಿಗ್ಗನೆ ಜಿಗಿದು ಮರವೇರಿ ಮ್ಯಾಂ ಮ್ಯಾಂ ಎಂದು ಅಣಕಿಸಿತು. ನಾಯಿ ಏದುತ್ತ ನಿಂತಿತು. ನಮ್ಮ ಸುಂದರಿ ಬೆಕ್ಕು ನಾಯಿಯನ್ನು ಹಾಸ್ಯ ಮಾಡುತ್ತಿರಲಿಲ್ಲವೇ? ನಾಯಿಗೆ ಮಾತ್ರ ಹಾಸ್ಯಪ್ರಜ್ಞೆ ಇಲ್ಲದ್ದರಿಂದ, ಅದು ಮೇಲೆ ನೋಡುತ್ತ ಕೋಪದಿಂದ ಬೊಗಳಿತು. ನಾಲ್ಕು ಕಾಲಿನ ಪಶುಗಳಿಗೆ ಹಾಸ್ಯ ಗೊತ್ತಿಲ್ಲೆಂದು ಹೇಗೆ ಹೇಳೋಣ?

ಅಥವಾ ಎರಡು ಕಾಲಿನ ಮಾನವೇತರ ಜಂತುವಾದ ಕಾಗೆಯನ್ನು ತೆಗೆದುಕೊಳ್ಳಿ. ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಸರ್ಟಿಫಿಕೇಟು ಪಡೆದ ಈ ಸನ್ನಿವೇಶ ಕೇಳಿ: ಬೆಳಗ್ಗೆ ಎದ್ದು ಒಂದು ಕಾಗೆಗೆ ಒಂದು ಪಿಂಗ್‌ಪಾಂಗ್ ಚೆಂಡು ಕಾಣಸಿಕ್ಕಿತು. ಅದು ತತ್ತಿಯೆಂದೆಣಿಸಿ, ಅದು ಅದರ ಮೇಲೆರಗಿ ಎತ್ತಿಕೊಂಡು ಮರದ ಮೇಲೇರಿ ಟೊಂಗೆಯ ಮೇಲಿಟ್ಟು ಕುಕ್ಕಿತು, ತಿರುಗಿಸಿತು. ಕೆಳಕ್ಕೆ ಕಲ್ಲ ಮೇಲೆ ಕೆಡವಿತು; ಅದೇನು ಜಪ್ಪೆನ್ನಲಿಲ್ಲ. ಅದು ತತ್ತಿಯಲ್ಲ ಎಂದು ಖಚಿತವಾಯಿತು. ಇದನ್ನು ನೀವು ಹಾಸ್ಯಕರ ಎನ್ನುತ್ತೀರಿ. ಅದು ನಿಮಗಾಯಿತು. ಆದರೆ ಮುಂದೆ ಕೇಳಿ. ಕಾಗೆ ನಿರಾಶೆಯಿಂದ ಸೊಂಡೆ ಒಣಗಿಸಿಕೊಂಡು ಹಾರಿಹೋಗದೇ ಅಲ್ಲೇ ಕುಳಿತು ಜಾತಿ ಬಾಂಧವರನ್ನು ಕರೆಯಿತು. ಅವು ಬಂದವು. ತತ್ತಿ ನೋಡಿದವು. ಒಂದೊಂದಾಗಿ ಎರಗಿದವು, ಕುಕ್ಕಿದವು, ಜಪ್ಪಿದವು. ಇದು ನಡೆಯುತ್ತಿದ್ದಾಗ ಮೊದಲ ಕಾಗೆ

ಮರದ ಕೊಂಬೆಯಲ್ಲಿ ಕೊರಳು ಕೊಂಕಿಸಿ ಕೊಂಕಿಸಿ ತೆಪ್ಪಗೆ ನೋಡುತ್ತಿತ್ತು. ಈ ಕಾಗೆಗೆ ಹಾಸ್ಯಪ್ರಜ್ಞೆ ಇರಲಿಲ್ಲವೆ? ಮನುಷ್ಯ ತನ್ನ ದುರಹಂಕಾರದಲ್ಲಿ ಅನೇಕ ಯೋಗ್ಯತೆಗಳನ್ನು ತನಗೇ ಆರೋಪಿಸಿಕೊಳ್ಳುತ್ತಾನೆ.

ಹಾಸ್ಯದ ಮೂಲ ಸಾಮಗ್ರಿ, ಪ್ರಚೋದನೆ, ಪ್ರಯೋಜನ ಏನು? ಎಂಬುದನ್ನು ಕುರಿತು ಜಗತ್ತಿನ ಮಹಾ ಮಹಾ ತತ್ತ್ವಜ್ಞಾನಿಗಳು ತೌಡು ಕುಟ್ಟಿದ್ದಾರೆ. ಸರಕಾರ ಮುಟ್ಟಿದ್ದೆಲ್ಲ ಮಸಿಯಾದ ಹಾಗೆ, ತತ್ತ್ವಜ್ಞಾನಿಗಳು ಕುಟ್ಟಿದ್ದೆಲ್ಲ ಹೊಟ್ಟಾಗುತ್ತದೆ. ಈಗ ಮನೋವಿಜ್ಞಾನಿಗಳೂ ಶರೀರಶಾಸ್ತ್ರಿಗಳೂ ಈ ಗಲಭೆಯಲ್ಲಿ ಸೇರಿಕೊಂಡಿದ್ದಾರೆ. ಅವರು ಬರೆದದ್ದನ್ನೆಲ್ಲ ಓದಿದರೆ ಮುಂದೆ ನಗುವುದೇ ನಗಿಸುವುದೇ ಸಾಧ್ಯವಾಗಲಿಕ್ಕಿಲ್ಲವೆಂದು ಹೆದರಿ ನಾನು ಅದನ್ನೆಲ್ಲ ಓದುವ ಗೊಡವೆಗೆ ಹೋಗಿಲ್ಲ.

ನಮ್ಮ ಕಾವ್ಯಮೀಮಾಂಸಕರು ಹಾಸ್ಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಅದೂ ಒಂದು ರಸ ಎಂದು ಒಪ್ಪಿಕೊಂಡು, ಅದರ ರಸವನ್ನು ಉಂಡುಣಿಸುವುದನ್ನು ಅವರು ಅರಸರುಗಳಲ್ಲಿ ಅದಕ್ಕೇ .ಸ್ಪೆಶಲೈಸ್ ಆಗಿರುವ ವಿದೂಷಕರಿಗೆ ಬಿಟ್ಟರು. ಆದರೆ ಹಾಸ್ಯವನ್ನು ಗುರುತಿಸುವುದಕ್ಕೆ ನಿಮಗೊಂದು ಕ್ಲೂವನ್ನು ಕವಿಗಳು ಒದಗಿಸಿದ್ದಾರೆ. ಅದೆಂದರೆ ಹಾಸ್ಯಕ್ಕೊಂದು ಬಣ್ಣ ಇದೆ ಎಂಬುದು. ಆ ಬಣ್ಣ ಬಿಳಿ. ಪ್ರಪಂಚದ ಚಳಿ ಪ್ರದೇಶದಲ್ಲೆಲ್ಲ ಹಾಸ್ಯ ರಾಶಿರಾಶಿಯಾಗಿ ಫೇರಾಯಿಸಿದೆ ಎಂದು ನಿಮಗೆ ಗೊತ್ತಾ? ತ್ರಯಂಬಕನು ಒಂದು ಸಲ ಅಟ್ಟಹಾಸದಿಂದ ನಗತೊಡಗಿದನಂತೆ. ಸುರು ಮಾಡಿದ ಮೇಲೆ ಅವನಿಗೆ ಫಕ್ಕನೆ ನಿಲ್ಲಿಸಲಾಗಲಿಲ್ಲ. ಬಿಳಿಯಾದ ಈ ನಗು ರಾಶಿಯಾಗಿ ಕೂಡಿ ಬಿತ್ತಂತೆ. ಹಿಮಾಲಯದ ಮೇಲಿರುವುದೆಲ್ಲ ಆ ಹಿಮರಾಶಿಯಂತೆ. ಉತ್ತರ ದಕ್ಷಿಣ ಧ್ರುವಗಳಲ್ಲಿ ಕೂಡಿ ಬಿದ್ದದ್ದೂ ಇದೇ ಇರಬೇಕು. ನಿಮಗೇನಾದರೂ ಹಾಸ್ಯದ ಶಾರ್ಟ್ ಸಪ್ಲೈ ಇದ್ದರೆ ಅಲ್ಲಿಂದ ಇಂಡೆಂಟ್ ಮಾಡಿರಿ. ನಾನು ಮಾತ್ರ ಅಸ್ತ್ಮಾ ರೋಗಿಯಾದ್ದರಿಂದ ಈ ಶೀತಲ ಹಾಸ್ಯವನ್ನು ನುಂಗಲು ಅಂಜುತ್ತೇನೆ.

ಆದ್ದರಿಂದ ನಾನು ಹಾಸ್ಯದ ಮೂಲದ ಬಗ್ಗೆ ನಮ್ಮ ದಾಸರನ್ನು ಆಶ್ರಯಿಸುತ್ತೇನೆ. "ನಗುವರಲ್ಲೋ ರಂಗಯ್ಯ ನಿನ್ನಾಟವಾ ಕಂಡು! ಹಗರಣವೆನಿಸುತಿದೆ ನನಗೆ..." ಹಗರಣ— ಹೌದು ಹಗರಣ ಅಥವಾ ಅಸಂಬದ್ಧತೆಯೇ ಹಾಸ್ಯದ ಮೂಲ. ರಂಗಯ್ಯನೇ ಹಗರಣದವನಾದ ಮೇಲೆ ಅವನ ಪ್ರಪಂಚದಲ್ಲಿ ಅದಕ್ಕೇನು ಕೊರತೆ! ನಿಮ್ಮ ಮನೆ ಬಾಗಿಲಲ್ಲೇ, ಮನ ಬಾಗಿಲಲ್ಲೇ ಹಗರಣ ಇದೆ. ಗುರುತಿಸುವ ಮತಿ (ಕೆಲವೇಳೆ ದುರ್ಮತಿ) ಬೇಕಷ್ಟೇ. ಒಂದು ಸಲ ಎರಡು ಅಂಬಾಸಿಡರ್ ಕಾರುಗಳು ಕಾಳಗಕ್ಕೆ ನಿಂತ ಟಗರು ಜೋಡಿಯ ಹಾಗೆ ಹಿಂದಣ ಚಕ್ರಗಳ ಮೇಲೆ ಬಾನೆಟ್-ಬಾನೆಟ್ ಢಿಕ್ಕಿ ಹೊಡೆದು ಮುಂಗಾಲು ಎತ್ತಿನಿಂತ ದೃಶ್ಯ ಕಂಡೆ ನಾನು. ನನಗೆ ಇದೊಂದು ದೊಡ್ಡ ಹಾಸ್ಯವಾಗಿ ಕಂಡಿತು. ಎಷ್ಟು ಫರ್‌ಫೆಕ್ಟ್ ಆಗಿ ಮುಂಡಾ ಮುಂಡಾ ಮಾಡಿ ನಿಂತಿವೆ! ಮತ್ತೆ ಯಾರಿಗೂ ಗಾಯ ಕೂಡ ಆಗಿಲ್ಲವಂತೆ.

ನಾನು ದೊಡ್ಡದಾಗಿ ನಕ್ಕೆ. ಈ ಪ್ರಪಂಚದಲ್ಲಿ ಅತ್ಯಂತ ಪರ್‌ಫೆಕ್ಟ್ ಆಗಿರುವುದರಷ್ಟು ದೊಡ್ಡ ಅಸಂಬದ್ಧತೆ ಬೇರೆ ಒಂದುಂಟೆ?

ಅಥವಾ ನನ್ನ ಮಿತ್ರ ದಿವಂಗತ ದ.ಬಾ. ಕುಲಕರ್ಣಿಯವರ ಒಂದು ಚಟಾಕಿ ಕೇಳಿ, "ಏನು ಕುಲಕರ್ಣಿಯವರೇ, ಇದು ನಿಮ್ಮ ಸ್ವಂತ ಮನೆಯೋ ಬಾಡಿಗೆಯದ್ದೋ? ಎಂದೊಬ್ಬ ಪರವೂರ ಅತಿಥಿ ಕೇಳಿದರು. "ಓ ಅದು ನನ್ನ ಸ್ವಂತ ಬಾಡಿಗೇ ಮನೆ" ಎಂದು ಅವರು ಉತ್ತರಕೊಟ್ಟು "ಒಂದು ವರ್ಷದಿಂದ ಬಾಡಿಗೆ ಕೊಟ್ಟಿಲ್ಲ" ಎಂದು ನನ್ನ ಕಿವಿಯಲ್ಲಿ ಉಸುರಿದರು. ಬಾಡಿಗೆಯನ್ನೇ ಕೊಡಲಾರದವನಿಗೆ ಸ್ವಂತ ಮನೆ ಇರಬಹುದೆಂಬ ಕಲ್ಪನೆಯ ಅಸಂಬದ್ಧತೆ ಅವರಿಗೆ ಕಚಗುಳಿ ಇಟ್ಟಿತ್ತು. ಸ್ವಂತ-ಬಾಡಿಗೆ ಮನೆಯೆಂಬ ಕಲ್ಪನೆಯ ಶಬ್ದ-ವೈಪರೀತ್ಯವನ್ನು ಕಂಡು ನಾವು ನಕ್ಕಿದ್ದೆವು.

ವೈಷ್ಣವರಲ್ಲಿ ಏಕಾದಶಿ ದಿನ ಮಾಡುವ ಊಟಕ್ಕೆ "ಫಲಾಹಾರ" ಎಂದು ಕರೆಯುವ ಸಂಪ್ರದಾಯ ಇತ್ತು. ಮಹಾ ಆಚಾರವಂತ ಆಚಾರ್ಯರೊಬ್ಬರು, "ಏನಪ್ಪಾ, ಫಲಾಹಾರ ಆಯಿತೆ?" ಎಂದು ಪರಿಚಯದ ಹುಡುಗನನ್ನು ಕೇಳಿದರು. "ಫಲಾಹಾರವೇ? ಏಕಾದಶೀ ದಿನ! ಇಲ್ಲ ಸ್ವಾಮಿ, ಹೊಟ್ಟೆ ತುಂಬಾ ಉಪವಾಸ ಮಾಡಿಸಿ ಅಮ್ಮ ಕಳಿಸಿದ್ದಾಳೆ" ಎಂದನಾ ಕಿಲಾಡಿ. ಆಚಾರ್ಯರ ಮುಖ ಒಮ್ಮೆ ಕೆಂಪಾಯಿತು. ಆಮೇಲೆ ಅವರೂ ಗೊಳ್ಳನೆ ನಕ್ಕರು. ಜೀವಮಾನವೆಲ್ಲ ಏಕಾದಶಿ ಊಟವನ್ನು ಫಲಾಹಾರ ಎಂದು ಕರೆಯುವುದರಲ್ಲಿ ಏನೊಂದೂ ಹಾಸ್ಯವನ್ನು ಕಾಣದಿದ್ದ ಆಚಾರ್ಯರಿಗೆ ಈ ಹುಡುಗ ಅದರ ಅಸಂಬದ್ಧತೆಯನ್ನು ಮನಗಾಣಿಸಿಕೊಟ್ಟಿದ್ದ. ನರಕುಲದ ದಂಭಾಚಾರಗಳು ಹಾಸ್ಯದ ಒಂದು ದೊಡ್ಡ ಕಣಜ.

ಆದರೆ ಹಾಸ್ಯಕರವಾದದ್ದನ್ನು ಕಂಡು, ಕೇಳಿ ನಾವೇಕೆ ನಗುತ್ತೇವೆ? 'ಇನ್ನೊಬ್ಬರಲ್ಲಿರುವ ಕೊರತೆಯನ್ನು, ಪರರ ಫಜೀತಿಯನ್ನು ನೋಡಿದಾಗ ನಿಮಗೆ ಅವರ ಕನಿಷ್ಠತೆ ಪ್ರತೀಕವಾಗುತ್ತದೆ; ನಿಮ್ಮ ಸ್ವಂತದ ಬಗ್ಗೆ ಶ್ರೇಷ್ಠತ್ವದ ಭಾವನೆ ಬಂದು ಸಂತೋಷವಾಗಿ ನಗುತ್ತೀರಿ' ಎಂದೊಬ್ಬ ತತ್ತ್ವಜ್ಞಾನಿ ಹೇಳುತ್ತಾನೆ. ಪರರು ಬಿದ್ದರೆ ತಾವು ಎದ್ದಂತೆಂದು ಭಾವಿಸುವ ಜನ ಸಾಕಷ್ಟು ಇದ್ದಾರೆ. ಆದರೆ ನನ್ನ ಕೇಳಿದರೆ, ಪರರ ಫಜೀತಿಯನ್ನು ಕಂಡಾಗ, ಕೇಳಿದಾಗ ನಮ್ಮ ಒಳಮನಸ್ಸು, ತನಗರಿಯದೆಯೇ ತನ್ನ ಕೊರತೆಗಳನ್ನು ಜ್ಞಾಪಿಸಿಕೊಳ್ಳುತ್ತದೆ. ನೀನೊಬ್ಬನೇ ಫೂಲ್ ಅಲ್ಲವೋ, ಬೇಕಾದಷ್ಟು ಮಂದಿ ಇದ್ದಾರೆ ಎಂದುಕೊಳ್ಳುತ್ತದೆ. ಇದರಿಂದ ದೊರಕುವ ಆತ್ಮ ಸಮಾಧಾನ ನಗೆಯ ಮೂಲ ಇರಬೇಕೆಂದು ನನಗೆ ಸಂಶಯ. ನಾನು ಹೇಳಿದ ಕಾಗೆ ಕಾಕಸಮಾಜದಲ್ಲಿ ತನ್ನ ಸಹಬಾಂಧವ್ಯವನ್ನು ಸ್ಥಾಪಿಸುವುದರಲ್ಲಿ ಹಾಸ್ಯಸುಖ ಅನುಭವಿಸಿತಲ್ಲವೆ?

ಹಾಸ್ಯದ ಪ್ರಯೋಜನ ಅದೆಂದು ಕಾಣುತ್ತದೆ ನನಗೆ. ಅದು ನಮಗೊಂದು ಬಾಂಧವ್ಯಭಾವವನ್ನು ಕೊಡುತ್ತದೆ. ನೀವು ಫೂಲುಗಳ ಸಮಾಜದಲ್ಲಿ ಒಬ್ಬ ಫೂಲಾದರೆ ನಿಮ್ಮ ಕೀಳರಿಮೆ ಹೋಗುತ್ತದೆ. ನಿಮ್ಮೊಡನೆ ನೀವು ಹೆಚ್ಚು ರಾಜಿಯಾಗುವುದು ಸಾಧ್ಯವಾಗುತ್ತದೆ, ನಿಮ್ಮನ್ನು ನೀವು ಕ್ಷಮಿಸಿಕೊಳ್ಳಬಹುದಾಗುತ್ತದೆ. ತನ್ನನ್ನು ಕ್ಷಮಿಸಲಾರದವ ಪ್ರಪಂಚವನ್ನು

ಕ್ಷಮಿಸಲಾರ. ಚಾರಿಟಿ ಬಿಗಿನ್ಸ್ ಅಟ್ ಹೋಂ! ಹಾಸ್ಯವನ್ನು ದೇವರು ಸಮಾಜದ ಸಂಗಡವೇ ಸೃಷ್ಟಿಸಿದನೆಂದು ತೋರುತ್ತದೆ. ಸಮಾಜದಲ್ಲಿ ನಾವು ಹೆಜ್ಜೆ ಹೆಜ್ಜೆಗೆ ಸೋಲನುಭವಿಸುತ್ತೇವೆ; ಹೆಜ್ಜೆ ಹೆಜ್ಜೆಗೆ ನಮ್ಮ ಮೇಲೆ ನಮಗೆ ಕೋಪಬರುತ್ತದೆ; ಸಮಾಜದ ಮೇಲೂ ಸಿಟ್ಟು ಬರುತ್ತದೆ. ಹಾಸ್ಯವೆಂಬುದು ಈ ಗಾಯದ ಮೇಲಿನ ಮುಲಾಮು. ಅದು ಇಲ್ಲದಿದ್ದರೆ ನಾವು ಆತ್ಮಹತ್ಯೆಯನ್ನಾದರೂ ಮಾಡಿಕೊಂಡೇವು. ಕೊಲೆಗಳನ್ನಾದರೂ ಮಾಡಿಯೇವು.

ಹಾಸ್ಯವೆಂಬುದು ಮನುಷ್ಯ ಸ್ವಭಾವಕ್ಕೆ ಅಂಟಿಕೊಂಡ ಆಕ್ರಮಣ. ಬುದ್ಧಿಗೆ ಒಂದು ನಿರುಪದ್ರವಿ ಔಟ್‌ಲೆಟ್ ಇರಬಹುದು. ಒಬ್ಬನನ್ನು ನೋಡಿ ನೀವು ಲೇವಡಿ ಮಾಡಿ ನಗುವಾಗ, ಒಂದು ರೀತಿಯಲ್ಲಿ ಅವನ ಮೇಲೆ ನಿಶ್ಶಸ್ತ್ರದಾಳಿ ಮಾಡುತ್ತೀರಿ. ಅದು ಪ್ರಕಾರಾಂತರದ ಯುದ್ಧ. ಅಗತ್ಯಕ್ಕಿಂತ ಹೆಚ್ಚಿನ ಗ್ಯಾಸಿಗೊಂದು ಹೊರದಾರಿ. "ಮನದಲಿ ಹಿಂಡಿದನು ರಿಪುವ" ಎಂಬಲ್ಲಿಂದ "ಮಾತಿಲಿ ಹಿಂಡಿದನು ರಿಪುವ" ಎಂಬಲ್ಲಿಗೆ ಪರಿವರ್ತನೆ. ಆದ್ದರಿಂದ ಹಾಸ್ಯ ಹೆಚ್ಚಿದಷ್ಟು ಆಕ್ರಮಣ ಕಮ್ಮಿ. ರಾಷ್ಟ್ರಗಳು ಹೆಚ್ಚು ನಗಲು ಕಲಿತರೆ ಕಡಮೆ ಯುದ್ಧ ಮಾಡಲು ಅಣಿಯಾದಾವು. ಆದ್ದರಿಂದ ಹೊಗೆ ಬಾಂಬುಗಳ ಬದಲು ನಗೆ ಬಾಂಬುಗಳನ್ನು ತಯಾರಿಸಬೇಕು. ಅಧ್ಯಕ್ಷರೇ ಗಣ್ಣರು ರಶಿಯನ್ನರನ್ನು ಲೇವಡಿ ಮಾಡುವ ಜೋಕುಗಳನ್ನು ಲಕ್ಷಲಕ್ಷದಲ್ಲಿ ಬರೆಸಿ, ಖಾಲಿ ಬಾಂಬುಗಳಲ್ಲಿ ತುಂಬಿ ಮಾಸ್ಕೋ ಮೇಲೆ ಒಗೆದರೆ ಹೇಗೆ?

ಆದರೆ ಒಂದು ದೊಡ್ಡ ತೊಂದರೆ. ಹಾಸ್ಯ ಸನ್ನಿವೇಶ ಅಥವಾ ನುಡಿಯನ್ನು ಲಕ್ಷಿಸಿ ನಗಬೇಕಾದರೆ ಹಾಸ್ಯ ಪ್ರಜ್ಞೆಬೇಕಲ್ಲ. ಒಂದು ಸನ್ನಿವೇಶದಲ್ಲಿರುವ ಅಸಂಬದ್ಧತೆ ನಿಮ್ಮ ಬುರುಡೆಯೊಳಗೆ ಹೋಗದಿದ್ದರೆ ಎಲ್ಲವೂ ತೀಕ್ಷ್ಣ(ವಕ್ರ) ಮತಿ ಬೇಕು. ಹಾಸ್ಯ ಸಂದರ್ಭಕ್ಕೆ ಸರಿಯಾಗಿ ನಗುವವನಿಗೆ ಒಂದೊಮ್ಮೆ ಅದಕ್ಕಿಂತಲೂ ತೀವ್ರ ಹಾಸ್ಯಪ್ರಜ್ಞೆ ಬೇಕು. ಹಾಸ್ಯಗಾರ ವಿರಾಮವಾಗಿ ಒಂದು ಜೋಕನ್ನು ಜೋಡಿಸಿಕೊಂಡು ನಿಕ್ಕಿ ಸಂದರ್ಭದಲ್ಲಿ ಅದನ್ನು ಛೂ ಬಿಡಬಲ್ಲ. ಕೇಳಿದವನು ತತ್‌ಕ್ಷಣ ಅದರಲ್ಲಿರುವ ಪಾಯಿಂಟನ್ನು ಗುರುತಿಸಿ ನಗಬೇಕಾಗುತ್ತದೆ. ಸಭೆಯಲ್ಲಿ ಜೋಕು ಕೇಳಿ ಎಲ್ಲರೂ ನಗುವುದನ್ನು ಪೆದ್ದು ಪೆದ್ದಾಗಿ ನೋಡುತ್ತಿದ್ದನಂತೆ ಒಬ್ಬ; ಆಮೇಲೆ ಮನೆಗೆ ಹೋಗುವ ದಾರಿಯಲ್ಲಿ ಜೋಕಿನ ಅರ್ಥವಾಗಿ ಅಟ್ಟಹಾಸ ಮಾಡಿದನಂತೆ! ಅವನಿಗಿಂತಲೂ ಅಪಾಯಕಾರಿಯಾದವ ಇನ್ನೊಬ್ಬ; ತನಗೆ ಆಗದವನು ಹಾರಿಸಿದ ಚಟಾಕಿಗೆ ಅವನು ಹೆಣಮುಖ ಮಾಡಿಕೊಂಡು ಕುಳಿತಿದ್ದು, ಮನೆಗೆ ಹೋಗಿ ಗುಟ್ಟಾಗಿ ಹೊಟ್ಟೆ ತುಂಬ ನಕ್ಕನಂತೆ. ನಗೆಯನ್ನು ಹತ್ತಿಕ್ಕಿಕೊಳ್ಳಬಲ್ಲವ ಏನನ್ನೂ ಹತ್ತಿಕ್ಕಿಕೊಳ್ಳಬಲ್ಲ.

ಎದುರಿಗೆ ಕೂತಿದ್ದವನಿಗೆ ಹಾಸ್ಯಪ್ರಜ್ಞೆ ಇಲ್ಲದಿದ್ದರೆ ನಿಮ್ಮ ಜೋಕು ನಿಮ್ಮ ಹಲ್ಲುಗಳಿಗೆ ಸಂಚಕಾರ ತರಬಹುದು. ಶ್ರೀಯೋಗಿಗಳ ಭಕ್ತರೊಬ್ಬರ ಕೈಯಿಂದ ನಾನು ಅಂಗುಲ ಮಾತ್ರದಿಂದ ನನ್ನ ಹಲ್ಲುಗಳನ್ನು ಉಳಿಸಿಕೊಂಡೆ. ಅವರು ತಲೆ ಚಿಟ್ಟೇರುವಂತೆ ಅರವಿಂದರ ಮಹಿಮಾಗಾನ ಮಾಡಿ, ಕಡೆಗೆ "ಅವರ ತಪಸ್ಸಿನಿಂದಲೇ ಭಾರತಕ್ಕೆ ಸ್ವಾತಂತ್ರ್ಯ ಬಂತು.

ಅದಕ್ಕೆ ದೃಷ್ಟಾಂತವೆಂದರೆ ಅವರ ಜನ್ಮದಿನದಂದೇ ಸ್ವಾತಂತ್ರ್ಯದ ಬಾವುಟ ಹಾರಿದ್ದು" ಎಂದರು! ನಾನು ನನ್ನ ಹೆಡ್ಡತನದಲ್ಲಿ "ಹೌದೆ? ಆದರೆ ಮೊನ್ನೆ ಆಗಸ್ಟ್ ೧೫ರಂದು ಅಸ್ಸಾಮಿನಲ್ಲಿ ಆದ ಭಯಂಕರ ಭೂಕಂಪ ಯಾರ ತಪಸ್ಸಿನಿಂದದಾದು" ಎಂದು ಕೇಳಿದೆ. ಅವರು ಕೈಯನ್ನೇ ಎತ್ತಿದರು. ನಾನು ಅವರ ಕೈಯಳತೆಯಾಚೆಗೆ ಜಿಗಿದು ಬದುಕಿಕೊಂಡೆ. ಶ್ರದ್ಧಾಳುಗಳಂಥ ಹಾಸ್ಯ ಪ್ರಜ್ಞಾಹೀನರು ಯಾರೂ ಇಲ್ಲ.

ಮನುಷ್ಯನ ಬದುಕು ಕಾರ್ತವೀರ್ಯನ ಹಾಗೆ ಸಹಸ್ರಬಾಹುವಾಗುವ ಈ ಕಾಲದಲ್ಲಿ, ಹಾಸ್ಯದ ಉತ್ಪಾದನೆ ಕೂಡ ಭಾರಿ ಕೈಗಾರಿಕೆ ಪ್ರಮಾಣದಲ್ಲಿ ಆಗುತ್ತಿದೆ. ಜೋಕುಗಳಿಗೆ ಅಗಾಧ ಡಿಮಾಂಡ್ ಬೆಳೆದಿದೆ. ಹೊಸ ಹಾಸ್ಯಗಳ ಸಪ್ಲೈ ಸಾಲುತ್ತಿಲ್ಲ. ಆದ್ದರಿಂದ ಅಮೆರಿಕದಲ್ಲೊಬ್ಬರು ಹಳೇಜೋಕುಗಳನ್ನು ತಿಪ್ಪೇರಾಶಿಯಿಂದ ಆರಿಸಿ ತೆಗೆದು ಅವುಗಳಿಗೆ ಹೊಸ ಕಾಲದ ಮಿನಿಸ್ಕರ್ಟ್, ಸ್ವಿಮಿಂಗ್ ಸೂಟ್ ತೊಡಿಸಿ ಕಳಿಸುವ ಕಾರ್ಖಾನೆ ಪ್ರಾರಂಭಿಸಿದ್ದಾರಂತೆ. ಜೋಕುಗಳಿಗೆ ಹೇಗೆ ನಗಬೇಕು ಎಂದು ಕಲಿಸಲಿಕ್ಕೂ ಅವರೊಂದು ಶಾಲೆ ತೆಗೆದರೆ ಒಳ್ಳೇದು.

ಹಾಸ್ಯಕ್ಕೆ ನಗುವ ಚುರುಕು ಬುದ್ಧಿ ನಿಮಗಿದ್ದರೂ, ನಗುವಾಗ ಸ್ವಲ್ಪ ಹಿಂದೆ ಮುಂದೆ ನೋಡಿ ನಗುವುದು ಒಳ್ಳೇದು. ಮನಶ್ಶಾಸ್ತ್ರಿಗಳು ಹಾಸ್ಯಗಳನ್ನು ಹತ್ತಿಪ್ಪತ್ತು ನಿಖರವಾದ ವರ್ಗಗಳಾಗಿ ವಿಂಗಡಿಸಿದ್ದಾರಂತೆ. ಯಾವ ತರದ ಹಾಸ್ಯಕ್ಕೆ ನೀವು ಹೆಚ್ಚು ನಗುತ್ತೀರಿ ಅಂತ ಟಿಪ್ಪಣಿ ಹಾಕಿಕೊಂಡು ನಿಮ್ಮ ಸ್ವಭಾವವನ್ನು ನಿರ್ಣಯಿಸುತ್ತಾರಂತೆ. ನಿಮ್ಮ ಈ ಹಾಸ್ಯ ಫಿಂಗರ್ ಪ್ರಿಂಟುಗಳನ್ನು ನಿಮ್ಮ ಮಾಲಿಕರಿಗೆ ಒದಗಿಸಿ, ಅವರು ನಿಮ್ಮ ಪ್ರೊಮೋಶನ್ ಛಾನ್ಸನ್ನು ಕಳೆದುಬಿಟ್ಟಾರು ಜೋಕೆ.

❐

# ಭಾವೀ ಜಗತ್ತಿನಲ್ಲಿ ಮಹಿಳೆಯರ ಸ್ಥಾನ

**ಪ್ರಶ್ನೆ**: ಅಂತಾರಾಷ್ಟ್ರೀಯ ಮಹಿಳಾ ದಶಕದ ಈ ಕೊನೇ ವರ್ಷದಲ್ಲಿ ಮಹಿಳಾ ಸ್ವಾತಂತ್ರ್ಯ ಮತ್ತು ದೇಶಸೇವೆಯ ಹಕ್ಕಿನ ಬಗ್ಗೆ ನಿಮ್ಮ ಅಭಿಪ್ರಾಯ ಕೇಳೋಕೆ ಬಂದಿದೀನಿ.

ಲಾಂಗೂಲಾಚಾರ್ಯ: ಓಹೋ ಕೇಳಿ, ಅವಶ್ಯವಾಗಿ ಕೇಳಿ.

ಪ್ರ: ಮಹಿಳಾ ಸ್ವಾತಂತ್ರ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಲಾಂಗೂಲ: ಮಹಿಳಾ ಸ್ವಾತಂತ್ರ್ಯವೇ ಯಾಕೆ, ಎಲ್ಲರಿಗೂ ಸ್ವಾತಂತ್ರ್ಯ ಬೇಕು ಅನ್ನೋದು ನನ್ನ ಅಭಿಪ್ರಾಯ. ಇದು ಇವೊತ್ತಿನ ಅಭಿಪ್ರಾಯವಲ್ಲ. ಚಿಕ್ಕಂದಿನಿಂದ ನನ್ನ ಅಭಿಪ್ರಾಯ ಇದೇ ಇತ್ತು.

ಪ್ರ: ಮತ್ತೆ ದೇಶೋದ್ಧಾರದಲ್ಲಿ ಹೆಂಗಸರಿಗೆ ಪಾತ್ರ ದೊರೆಯಬೇಕೆಂಬ ಬಗ್ಗೆ ನಿಮ್ಮ ಅಭಿಪ್ರಾಯವೇನು, ಲಾಂಗೂಲಾಚಾರ್ಯರೇ?

ಲಾಂಗೂಲ: ದೇಶೋದ್ಧಾರ ಮಾತ್ರವಲ್ಲ, ಮನೇ ಉದ್ಧಾರ, ಊರಿನ ಉದ್ಧಾರ, ಲೋಕೋದ್ಧಾರ ಎಲ್ಲದರಲ್ಲಿಯೂ ಹೆಂಗಸರಿಗೆ ಪ್ರಧಾನ ಪಾತ್ರ ಇರಬೇಕೆಂದು ನಾನು ಹೇಳುತ್ತೇನೆ. ಮನೆಯಲ್ಲಿ ನಾನಾ ತರದ ಪಾತ್ರಗಳನ್ನು ತೊಳೆದು ಜಳಜಳ ಇಡುವ, ಸಾವಿರಾರು ವರ್ಷಗಳ ಅನುಭವ ಹೆಂಗಸರಿಗೆ ಇರುವುದರಿಂದ ಉದ್ಧಾರದ ಪಾತ್ರಗಳೂ ಅವರಿಗೆ ಸಿಗಬೇಕಾದ್ದು ಸ್ವಾಭಾವಿಕ.

ಪ್ರ: ಲಾಂಗೂಲಾಚಾರ್ಯರೇ, ನಮ್ಮ ಮಂತ್ರಿಗಳು ಹೇಳುವ ಹಾಗೆ ಇದು ನಿಮ್ಮ ವೈಯಕ್ತಿಕ ಅಭಿಪ್ರಾಯ ಮಾತ್ರವೋ ಅಥವಾ ನಿಮ್ಮ ಜೀವನದಲ್ಲಿ ಅದನ್ನು ಜಾರಿಗೆ ತಂದದ್ದುಂಟೊ?

ಲಾಂಗೂಲ: ಖಂಡಿತ ಉಂಟು. ಮದುವೆ ಆಗೋವರೆಗೂ ನಮ್ಮ ಮನೆ ಉದ್ಧಾರ ಮಾಡೋ ಸ್ವಾತಂತ್ರ್ಯವನ್ನ ನಮ್ಮ ತಾಯಿಗೇ ಬಿಟ್ಟಿದ್ದೆ. ಮದುವೆ ಆದ ಮೇಲೆ ಅದನ್ನ ನನ್ನ ಹೆಂಡತಿಗೆ ಕೊಟ್ಟೆ. ನಾನು ಆ ಬಗ್ಗೆ ಯಾವ ರಗಳೆ ಹಚ್ಚಿಕೊಳ್ಳಲಿಲ್ಲ. ಸ್ವಾತಂತ್ರ್ಯ ಮತ್ತು ಉದ್ಧಾರ ಇವೆರಡೂ ಮಹಿಳೆಯರ ಕೈಗಳಲ್ಲಿ ಸುರಕ್ಷಿತವಾಗಿವೆ ಎಂಬ ಭರವಸೆ ನನಗಿದೆ.

ಪ್ರ: ಮತ್ತೆ ಗಂಡಸರ ಪಾತ್ರ? ಮತ್ತು ಸ್ವಾತಂತ್ರ್ಯ?

ಲಾಂಗೂಲ: ಅದನ್ನ ಕೊನೇಲಿ ಹೇಳುತ್ತೇನೆ. ಈಗ ದೇಶೋದ್ಧಾರದ ಬಗ್ಗೆ ಸ್ವಲ್ಪ

ಹೇಳುತ್ತೇನೆ. ಮೊದಲು ದೇಶೋದ್ಧಾರ ಅಂದರೇನು? ಎಂಬ ಪ್ರಶ್ನೆ ಏಳುತ್ತದೆ. ಆಮೇಲೆ ಅದನ್ನು ಮಹಿಳೆಯರು ಮಾಡಬಲ್ಲರೇ? ಎಂಬ ಪ್ರಶ್ನೆ. ಎಲ್ಲಾ ದಾರಿಗಳು ಬಂದಾದ ಮೇಲೆ ಘಟಿಂಗ ದೇಶೋದ್ಧಾರಕ್ಕೆ ಇಳೀತಾನೇ-ಅಂತ ಯಾರು-ಡಾ.ಜಾನ್‌ಸನ್ ಅಲ್ಲವೆ? ಹೇಳಿದ್ದಾನೆ. ಇದಕ್ಕೆ ಎರಡು ಶತಮಾನ ಆಗಿರೋದರಿಂದ ಒಂದು ತಿದ್ದುಪಡಿ ಆಗಬೇಕಾಗಿದೆ.

ಪ್ರ: ಏನು ತಿದ್ದುಪಡಿ?

ಲಾಂಗೂಲ: ಮತ್ತೇನೂ ಇಲ್ಲ. ಘಟಿಂಗ ಈ ಶತಮಾನದಲ್ಲಿ ಬೇರೆ ದಾರಿ ಹುಡುಕುವ ಮುಂಚೆ ದೇಶೋದ್ಧಾರಕ್ಕೆ ಇಳೀತಾನೆ. ಅದರಲ್ಲಿ ಏನೂ ಸಾಧಿಸದೆ ಹೋದರೆ ಬೇರೆ ದಿಕ್ಕಿಗೆ ತಿರುಗುತ್ತಾನೆ. ಅರ್ಥಾತ್ Patriotism is the first resort of a scoundrel-last resort ಅಲ್ಲ—ಅಂತ ನನ್ನ ಅಮೆಂಡ್‌ಮೆಂಟ್. ಡಾ. ಜಾನ್‌ಸನ್ನನ ನಂತರ ಬಂದ ಏಡ್ಮಂಡ್‌ಬರ್ಕ್ ಏನಂತಾರೆ ಗೊತ್ತೆ? To be patriots is not to forget we are gentlemen. ದೇಶೋದ್ಧಾರದ ರಭಸದಲ್ಲಿ ನೀವು ಜಂಟಲ್‌ಮನ್ನರು ಅಂತ ಮರೀಬೇಡಿ—ಅಂತ. ಮಥಿತಾರ್ಥ ಏನಂದರೆ, ದೇಶೋದ್ಧಾರ ಮಾಡೋವರಿಗೆ ಸಂಭಾವಿತರಾಗಿರೋದು ಕರಕಷ್ಟ ಅಂತ. ಇದೇನು ಪಾಶ್ಚಾತ್ಯರ ಅನುಭವ ಅಂತಲ್ಲ. ಈ ಬಿಳೀ ಜನ ಹಸೀ ಮಾಂಸ ತಿಂದು ಬತ್ತಲೆ ತಿರುಗುತ್ತಿದ್ದ ಕಾಲದಲ್ಲಿ, ನಾಗರಿಕತೆಯ ತುತ್ತ ತುದಿಯಲ್ಲಿದ್ದ ನಮ್ಮ ಪವಿತ್ರ ರಾಜ್ಯಶಾಸ್ತ್ರಕರ್ತರಲ್ಲಿ ಶ್ರೇಷ್ಠರಾಗಿದ್ದ ಶುಕ್ರಾಚಾರ್ಯರಿಂದ ಹಿಡಿದು ಚಾಣಕ್ಯನವರೆಗೆ ಎಲ್ಲರೂ ಇದನ್ನೇ ಹೇಳಿದ್ದಾರೆ. ರಾಜ್ಯಶಾಸ್ತ್ರ ಅಂದರೆ ದೇಶೋದ್ಧಾರಕ್ಕಾಗಿ ಇರೋ ಶಾಸ್ತ್ರ. ಸಾರಾಂಶ ಏನೆಂದರೆ, ದೇಶೋದ್ಧಾರ ಆಗಬೇಕಾದರೆ ಸುಳ್ಳು ಹೇಳಬೇಕಾಗುತ್ತದೆ. ಮೋಸ ಮಾಡಬೇಕಾಗುತ್ತದೆ. ನೀವು ಸತ್ಯಂಭಟ್ಟರಾಗಿ ಕೂತರೆ ಅಥವಾ ತಿರುಗಿದರೆ (ಈಗ ದೇಶೋದ್ಧಾರ ಅಂದರೆ ಕೂಡ್ರೋದಲ್ಲ. ತಿರುಗೋದು ತಾನೆ?) ದೇಶೋದ್ಧಾರ ಆಗಲ್ಲ. ಈಗ ಈ ದೇಶೋದ್ಧಾರದಿಂದ ಏನೇನು ಆಗಿದೆ ನೋಡಿ. ದೇಶೋದ್ಧಾರಕ್ಕಾಗಿ ಯುದ್ಧಗಳಾಗಿವೆ. ಸಾವಿರಾರು, ಲಕ್ಷಾಂತರ ಜನ ಸತ್ತಿದ್ದಾರೆ. ಬರಗಾಲ ಬಂದಿದೆ. ಕೋಟ್ಯಂತರ ಜನ ಉಪವಾಸ ಬಿದ್ದಿದ್ದಾರೆ.

ಪ್ರ: ಆದರೆ ಇದೆಲ್ಲ ನಮ್ಮ ಪ್ರಶ್ನೆಗೆ ಹೇಗೆ ಸಂಬಂಧ?

ಲಾಂಗೂಲ: ನಿಲ್ಲಿ ನಿಲ್ಲಿ, ಅದನ್ನೇ ಹೇಳತಾ ಇದ್ದೇನೆ. ಆದರೆ ಹೀಗೆ ದೇಶೋದ್ಧಾರ ಮಾಡುತ್ತಾ ಬಂದವರು ಯಾರು? ಗಂಡಸರು. ಹಿಟ್ಲರ್ ಗಂಡಸು, ಮುಸೋಲಿನಿ ಗಂಡಸು, ಚರ್ಚಿಲ್ ಗಂಡಸು, ರೂಜ್‌ವೆಲ್ಟ್ ಗಂಡಸು, ಅಲೆಗ್ಝಾಂಡರ್ ಗಂಡಸು, ರಾಮ ಗಂಡಸು, ರಾವಣ ಗಂಡಸು ಕನಿಷ್ಠಪಕ್ಷ ಹತ್ತು ಸಾವಿರ ವರ್ಷಗಳಿಂದ ಈ ದೇಶೋದ್ಧಾರವನ್ನ ಗಂಡಸರೇ ಮಾಡುತ್ತಾ ಬಂದಿದ್ದಾರೆ. ಈ ದೇಶೋದ್ಧಾರದಲ್ಲಿ ಸತ್ತು ಸ್ವರ್ಗ ಸೇರುವವರೂ ಗಂಡಸರು. ವೀರಗಲ್ಲುಗಳೂ ಹುತಾತ್ಮಸ್ತಂಭಗಳೂ ನಿಲ್ಲುವುದು ಗಂಡಸರಿಗೇ. ಹೆಂಗಸರನ್ನ ಅವರು ಇದೆಲ್ಲದರಿಂದ ಸಖತ್ತಾಗಿ ಹೊರಗಟ್ಟಿದ್ದಾರೆ.

ಆದರೆ ಗಂಡಸರು ಈ ಮತ್ತು ಇನ್ನಿತರ ಥರಗಳಲ್ಲಿ ದೇಶೋದ್ಧಾರದ ಆಟ ಯಾಕೆ ಆಡುತ್ತಾರೆ?

ಪ್ರ: ಹೌದು ಯಾಕೆ ಆಡುತ್ತಾರೆ?

ಲಾಂಗೂಲ: ಯಾಕೆ ಅಂದರೆ ಇದರಲ್ಲಿ ಏನೋ ಮಜಾ ಇರಬೇಕು. ತಿರುಗೋ ತೊಟ್ಟಿಲಲ್ಲಿ ಕೂತಾಗ ಆಗೋ ಮಜಾ. ಪ್ಯಾರಾಚ್ಯೂಟು ಹಿಡಿದು ಆಕಾಶದಿಂದ ಕೆಳಗೆ ಹಾರುವಾಗ ಆಗೋ ಮಜಾ. ಬೆಕ್ಕಿನ ಮರೀನ ನೀರಲ್ಲಿ ಮುಳುಗಿಸೋವಾಗ ಆಗೋ ಮಜಾ. ಪಾತರಗಿತ್ತೀನ ಜಜ್ಜಿ ಹಾಕೋದರಲ್ಲಿ ಸಿಗೋ ಮಜಾ. ಇಂಥಾ ಯಾವುದೋ ಮಜಾಶೀರ್ ಮಜಾ ದೇಶೋದ್ಧಾರ ಮಾಡೋದರಲ್ಲಿ ಅವನಿಗೆ ಸಿಗತಾ ಇರಬೇಕು. ಇಲ್ಲದಿದ್ದರೆ ದೇಶೋದ್ಧಾರದ ಸಲುವಾಗಿ ಗಂಡಸು ಯಾಕಿಷ್ಟು ಒದ್ದಾಡುತ್ತಿದ್ದ?

ಪ್ರ: ಇಂಥಾ ಕ್ರೂರ ಮಜಾಗಳಿಗೆ ಮುಕ್ತಾಯ ಹೇಳೋಕೆ, ಹೆಂಗಸರಿಗೆ ದೇಶೋದ್ಧಾರದಲ್ಲಿ ಪಾಲು ಕೊಡಬೇಕು ಅಂತ ನೀವು ಅಂತೀರಿ?

ಲಾಂಗೂಲ: ನೋ ನೋ ನೋ, ಅಬ್ರಹ್ಮಣ್ಯಂ. ನನ್ನ ಆಕ್ಷೇಪ ಅದಲ್ಲ. ಈ ಎಲ್ಲಾ ಮಜಾ, ಕಿಕ್ ಅಂತಾರಲ್ಲ ಅದನ್ನ ಗಂಡಸು ತನ್ನ ಸ್ವಂತ ಗುತ್ತಿಗೆಯಾಗಿ ಮಾಡಿಕೊಂಡಿದ್ದಾನೆ. ಹೆಂಗಸರಿಗೆ ದೇಶೋದ್ಧಾರದ ಹೆಡೀಕಿಕ್-ಅನ್ನ ನಿರಂತರವಾಗಿ ನಿರಾಕರಿಸುತ್ತಾ ಬಂದಿದ್ದಾನೆ. ಅವಳನ್ನ ಮನೇ ನಾಲ್ಕು ಗೋಡೆಗಳ ನಡುವೆ ಬಂಧಿಸಿಟ್ಟು, ಅವಳಿಗೆ "ಗೃಹಿಣೀ ಗೃಹ ಮುಚ್ಯತೇ" ಇತ್ಯಾದಿಯಾಗಿ ಬ್ರೇಯಿನ್-ವಾಶ್ ಮಾಡಿದ್ದಾನೆ. ವೈಫನ್ನ ಹೌಸ್‌ವೈಫ್ ಅಂತ ಕರೆದು, ಪಾಶ್ಚಿಮಾತ್ಯ ಮನುಷ್ಯ ಕೂಡ ಅವಳನ್ನ ಮನೇಲಿ ಕಟ್ಟಿ ಹಾಕಿದ್ದಾನೆ. ವೈಫು ಅಂದರೇ ಹೌಸು. ಅವಳು ಅಲ್ಲಿದ್ದರೇನೇ ಅವಳಿಗೆ ಚಂದ ಅಂತ ನಂಬಿದ್ದಾನೆ. "ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಅಂತ ಭಾರತೀಯ ಅವರ ಸ್ವಾತಂತ್ರ್ಯಕ್ಕೆ ಪೂಜಿಸುತ್ತಿದ್ದಾನೆ. ಅವರಲ್ಲಿ ಯಾರಾದರೂ ಹೊರಗೆ ಹಣಕಿ ಲೋಕದ ಗಾಳಿ ಸೇವಿಸಿದರೆ "ಹೊಸಲು ದಾಟಿದ ಹೆಣ್ಣು" ಅಂತ ಕಾದಂಬರಿ ಬರೆದು ಹೆದರಿಸಿದ್ದಾನೆ. ಅದಕ್ಕೂ ಮೀರಿ ಹೋದರೆ "ಯತ್ರ ನಾರ್ಯಸ್ತು ಪೂಜ್ಯಂತೇ" ಬದಲಿಗೆ "ದಂಡಂ ದಶಗುಣಂ ಭವೇತ್" ಬಡಿದಷ್ಟೂ ಹೆಣ್ಣಿಗೆ ಒಳ್ಳೇದು ಅಂತ ತನ್ನ ನಿಜರೂಪ ತೋರಿಸಿದ್ದಾನೆ. ಸಾವಿನಲ್ಲಿ ಕೂಡ ಈ ಗಂಡಸು ತನ್ನ ಸ್ವಾರ್ಥಬಿಟ್ಟಿಲ್ಲ. ಗಂಡು ಯುದ್ಧದಲ್ಲಿ ಸತ್ತರೆ ಅವನಿಗೆ ವೀರಗಲ್ಲು ನಿಲ್ಲುತ್ತದೆ ಅಂದೆನಲ್ಲಾ. ಅವನು ವೀರ ಸ್ವರ್ಗಕ್ಕೆ ಏರುತ್ತಿರುವಾಗ ದೇವಲೋಕದ ಅಪ್ಸರೆಯರು ನಾ ಮುಂದು ತಾ ಮುಂದು ಅಂತ ಬಂದು ಅಪ್ಪಿಕೊಳ್ಳುತ್ತಾರಂತೆ. ಅವನ ಹೆಂಡತಿ ವೀರನ ಸಂಗಡ ಸಹಗಮನ ಮಾಡಿದರೆ ಅವಳಿಗೆ ಕಾಟಾಚಾರಕ್ಕೆ ಒಂದು ಮಾಸ್ತೀ ಕಲ್ಲು ಸಿಕ್ಕುತ್ತೆ. ಆದರೆ ಸ್ವರ್ಗಕ್ಕೆ ಹೋದರೂ ಗಂಡನನ್ನ ಅಪ್ಸರೆಯರಿಗೆ ಬಿಟ್ಟುಕೊಟ್ಟದ್ದೇ ಬಂತು! ಅವಳನ್ನ ತಬ್ಬಿಕೊಳ್ಳೋಕೆ ಗಂಧರ್ವರೋ ದೇವತೆಗಳೋ ದೇವಲೋಕದ ಮತ್ತೆ ಯಾವ ಗಂಡಸೋ ಬರುತ್ತಾರೆಂತ ಯಾವ ಪುರಾಣದಲ್ಲಾದರೂ ಆಶ್ವಾಸನೇ ಉಂಟೋ?

ಅವನು ಕೂದಲೆಳೆಯಿಂದ ಹೆಣ್ಣಿನ ಕೊರಳು ಕೊಯ್ದದ್ದು ನೋಡಿ. ಹೆಂಗಸು

ಅಬಲೆಯಂತೆ. Weaker sex ಅಂತೆ. ಕೋಮಲೆ, ಸುಕುಮಾರಿ, ಲೊಟ್ಟೆ ಪಟ್ಟೆ ಅಂತ ಅವಳನ್ನ ಹೊನ್ನಶೂಲಕ್ಕೆರಿಸಿ (ಹೊನ್ನ ಶೂಲ ಅನ್ನೋದು ಅಲಂಕಾರವಲ್ಲ. ಅನ್ವರ್ಥ-ಅವರಿಗೆ ಆಭರಣಗಳ ಹುಚ್ಚು ಹಿಡಿಸಿದ್ದು ಯಾರು?). ಅಮ್ಮಣ್ಣೀ ನಿನ್ನ ಕೈಲಿ ಇದು ಆಗಲ್ಲ! ತಿರುಗೋ ತೊಟ್ಟಿಲಲ್ಲಿ ಕೂತರೆ ನಿನಗೆ ತಲೆ ತಿರುಗೀತು. ಪ್ಯಾರಾಚ್ಯೂಟಿನಲ್ಲಿ ಜಿಗಿದರೆ ಪ್ರಾಣ ಹೋದೀತು. ಪ್ರಾಣಪ್ರಿಯೇ, ಪ್ರಾಣಾಧಿಕೇ, ನಿನಗೇನಾರ ಆದರೆ ನಾ ಹೇಗೆ ಬದುಕಲಿ? ನೀನೇ ಒಂದು ಬಣ್ಣದ ಚಿಟ್ಟೆಯಾಗಿರುವಾಗ, ಪಾತರಗಿತ್ತಿಗಳನ್ನು ಜಜ್ಜೋದು ನಿನ್ನ ಕೋಮಲ ಹೃದಯದಿಂದ ಆದೀತೇ? ಬೇಡ ಬೇಡ, ಈ ಕೊಳಕು ಕೆಲಸಕ್ಕೆಲ್ಲ ನಾನಿದ್ದೇನೆ. ನೀನು ಮನೇಲೇ ಸುಖವಾಗಿರು. ಬಿಸಿಲಿಗೆ ಬಿದ್ದು ಬಣ್ಣ ಕೆಡಿಸಿಕೊಳ್ಳಬೇಡ—ಅಂತ ಅವಳನ್ನ ಪುಕ್ಕಲು, ಪರಾವಲಂಬಿ ಮಾಡಿದ್ದಾನೆ. ನೀನು ಹೊರಗೆ ಹೋಗಿ ದೇಶೋದ್ಧಾರ ಮಾಡೋದೇ ಅಗತ್ಯ ಇಲ್ಲ. ಮನೇಲೇ ಕೆಲಸ ಮಾಡುತ್ತಾ ಮಕ್ಕಳನ್ನ ಸಾಕುತ್ತಾ ಇದ್ದರೆ, ಅದೇ ನಿನ್ನ ಪಾಲಿನ ದೇಶೋದ್ಧಾರ ಅಂತ ನಂಬಿಸಿದ್ದಾನೆ.

ಪ್ರ: ಆದರೆ ಶಾರೀರಿಕವಾಗಿ ಮಹಿಳೆ ಅಬಲೆಯೇ ಅಲ್ಲವೆ?

ಲಾಂಗೂಲ: ಫೋ ಫೋ ಫೋ! ನೀವು ವಿಜ್ಞಾನ ಓದೋದಿಲ್ಲ ಅಂತ ಕಾಣುತ್ತೆ. ಈ ಅಬಲೇನೇ ತೆಗೆದುಕೊಳ್ಳಿ. ಹೆಣ್ಣು ಅಬಲೆಯಲ್ಲ. ಗಂಡಿಗಿಂತ ಸಬಲೆ ಅಂತ ಜೀವಶಾಸ್ತ್ರ, ಶರೀರಶಾಸ್ತ್ರ, ಭ್ರೂಣಶಾಸ್ತ್ರವೆಲ್ಲ ಹೇಳುತ್ತವೆ. ಬಸ್ಸಿನಲ್ಲಿ ನೀವು ಹೆಂಗಸರಿಗೆ ಸ್ಥಳ ಬಿಟ್ಟು ಏಳಬೇಕಾಗಿಲ್ಲ ಅಂತ ಒಬ್ಬ ವಿಜ್ಞಾನಿ ತೋರಿಸಿದ್ದಾನೆ. ಯಾಕೆಂದರೆ ಹೆಣ್ಣು ಗಂಡಿಗಿಂತ ಹೆಚ್ಚು ಕಾಲ ನಿಲ್ಲುವ ತ್ರಾಣ ಹೊಂದಿದ್ದಾಳೆ. ಹುಟ್ಟುವ ಮೊದಲು ಕೂಡ ಗರ್ಭದಲ್ಲಿ ಸಾಯೋ ಗಂಡು ಪಿಂಡಗಳ ಸಂಖ್ಯೆ ಜಾಸ್ತಿ. ಹೆಣ್ಣು ಭ್ರೂಣ, ಸಾಯೋದು ಕಮ್ಮಿ. ಹುಟ್ಟಿದ ಮೇಲೆ ಗಂಡಿಗೆ ಬರುವ ರೋಗಗಳು ಜಾಸ್ತಿ. ಹೆಣ್ಣುಗಳಿಗೆ ಬರುವವು ಕಡಿಮೆ. ಹುಚ್ಚು ಹಿಡಿಯೋದು ಕೂಡ ಗಂಡಸರಿಗೆ ಹೆಚ್ಚು ಅಂತ ವಿಜ್ಞಾನ ಸಿದ್ಧಾಂತಪಡಿಸಿದೆ.

ಪ್ರ: ದೇಶೋದ್ಧಾರದ ಹುಚ್ಚು ಕೂಡ ಗಂಡಸರಿಗೆ ಜಾಸ್ತಿ ಅಂತೋರುತ್ತೆ ಅಲ್ಲವೆ?

ಲಾಂಗೂಲ: ಇರಬೇಕು, ಇನ್ನೂ ಕೇಳಿ. ಗಂಡು ತನ್ನ ಪೌರುಷ ಬಹಳ ಹೇಳಿಕೊಳ್ಳುತ್ತಾನೆ. ಆದರೆ ಹೆಣ್ಣಿಲ್ಲದೆ ಗಂಡು ಏನನ್ನೂ ಹುಟ್ಟಿಸಲಾರ. ಹೆಣ್ಣು, ಅಗತ್ಯ ಬಿದ್ದರೆ, ಗಂಡಿಲ್ಲದೇ ಗರ್ಭಿಣಿಯಾಗಿ ಹಡೆಯಬಲ್ಲಳು ಅಂತ ಬ್ರಿಟಿಷ್ ವಿಜ್ಞಾನಿಯೊಬ್ಬಳು ಹೇಳಿದ್ದಾಳೆ. ಹೀಗೆ ಹುಟ್ಟಿದ ಮಕ್ಕಳೆಲ್ಲ ಹೆಣ್ಣು ಆಗುತ್ತವಂತೆ. ಇದು ಗಂಡಸಿಗೆ ಬರೆದ ಭಿತ್ತಿಯ ಬರಹದ ಹಾಗೆ ಎಚ್ಚರಿಕೆಯಾಗಿದೆ. ಮಹಿಳೆಯರನ್ನು ನೀವು ನಿಜಕ್ಕೂ ಕೆರಳಿಸಿದಿರಾದರೆ, ಅವರು ಕೆಲವೇ ದಶಕಗಳಲ್ಲಿ ಪ್ರಪಂಚವನ್ನು ನಿಷ್ಪುರುಷವಾಗಿ ಮಾಡಬಲ್ಲರು. ಪುರುಷರೇ ಇಲ್ಲದ ಮೇಲೆ ಪೌರುಷ ಎಲ್ಲಿ?

ಪ್ರ: ಲಾಂಗೂಲಾಚಾರ್ಯರೇ, ಆದರೆ ಮಿದುಳು ಪುರುಷರಿಗೇ ಹೆಚ್ಚು ಇದೆಯಂತಲ್ಲ.

ಲಾಂಗೂಲ: ಕೆಲವು ಗ್ರಾಂ ಮಿದುಳು ಹೆಚ್ಚಾಗಿರಬಹುದು ಗಂಡಿಗೆ. ಆದರೆ ಮಿದುಳಿದ್ದಾಕ್ಷಣ ಬುದ್ಧಿ ಇದೆ. ಅಂತ ಉಂಟೆ? "ಸ್ತ್ರೀ ಬುದ್ಧಿಃ ಪ್ರಳಯಾಂತಿಕಾ" ಅಂತ

ಹಿಂದಿನವರೇ ಹೇಳಿದ ಮೇಲೆ ಕೇಳಬೇಕೆ? ಇದ್ದ ಮಿದುಳನ್ನೆಲ್ಲ ಉಪಯೋಗಿಸೋ ಗಂಡಸರು ಎಷ್ಟು? ದೇಶೋದ್ಧಾರಕ್ಕೆ ಅಷ್ಟೇನು ಮಿದುಳು ಬೇಕಾಗಲ್ಲ. ಇದ್ದ ಮಿದುಳು ಹೇಗೆ ಉಪಯೋಗಿಸ್ತೀರಿ ಅನ್ನೋದು ಮುಖ್ಯ. ಈ ಕಾಲದಲ್ಲಿ ಲಗೇಜ್ ಓವರ್‌ವೆಯಿಟ್, ಬಾಡಿ ಓವರ್‌ವೆಯಿಟ್‌ಗಳ ಹಾಗೆ ಬ್ರೆಯಿನ್ ಓವರ್‌ವೆಯಿಟ್ ಕೂಡ ಒಂದು ದೊಡ್ಡ ಬರ್ಡನ್ನೇ ಇದ್ದ ಬ್ರೇಯಿನನ್ನ ಉಪಯೋಗಿಸೋದರಲ್ಲಿ ಗಂಡಸರಿಗಿಂತ ಹೆಂಗಸರು ಬಲ ಅಂತ ಮದುವೆ ಮಾಡಿಕೊಂಡವರಿಗೆಲ್ಲ ಗೊತ್ತಿದೆ; ಯಾರೂ ಒಪ್ಪೋಲ್ಲ ಅಷ್ಟೇ. ಮತ್ತೆ ಇನ್ನೊಂದು ಮಾರ್ಮಿಕ ಸಂಗತಿ ಅಂದರೆ—

ಪ್ರ: ಏನು?

ಲಾಂಗೂಲ: ದೇಶೋದ್ಧಾರಕ್ಕೆ, ಆಗಲೆ ನಾನು ಹೇಳಿದ ಹಾಗೆ, ಸುಳ್ಳು, ವಂಚನೆ, ಡಂಭಾಚಾರ, ದರ್ಪ ಎಲ್ಲ ಬೇಕಾಗುತ್ತೆ. ಈ ಕ್ವಾಲಿಫಿಕೇಶನ್ನಿನಲ್ಲಿ ಗಂಡಸರಿಗಿಂತ ಹೆಂಗಸರೇ ಮುಂದೆ ಅಂತ ಮನಶ್ಶಾಸ್ತ್ರ ಸಂಶೋಧಕರು ಹೇಳಿದ್ದಾರೆ. ಗಂಡು ಮಗುವಿಗೆ ಸುಳ್ಳು ಹೇಳೋದು ಕಲಿಯೋಕೆ ಪೂರ್ತಿ ಮೂರು ವರ್ಷ ಬೇಕಂತೆ. ಹೆಣ್ಣು ಮಗು ಎರಡೇ ವರ್ಷಕ್ಕೆ ನಿರಾಲಂಬವಾಗಿ ಸುಳ್ಳು ಹೇಳೋದು ಶುರು ಮಾಡುತ್ತೆ. ಅರ್ಥಾತ್ ಸುಳ್ಳು ಹೇಳೋದು ಮಹಿಳೆಯರಿಗೆ ಪುರುಷರಿಗಿಂತ ಜಾಸ್ತಿ ಸಹಜವಾಗಿ ಬಂದುಬಿಡುತ್ತೆ. ಯುದ್ಧಾನಂತರ ಬಂದ ಮೂರು ನಾಲ್ಕು ಮಹಿಳಾ ಪ್ರಧಾನ ಮಂತ್ರಿಗಳಲ್ಲಿ ಯಾರೂ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ಲೇಟೆಸ್ಟ್ ಅಂದರೆ ಬ್ರಿಟನ್ನಿನ ಮಾರ್ಗರೇಟ್ ಥ್ಯಾಚರ್. ಅವರಿಗೆ ವಿರೋಧಿಪಕ್ಷದ ನಾಯಕನೇ Liar ಅಂತ ಬಿರುದನ್ನು ಬಹಿರಂಗವಾಗಿಯೇ ಪ್ರದಾನ ಮಾಡಿದರಲ್ಲ! ನಿಲ್ಲಿ ನಿಲ್ಲಿ! ಮಧ್ಯದಲ್ಲಿ ಬಾಯಿ ಹಾಕಬೇಡಿ. ಸುಳ್ಳು ಹೇಳೋದರಲ್ಲಿ ಹೆಂಗಸರು ಹೆಚ್ಚು ಸಿದ್ಧಮುಖರು ಅಂತ ಹೇಳಿದೆನಲ್ಲ. ಸುಳ್ಳೇನು ಬಿಡಿ ಗಂಡಸರೂ ಬೇಕಾದಷ್ಟು ಹೇಳಬಹುದು ಅನ್ನುತ್ತೀರಲ್ಲ? ಆದರೆ ಹೆಚ್ಚು ಗಂಡಸರು ಕಳ್ಳ ಮನಸ್ಸಿನಿಂದ ಸುಳ್ಳು ಹೇಳೋದರಿಂದ, ಅವರ ಮುಖ ನೋಡಿಯೇ ಇವರು ಹೇಳೋದು ಸುಳ್ಳು ಅಂತ ತಿಳಿದುಕೊಳ್ಳಬಹುದು. ಹೆಂಗಸರು ಅಪ್ಪಟ ಸತ್ಯ ಹೇಳೋವರ ಹಾಗೆ ಹಸಿ ಸುಳ್ಳು ಹೇಳಬಲ್ಲರು. ಪೋಲಿಗ್ರಾಫ್ ಅಂತ ಸತ್ಯ ಶೋಧಕ ಯಂತ್ರ ಬಂದಿದೆಯಲ್ಲ-ಅಮೇರಿಕದಲ್ಲಿ? ಆ ಯಂತ್ರಕ್ಕೆ ಸಹಿತ ಹೆಂಗಸರ ಸುಳ್ಳನ್ನು ಹಿಡಿಯೋಕ್ಕೆ ಕಷ್ಟವಾಗುತ್ತಂತೆ. ಅದಕ್ಕೇ ಅಲ್ಲೀ ಕೋರ್ಟುಗಳು ಆ ಯಂತ್ರಗಳ ಸಾಕ್ಷೀನ ಒಪ್ಪೊಲ್ಲ.

ಪ್ರ: ಆದರೆ ದೇಶೋದ್ಧಾರಕ್ಕೆ ಸ್ವಲ್ಪ ಕಲ್ಮನಸ್ಸೂ ಬೇಕಾಗುತ್ತಲ್ಲ. ಹೆಂಗಸರ ಮನಸ್ಸು ತೀರಾ ಮೃದು ತಾನೆ?

ಲಾಂಗೂಲ: ಬಂಕಂ! ಎಲ್ಲಾ ಬಂಕಂ! ಗೋಲ್ಡಾಮೆಯರ್ ಅಂತಿದ್ದಳಲ್ಲಾ ಇಸ್ರೇಲಿನ ಪ್ರಧಾನಿನಿ. ಅವಳು ಇಸ್ರೇಲ್ ಸ್ಥಾಪನಾ ಗುಪ್ತ ಚಳವಳಿಯಲ್ಲಿ ಕಮಾಂಡೋಗೋಳ ನಾಯಕಿಯಾಗಿದ್ದಳು. ಕಮಾಂಡೊ ಅಂದರೆ ಗುಪ್ತವಾಗಿ ದಾಳಿ ಮಾಡೋ ತಂಡ! ಅದರಲ್ಲಿ ಹಿಂಸೆ, ಧ್ವಂಸ, ಕೊಲೆ ಎಲ್ಲ ಆಗುತ್ತೆ. ಅದರಲ್ಲಿ ಅವಳು ನಿಸ್ಸೀಮಳಂತ ಸಿದ್ಧವಾದದ್ದರಿಂದಲೇ

ಮುಂದೆ ಅವಳಿಗೆ ಪ್ರಧಾನಿ ಪಟ್ಟ ಕಟ್ಟಿದರು, ಗಂಡಸರೇ ಸೇರಿ! ಇಷ್ಟೆಲ್ಲದರ ನಡುವೆಯೂ ಅವಳು ಒಂಭತ್ತು ಮಕ್ಕಳನ್ನು ಹಡೆದ ಮಾತಾಯಿ!

ಆದ್ದರಿಂದ ನಾನನ್ನುತ್ತೇನೆ, ದೇಶೋದ್ಧಾರಕ್ಕೆ ಬೇಕಾದ ಎಲ್ಲ ಬುದ್ಧಿಭಾವ, ದಾರ್ಢ್ಯ, ಸರಳ-ವಕ್ರ ಸಂಪತ್ತೆಲ್ಲವೂ ಮಹಿಳೆಯರಿಗಿದೆ. ಅವರು ಯುದ್ಧಗಳನ್ನೂ ಗೆಲ್ಲಬಲ್ಲರು.

ಪ್ರ: ಆದರೆ ಯುದ್ಧದಿಂದ ಸರ್ವನಾಶವಾಗೋದ್ರಿಂದ ಅದು ಅನ್‌ಪಾಪ್ಯುಲರ್ ಆಗುತ್ತಿದೆಯಲ್ಲ?

ಲಾಂಗೂಲ: ನೀವೀಗ ಹತ್ತು ಸಾವಿರ ವರ್ಷಗಳಿಂದ ಗಂಡಸರ ದೇಶೋದ್ಧಾರ ಕಂಡಿದ್ದೀರಿ. ಇನ್ನು ಹೆಂಗಸರ ಕೈಗೆ ಕೊಟ್ಟು ನೋಡಿ. ಜಗತ್ತು ನಾಶವಾಗದೇ ಇದ್ದರೆ, ಹೆಂಗಸರಿಗೆ ಅಧಿಕಾರ ಬಿಟ್ಟು ಕೊಡೋದು ಮತ್ತಷ್ಟು ಅಗತ್ಯ ಮತ್ತು ನ್ಯಾಯಬದ್ಧವಾಗುತ್ತೆ. ಹತ್ತು ಸಾವಿರ ವರ್ಷಗಳಿಂದ ಪುರುಷರು ಉದ್ಧಾರದ ಮಜಾ ಅನುಭವಿಸಿದ್ದಾರೆ. ಜಗತ್ತು ಬೇಗ ನಾಶವಾಗೋದಾದರೆ ಮಹಿಳೆಯರಿಗೆ ಆ ಮಜಾ ಅನುಭವಿಸೋ, ಎಂಜಾಯ್ ಮಾಡೋ ಛಾನ್ಸ್ ಬರೋಕೇ ಇಲ್ಲ. ಅವಳಿಗೆ ನ್ಯಾಯ ಕೊಡಿ. ಅವಳಿಗೆ ಒಪ್ಪಿಸಿ ನೋಡಿ. ಅವಳು ನಿಮಗಿಂತಲೂ ಮಜಾಶೀರ್ ಆಗಿ ಜಗತ್ತನ್ನ ನಾಶಮಾಡಿ ತೋರಿಸಬಹುದು.

ಆದರೆ ನಾನಂತೇನೆ—ಜಗತ್ತನ್ನ ನಾಶ ಮಾಡೋ ಅಗತ್ಯಾನೇ ಮಹಿಳೆಯರ ಲೋಕೋದ್ಧಾರದಲ್ಲಿ ಉಳೀಲಿಕ್ಕಿಲ್ಲ.

ಪ್ರ: ಅದು ಹೇಗೆ?

ಲಾಂಗೂಲ: ನೋಡಿ, ಹೋರಾಟ ಅನ್ನೋದು, ಮಾನವಲೋಕದಲ್ಲಿ ಅನಿವಾರ್ಯ ಅಂತ ಕಾಣುತ್ತೆ. ಮಹಾತ್ಮಾಗಾಂಧಿ ಅಂತೊಬ್ಬ ಮನುಷ್ಯ ಇದ್ದ ಅಂತ ನೀವು ಓದಿರಬಹುದು. ಆಡಿನ ಹಾಲು ಕುಡಿದು, ಆಕಳಿನಂಥ ಮನುಷ್ಯನಾಗಿದ್ದ ಆ ಗಾಂಧಿ ಕೂಡ ಹೋರಾಟ ಇದ್ದೇ ಇರುತ್ತೆ ಅಂತ ಒಪ್ಪಿದ. ಆದ್ದರಿಂದ ಅವನು ಯುದ್ಧಕ್ಕೆ ಪರ್ಯಾಯೋಪಾಯ—alternative to war ಹುಡುಕುತ್ತಾ ಇದ್ದ. ಹೆಗಸರು ಆ ಉಪಾಯನ ಒದಗಿಸಲಿಕ್ಕೆ ಸಮರ್ಥರಾದಾರಂತ ನನಗೊಂದು ಆಸೆ ಇದೆ. ನೀವು ಯಾವುದೇ ಪಟ್ಟಣದ ಸಾರ್ವಜನಿಕ ನಲ್ಲಿ ಬುಡದಲ್ಲಿ ಹೆಂಗಸರು ಜಗಳಾಡೋದು ನೋಡಿದ್ದೀರಾ? ಇಲ್ಲದಿದ್ದರೆ ಗಂಡಸರು ಬಾಯಿಗೆ ಬಾಯಿ ಹತ್ತಿದರೆ ಐದು ನಿಮಿಷದೊಳಗೆ ಕೈಗೆ ಕೈ, ತಲೆಗೆ ತಲೆ ಆಗುತ್ತೆ. ಆದರೆ ಈ ನಲ್ಲೀ ಜಗಳದ ನಲ್ಲೆಯರು ಗಂಟೆಗಟ್ಟಲೆ ಜಗಳಾಡುತ್ತಾರೆ. ನಾನು ಎಷ್ಟ ಸಲ ಮಂತ್ರಮುಗ್ಧನಾಗಿ ಅದನ್ನು ನೋಡುತ್ತ ನಿಂತದ್ದುಂಟು. ಸಿಡಿಲಿಲ್ಲದ ಗುಡುಗು, ಸುಡದಿರುವ ಬೆಂಕಿ, ಗಾಯ ಮಾಡದ ಬಾಣಗಳ ಅದ್ಭುತ ಮಾಯಾಯುದ್ಧ ಅದು. ನಲ್ಲಿ ಹೋಯಿತೋ, ಒಂದು ಗಳಿಗೆಯಲ್ಲಿ ಅವರೆಲ್ಲ ಏನೇನೂ ಆಗದ ಹಾಗೇ ನಗುತ್ತ ಕಲೆಯುತ್ತ ಹರಟುತ್ತಾರೆ. ಶಾಂತಂ ಶಿವಂ ಸುಂದರಂ. ಅಹಿಂಸಾತ್ಮಕ ಯುದ್ಧ ಮತ್ತು ಶಾಂತಿಯನ್ನು ಹೆಂಗಸರು ತಂದುಕೊಡಬಲ್ಲರೆಂದು ಈ ಕಲಹಗಳು ನನ್ನಲ್ಲಿ ಭರವಸೆ ಉಂಟುಮಾಡಿವೆ. ಆದ್ದರಿಂದ

ದೇಶೋದ್ಧಾರ, ಲೋಕೋದ್ಧಾರ ಎಲ್ಲವನ್ನೂ ಹೆಂಗಸರಿಗೆ ಬಿಟ್ಟು ನೋಡಿ ಅನ್ನೋದು ನಾನು. ಈಗ ಕೇಳಿ ಇನ್ನೇನು ಪ್ರಶ್ನೆ ಉಳಿದಿದೆ?

ಪ್ರ: ದೇಶೋದ್ಧಾರ ಹೆಂಗಸರು ಮಾಡೋದಾದರೆ, ಗಂಡಸರು ಏನು ಮಾಡಬೇಕು? ಮನೆ ಕೆಲಸ ಮಾಡ್ತಾ ಇರಬೇಕೇ ಅಂತ?

ಲಾಂಗೂಲ: ಹೌದಲ್ಲ, ಆ ಪ್ರಶ್ನೆ ಉಳಿದೇ ಹೋಗಿದೆ. ನಿಜ, ಮಹಿಳೆಯರು ದೇಶೋದ್ಧಾರಕ್ಕೆ ಹೋಗಲು ಒಡ್ಡಿದರೆ, ಗಂಡಸರು ಮನೆಗೆಲಸ ಮಾಡಲಿ ಅನ್ನೋ ಸ್ವಾಭಾವಿಕ ಕರಲರಿ ನಿಷ್ಪತ್ತಿಯಾಗುತ್ತೆ. ಆದರೆ ಇದಕ್ಕೆ ಗಂಡಸರು ಯೋಗ್ಯರೇ ಅನ್ನೋದರಲ್ಲಿ ನನಗೆ ಗಾಢವಾದ ಸಂಶಯ ಇದೆ. ಬ್ರಹ್ಮಚಾರಿಗಳ ರೂಮುಗಳನ್ನು ನೀವು ನೋಡಿದ್ದೀರಾ? ಗಂಡಸರ ಕೈಗೆ ಮನೆಗೆಲಸ ಒಪ್ಪಿಸಿ ನೀವು ಹೋದರೆ ಮುಗಿದೇ ಹೋಯ್ತು. They will make a mess of it-ಮನೆ ಅನ್ನೋದನ್ನ ಮುನಸಿಪಾಲ್ಟಿ ತೊಟ್ಟಿ ಮಾಡಿಬಿಡೋದು ಖಂಡಿತ. ಮಹಿಳೆಯರು ದೇಶೋದ್ಧಾರ ಮಾಡಿ ಮನೆಗೆ ತಿರುಗಿ ಬರುವಾಗ, ಒಳಗೆ ಕಾಲಿಡಲಿಕ್ಕೆ ಹೇಸುವ ಹಾಗೆ ಅವರು ಮಾಡಿಡುವದು ಖಂಡಿತ Husband ಅಂದರೆ House-man ಅಂತ ಶಬ್ದ ಶಾಸ್ತ್ರಜ್ಞರೇನೋ ಹೇಳಿಯಾರು. ಆದರೆ ಗಂಡಸಿಗೆ ಹೌಸ್ ಅನ್ನೋ ಸೆನ್ಸ್ ಇದೆ ಹೊರತು, ಹೋಂ ಅನ್ನೋ ಸೆನ್ಸ್ ಇಲ್ಲವೇ ಇಲ್ಲ. ಮಕ್ಕಳನ್ನ ಸಾಕೋದಂತೂ ಅವನಿಗೆ ಸಾಧ್ಯವೇ ಇಲ್ಲ.

ಆದ್ದರಿಂದ ಮಹಿಳೆಯರಿಗೆ ನನ್ನ ವಿನಂತಿ ಏನೆಂದರೆ, ತಾಯಿಗಳಿರಾ, ತಂಗಿಯರಿರಾ, ಹೆಂಡಂದಿರಾ, ದೇಶೋದ್ಧಾರನೂ ನೀವೇ ಮಾಡಿ, ಗೃಹೋದ್ಧಾರನೂ ನೀವೆ ಮಾಡಿಕೊಳ್ಳಿ. ನಿಮ್ಮ ರಟ್ಟೆಗಳು ಮೆತ್ತಗಿದ್ದರೂ ತಲೆಗಳು ಗಟ್ಟಿ ಇವೆ. ಕೈಗಳು ಚುರುಕಾಗಿವೆ. ಎರಡೂ ಹೊಣೆ ಹೊರುವಷ್ಟು ತ್ರಾಣ ನಿಮಗಿದೆ ಅಂತ ವಿಜ್ಞಾನ ಸಾಬೀತು ಮಾಡಿದೆ.

ವಿಜ್ಞಾನ ಒತ್ತಟ್ಟಿಗಿರಲಿ, ಇದರ ಸಾಧ್ಯತೆಗೆ ಬೇರೆ ಉದಾಹರಣೆಗಳನ್ನೂ ಕೊಡಬಲ್ಲೆ. ನಮ್ಮ ಇಂಡಿಯಾ ದೇಶದಲ್ಲೇ ಖಾಸಿ ಗುಡ್ಡಗಾಡಿನ ಜನಾಂಗದಲ್ಲಿ ಮನೆಗೆಲಸ, ನೇಯೋದು, ನೂಲೋದು, ಹೊಲಿಯೋದು, ಗದ್ದೆ ಉಳೋದು, ಬಿತ್ತೋದು, ಕುಯ್ಯೋದು, ಸಂತೆಗೆ ಹೋಗಿ ಕೊಳ್ಳೋದು, ಮಾರೋದು ಎಲ್ಲಾನೂ ಮಹಿಳೆಯರೇ ಮಾಡುತ್ತಾರೆ. ಅವರ ಫೋಟೋಗಳನ್ನ ನಾನು ನೋಡಿದ್ದೇನೆ. ಅವರೇನೂ ಸೋತವರ ಹಾಗೆ ಕಾಣಿಸಲಿಲ್ಲ. ಅಲ್ಲಿ ಗಂಡಸು ಬರೇ ಬೀಡಿ ಸೇದುತಾ, ಹರಟೆ ಹೊಡೀತಾ ಇರತಾನಂತೆ. ಇದರಿಂದ ಅವನಿಗಾಗಲಿ ಅವಳಿಗಾಗಲಿ ಏನೊಂದೂ ಕೊರತೆಯಾಗಿಲ್ಲ. ಆದ್ದರಿಂದ ಇಡೀ ಲೋಕದ ಉದ್ಧಾರದೊಡನೆ, ಮನೆಮಠ ಉದ್ಧಾರದ ಹೊಣೇನೂ ಮಹಿಳೆಯರಿಗೆ ಒಪ್ಪಿಸಿದರೆ ಏನೂ ಘಾತ ಆಗುವ ಭಯವಿಲ್ಲ. ಎಲ್ಲರಿಗೂ ಕ್ಷೇಮವೇ. ಸಾವಿರಾರು ವರ್ಷಗಳಿಂದ ಹೆಂಗಸರ ಹಕ್ಕು ಅಪಹರಿಸಿದ್ದಕ್ಕೆ ಗಂಡಸಿಗೆ ಇದು ತಕ್ಕ ಶಾಸ್ತಿಯೂ ಹೌದು. ದಿವಂಗತ ಇಂದಿರಾ ಗಾಂಧಿಯವರು ಕೆಲಸಕ್ಕೆ ಬಾರದ ಗಂಡಸರನ್ನ ಏನೂ ಫೈಲು ಕೊಡದೆ, ಬರೇ ಮಂತ್ರಿಗಳಾಗಿಡುತ್ತಿದ್ದರಂತೆ. ಇದು ಭಾವೀ ಮಹಿಳಾ ಜಗತ್ತಿಗೆ ಒಳ್ಳೇ ಮೇಲ್ಪಂಕ್ತಿಯಾಗಿದೆ.

ಪ್ರ: ಭಾವಿ ಮಹಿಳೆಯರಿಗೆ ನಿಮ್ಮ ಸಂದೇಶವೇನಾದರೂ ಉಂಟೆ?

ಲಾಂಗೂಲ: ಬೇಶಕ್, ಮಹಿಳೆಯರೇ, ಸಾವಿರಾರು ವರ್ಷಗಳಿಂದ ನಿಮ್ಮನ್ನು ಉದ್ಧಾರ-ಸುಖದಿಂದ ವಂಚಿಸಿದ ಗಂಡಸರ ಮೇಲೆ ಸೇಡು ತೀರಿಸಿಕೊಳ್ಳಲು ಹೋಗಬೇಡಿ. ಗಂಡಸರ ಸಂಖ್ಯೆ ಪ್ರಪಂಚದಲ್ಲೆಲ್ಲ ಇಳಿಮುಖವಾಗುತ್ತಿದೆ ಮತ್ತು ಬರೋ ಶತಮಾನಕ್ಕಾಗುವಾಗ ಅವರ ಸಂಖ್ಯೆ ತೀರ ಕ್ಷೀಣಿಸುವ ಸಂಭವ ಉಂಟು ಅಂತ ತಜ್ಞರು ಹೇಳಿದ್ದಾರೆ. ಗಂಡಸರು fools ಆಗಿರಬಹುದು. ಆದರೆ ಅವರು ನಿಮ್ಮ ಕೈಲಿ ಒಳ್ಳೇ ಆಟದ ಸಾಮಾನುಗಳಾಗಿರಬಲ್ಲರು. ಅವರಿಲ್ಲದೇ ನೀವು ಜಗತ್ತನ್ನು ನಡೆಸಬಲ್ಲಿರೆಂಬುದು ನಿಜ ವಾಗಿರಬಹುದು. ಆದರೆ ಅದರಲ್ಲಿ ಏನೂ ಮಜಾ ಇರಲಾರದು. ಆದ್ದರಿಂದ ನಿಮ್ಮ ಮಜಾಕ್ಕಾಗಿಯೇ ಗಂಡಸರನ್ನ ಕಾಪಾಡಿ ಟ್ರಿಮ್ಮಾಗ್ರಿರಿಸಿರಿ. ಹುಲಿ, ಚಿರತೆ, ಸಿಂಹ ಮೊದಲಾದವುಗಳ ಹಾಗೆ, ಈ ಪ್ರಾಣಿಗೂ ನಿಮ್ಮ ಮನೆಗಳನ್ನು ಅಭಯಾರಣ್ಯಗಳಾಗಿ ರೂಪಿಸಿಕೊಳ್ಳಿರಿ.

- ಜಯ್ ಜಗತ್ -

# ವಾನರಾಯಣ

ಅಥ ಪಾರ್ವತೀದೇವಿಯು ಕೈ ಮುಗಿದು ಕೇಳುವಂಥವಳಾದಳು: "ಎಲೈ ನಾಥನೇ! ಈವರೆಗೆ ನೀನು ಶ್ರೀರಾಮನ ಚರಿತೆಯನ್ನು ಸವಿಸ್ತಾರವಾಗಿ ವಿವರಿಸಿ ನನ್ನ ಕಿವಿಗಳನ್ನು ಪವಿತ್ರಗಳನ್ನಾಗಿ ಮಾಡಿದಿ. ಆದರೆ ರಾಮರಾವಣರ ಯುದ್ಧದಲ್ಲಿ ಹೋರಾಡಿದ ವಾನರರು ಮುಂದೇನಾದರು ಎಂಬ ವಿಚಾರವನ್ನು ಮಾತ್ರ ನನಗೆ ತಿಳಿಸಲಿಲ್ಲ. ಅದನ್ನು ಅರಿತುಕೊಳ್ಳಬೇಕೆಂದು ಉತ್ಸುಕಳಾಗಿದ್ದೇನೆ ಪ್ರಭೋ."

ಅದಕ್ಕೆ ಕೈಲಾಸನಾಥನಾದ ಮಹಾದೇವನು ಹೀಗೆ ಉತ್ತರಿಸಿದನು—"ಎಲೌ ಪರ್ವತರಾಜ ಪುತ್ರಿಯೇ! ವಾನರರ ಕಥೆಯಂ ನೀನು ಪ್ರಶ್ನಿಸಬೇಡ. ಅದು ಗುಹ್ಯಾತ್-ಗುಹ್ಯತರವಾದದ್ದು. ನಾನು ಈವರೆಗೂ ನಿನಗೆ ಹೇಳಿದಂಥಾ ರಾಮಕಥೆಯು ಕಲಿಯುಗದ ಜನರ ಹಿತಾರ್ಥವಾಗಿರುವುದು. ಆದರೆ ವಾನರರ ಕಥೆಯು ಮರ್ತ್ಯರು ಕೇಳಲು ತಕ್ಕದ್ದಲ್ಲವೆಂದು ನಾರದರು ವಾಲ್ಮೀಕಿ ಮಹರ್ಷಿಗೆ ಅದನ್ನು ವಿಸ್ತರಿಸಲಿಲ್ಲ. ನನಗೂ ಶ್ರೀಮಹಾವಿಷ್ಣುವಿಗೂ ಹೊರತು, ವಾನರ ವೃತ್ತಾಂತವು ದೇವಾಸುರ ಮರ್ತ್ಯರಲ್ಲಿ ಯಾರಿಗೂ ತಿಳಿಯದು. ಆದ್ದರಿಂದ ಅದನ್ನು ಕೇಳಲು ಅಪೇಕ್ಷಿಸಬೇಡ. ಅದನ್ನು ಕೇಳಿದರೆ ಅಕ್ಷರಕ್ಕೆ ಒಂದು ಮಣದಷ್ಟು ಪಾಪ ಬರುವುದು."

ಈ ಪ್ರಕಾರವಾಗಿ ಪರಮೇಶ್ವರನು ಹೇಳುತ್ತಲೂ, ಪಾರ್ವತೀದೇವಿಯು ಕೋಪವಂ ತಳೆದು ಜಗ್ಗನೆದ್ದು, ಕೋಪಗೃಹವಂ ಸಾರಿ ಕೂದಲುಗಳನ್ನು ಕೆದರಿಕೊಂಡು ಬಾಗಿಲು ಸಾರ್ಚಿ ನೆಲದ ಮೇಲೆ ಬಿದ್ದುಕೊಂಡು ಬಿಕ್ಕಿ ಬಿಕ್ಕಿ ಅಳತೊಡಗುತ್ತಲೂ, ಮಹಾದೇವನು ಪರಿಪರಿಯಾಗಿ ಅನುನಯವಂ ಮಾಡಿದರೂ ಕೇಳದಿರಲು, ದೇವದೇವನೂ ಕರುಣಾಸಾಗರನೂ ಪತ್ನೀಪರವಶನೂ ಆದ ತ್ರಿಪುರಾತಂಕನು, "ಪ್ರಿಯೇ! ನಿನ್ನಂತೆಯೇ ಆಗಲಿ. ಬಾಗಿಲು ತೆರೆ, ವಾನರಾಯಣವಂ ನಿನಗೆ ರಹಸ್ಯವಾಗಿ ನಿರೂಪಿಸುವಂಥವನಾಗುವೆನು. ಆದರೆ ಅದನ್ನು ಯಾರಿಗೂ ನೀನು ಉಸುರಲಾಗದು". ಎನ್ನಲಾಗಿ ಪಾರ್ವತಿಯು "ಹಾಗೆಯೇ ಆಗಲಿ, ನಿನ್ನ ಕೊರಳಾಣೆಯಾಗಿಯೂ ಈ ಕಥೆಯಂ ಇನ್ನಾರಿಗೂ ಪೇಳುವವಳಲ್ಲ" ಎಂದು ಆಶ್ವಾಸನವಂ ಕೊಡುತ್ತಲೂ ಮಹಾದೇವನು ಇಂತೆಂದು ಪಿಸುಮಾತಿನೊಳ್ ಬಿತ್ತರಿಸಿದನು.

"ಎಲೌ! ಪರ್ವತರಾಜ ಕನ್ಯೆಯೇ! ರಾವಣ ಸಂಹಾರವಾದ ಅನಂತರದೊಳ್

ಪಟ್ಟಾಭಿಷೇಕವಂ ಕಂಡು ಪುನೀತರಾಗುವೆವೆಂದು ಒಂದು ಕೋಟಿ ಇಪ್ಪತ್ತೂರು ಲಕ್ಷ ಏಳು ಸಾವಿರದಾ ಒಂದನೂರಾ ಹನ್ನೊಂದು ವಾನರರು ಅಯೋಧ್ಯಾನಗರಿಗೆ ಆಗಮಿಸಿದರೆಂಬುದಾಗಿ ನಿನಗೆ ಮೊದಲೇ ಹೇಳಿದೆನಲ್ಲವೆ! ಪಟ್ಟಾಭಿಷೇಕವು ಮುಗಿದು ಆರು ತಿಂಗಳು ಕಳೆದರೂ ವಾನರರು ಅಯೋಧ್ಯೆಯಂ ಬಿಟ್ಟು ಕಿಷ್ಕಿಂಧೆಗೆ ಹೋಗದೆ ದಿನಾಲೂ ಸೀತಾರಾಮಕೀ ಜೈ ಎಂದು ಪ್ರಭಾತಫೇರಿಗಳಂ ಸಂಧ್ಯಾಫೇರಿಗಳಂ ತೆಗೆದು ಕೂಗುತ್ತಲೂ ಉಳಿದ ಕಾಲಗಳಲ್ಲಿ ಸರಯೂ ತೀರದಲ್ಲಿದ್ದ ಉದ್ಯಾನಂಗಳೊಳ್ ಫಲ ಪುಷ್ಪಂಗಳಂ ಧ್ವಂಸ ಮಾಡುತ್ತಲೂ ಮನೆಗಳನ್ನೇರಿ ಹಂಚುಗಳಂ ಕೀಳುತ್ತಲೂ ಗವಾಕ್ಷಂಗಳಂ ಪೊಕ್ಕು ಪಾಕಗೃಹದೊಳಗಿರ್ಪ ಸುದತಿಯರಂ ಬೆದರಿಸಿ ಭಕ್ಷ-ಭೋಜ್ಯಂಗಳಂ ಮೆಲ್ಲುತ್ತಲೂ ವಿನೋದದೊಳಿರುತಿರ್ಪುದಂ ಕೇಳಿ ಶ್ರೀರಾಮನು ಚಿಂತಿತನಾದನು. ಒಂದಾನೊಂದು ದಿನಂ ವಸಿಷ್ಠ ಮಹರ್ಷಿಗಳ ಶಿಷ್ಯನಾದ ದೀರ್ಘ ದಾಡಿಯು ಅರಮನೆಯೊಳ್ ಹೋಮವಂ ಮಾಡಿ ದಕ್ಷಿಣಾದ್ರವ್ಯಂಗಳಾದ ಅಕ್ಕಿ, ಕಾಯಿ, ಸುವರ್ಣಂಗಳಂ ಬುಟ್ಟಿಯೊಳಿಟ್ಟು ತಲೆಯ ಮೇಲೇರಿಸಿಕ್ಕೊಂಡು ರಾಜಮಾರ್ಗದೊಳ್ ಪೋಗುತ್ತಿರ್ಪಲ್ಲಿ ವಾನರನೋರ್ವನು ಬದಿಯ ಮರದಿಂದ ಚಂಗನೆ ದೀರ್ಘದಾಡಿಯ ಮುಂದೆ ನೆಗೆದು ಕ್ಷಣಾರ್ಧದೊಳ್ ಅವನ ಹೆಗಲೇರಿ ಬುಟ್ಟಿಯಂ ಕೆಡಹಿ ಅವನ ದಾಡಿ ನಿಜವೋ ಕೃತಕವೋ ಎಂದು ಕುತೂಹಲದಿಂ ಪಿಡಿದೆಳೆದು ಭಂಗಿಸುತ್ತಲೂ ಆ ಋಷಿಯು ಶ್ರೀರಾಮನಲ್ಲಿ ದೂರಿಟ್ಟು ಪೌರೋಹಿತ್ಯಕ್ಕೆ ರಾಜೀನಾಮೆಯಂ ಕೊಡಲು ದಶರಥಾತ್ಮಜನು ಅವನಂ ಸಂತೈಸಿ ದಕ್ಷಿಣಾ ದ್ರವ್ಯಕ್ಕೆ ಇಮ್ಮಡಿ ದಂಡವಂ ಸೇರಿಸಿಕೊಟ್ಟು ರಾಜೀನಾಮೆಯಂ ಹಿಂದೆಗೆಸಿ ಕಪಿ ಸಮಸ್ಯೆಯಂ ಇನ್ನು ಹೀಗೇ ಬಿಡಲಾಗದೆಂದು ನಿಶ್ಚೈಸಿ ಮಂತ್ರಿಗಳಂ ತಮ್ಮಂದಿರಂ ನೆರಹಿ ಮಂತ್ರಾಲೋಚನೆಯಂ ಮಾಡಿ ಕಪಿನಾಯಕರಂ ಕರಸಿ ನೀವಿನ್ನು ಕಿಷ್ಕಿಂಧೆಗೆ ಮರಳಿ ನಿಮ್ಮ ಅರಣ್ಯಂಗಳೊಳ್ ಸುಖವಾಗಿರ್ಪುದು ಎಂದುಪದೇಶಂ ಗೈಯ್ದನು.

ಅದಕ್ಕೆ ವಾನರರು "ಪ್ರಭೋ! ಇದೇನನ್ಯಾಯ! ನಾವು ವಾನರರಾದರೂ ಈ ಆರ್ಯಾವರ್ತಕ್ಕೆ ದೈತ್ಯ ರಾಕ್ಷಸರಿಂದ ಬಂದ ವಿಪತ್ತಂ ನಿವಾರಿಸಲೆಂದು ತಮ್ಮ ಸೈನ್ಯದಲ್ಲಿ ಸೇರಿ ಕೋಟ್ಯಂತರ ಪ್ರಾಣಂಗಳಂ ಬಲಿಕೊಟ್ಟು ನೊಂದು ಬೆಂದು ಆರ್ಯಾಸ್ವಾತಂತ್ರ್ಯವಂ ಸ್ಥಾಪಿಸುವುದಕ್ಕೆ ಸಹಾಯ ಮಾಡಿದ್ದಕ್ಕೆ ನಮಗೆ ಇದೇ ಏನು ಪ್ರತಿಫಲ? ಸೀತಾಮಾತೆಯಂ ಕಳೆದುಕ್ಕೊಂಡು ಕಣ್ಣೀರು ಮಿಡಿಯುತ್ತಲಿರ್ದ ನಿಮಗಾಗಿ ನಾಲ್ದೆಸೆಗಳು ತಿರುಗಿ ಲೆಕ್ಕವಿಲ್ಲದ ಕಷ್ಟಂಗಳನ್ನನುಭವಿಸಿದ್ದನ್ನು ಇಷ್ಟು ಬೇಗ ಮರೆಯುವುದೇ?" ಎನ್ನಲಾಗಿ ಲಕ್ಷ್ಮಣನು ರೋಷಗೊಂಡು ಈ ಕಪಿಗಳೆಲ್ಲವಂ ಯಮಸದನಕ್ಕಟ್ಟುವೆನೆಂದು ಧನುವೆತ್ತಲಾಗಿ ಅವನ ಸಂತೈಸಿ ದಯಾಸಾಗರನಾದ ಶ್ರೀರಾಮನು "ಎಲೈ ವಾನರೋತ್ತಮರಿರಾ! ನನ್ನ ಸಲುವಾಗಿಯೂ ದೇಶದ ಸಲುವಾಗಿಯೂ ನೀವು ಅಪರಿಮಿತವಾದ ಕಷ್ಟಗಳನ್ನು ಸೈರಿಸಿದ್ದೀರಿ ಮತ್ತು ತ್ಯಾಗಗಳನ್ನು ಮಾಡಿದ್ದೀರಿ. ಆದರೆ ಅದಕ್ಕಾಗಿ ಅಯೋಧ್ಯೆಯಲ್ಲೇ ನೀವು ಈ ಪರಿ ನೆರೆದು ಕಾಲ ಕಳೆದು ಜೀವನಂ ವ್ಯರ್ಥವಾಗಿಸಲಾಗದು. ದೈತ್ಯಪೀಡಿತಮಾದ ಈ ಚಕ್ರಾಧಿಪತ್ಯದೊಳ್

ಸಕಲ ಜನಸುಖಾಯ ಶಾಂತಿ ಸುಭಿಕ್ಷಗಳಂ ಸ್ಥಾಪಿಸಲು ಶ್ರಮಿಸಬೇಕು" ಎನ್ನುತ್ತಲೂ ಲಕ್ಷ್ಮಣನು ಎದ್ದು ಮೇಣ್ ಮುನಿಗಳ ಗಡ್ಡವಂ ಹಿಡಿದೆಳೆವ ಮಂಗತನವಂ ತ್ಯಜಿಸಬೇಕು." ಎಂದು ನುಡಿದುದಂ ಕೇಳ್ದು ತರುಣ ಕಪಿಗಳ್ ಕೋಪಗೊಂಡು, "ಎಲೈ-ಸೌಮಿತ್ರಿಯೇ ನೀನು ಇಂದ್ರಜಿತು ಬಾಣದಿಂ ಮೂರ್ಛಿತನಾಗಿ ಬಿದ್ದಾಗ ನಮ್ಮ ಹನುಮಂತನು ಸಂಜೀವನವಂ ತಂದು ನಿನ್ನನ್ನು ಬದುಕಿಸಿದ್ದಕ್ಕೆ ಈ ಕೃತಘ್ನತೆಯೇ? ನಮ್ಮ ಹೆಂಡತಿ ಮಕ್ಕಳಂ ಮರೆತು ಸೇತುಬಂಧಕ್ಕೆ ಕಲ್ಲುಗಳಂ ಹೊತ್ತು, ರಾವಣನ ಸೈನ್ಯದೊಡನೆ ಹೋರಿ ಸತ್ತು, ಅವನ ಸೆರೆಮನೆಗಳೊಳಗೆ ಬಿದ್ದು ಕೊಳೆತು ತ್ಯಾಗಮಾಡಿದ ನಮಗೆ, ನಿಮ್ಮ ಮನೆಯ ಪುರೋಹಿತರ ಗಡ್ಡ ಎಳೆಯುವ ಅಧಿಕಾರವೂ ಇಲ್ಲವೆ?" ಎಂದು ಕೋಲಾಹಲಂ ಮಾಡಲು ನಲ, ನೀಲ, ಜಾಂಬವಾದಿಗಳು ತರುಣ ಕಪಿಗಳಂ ಸಮಾಧಾನಪಡಿಸಿ ಶ್ರೀರಾಮನಂ ಬಿನ್ನೈಸಿದರೆಂತೆನೆ-

"ಎಲೈ ಸೀತಾಪತಿಯೇ! ನಿನಗಾಗಿಯೂ ಭಾರತ ವರ್ಷಕ್ಕಾಗಿಯೂ ನಾವು ಬಹಳ ನೊಂದಿದ್ದೇವೆ. ನಿನ್ನ ಜಯಜಯಕಾರ ಮಾಡುವ ಹೊರತು ನಮಗೆ ಬೇರೆ ವಿದ್ಯೆ ಗೊತ್ತಿಲ್ಲ. ನಿನ್ನ ಸೇವೆ ಕೈಕೊಂಡ ನಾವು ದುಡಿದು ಹೊಟ್ಟೆಹೊರೆದುಕೊಳ್ಳುವುದನ್ನೇ ಅರಿಯೆವು. ಕಿಷ್ಕಿಂಧೆಗೆ ನಾವು ಹಿಂದಿರುಗಿ ಹೋಗಲಾರೆವು. ಅಲ್ಲಿ ನಾಟಕ ಗೃಹಂಗಳಿಲ್ಲವು, ವಾಹನಂಗಳಿಲ್ಲವು" ಈ ಪರಿಯಾಗಿ ಕಪಿನಾಯಕರು ಬಿನ್ನೈಸಲೊಡನೆ, ಕೋಟಿ ಕಪಿಗಳು ಏಕಕಂಠರಾಗಿ "ಜೈ ಸೀತಾರಾಂ!" ಎಂದು ಘೋಷಿಸಲೊಡನೆ ಅಯೋಧ್ಯಾಪುರಿಯ ಅನೇಕ ಪ್ರಾಚೀನ ಮನೆಗಳು ಕೆಳಗುರುಳಿದವು. ಶ್ರೀರಾಮನು ಅವರ ಸಮಸ್ಯೆಯಂ ವಿಚಾರಿಸುವುದಾಗಿ ಆಶ್ವಾಸನವಿತ್ತು, ಅಂದಿಗೆ ಸಭೆಯಂ ವಿಸರ್ಜಿಸಿದನು.

ಅತ್ತ ಶ್ರೀರಾಮನು ವಾನರ ಸಮಸ್ಯೆಯಂ ಅಹೋರಾತ್ರಂ ಚಿಂತಿಸುತ್ತ ಸೀತಾದೇವಿಯನ್ನೂ ಮರೆತಿದ್ದಾಗ, ಇತ್ತ ಕಪಿಗಳು ತಮ್ಮ ತ್ಯಾಗವನ್ನು ಶ್ರೀರಾಮನು ಮರೆಯುತ್ತಿರುವನೆಂದು ಆಂದೋಲನವಂ ಪ್ರಾರಂಭ ಮಾಡಿದರು. ತಾವು ಸಂಗ್ರಾಮದಲ್ಲಿ ಸಾಯುತ್ತಿದ್ದಾಗ್ಗೆ ಅಯೋಧ್ಯಾವಾಸಿಗಳು ಸುಖ ವಿಲಾಸದೊಳಿದ್ದಾಗ್ಯೂ, ರಾಮರಾಜ್ಯದಲ್ಲಿ ಅಧಿಕಾರವನ್ನೆಲ್ಲಾ ಅವರೇ ನಡೆಸುತ್ತಿರುವುದು ಅಸಹನೀಯವೆಂದೂ ತಮಗೆ ಯುದ್ಧದಲ್ಲೊದಗಿದ ಗಾಯಗಳನ್ನೆಣಿಸಿ, ಅಧಿಕಾರ ಸ್ಥಾನಗಳನ್ನು ಕೊಡಬೇಕೆಂದೂ ಅವರು ಪ್ರಚಂಡವಾದ ಬಿನ್ನವತ್ತಳೆಯಂ ಶ್ರೀರಾಮನಿಗೆ ಅರ್ಪಿಸಿದರು. ಮರ್ಯಾದಾ ಪುರುಷೋತ್ತಮನು ಮರ್ಯಾದೆ ಉಳಿಸಿಕೊಳ್ಳುವ ಒಂದೇ ಉಪಾಯವೆಂದು ಬಗೆದು, ಲಕ್ಷ್ಮಣ-ಭರತರ ವಿರೋಧವಿದ್ದಾಗ್ಯೂ ಕಪಿಗಳ ಇಚ್ಛೆಗೆ ತಲೆಬಾಗಿದನು.

ಹತ್ತು ಸಾವಿರ ಗಾಯ ಪರೀಕ್ಷಕರು ಕಪಿಗಳ ಪರೀಕ್ಷೆಗಾಗಿ ನೇಮಿಸಲ್ಪಟ್ಟರು. ಯುದ್ಧದೊಳ್ ಗಾಯಗೊಳ್ಳದಿದ್ದ ಅನೇಕ ಸಾವಿರ ಕಪಿಗಳು ಗುಪ್ತವಾಗಿ ಶಸ್ತ್ರವೈದ್ಯರ ಹಸ್ತ ಶುದ್ಧಿಯಂ ಮಾಡಿ, ಗಾಯದ ಕಲೆಯಂ ಸೃಷ್ಟಿಸಿಕೊಂಡರೆಂದು ಗುಪ್ತಚಾರರು ಶ್ರೀರಾಮಂಗೆ ಬೆಸಸಿದರು. ಆದರೆ ಋಷಿಮೂಲವಂ ನದಿಮೂಲವಂ, ಗಾಯಮೂಲವಂ ಅತಿಯಾಗಿ ಪರೀಕ್ಷಿಸಸಲ್ಲವೆಂದು ಶ್ರೀರಾಮಂ ಇದೆಲ್ಲವಂ ಗಮನಿಸಲಿಲ್ಲವು".

ಪರಮೇಶ್ವರನು ಇಷ್ಟು ಹೇಳಿ ಸುಮ್ಮನಾಗಲು, ಪಾರ್ವತಿದೇವಿ ಪುನಃ ಕೇಳಿದಳು. "ಎಲೈ ಜೀವಿತೇಶ್ವರಾ! ಏಕೆ ಸುಮ್ಮನಾದೇ, ಮುಂದೇನಾಯಿತು?" ಎಂದು ಕೇಳಲು ಮಹಾದೇವನು ವಿಷಣ್ಣ ಧ್ವನಿಯಿಂದ, "ದೇವಿ, ಏನು ಹೇಳಲಿ! ಅಯೋಧ್ಯಾಯನಗರದಲ್ಲಿ ಗಾಯಗಳನ್ನು ಮರೆಸಲು ಕಪಿಗಳು ಕುಣಿಯುತ್ತ ಹೊರಟ ದೃಶ್ಯವನ್ನು ನೆನೆದು ಅಸಹ್ಯವೆನಿಸುತ್ತದೆ" ಎಂದನು.

ಪಾರ್ವತೀ ಉವಾಚ: "ಗಾಯಪ್ರಮಾಣವಾದವರೆಲ್ಲರೂ ಅಧಿಕಾರ ಪಡೆದರೇ? ಒಂದು ಕೋಟಿ ಚಿಲ್ಲರೆ ವಾನರರಿಗೆಲ್ಲ ಅಧಿಕಾರ ಸ್ಥಾನಗಳು ದೊರೆತವೇ?"

ಪರಮೇಶ್ವರ ಉವಾಚ: "ಇಲ್ಲ, ಶ್ರೀರಾಮನು ಎಷ್ಟೋ ಪ್ರಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ. ಕೋಟಿಗಟ್ಟಳೆ ಅಧಿಕಾರ ಸ್ಥಾನಗಳು ಇರಲಿಲ್ಲವು. ಹೊಸ ಹೊಸ ಮಂಡಳಗಳನ್ನು ನಿರ್ಮಿಸಿ ಅಧಿಕಾರ ಸ್ಥಾನಗಳನ್ನು ಹೆಚ್ಚಿಸಿದರೂ ಎಲ್ಲ ವಾನರರಿಗೂ ಸ್ಥಾನಮಾನ ಸಿಗಲಿಲ್ಲ ದೇವಿ."

ಪಾರ್ವತಿ ಉವಾಚ: "ಎಲ್ಲ ವಾನನರೂ ಗಾಯಪರೀಕ್ಷೆ ಮಾಡಿಸಿಕೊಂಡು ಅಧಿಕಾರಕ್ಕೆ ಕೈಯೊಡ್ಡಿದರೆ? ಹನುಮಂತ, ಅಂಗದನಂಥವರು ಕೂಡ?"

ಮಹಾದೇವನು ಹೇಳಿದನು: "ಇಲ್ಲ ದೇವಿ, ತ್ರೇತಾಯುಗ ಅಷ್ಟು ಕೆಟ್ಟಿರಲಿಲ್ಲ. ಕೆಲ ಕಪಿಗಳು ರಾಜಧಾನಿಗೇ ಬಾರದೆ, ದೂರದಿಂದ ರಾಮನಾಮವನ್ನು ಧ್ಯಾನಿಸುವುದರಲ್ಲಿ ತೃಪ್ತರಾಗಿದ್ದರು. ಕೆಲವರು ರಾಜಧಾನಿಗೆ ಬಂದರೂ ಗಾಯಪ್ರದರ್ಶನದಲ್ಲಿ ಭಾಗವಹಿಸಲಿಲ್ಲ. ಆದರೆ ಅದನ್ನು ನೆನೆದೂ ದುಃಖವೇ ಆಗುತ್ತದೆ."

"ಏಕೆ?" ಎಂದು ಪಾರ್ವತೀದೇವಿ ಪ್ರಶ್ನಿಸಿದಳು.

"ಗಾಯ ಪ್ರದರ್ಶನಕ್ಕೆ ಬಾರದವರಲ್ಲಿ ಹೆಚ್ಚು ಯೋಗ್ಯತಾವಂತರಿದ್ದರು. ಆದರೆ ಅವರನ್ನು ಎಲ್ಲರೂ ಮರೆತೇಬಿಟ್ಟರು. ಅವರು ಎಲ್ಲೋ ಮೂಲೆ ಸೇರಿಕೊಂಡರು."

"ಶ್ರೀರಾಮನೂ ಅವರನ್ನು ವಿಚಾರಿಸಿಕೊಳ್ಳಲಿಲ್ಲವೆ?" ಎಂದು ಪಾರ್ವತಿ ಆಶ್ಚರ್ಯದಿಂದ ಕೇಳಿದಳು.

"ಇಲ್ಲ, ಬೊಬ್ಬಿರಿವ ವಾನರರಂ ಶಾಂತಗೊಳಿಸುವುದೇ ಬಹು ಕಷ್ಟವಾದ ಮೇಲೆ ಶ್ರೀರಾಮನು ಬೊಬ್ಬಿರಿಯದವರನ್ನು ಕುರಿತು ಯೋಚಿಸುವಂತಿರಲಿಲ್ಲ."

ಪಾರ್ವತೀದೇವಿ: "ಅನ್ಯಾಯ ಅನ್ಯಾಯ, ಆದರೆ ಬೇಡಿದ ಎಲ್ಲಾ ವಾನರರಿಗೆ ಸ್ಥಾನಮಾನವು ಲಭಿಸಲಿಲ್ಲವೆಂದು ನೀನು ಹೇಳುವಂಥವನಾದಿ. ನಾಥಾ, ಉಳಿದವರ ಗತಿ ಏನಾಯಿತು?" ಎಂದು ವಿಚಾರಿಸಿದಳು.

ಮಹಾದೇವನು ಹೇಳಿದನು: "ದೇವೀ ಕೇಳು. ಈ ವಾನರರಲ್ಲಿ ಕೆಲವರು ದೇಶದಲ್ಲಿ ನಾನಾ ತರದ ಅನ್ಯಾಯಗಳಂ ಮಾಡುತ್ತ ಜೀವನಯಾಪನೆ ಮಾಡುತ್ತಿದ್ದರು. ಅವರಲ್ಲಿ ಕೆಲವರು ಶ್ರೀರಾಮನ ಮೇಲೇ ದ್ವೇಷವನ್ನು ಬೆಳೆಸಿಕೊಂಡರು. ನಮ್ಮ ರಕ್ತ ಚೆಲ್ಲಿ ಸೀತೆಯನ್ನು ಶ್ರೀರಾಮನಿಗೆ ತಿರುಗಿ ಕೊಡಿಸಿದೆವು. ಈತನು ನಮಗೆ ಏನೂ ಕೊಡಲಿಲ್ಲ. 'ಅವನಿಗೆ ಸೀತೆ

ಹೇಗೆ ದಕ್ಕುವಳೋ ನೋಡುವೆವು' ಎಂದು ಅವರು ಒಳಗೊಳಗೇ ಸೀತಾದೇವಿಯನ್ನು ಕುರಿತು ಕೆಟ್ಟ ಮಾತುಗಳನ್ನು ಹಬ್ಬಿಸಿದರು. ಇದರಿಂದಲೇ ಸೀತಾ ಮಾತೆಯನ್ನು ಶ್ರೀರಾಮನು ತ್ಯಜಿಸಿದನು."

ಪಾರ್ವತಿ ಆಶ್ಚರ್ಯಚಕಿತಳಾಗಿ ಕೇಳಿದಳು: "ಆದರೆ, ಯಾರೋ ಅಗಸನು ಕೆಟ್ಟ ಮಾತು ಆಡಿದ್ದರಿಂದ, ರಾಮನು ಲೋಕಪಾವನೆಯನ್ನು ಅಡವಿಗಟ್ಟಿದನೆಂದು ಪುರಾಣಗಳು ಹೇಳುತ್ತವಲ್ಲಾ."

"ಹೌದು ದೇವಿ, ಹೇಳುತ್ತವೆ. ಆದರೆ ಲೋಕಕ್ಕೆ ಸತ್ಯ ತಿಳಿದರೆ ಮಹಾ ಅನರ್ಥವಾದೀತೆಂದು, ನಾರದರು ವಾಲ್ಮೀಕಿ ಮುನಿಗೆ ಹಾಗೆ ಹೇಳಿದರು. ನಿಜವಾಗಿ ನಡೆದದ್ದು ಇದು."

ಹೀಗೆಂದು ಹೇಳಿ ಪರಮೇಶ್ವರನು ನಿಟ್ಟುಸಿರು ಬಿಟ್ಟು, ಈಗ ಗುಟ್ಟನ್ನು ಯಾರಿಗೂ ತಿಳಿಸಬಾರದೆಂದು ಮತ್ತೊಮ್ಮೆ ಲೋಕಮಾತೆಗೆ ಮನವಿ ಮಾಡಿಕೊಂಡು ಸುಮ್ಮನಾದನು.

ಮತ್ತೆ ನಿನಗೆ ಹೇಗೆ ತಿಳಿಯಿತೆಂದು ಕೇಳುವಿರಾ? ನಾನಾಗ ಕೈಲಾಸಪರ್ವತದಲ್ಲಿ ಪರಮೇಶ್ವರನ ಭವನದಲ್ಲಿ ಒಂದು ಹಲ್ಲಿಯಾಗಿದ್ದೆ.

(ಹಿಂದಿಯ ಛಾಯೆ)

❐

# ಮಶಕ ಪುರಾಣ

ದೇವರು ಉಂಟೇ ಇಲ್ಲವೇ? ಇದ್ದರೆ ಅದು ಒಳ್ಳೇದೇ, ಕೆಟ್ಟದ್ದೇ ಅಥವಾ ತಟಸ್ಥವೇ? ಪ್ರಪಂಚ ಸೃಷ್ಟಿಯ ಉದ್ದೇಶವೇನು? ಪ್ರಾಣಿಗಳ ಸೃಷ್ಟಿಗೆ ಏನಾದರೂ ಅರ್ಥವುಂಟೇ ಇಲ್ಲವೇ? ಇಂಥ ಗಹನ ಪ್ರಶ್ನೆಗಳನ್ನು ನನ್ನ ತಲೆಯಲ್ಲಿ ಎಬ್ಬಿಸಿದ್ದು—ನೀವು ನಂಬಿ, ಬಿಡಿ—ಆ ಕ್ಷುದ್ರ ಜೀವಿಯಾದ ಸೊಳ್ಳೆ.

ಯಾಕೆಂದರೆ, ದೇವರು ಇದ್ದರೆ, ಅವನು ಸೊಳ್ಳೆಯನ್ನು ಯಾಕೆ ಸೃಷ್ಟಿಸಿದನು? ಅವನು ಒಳ್ಳೆಯವನಾಗಿದ್ದರೆ ಮನುಷ್ಯನನ್ನು ಪೀಡಿಸುವ ಹೊರತು ಮತ್ತಾವುದೇ ಉದ್ದೇಶವಿಲ್ಲದ ಸೊಳ್ಳೆಯನ್ನು ಸೃಷ್ಟಿಸುತ್ತಿದ್ದನೇ? ಕೆಟ್ಟವನೇ ಆಗಿದ್ದರೆ ಅವನನ್ನು ಕರುಣಾಕರ ಎಂದು ಭಕ್ತರು ಯಾಕೆ ಕರೆದರು? ಅಥವಾ ದೇವರು ಚಿಲ್ಲರೆ ಉಪದ್ರವಗಳಿಂದ ಜನರನ್ನು ಪೀಡಿಸಿ, ಅವರು ಒದ್ದಾಡುವುದನ್ನು ನೋಡಿ ಮೋಜು ಪಡುವ ಕಿಡಿಗೇಡಿಯೆ? ಮನುಷ್ಯನಿಗೆ ಅರ್ಥವುಂಟೆಂದು ತತ್ವಜ್ಞಾನಿಗಳೂ ಆಧ್ಯಾತ್ಮಿಕರೂ ಹೇಳುತ್ತಾರೆ. ಆದರೆ ಸೊಳ್ಳೆಗೆ ಅರ್ಥವೇನು? ಸೊಳ್ಳೆಗೆ ಅರ್ಥವಿಲ್ಲವಾದರೆ ಅದರಿಂದ ರಕ್ತಶೋಷಣೆ ಹೊಂದುತ್ತಿರುವ ಮನುಷ್ಯಗೆ ಅರ್ಥವಿರಲಾಪುದೇ?

ಪುನರ್ಜನ್ಮದಲ್ಲಿ ವಿಶ್ವಾಸವುಳ್ಳ ನನ್ನ ಮಿತ್ರನೊಬ್ಬನ ಪ್ರಕಾರ, ಮಠ-ದೇವಾಲಯ-ಇಗರ್ಜಿಗಳ ಧನಾಪಹಾರ ಮಾಡುವ ಆ ಸಂಸ್ಥೆಗಳ ಅಧಿಕಾರಿಗಳು ಸತ್ತು ನಾಯಿಗಳಾಗಿ ಹುಟ್ಟಿ, ಆ ಸಂಸ್ಥೆಗಳ ಬಾಗಿಲುಗಳಲ್ಲಿ ನಾಯಿಗಳಾಗಿ ಕಾಯುತ್ತಿರುವಂತೆ, ಇಂಜೆಕ್ಷನ್ನುಗಳನ್ನು ಸುಳ್ಳು ಸುಳ್ಳೇ ಚುಚ್ಚಿ ದುಡ್ಡು ಸೆಳೆಯುವ ಡಾಕ್ಟರುಗಳು ಸತ್ತು ಸೊಳ್ಳೆಗಳಾಗಿ ಹುಟ್ಟಿ ಅದೇ ಕೆಲಸ ಮುಂದುವರಿಸುತ್ತಾರೆ. ಆದರೆ ಈ ಥಿಯರಿಗೆ ಸ್ಟಾಟಿಸ್ಟಿಕ್ಸಿನ ಆಕ್ಷೇಪವಿದೆ; ಮತ್ತು ಸ್ಟಾಟಿಸ್ಟಿಕ್ಕುಗಳು ಬಹಳ ಬಲವಾದ ಸ್ಟಿಕ್ಕುಗಳೆಂದು ಒಪ್ಪಲೇಬೇಕು. ವೈದ್ಯಕೀಯ ಪ್ರಾಕ್ಟೀಸಿನ ಸಮಗ್ರ ಇತಿಹಾಸದಲ್ಲಿ ಆಗಿ ಹೋಗಿರಬಹುದಾದ ಎಲ್ಲ ವೈದ್ಯ-ಡಾಕ್ಟರುಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೂ, ಒಂದೇ ಒಂದು ದಿನದ ಅವಧಿಯಲ್ಲಿ ಹುಟ್ಟಿಕೊಳ್ಳುವ ಸೊಳ್ಳೆಗಳಷ್ಟು ಆಗಲಾರರು.

ದೇವರು ಮೊದಲು ಆಹಾರವನ್ನು ಸೃಷ್ಟಿ ಮಾಡಿ ಆಮೇಲೆ ಅದನ್ನು ತಿನ್ನುವ ಪ್ರಾಣಿಗಳನ್ನು ಸೃಷ್ಟಿಸಿದನೆಂದು ಕೆಲವು ಧರ್ಮಗಳು ಅಭಿಪ್ರಾಯ ಪಡುತ್ತವೆ. ಸೊಳ್ಳೆಗಳಿಂದಾಗಿ ಈ ತತ್ವ ಕೂಡ ಸಂಶಯಾಸ್ಪದವಾಗಿ ಕಾಣಿಸುವಂತಾಗಿದೆ. ಜೀವಶಾಸ್ತ್ರಿಗಳ ಹೇಳಿಕೆಯಂತೆ

ಈ ಪೃಥ್ವಿಯಲ್ಲಿ ಮನುಷ್ಯನ ಉದಯಕ್ಕಿಂತ ಎಷ್ಟೋ ಸಹಸ್ರಮಾನ ಮೊದಲೇ ಸೊಳ್ಳೆಗಳು ಉಂಟಾಗಿದ್ದವು. ಆದ್ದರಿಂದ ದೇವರು ಈ ವಿಷಯದಲ್ಲಿ ತನ್ನ ಪದ್ಧತಿಯನ್ನು ಹಿಂದೆ ಮುಂದೆ ಮಾಡಿ, ಮೊದಲು ಪ್ರಾಣಿಯನ್ನುಂಟುಮಾಡಿ ಆಮೇಲೆ ಅದರ ಆಹಾರವನ್ನು ಸೃಷ್ಟಿಸಿ ದಂತಾಗಿದೆ. ಅದಲ್ಲದೆ ಮನುಷ್ಯನ ಸೃಷ್ಟಿಯಾಗುವವರೆಗೆ ಸೊಳ್ಳೆಗಳು ಏನನ್ನು ತಿಂದು ಬದುಕುತ್ತಿದ್ದವು ಎಂಬ ಪ್ರಶ್ನೆಯೂ ಏಳುತ್ತದೆ.

ಹೀಗೆ ಒಂದಕ್ಕೊಂದು ತಾಳೆ ಬೀಳದೆ, ಇಡೀ ಸೃಷ್ಟಿ ಮತ್ತು ಅದರೊಡನೆ ದೇವರು, ತತ್ವಜ್ಞಾನ, ಪೂರ್ವಾಪರ ಸಾಂಗತ್ಯ, ಸೃಷ್ಟಿಯ ಉದ್ದೇಶ, ಜೀವಶಾಸ್ತ್ರ, ತರ್ಕಶಾಸ್ತ್ರ ಇತ್ಯಾದಿಗಳೆಲ್ಲ ಅರ್ಥವಿಲ್ಲದವುಗಳೆಂಬ ತೀರ್ಮಾನಕ್ಕೆ ನಾನು ಬರಬೇಕಾಯಿತು. ಅದು ನನ್ನ ಆರೋಗ್ಯಕ್ಕೆ ಒಳ್ಳೇದನ್ನೇ ಮಾಡಿತೆನ್ನಿ; ಯಾಕೆಂದರೆ ಅರ್ಥವಿಲ್ಲದ ಜಗತ್ತಿನಲ್ಲಿ ನಾನೂ ಅರ್ಥದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾದ್ದೇನೂ ಇಲ್ಲ. ನನ್ನ ವರ್ತನೆಯೂ ಅರ್ಥಬದ್ಧ ವಾಗಿರಬೇಕಿಲ್ಲ.

ಆದರೆ ಈ ನೆಮ್ಮದಿಯಾದ ಅರ್ಥರಾಹಿತ್ಯ ಸೊಳ್ಳೆಯೆಂಬ ಆ ಪ್ರತ್ಯಕ್ಷ ತಥ್ಯವನ್ನು ಅಳಿಸಿಹಾಕಲಿಲ್ಲ. ಸೊಳ್ಳೆಯೆಂಬ ತಥ್ಯದ ಬಗ್ಗೆ ನನ್ನ ಆಕ್ಷೇಪ ಅಥವಾ ವಿರೋಧ ಅದು ನನ್ನ ರಕ್ತವನ್ನು ಶೋಷಿಸುತ್ತದೆ ಎಂಬುದಕ್ಕಾಗಿ ಇರಲಿಲ್ಲ; ನನ್ನ ಮೈಯಲ್ಲಿ ಅಷ್ಟೇನೂ ರಕ್ತವಿಲ್ಲ; ಎಂದೂ ಇರಲಿಲ್ಲ. ನನ್ನ ಆಕ್ಷೇಪ ಇರುವುದು ಅದರ ಸಂಗೀತಕ್ಕೆ. ಸುಮ್ಮನೆ ಮೈಯಲ್ಲಿ ಅದಕ್ಕೆ ಬೇಕಾದಷ್ಟು ರಕ್ತವನ್ನು ಸದ್ದಿಲ್ಲದೇ ಚೀಪಿಕೊಂಡು ಹೋಗುವ ಬದಲು, ಅದು ನನ್ನ ಕಿವಿಗಳ ಹತ್ತಿರ ತನ್ನ ಸಂಗೀತ ಸೇವೆ ಯಾಕೆ ಮಾಡಬೇಕು? ತಾನು ಹೀರುವ ರಕ್ತಕ್ಕೆ ಸಂಗೀತ ಮೂಲಕ ಬೆಲೆ ಸಂದಾಯ ಮಾಡಿ ಋಣಮುಕ್ತವಾಗಬಹುದೆಂದು ಸೊಳ್ಳೆಯ ತಿಳಿವಳಿಕೆಯೆ? ನನಗೆ ಅದರ ವಿಶಿಷ್ಟ ಛಾಪಿನ ಸಂಗೀತ ಪ್ರಿಯವೋ ಅಪ್ರಿಯವೋ ಎಂಬುದನ್ನು ಅದು ಮೊದಲೇ ತಿಳಿದುಕೊಂಡಿದೆಯೇ? ಹಾಗೇನೂ ಇಲ್ಲ. ಅದರ ಸಂಗೀತವನ್ನು ನಾನು ಮೆಚ್ಚುವುದಿಲ್ಲ-ಮಾತ್ರವಲ್ಲ ದ್ವೇಷಿಸುತ್ತೇನೆ. ಅಂದ ಮೇಲೆ ಅದು ರಕ್ತದ ಬೆಲೆ ಸಂದಾಯ ಹೇಗಾದೀತು? ವಿನಿಮಯ ವ್ಯಾಪಾರದಲ್ಲಿ ಎರಡೂ ಪಕ್ಷಗಳಿಗೆ ಒಪ್ಪಿಗೆಯಾದ ಸರಕುಗಳನ್ನಲ್ಲವೇ ಅದಲು ಬದಲು ಮಾಡಿಕೊಳ್ಳುವಂಥಾದ್ದು?

"ಅದು ಸಂಗೀತವೂ ಅಲ್ಲ, ನಿನ್ನ ಕಿವಿಯ ಹತ್ತಿರ ಗಾನಸೇವೆ ಮಾಡಬೇಕೆಂಬ ಉದ್ದೇಶವೂ ಅದಕ್ಕಿಲ್ಲ; ಸೊಳ್ಳೆಗಳದು ವ್ಯಾಪಾರಿ ಸಂಸ್ಕೃತಿಯಲ್ಲ. ತೆಗೆದುಕೊಂಡದ್ದಕ್ಕೆ ಪ್ರತಿಯಾಗಿ ಏನನ್ನಾದರೂ ಕೊಡಬೇಕೆಂಬುದು ಮನುಷ್ಯರ ಕಲ್ಪನೆ. ಸೊಳ್ಳೆ ಹಾರಾಡುವಾಗ ಅದರ ರೆಕ್ಕೆಗಳು ಸೆಕೆಂಡಿಗೆ ಎಷ್ಟೋ (ಎಷ್ಟೆಂದು ಈಗ ಮರೆತು ಹೋಗಿದೆ) ನೂರು ಸಲ ಬಡಿಯುವುದರಿಂದ ಗಾಳಿಯಲ್ಲಿ ಶ್ರವಣಗೋಚರ ತರಂಗಗಳು ಉತ್ಪನ್ನವಾಗುವುದರಿಂದ ಅದು ಗುಂಯ್ಯಾಟವಾಗಿ ನಿನಗೆ ಕೇಳಿಸುತ್ತದೆ. ಅದು ನಿನ್ನ ಹಾಗೆ ಮೂಗು ಬಾಯಿಗಳಿಂದ ಬುದ್ಧಿಪೂರ್ವಕ ಗುಂಯ್‌ಗುಟ್ಟುವುದಿಲ್ಲ. ನಿನ್ನ ಕಿವಿಗಳ ಹತ್ತಿರವೇ ಸಂಗೀತಿಸುವ ಉದ್ದೇಶವೂ ಸೊಳ್ಳೆಗೆ ಇಲ್ಲ. ಅದು ನಿನ್ನ ಕಿವಿಗಳ ಹತ್ತಿರ ಹಾರಾಡುವಾಗ್ಗೆ ಅದರ ಗಾನ ನಿನಗೆ

ಕೇಳಿಸುತ್ತದಷ್ಟೇ"—ಎಂದು ನನ್ನ ಸೊಳ್ಳೆ-ವಿಜ್ಞಾನಿ ಮಿತ್ರ ಹೇಳುತ್ತಾನೆ. ನನಗೆ ಮನವರಿಕೆಯಾಗುವುದಿಲ್ಲ. ಅದು ಹೆಚ್ಚಿನ ಹೊತ್ತು ನನ್ನ ಕಿವಿಗಳ ಹತ್ತಿರವೇ ಕಳೆಯುತ್ತದೆಂದೂ ಸಂಗೀತವನ್ನು ಅಡ್ವಾನ್ಸಾಗಿ ಕೊಟ್ಟು ರಕ್ತವನ್ನು ಅನಂತರ ತೆಗೆದುಕೊಳ್ಳುವುದೇ ಅದರ ಉದ್ದೇಶವೆಂದೂ ನನಗೆ ನಂಬಿಕೆಯಾಗಿದೆ. ಒಂದು ವೇಳೆ ನನ್ನ ಮಿತ್ರ ಹೇಳುವುದೇ ಖರೆಯಾಗಿದ್ದರೂ, ನನಗೆ ಬೇಡವಾದ ಸಂಗೀತವನ್ನು ನನಗೆ ಬಲಾತ್ಕಾರವಾಗಿ ಉಣಿಸುವ ಹಕ್ಕು ಅದಕ್ಕೆ ಇದೆಯೇ?

ನಾನು ಸೊಳ್ಳೆಯ ಪೂರ್ವಾಪರದ ಬಗ್ಗೆ ಅನೇಕ ಸಂಶೋಧನೆಗಳನ್ನು ಮಾಡಿದ್ದೇನೆ. ಒಮ್ಮೆ ಅದರ ಗಾನದಿಂದ ನಿದ್ದೆಗೇಡಾಗಿ ಎದ್ದು ಕೂತು ಕೋಶಗಳನ್ನು ಮಗುಚಿ ಹಾಕಿದಾಗ ನನಗೆ ಗೊತ್ತಾದ ಕೆಲ ಸಂಗತಿಗಳು ಇವು: ೧) ಸೊಳ್ಳೆಗಳು ವೈದಿಕ ಋಷಿಗಳಿಗೂ ಪರಿಚಿತವಾಗಿದ್ದವು; ಋಗ್ವೇದ ಮತ್ತು ಅಥರ್ವವೇದಗಳಲ್ಲಿ ಸೊಳ್ಳೆಗಳ ಪ್ರಸ್ತಾಪ ಇದೆ; ೨) ವೈದಿಕ ಋಷಿಗಳು ಅವುಗಳಿಗೆ "ಮಶಕ"ಗಳೆಂದು ಹೆಸರಿಟ್ಟಿದ್ದರು; ೩) ಮಶಕ ಎಂದರೆ "ಗುಂಯ್‌ಗುಟ್ಟುವ ಪ್ರಾಣಿ"ಯೆಂದು ನಿರುಕ್ತಿ; ೪) ವೈದಿಕ ಋಷಿಗಳಿಗೂ ನನ್ನಂತೆಯೇ ಮಶಕಗಳನ್ನು ಕಂಡರೆ ಅಥವಾ ಕೇಳಿದರೆ ಆಗುತ್ತಿರಲಿಲ್ಲ. ಆದ್ದರಿಂದ ಅಥರ್ವವೇದದಲ್ಲಿ ಮಶಕ-ಮಾರಣ ಮಂತ್ರಗಳಿವೆ. ವೈದಿಕ ಋಷಿಗಳು ಅವು ಮಾಡುವ ಸಪ್ಪಳದಿಂದಲೇ ಅವುಗಳಿಗೆ ಹೆಸರಿಟ್ಟಿದ್ದರಿಂದಲೂ, ಅವುಗಳ ಮಾರಣಮಂತ್ರಗಳನ್ನು ರಚಿಸಿದ್ದರಿಂದಲೂ ಆ ಸಪ್ಪಳದ ದೆಸೆಯಿಂದಲೇ ವೈದಿಕ ಋಷಿಗಳಿಗೆ ಅವುಗಳ ಮೇಲೆ ರೋಷ ಬಂದಿತ್ತೆಂದು ತೀರ್ಮಾನಿಸುವುದು ಅಪರಿಹಾರ್ಯವಾಗುತ್ತದೆ.

ಆದರೆ ವೈದಿಕ ಋಷಿಗಳು ಈಗ ಉಳಿದಿಲ್ಲ; ಮಶಕಗಳು ಇನ್ನೂ ಇವೆ ಮತ್ತು ಮಜವಾಗಿ ಗುಂಯ್‌ಗುಡುತ್ತಲೇ ಇವೆ. ಮಂತ್ರಗಳು ಅವುಗಳಿಗೆ ನಾಟುವುದಿಲ್ಲವೆಂದು ಇದರಿಂದ ವ್ಯಕ್ತವಾಗುತ್ತದೆ.

ವೇದಗಳು ಮಂತ್ರದಿಂದ ಮಶಕ ನಿಗ್ರಹ ಮಾಡಲು ಯತ್ನಿಸಿ ನೋಡಿದ್ದವೆಂದೂ, ಅದು ಯಶಸ್ವಿಯಾಗಲಿಲ್ಲವೆಂದೂ ತಿಳಿಯುವ ನಲವತ್ತು ವರ್ಷ ಮೊದಲೇ ನಾನು ಬೇರೊಂದು ಮಾರ್ಗವನ್ನು ಯತ್ನಿಸಿ ನೋಡಿದ್ದೆ. ಅದು ಶಾಪವಲ್ಲ, ಸ್ತುತಿ. ಒಂದು ರಾತ್ರಿ ಸೊಳ್ಳೆಗಾನದಿಂದ ಪೀಡಿತನಾಗಿ ಎದ್ದು ಕುಳಿತು, ನಾನು ಹೀಗೆ ಒಂದು ಸಾನೆಟ್ ಪ್ರಾರಂಭಿಸಿದೆ:

"ಬಡಮುನಿಸಿಪಾಲಿಟಿಗೆ ಒಡಹುಟ್ಟಿದವ ನೀನು", ಆಗ ನಾನು ಉಡುಪಿಯಲ್ಲಿದ್ದೆ. ಅದೇ ತಾನೇ ಪಟ್ಟಣಕ್ಕೆ ಮುನಸಿಪಾಲಿಟಿಯನ್ನು ಬ್ರಿಟಿಷ್ ಸರಕಾರ ದಯಪಾಲಿಸಿತ್ತು. ಅದಕ್ಕಿಂತ ಮುಂಚೆ ಅಲ್ಲಿ ಸೊಳ್ಳೇಕಾಟ ಅಷ್ಟಾಗಿರಲಿಲ್ಲ. ಮುನಸಿಪಾಲಿಟಿಯೊಡನೆ ಸೊಳ್ಳೆಯೂ ಒಂದೊಂದಾಗಿ, ಆಮೇಲೆ ಹಿಂಡುಹಿಂಡಾಗಿ ಉದ್ಭವಿಸಿತಾದ್ದರಿಂದ ನನ್ನ ಸುನೀತದ ಪ್ರಥಮ ಚರಣ ಹಾಗೆ ಪ್ರಾರಂಭವಾಗಿತ್ತು. ಮುಂದೆ ಸೊಳ್ಳೆಯನ್ನು ಕುರಿತು ಹನ್ನೊಂದು ಪಂಕ್ತಿಗಳಲ್ಲಿ ವಿಸ್ತರಿಸಿ—

"ಓ ನುಸಿಯೆ, ಪ್ರೇಮಗಾನದ ಸಸಿಯೆ, ಸಂತಸಿಯೆ", ಎಂದು ಅದರ ಗಾನ ವೈಖರಿಯನ್ನು ಹೊಗಳಿ, ಹದಿನಾಲ್ಕನೇ ಪಂಕ್ತಿಯನ್ನು, "ನಿನಗೆ ನಮಿಸುವೆನಿಂದು!" ಎಂದು ಮುಕ್ತಾಯಗೊಳಿಸಿದೆ. ಆಮೇಲೆ ಇಡೀ ಸುನೀತವನ್ನೊಮ್ಮೆ ವಿನೀತವಾಗಿ ಹಾಡಿ ಮಲಗಿದೆ. ಈ ಸುನೀತವನ್ನು ಒಂದಕ್ಕಿಂತ ಹೆಚ್ಚು ಹಾಸ್ಯ ಮೀಮಾಂಸಾ ಗ್ರಂಥಗಳು ಆಮೇಲೆ ಪ್ರಶಂಸಿಸಿವೆ. ಆದರೆ ಸೊಳ್ಳೆಗಳಿಗೆ ಹಾಸ್ಯ ಪ್ರಜ್ಞೆ ಇಲ್ಲವೋ ಇದನ್ನು ನೈಜ ಪ್ರಶಂಸೆಯೆಂದೇ ಗ್ರಹಿಸಿದವೋ, ಅಥವಾ ಬೆಂಗಳೂರಿನ ರಿಕ್ಷಾವಾಲರೂ ಪೊಲೀಸರೂ ಕನ್ನಡವನ್ನು ಕಲಿಯದೆಯೇ ಕರ್ನಾಟಕದ ರಾಜಧಾನಿಯಲ್ಲಿ ವ್ಯವಹರಿಸಲು ಸಮರ್ಥವಾಗಿರುವಂತೆ ಸೊಳ್ಳೆಗಳೂ ಕನ್ನಡವರಿಯದೆಯೇ ಕನ್ನಡಿಗರ ರಕ್ತ ಹೀರಲು ಸಮರ್ಥವಾಗಿವೆಯೋ ಗೊತ್ತಿಲ್ಲ. ಈ ಸ್ತೋತ್ರ ಕೇಳಿ ಸೊಳ್ಳೆಗಳು ನನ್ನನ್ನು ಕೊರೆಯುವುದರಲ್ಲಿ ರಿಯಾಯಿತಿ ಮಾತ್ರ ತೋರಿಸಲಿಲ್ಲ.

ಈ ಸುನೀತ ಬರೆದು ಕನ್ನಡ ಸಾಹಿತ್ಯದಲ್ಲಿ ನಾನು ಅಕ್ಷಯ ಕೀರ್ತಿಯನ್ನು ಸಂಪಾದಿಸಿದ ಮೇಲೆ ಸೊಳ್ಳೆಗಳನ್ನು ನಿಗ್ರಹಿಸಲು ನಾನು ಕೈಕೊಂಡ ಉಪಾಯಗಳು ಅಸಂಖ್ಯ, ಓದಿದ ಸಾಹಿತ್ಯ ಅಪಾರ. ನನ್ನ ಪ್ರಥಮ ಪ್ರಯತ್ನವೆಂದರೆ ನೇರ ಧಾಳಿ. ಸೊಳ್ಳೆ ನನ್ನ ಕರ್ಣ ಪ್ರಾಂತದಲ್ಲಿ ತನ್ನ ಗಾನವನ್ನು ಆರಂಭಿಸಿದೊಡನೆ ನನ್ನ ಪಂಚಾಂಗುಲಿ ಸಹಿತವಾದ ಅಂಗೈಯಿಂದ ಸಕಲ ಶಕ್ತಿಯೊಡನೆ ತಪರಾಕಿಯನ್ನು ಕೊಡುವುದು. ಆದರೆ ಸಾವಿರಕ್ಕೆ ಒಂಭೈನೂರ ತೊಂಭತ್ತೊಂಭತ್ತು ಸಲ ಪೆಟ್ಟು ನನ್ನ ಕಿವಿ ಗಡ್ಡೆಗೇ ಬಿದ್ದು ಸೊಳ್ಳೆ ತಪ್ಪಿಸಿಕೊಳ್ಳುತ್ತಿತ್ತು. ಕೆಲವೇ ದಿನಗಳಲ್ಲಿ ನಾನು ಕಿವಿ ಡಾಕ್ಟರರನ್ನು ಕಾಣಬೇಕಾಯಿತು.

ಒಕ್ಕೈತಪರಾಕಿಯ ವ್ಯರ್ಥತೆಯನ್ನು ಮನಗಂಡ ಮೇಲೆ ಇಕ್ಕೈತಾಳವನ್ನು ನಾನು ಪ್ರಯೋಗಿಸಿದೆ. ಆದರೆ ಶಯನ ಪೋಜಿನಲ್ಲಿ ಇಕ್ಕೈತಾಳವಿಕ್ಕುವುದು ಅದೂ ಪಕ್ಕಕ್ಕೆ ಮಲಗಿದಲ್ಲಿಂದ ಕಷ್ಟವೆಂದು ಅನುಭವವಾಯಿತು. ಇಕ್ಕೈ ಪ್ರಯೋಗಕ್ಕೆ ದೀಪ ಬೇಕು; ಹಾಸಿಗೆಯಲ್ಲಿ ಎದ್ದು ಕೂಡ್ರಬೇಕು; ನಡುನಡುವೆ ಹಿಂದುಸ್ತಾನಿ ಸಂಗೀತದವರು ತಪ್ಪಿಸಿಕೊಂಡು ಹೋಗುವ ಸ್ವರಗಳನ್ನು ಹಿಡಿಯುವುದಕ್ಕಾಗಿ ಹಾರಿ ಜಿಗಿಯುವಂತೆ ನಾನು ಸೊಳ್ಳೆ ಹಿಡಿಯಲು ನಾಟ್ಯವಾಡಬೇಕು; ರೂಮು ತುಂಬ ಓಡಾಡುತ್ತ ತಾಲೀಬಜಾನಾ ಮಾಡಬೇಕು ಇಷ್ಟೆಲ್ಲ ಸಾಹಸದಿಂದ ಒಂದು ತಾಸಿಗೆ ಮೂರು-ನಾಲ್ಕು ಸೊಳ್ಳೆಗಳನ್ನು ಮಾತ್ರ ಸ್ವರ್ಗಾರೋಹಣ ಮಾಡಿಸಬಹುದು—ಎಂದು ಸಿದ್ಧವಾಯಿತು.

ಹುಬ್ಬಳ್ಳಿಗೆ ಹೋದ ಮೇಲೆ ಅಲ್ಲಿ ನನ್ನ ಸೊಳ್ಳೆ ಹೋರಾಟ ಮುಂದುವರಿಯಿತು. ಉಡುಪಿ ಮುನಸಿಪಾಲಿಟಿಗಿಂತ ಹುಬ್ಬಳ್ಳಿಯದು ಅರ್ಧ ಶತಮಾನ ಪುರಾತನವಾಗಿದ್ದುದರಿಂದ ಇಲ್ಲಿ ಸೊಳ್ಳೆಗಳನ್ನು ಶತಕಗಳನ್ನೆಲ್ಲ ಅಕ್ಷೋಹಿಣಿಗಳಲ್ಲಿ ಗಣಿಸಬೇಕಾಗಿತ್ತು. ಇಲ್ಲೇನೋ ಪಾಲುಗಾರಳಾಗಿ ನನ್ನ ಹೆಂಡತಿ ಇದ್ದಳು. ಹೆಂಗಸರ ರಕ್ತ ಗಂಡಸರದ್ದಕ್ಕಿಂತ ಸೊಳ್ಳೆಗಳಿಗೆ ಪ್ರಿಯವೆಂದು ಮಶಕ ವಿಜ್ಞಾನಿಗಳು ಹೇಳುತ್ತಾರೆ. ಇರಬಹುದು; ಆದರೆ ಸೊಳ್ಳೆಗಳು ತಮ್ಮ ಸಂಗೀತವನ್ನೆಲ್ಲ ನನಗೆ ಮೀಸಲಿಟ್ಟು ನೆತ್ತರು ಹೀರುವುದನ್ನು ಮಾತ್ರ ಅವಳಿಗೆ ಮೀಸಲಿಟ್ಟಿದ್ದವೋ

ಏನೋ, ಹೇಗಿದ್ದರೂ ಮಶಕ ಸಮರದಲ್ಲಿ ಅವಳು ನನಗೆ ಅಕ್ಷರಶಃ ಸ್ಲೀಪಿಂಗ್ ಪಾರ್ಟನರ್ ಮಾತ್ರ ಆಗಿದ್ದಳೆಂದು ವಿಷಾದದಿಂದ ಹೇಳಬೇಕಾಗಿದೆ. ರಾವಣನಿಗೆ ಕುಂಭಕರ್ಣ ಇದ್ದ ಹಾಗೆ ಅನ್ನಿ. ಅವಳು ಸೊಳ್ಳೆಗಳನ್ನು ಗಮನಕ್ಕೆ ತೆಗೆದುಕೊಳ್ಳಲು ನಿರಾಕರಿಸಿ "ಅವುಗಳ ಪಾಲಿನ ರಕ್ತ ಅವು ಹೀರಲಿ!" ಎಂದು ತಲೆದಿಂಬು ಮೂಸುತ್ತಲೇ ನಿದ್ದೆ ಹೋಗುತ್ತಿದ್ದಳು.

ಹುಬ್ಬಳ್ಳಿಯಲ್ಲಿ ನನ್ನ ಸೊಳ್ಳೆ ಸಮರದ ಎರಡನೇ ವರ್ಷದಲ್ಲಿ ನಾನು ಸೊಳ್ಳೆ ಮಾರಣಕ್ಕೆ ಒಂದು ಖಚಿತ ಉಪಾಯವನ್ನು ಕಂಡುಹಿಡಿದೆನೆಂದು ಕೆಲಕಾಲ ನನಗೆ ಅನಿಸಿದ್ದುಂಟು. ಆಯುಧ ಬಹಳ ಸರಳವಾಗಿತ್ತು; ನಾನಾಗ ಬಳಸುತ್ತಿದ್ದ ಬೆಡ್‌ಲ್ಯಾಂಪು, ಮಲಗುತ್ತಲೇ ಚೀನೀ ಸೈನ್ಯದಂತೆ ನಮ್ಮನ್ನು ಮುಸುರುತ್ತಿದ್ದ ಸೊಳ್ಳೆಗಳನ್ನು ಬೆನ್ನಟ್ಟಿ ಸುಮಾರು ಹದಿನೈದು ನಿಮಿಷ ರೂಮು ತುಂಬ ಹಾರಾಡುವಂತೆ ರ‍್ಯಾಂಡಂ ಆಗಿ ಒಂದು ರಟ್ಟನ್ನು ಬೀಸಬೇಕು. ಆಮೇಲೆ ಸ್ವಲ್ಪ ವಿರಾಮ ಕೊಡಬೇಕು. ಹಾರಾಡಿ ರೆಕ್ಕೆ ಸೋತ ಸೊಳ್ಳೆಗಳು ಗೋಡೆಗಳ ಮೇಲೆ ಕುಳಿತುಕೊಳ್ಳಬೇಕು. ಆಗ ನಾನು ಬೆಡ್‌ಲ್ಯಾಂಪನ್ನು ಸ್ವಲ್ಪ ದೊಡ್ಡದು ಮಾಡಿ ಸೊಳ್ಳೆಗಳ ಕೆಳಗೆ ಗ್ಲಾಸಿನ ಬಾಯಿ ಗೋಡೆಗೆ ತಾಗುವಂತೆ ಹಿಡಿಯಬೇಕು. ರೆಕ್ಕೆ ಸುಟ್ಟು ಸೊಳ್ಳೆಗಳು ಒಂದೊಂದಾಗಿ ಲ್ಯಾಂಪಿನೊಳಗೆ ಉದುರಬೇಕು. ಹೀಗೆ ಮೂರು ನಾಲ್ಕು ಸುತ್ತು ಕಾರ್ಯಾಚರಣೆ ಮಾಡಿದ ಮೇಲೆ, ಆವೊತ್ತಿನ ರಾತ್ರಿಯ ಮಟ್ಟಿಗೆ ಸೊಳ್ಳೆ ದಾಳಿ ಸಹನೀಯ ಮಟ್ಟಕ್ಕೆ ಇಳಿಯುತ್ತಿತ್ತು. ಅಳಿದುಳಿದವುಗಳ ಸಂಗೀತ ನನಗೆ ಕೇಳಿಸದಂತೆ ಕಿವಿಗಳ ಮೇಲೆ ಎರಡು ಮಫ್ಲರ್ ಸುತ್ತಿಕೊಂಡು ಮಲಗಿ, "ರಾತ್ರೀ ವ್ಯಖ್ಯದಾಯತೀ"— ಎಂಬ ರಾತ್ರಿ ಸೂಕ್ತವನ್ನು ಪಠಿಸುತ್ತ ನಿದ್ರಾದೇವಿಯನ್ನು ಆಮಂತ್ರಿಸುವುದು. ಮತ್ತೆ ಮರುದಿನ ಬರುವ ಹೊಸ ದಂಡಿನೊಡನೆ ಹೋರಾಟ ಮುಂದುವರಿಸುವುದು.

ಹೀಗೆ ಕೆಲ ತಿಂಗಳವರೆಗೆ ನಾನು ಮಶಕ ಸಮಸ್ಯೆಗೆ ಒಂದು ಗಟ್ಟಿ ಉಪಾಯ ಕಂಡು ಹಿಡಿದೆನೆಂಬ ವಿಶ್ವಾಸ ನನಗೆ ಇತ್ತು. ಈ ಬಗ್ಗೆ ಒಂದು ವರದಿ ಬರೆದು ಯಾವುದಾದರೂ ವೈಜ್ಞಾನಿಕ ಪತ್ರಿಕೆಗೆ ಕಳಿಸುವ ವಿಚಾರವೂ ಬಂತು. ಆಗ ನನ್ನನ್ನು ಸೋಜಿಗಕ್ಕೊಳಪಡಿಸುವ ಸಂಗತಿ ಗಮನಕ್ಕೆ ಬಂತು. ಮಲಗುವ ಹೊತ್ತಿಗೆ ನಮ್ಮ ಪಡಸಾಲೆಯ ಪ್ರತಿ ಘನ ಅಡಿ ಆಕಾಶದಲ್ಲಿ ಹಾರಾಡುವ ಸೊಳ್ಳೆಗಳ ಸಂಖ್ಯಾಮಾನ ಹಿಂದಿನಷ್ಟೇ ಇದ್ದರೂ, ಗೋಡೆಯ ಮೇಲೆ ಕೂಡ್ರುವ ನನ್ನ ಶತ್ರುಗಳ ಸಂಖ್ಯಾಮಾನ ಗಣನೀಯವಾಗಿ ಇಳಿಮುಖವಾಗತೊಡಗಿತು. ಕಡೆಗೆ ನನ್ನ ಬೆಡ್‌ಲ್ಯಾಂಪು ಒಂದೇ ಒಂದು ಸೊಳ್ಳೆಯನ್ನು ಶೇಖರಿಸಲಾರದ ದಿನವೂ ಬಂತು.

ಈಗ ಉದ್ಭವವಾದ ಪ್ರಶ್ನೆ ಸೊಳ್ಳೆ ಕಡಿತಕ್ಕಿಂತ ಘನವಾದದ್ದು. ಗೋಡೆಯ ಮೇಲೆ ಕೂಡ್ರುವುದು ಪ್ರಾಣಾಪಾಯಕರ ಎಂಬುದು ಸೊಳ್ಳೆಗಳಿಗೆ ಹೇಗೆ ತಿಳಿಯಿತು? ಪ್ರತಿದಿನ ಹೊಸ ಹೊಸ ಸೊಳ್ಳೆಗಳೇ ದಾಳಿ ಮಾಡುತ್ತಿದ್ದು, ಅವುಗಳಿಗೆ ಹಿಂದಿನ ಅಥವಾ ಅದರ ಹಿಂದಿನ ದಿನಂಗಳಲ್ಲಿ ಇತರ ಸೊಳ್ಳೆಗಳಿಗೆ ಒದಗಿದ ಗತಿಯ ತಿಳಿವಳಿಕೆ ಯಾವ ಮಾರ್ಗದಿಂದ ಬಂದಿರಬಹುದು? ಜೀವ ಮಾತ್ರದ ಅನುಭವಗಳು ಒಂದು ಮಹಾ

ಅನುಭವ ಕೆರೆಯಲ್ಲಿ ಸಮಾವೇಶ ಹೊಂದಿ, ಮುಂದೆ ಹುಟ್ಟುವ ಜೀವಗಳಿಗೆ ದಾಟಿಸಲ್ಪಡುತ್ತವೆ ಎಂದು ಬರ್ಗ್‌ಸನ್ನನೋ ಯಾರೋ ಒಂದು ಥಿಯರಿ ಮಂಡಿಸಿದ್ದಾರಂತೆ. ನಾನು ಬೆಡ್‌ಲ್ಯಾಂಪಾಸ್ತ್ರದಿಂದ ಸುಟ್ಟು ಹಾಕಿದ ಸೊಳ್ಳೆಗಳ ಮರಣಾನುಭವವೆಲ್ಲ ಮಶಕಾನುಭವದ ಮಹಾಕೆರೆಯಲ್ಲಿ ಸೇರಿ ಮುಂದಿನ ಸೊಳ್ಳೆಗಳಿಗೆ ಹಂಚಲ್ಪಟ್ಟಿತೆ? ಅದರಿಂದ ಅವು ಜಾಗರೂಕವಾದವೇ?

ಸೊಳ್ಳೆಗಳ ಮುಂದೆ ನನ್ನ ಬೆಡ್‌ಲ್ಯಾಂಪಿನ ಸೋಲಿನ ಸಲುವಾಗಿ ನಾನೇನು ಅಷ್ಟು ನಾಚುವ ಪ್ರಸಂಗವಿಲ್ಲ. ಸೊಳ್ಳೇ ಕೈಲಿ ಸೋಲು ತಿಂದ ಮಹಾ ವಿಜ್ಞಾನಿಗಳೇ ನನ್ನ ಪಕ್ಕದಲ್ಲಿದ್ದಾರೆ. ಡಿ.ಡಿ.ಟಿ. ಕಂಡುಹಿಡಿದ ವಿಜ್ಞಾನಿಗಳು ಇನ್ನೇನು ಸೊಳ್ಳೆ ಕುಲವೇ ನಾಶವಾದ ಹಾಗೆ ಅಂತ ತಮಗೆ ತಾವೇ ಶಿಫಾರಸು ಕೊಟ್ಟುಕೊಂಡರು. ಮೂವತ್ತೈದು ವರ್ಷಗಳ ನಂತರ ಸೊಳ್ಳೆಗಳು ಇನ್ನೂ ಇವೆ; ಮಲೇರಿಯಾ ಜ್ವರ ಮತ್ತೆ ಬಂದಿದೆ. ಡಿ.ಡಿ.ಟಿ. ಉತ್ಪಾದಿಸಿದ ವಿಜ್ಞಾನಿಗಳು ಕೆಲವರು ಆಚೆ ಲೋಕಕ್ಕೆ ಹೋಗಿದ್ದಾರೆ. ಈ ಲಾಂಗೂಲಾಚಾರ್ಯನೆಂಬ ಅಭಿಪ್ರಾಣಿ ಯಾವ ಗಿಡದ ತೊಪ್ಪಲು?

ನನಗೆ ಒಮ್ಮೆ ಕೆಲಕಾಲ ಒಂದು ಅಟ್ರಾಕಾಣಿ ದಿಲ್‌ರುಬಾ ಸಿಕ್ಕಿತ್ತು. ಅದರ ತಂತಿಗಳ ಮೇಲೆ ಕಮಾನು ಆಡಿಸುತ್ತಾ ನನ್ನದೇ ಸಂಗೀತ ಆಲಾಪನೆ ಮಾಡುತ್ತಿದ್ದೆ. ಒಂದು ದಿನ ಹೀಗೆ ಬಾರಿಸುತ್ತಿರಲು ಗೋಧೂಳಿ ಅರ್ಥಾತ್ ಮಶಕಧಾಳಿ ಮುಹೂರ್ತ ಬರುತ್ತಲೇ ಮನೆಯೊಳಗೆ ನುಗ್ಗಿದ ಸೊಳ್ಳೆಗಳೆಲ್ಲ ಬಿಟ್ಟ ಬಾಣಗಳಂತೆ ನನ್ನ ಕಡೆಗೆ ಅಕ್ಷೋಹಿಣಿ ಸಂಖ್ಯೆಯಲ್ಲಿ ನುಗ್ಗಿದವು. ಎರಡು ಮೂರು ದಿನಗಳಲ್ಲೇ ಅದ್ಭುತ ತಥ್ಯವೊಂದು ನನಗೆ ಕಪಾಲಕ್ಕೆ ಹೊಡೆದ ಹಾಗೆ ಪ್ರತೀತವಾಯಿತು. ದಿಲ್‌ರುಬಾದ ಧ್ವನಿಗೋ ಅಥವಾ ಅದರಿಂದ ನಾನು ಹೊರಡಿಸುತ್ತಿದ್ದ ವಿಶಿಷ್ಟ ಲಾಂಗೂಲ ರಾಗಕ್ಕೋ ಮೋಹಿತವಾಗಿ, ಅದು ಕೇಳಿಸುವಷ್ಟು ದೂರದಲ್ಲಿದ್ದ ಸೊಳ್ಳೆಗಳೆಲ್ಲ ಹಾರಿ ಬಂದು ಅದರ ಸುತ್ತ ಸಂದಣಿಸುತ್ತವೆ! ರಿಂಗಣ ಹಾಕಿ ಗಾಳಿಯಲ್ಲಿ ನರ್ತಿಸುತ್ತವೆ! ನನ್ನ ತರ್ಕ ಬುದ್ಧಿ ಚುರುಕಾಯಿತು. ಆಹಾ! ಹೀಗೆ ಸಂಗೀತ ಮೋಹಿತವಾಗಿ ಸಂದಣಿಸಿದ ಸೊಳ್ಳೆಗಳನ್ನು ಬೊಮ್ಮನಹಳ್ಳಿಯ ಕಿಂದರಿ ಜೋಗಿಯಂತೆ, ನನ್ನ ದಿಲ್‌ರುಬಾ ಬಾರಿಸುತ್ತ ಕರೆದೊಯ್ದು ಯಾವುದಾದರೊಂದು ಗುಡ್ಡ ಬಾಯ್ದೆರೆಯುವಂತೆ ಮಾಡಿ, ಅವುಗಳನ್ನು ಅದರೊಳಗೆ ಬಿಟ್ಟು ಬರಲು ಸಾಧ್ಯವಾಗಿದ್ದರೆ? ದುರ್ದೈವದಿಂದ ಗುಡ್ಡಗಳನ್ನು ಬಾಯ್ದೆರೆಯಿಸುವ ಮಂತ್ರ ನನಗೆ ಗೊತ್ತಿಲ್ಲವಲ್ಲ!

ಇದಾಗಿ ಹಲವು ವರ್ಷಗಳ ನಂತರ ಒಬ್ಬ ಅಮೇರಿಕನ್ ವಿಜ್ಞಾನಿ ನನ್ನೀ ಐಡಿಯವನ್ನು ಬಳಸಿಕೊಂಡು ಸಂಶೋಧನೆ ನಡೆಸಿದ. ಬೇರೆ ಬೇರೆ ಜಾತಿಯ ಸೊಳ್ಳೆಗಳಿಗೆ ಪ್ರಿಯವಾದ ರಾಗಗಳನ್ನು ಗುರುತಿಸಿ ಅವನು ಅವುಗಳ ಟೇಪ್ ರೆಕಾರ್ಡ್ ತಯಾರಿಸಿದ್ದನಂತೆ. ಒಂದು ಸೂಕ್ಷ್ಮ ತಂತೀ ಬಲೆ ಹಾಕಿದ ಸ್ಕ್ರೀನಿನಾಚೆಗೆ ಕುಳಿತು ಆ ರೆಕಾರ್ಡ್ ನುಡಿಸಬೇಕು. ಆ ವಿಶಿಷ್ಟಗಾನದಿಂದ ಮೋಹಿತವಾಗಿ ಸೊಳ್ಳೆಗಳು ಬಂದು ಬಲೆಯ ಮೇಲೆ ಕೂತು

ಗಾನಾನಂದ ಮಗ್ನವಾಗಿರುವಾಗ ಪ್ರಬಲ ವಿದ್ಯುತ್ ಕರೆಂಟನ್ನು ತಂತಿ ಬಲೆಯಲ್ಲಿ ಹರಿಸಬೇಕು. ದಂಡು ದಂಡಾಗಿ ಸೊಳ್ಳೆಗಳ ಕುಲ ನಾಶವಾಗುತ್ತದೆ.

ಈ ಸಂಶೋಧನೆಯ ಗತಿ ಏನಾಯಿತೆಂದು ನನಗೆ ಗೊತ್ತಿಲ್ಲ. ಸೊಳ್ಳೆ ರೆಕಾರ್ಡುಗಳಾಗಲಿ, ತಂತಿ ಬಲೆಗಳಾಗಲಿ ಪೇಟೆಗೆ ಬರಲಿಲ್ಲ. ಬಹುಶಃ ಸೊಳ್ಳೆಗಳು ಬಹುಬೇಗನೆ ಬಲೆಯಲ್ಲಿ ಬೀಳದೆ ಸಂಗೀತ ಶ್ರವಣ ಮಾಡಲು ಕಲಿತಿರಬೇಕು. ಅಥವಾ ಆ ವಿಜ್ಞಾನಿ ಆಕಸ್ಮಾತ್ತಾಗಿ ತನ್ನ ಬಲೆಯಲ್ಲಿ ತಾನೇ ಕರೆಂಟ್ ತಗಲಿಸಿಕೊಂಡು ಸತ್ತಿರಬೇಕು.

ಅನಂತರ ಇನ್ನೊಬ್ಬ ವಿಜ್ಞಾನಿ ನಾದದ ಬದಲು ವಾಸನೆಯಿಂದ ಸೊಳ್ಳೆ ಮಾರಣ ಪ್ರಯತ್ನ ಮಾಡಿದ ಸುದ್ದಿಯೂ ಜನಪ್ರಿಯ ವಿಜ್ಞಾನ ಪತ್ರಿಕೆಗಳಲ್ಲಿ ಬಂದಿತ್ತು. ಆತ ಬೇರೆ ಬೇರೆ ಬಗೆಯ ಹೆಣ್ಣು ಸೊಳ್ಳೆಗಳ ಲೈಂಗಿಕ ಗ್ರಂಥಿಗಳಿಂದ ವಾಸನಾ ರಸಾಯನ ದ್ರವ್ಯಗಳನ್ನು ಶೇಖರಿಸಿ ವಿಶ್ಲೇಷಿಸಿ ಕೃತಕವಾಗಿ ಅವುಗಳನ್ನು ತಯಾರಿಸಿದ್ದನಂತೆ. ಆ ದ್ರವ್ಯಗಳನ್ನು ತಂತಿ ಬಲೆಗೆ ಹಚ್ಚಿಟ್ಟರೆ ದೂರದೂರದ ಆಯಾ ಜಾತಿಯ ಗಂಡು ಸೊಳ್ಳೆಗಳು ಸಹಿಸಲಾರದ ವಾಸನಾಕರ್ಷಣೆಗೊಳಗಾಗಿ ಬಲೆಯ ಮೇಲೆ ಬಂದು ಕೂತು ವಿದ್ಯುತ್ ಚಿಕಿತ್ಸೆಗೊಳಗಾಗಿ ಮರಣಿಸುತ್ತಿದ್ದವು. ಗಂಡುಗಳ ಕುಲ ನಾಶವಾದ ಮೇಲೆ ಹೆಣ್ಣು ಏನು ಮಾಡಬಲ್ಲದು? ಈ ಸಂಶೋಧನೆಯ ಅಂತಿಮ ಗಡಿಯೂ ರಹಸ್ಯವಾಗಿಯೇ ಉಳಿದಿದೆ. ಗಂಡಿಲ್ಲದೇ ಸಂತಾನೋತ್ಪತ್ತಿ ಮಾಡುವ ರಹಸ್ಯವನ್ನು ಹೆಣ್ಣು ಸೊಳ್ಳೆಗಳು ಸಂಶೋಧಿಸಿದವೋ ಅಥವಾ ಇದು ಬರ್ಗ್‌ಸನ್ನನ ಅನುಭವ ಕೆರೆಯ ಇನ್ನೊಂದು ಉದಾಹರಣೆಯೋ ಗೊತ್ತಿಲ್ಲ.

ಇಷ್ಟೆಲ್ಲ ತಲೆ ಕೆಡಿಸಿಕೊಳ್ಳುವುದಕ್ಕಿಂತ ಒಂದು ಸೊಳ್ಳೆಪರದೆ ಕೊಳ್ಳಬಹುದಿತ್ತಲ್ಲ? ಎಂದು ನೀವು ಕೇಳುತ್ತೀರಿ, ನಾ ಬಲ್ಲೆ. ಸೊಳ್ಳೆ ಪರದೆಗಳು ಭಾರತೀಯ ಸಂಸ್ಕೃತಿಗೆ ವಿರುದ್ಧವಲ್ಲವೆಂದೂ ನಾನು ಖಚಿತ ಪಡಿಸಿಕೊಂಡಿದ್ದೇನೆ. "ಮಶಕವಾರಣ" ಎಂಬುದು ಸಂಸ್ಕೃತದಲ್ಲಿ ಸೊಳ್ಳೆ ಪರದೆಯ ಹೆಸರು. ಆದರೆ ಈಚಿಗಿನವರೆಗೆ ಸೊಳ್ಳೆಪರದೆ ಕೊಳ್ಳುವಷ್ಟು ಕಾಸು ನನ್ನ ಹತ್ತಿರ ಇರಲಿಲ್ಲ. ಕಾಸು ಕೂಡಿಸಿ ಅದನ್ನು ಕೊಂಡ ಮೇಲೆ ಕಡಿಯುವ ಸೊಳ್ಳೆಗಳೆಲ್ಲ ಹೆಣ್ಣೆಂದೂ ಗಂಡು ಕಡಿಯುವುದಿಲ್ಲವೆಂಧೂ ವಿಜ್ಞಾನ ಹೇಳಿತು. ಅದನ್ನು ಕೇಳಿದ ಮೇಲೆ ನನ್ನ ಹೆಂಡತಿ ಹೆಣ್ಣು ಜಾತಿಗೆ ಹೆದರಿ ತಾನು ಪರದೆಯ ಹಿಂದೆ ಹೆಣ್ಣಿಗಿತ್ತಿಯಂತೆ ಅವಿತುಕೊಳ್ಳಲಾರೆ ಎಂದು ಪಟ್ಟು ಹಿಡಿದಳು. ಆದರೂ ನಾನು ಹೆಣ್ಣಿಗತನದಿಂದ ಪರದೆಯೊಳಗೆ ಅವಿತುಕೊಂಡಾಗ, ಪರದೆ ಸೊಳ್ಳೆಗಳ ಕಡಿತಕ್ಕೆ ಉತ್ತರವಾದೀತು ಹೊರತು ಮಶಕ ಸಂಗೀತಕ್ಕೆ ಅದು ಸದುಪಾಯವಲ್ಲೆಂದು ಮನಗಂಡೆ. ನಾನು ದ್ವೇಷಿಸುವುದು ಸೊಳ್ಳೆಗಾನವನ್ನು ಹೊರತು ಸೊಳ್ಳೆ ಕಡಿತವನ್ನಲ್ಲ ಎಂದು ನಿಮಗೆ ಮೊದಲೇ ಹೇಳಿದ್ದೇನೆ.

ಸೊಳ್ಳೆಯ ಮೈಕ್ರೋ-ತಲೆಯಲ್ಲಿರುವ ಮಿದುಳಿನ ಶಕ್ತಿ ಮತ್ತು ಅದರ ನರಗಳ ಸೂಕ್ಷ್ಮತೆ ನನ್ನನ್ನು ನಿಜಕ್ಕೂ ಆಶ್ಚರ್ಯ ಸಾಗರದಲ್ಲಿ ಕೆಡಹಿದೆ, ನನ್ನ ಕಿವಿಯ ಮೇಲೆ ಕೂತು ಒಕ್ಕುಡಿತೆ ರಕ್ತ ಹೀರಲು ಅದು ಉದ್ಯುಕ್ತವಾದಾಗ ನಾನು ಒಂದೇಟು ಹಾಕಬೇಕೆಂದು

ಕೈಯೆತ್ತುವುದಿರಲಿ, ತಲೆಯಲ್ಲಿ ಆಲೋಚಿಸಿದರೆ ಸಾಕು, ಸೊಳ್ಳೆಗೆ ಅದು ಹೇಗೆ ತಿಳಿಯುತ್ತೋ ಕಾಣೆ. ಅದು ಅಲ್ಲಿಂದ ಹಾರಿ ಬೇರೊಂದು ಕಡೆ ಕೂತು ತನ್ನ ಕಾಯಕ ಮುಂದುವರಿಸುತ್ತದೆ. ಈ ಹೊಸ ಆಕ್ರಮಣದ ಸುದ್ದಿ ನನ್ನ ನರಗಳ ಮೂಲಕ ನನ್ನ ಮಿದುಳನ್ನು ತಲುಪಿ, ಕೈಗೆ ಮೋಟಾರ್ ನರಗಳ ಆಜ್ಞೆ ತಲುಪುತ್ತಲೇ ಸೊಳ್ಳೆ ಬೇರೆಡೆಗೆ ಹಾರಿರುತ್ತದೆ. ಕೆಲವೊಮ್ಮೆ ಗೋಡೆಯ ಮೇಲೆ ಕುಳಿತ, ಅಥವಾ ಅಂತರದಲ್ಲಿ ಹಾರುವ ಸೊಳ್ಳೆಗೂ ಅದನ್ನು ಕೊಲ್ಲುವ ನನ್ನ ಸಂಕಲ್ಪ ಯಾವುದೋ ಸಪ್ತಮ ಇಂದ್ರಿಯದ ಮೂಲಕ ತಿಳಿಯುವ ಹಾಗೆ ಅನಿಸುತ್ತದೆ. ಒಂದು ವೇಳೆ ಸೊಳ್ಳೆಯ ಮಿದುಳಿನ ದಾಮಾಶೆಯಲ್ಲಿ ಮಾನವ ಮಿದುಳಿಗೆ ಗ್ರಹಣ ಶಕ್ತಿ, ಸೂಕ್ಷ್ಮತೆ, ಪ್ರಜ್ಞೆ ಇದ್ದಿದ್ದರೆ ಅವನು ಎಂಥಾ ಅದ್ಭುತ ಪ್ರಾಣಿಯಾಗಬಹುದಿತ್ತು—ಎಂದು ಸೊಳ್ಳೆ ಕಡಿದಲ್ಲಿ ತುರಿಸಿಕೊಳ್ಳುತ್ತಾ ಯೋಚಿಸುತ್ತೇನೆ. ಆದರೂ ಸೊಳ್ಳೆಯ ಸ್ವಾತಂತ್ರ್ಯಪ್ರಿಯತೆ ನನ್ನ ಮೇಲೆ ತುಂಬಾ ಪ್ರಭಾವ ಮಾಡಿದೆ. ನೀವು ಸೊಳ್ಳೆ ಪರದೆಯೊಳಗೆ ಮಲಗಿರುತ್ತೀರಿ. ಯಾವ ಮಾಯಕದಿಂದಲೋ ಕೆಲ ಸೊಳ್ಳೆಗಳು ಅದರೊಳಗೆ ಸೇರಿಕೊಂಡು ಬಿಡುತ್ತವೆ. ಅವು ನಿಮ್ಮ ರಕ್ತವನ್ನು ಹೀರುತ್ತಿರುವಾಗಿ ನೀವು ಎಚ್ಚರಗೊಂಡು ಮಿಸುಕುತ್ತೀರಿ. ಸೊಳ್ಳೆಗಳು ಹಾರತೊಡಗುತ್ತವೆ. ಎಲ್ಲ ದಿಕ್ಕುಗಳಿಂದಲೂ ಪರದೆ ಅವುಗಳನ್ನು ತಡೆಯುತ್ತದೆ. ತಮ್ಮ ಸ್ಥಿತಿಯ ಅರಿವು ಅವುಗಳಿಗಾಗುತ್ತದೆ. ಆಗ ಮಲಗಿದಲ್ಲಿಂದಲೇ ದೀಪ ಹಾಕಿ ನೋಡಿ. ಅವು ಅಸಹಾಯತೆಯಿಂದ ಪರದೆಯಾಚೆಗಿರುವ ತಮ್ಮ ಅಲಭ್ಯ ಸ್ವಾತಂತ್ರ್ಯವನ್ನು ನಿರುಕಿಸುತ್ತ ಕುಳ್ಳಿರುವ ದೃಶ್ಯ ಹೃದಯವಿದ್ರಾವಕವಾಗಿದೆ. ಒಮ್ಮೆ ತಮ್ಮ ಕಳೆದುಹೋದ ಸ್ವಾತಂತ್ರ್ಯದ ಪ್ರತೀತಿ ಅವುಗಳಿಗಾಯಿತೋ ಆಮೇಲೆ ನಿಮ್ಮ ಅಥವಾ ನಿಮ್ಮ ಹೆಂಡತಿಯ ಮೈಯಲ್ಲಿರ ಬಹುದಾದ ಸವಿ ರಕ್ತದಲ್ಲಿ ಅವು ಆಸಕ್ತಿ ಕಳೆದುಕೊಂಡು ಬಿಡುತ್ತವೆ. ಇಂಥ ನಿಸ್ಸಹಾಯತೆಯಲ್ಲಿ ಅವುಗಳನ್ನು ಹೊಡೆಯಲು ಎತ್ತಿದ ಕೈಗಳನ್ನು ನಾನು ಎಷ್ಟೋ ಸಲ ಕೆಳಗಿಸಿದ್ದೇನೆ. ಪರದೆಯನ್ನು ತೆರೆದು ಅವುಗಳ ಸ್ವಾತಂತ್ರ್ಯವನ್ನು ಅವುಗಳಿಗೆ ಕೊಟ್ಟಿದ್ದೇನೆ.

❐

# ಮದುವೆಯಾದರೂ ಸುಖಪಡುವುದು ಹೇಗೆ?

ಇರಬೇಕೋ ಇರಬಾರದೋ? ಅದೀಗ ಪ್ರಶ್ನೆ—ಅಂತ ಹ್ಯಾಂಲೆಟ್ ತಲೆ ಕರೆದುಕೊಂಡ. ಈವೊತ್ತು ಹೆಚ್ಚು ಜನ ತರುಣರಿಗೆ ಇಷ್ಟು ಗೂಢಪ್ರಶ್ನೆ ಎದುರಾಗುವುದಿಲ್ಲ. ದೇವರ ತಪ್ಪಿನಿಂದಲೋ ತಂದೆತಾಯಿಗಳ ಬೆಪ್ಪಿನಿಂದಲೋ ನಾವು ಇಲ್ಲಿ ತಂದು ಇರಿಸಲ್ಪಟ್ಟಿದ್ದೇವೆ. ಆದ್ದರಿಂದ ಬಹಳ ತಲೆ ಕೆಡಿಸಿಕೊಳ್ಳದೆ ಇದ್ದುಬಿಡುತ್ತೇವೆ. ಆದರೆ ಪ್ರತಿ ತರುಣನನ್ನು ಕಾಡುವ ಇನ್ನೊಂದು ಪ್ರಶ್ನೆ ಹ್ಯಾಂಲೆಟ್ಟಿನ ಪ್ರಶ್ನೆಯಷ್ಟು ಗೂಢವಲ್ಲದಿದ್ದರೂ ಅದಕ್ಕಿಂತ ಕಡಿಮೆ ಗಾಢವಾದದ್ದಲ್ಲ. ಮದುವೆ ಮಾಡಿಕೊಳ್ಳಬೇಕೋ ಮಾಡಿಕೊಳ್ಳಬಾರದೋ ಅನ್ನುವುದೇ ಆ ಪ್ರಶ್ನೆ. ಆದರೆ ಅದು ಆಲೋಚನೆ ಮಾಡಿ ಬಗೆಹರಿಯುವ ಪ್ರಶ್ನೆ ಅಲ್ಲ. ಕ್ರಿಸ್ತಪೂರ್ವ ನಾಲ್ಕನೇ ಶತಮಾನದ ಗ್ರೀಕ್ ನಾಟಕಕಾರ ಮಿನಾಂದರ್ ನಮಗಾಗಿ ನಿರ್ಣಯ ಮಾಡಿಬಿಟ್ಟಿದ್ದಾನೆ: "ನಿಜ ಕೇಳಿದರೆ ಮದುವೆ ಅಂಬೋದು ಒಂದು ಕೇಡು; ಆದರೆ ಅಗತ್ಯವಾದ ಕೇಡು"—ಅಂತ.

ಮದುವೆ ಆಗುವುದೇ ಅಂತಾದಮೇಲೆ, ಮುಂದಿನ ಪ್ರಶ್ನೆ, ಆದ ಮದುವೆಯನ್ನು ನಿಭಾಯಿಸಿಕೊಂಡು ಹೋಗುವುದು ಹೇಗೆ? ಅನ್ನುವುದು. How to be happy though married. ಈ ಪ್ರಶ್ನೆ ಹಿಂದೆಂದಿಗಿಂತ ಈ ಕಾಲದಲ್ಲಿ ಬಿಗಿಯಾಗಿದೆ. ಹಿಂದಿನ ಕಾಲದಲ್ಲಾದರೆ ನಿಮಗೆ ಮದುವೆ ಮಾಡಿದವರು ಮಾಡಿದ ಮದುವೆಯನ್ನು ನಿಭಾಯಿಸುವುದಕ್ಕೆ ಸಹಾಯ ಮಾಡುತ್ತಾ ಇದ್ದರು. ಈಗ ಹಾಗಲ್ಲ. ನೀವು ಮಾಡಿಕೊಂಡ ಮದುವೆಯನ್ನು ನೀವೇ ನಿಭಾಯಿಸಬೇಕು—ಅಂದರೆ ಅನುಭವಿಸಬೇಕು.

ಅನಾದಿಕಾಲದಿಂದ ಮದುವೆಯಾದರೂ ಹೇಗೆ ಸುಖಪಡಬೇಕು ಅನ್ನುವ ಬಗ್ಗೆ ಮನುಷ್ಯ—ಅಂದರೆ ಗಂಡಸು ಪ್ರಯೋಗಗಳನ್ನು ಮಾಡಿದ್ದಾನೆ. ಬಹುಪತ್ನೀವಿವಾಹ, ಏಕಪತ್ನೀವಿವಾಹ, ಅಂಶಪತ್ನೀವಿವಾಹ ಇತ್ಯಾದಿ. ಬಹುಪತ್ನಿಯರನ್ನು ಮಾಡಿಕೊಂಡರೆ, ಅವರು ತಂತಮ್ಮೊಳಗೆ ಕಚ್ಚಾಡಿಕೊಂಡು ಗಂಡನನ್ನು ತಣ್ಣಗೆ ಬಿಡಬಹುದು, ಮತ್ತು ಅವನು ಬುದ್ಧಿವಂತ ಅಥವಾ ಅದೃಷ್ಟವಂತ ಆಗಿದ್ದರೆ ಅವನನ್ನು ಮೆಚ್ಚಿಸುವುದಕ್ಕೆ ಅವರೊಳಗೆ ಸ್ಪರ್ಧೆ ಎದ್ದು, ಅವನನ್ನು ಎಲ್ಲರೂ ಓಲೈಸಬಹುದು ಅನ್ನುವ ಆಶಾವಾದಿ ಕಲ್ಪನೆ ಕೆಲವರಿಗೆ ಇತ್ತು. ಈ ಆಶಾವಾದಿಗಳಿಗೆ ಏನಾಯಿತು ಅನ್ನುವುದನ್ನು ದಶರಥ ಮಹಾರಾಜನ ಉದಾಹರಣೆಯಿಂದ

ನಾವು ಕಂಡಿದ್ದೇವೆ. ಆಗ ಏಕಪತ್ನೀವ್ರತವೇ ತಾರಕ ಅನ್ನುವ ವಾದ ತಲೆ ಎತ್ತಿತ್ತು. ಈ ವಾದದ ಪುರಸ್ಕರ್ತನಾದ ದಶರಥನ ಮಗನಿಗೆ ಏನಾಯಿತು ಅನ್ನುವುದೂ ಕೂಡ ನಮಗೆ ಗೊತ್ತಿದೆ. ಒಂದಕ್ಕಿಂತ ಕಮ್ಮಿ ಹೆಂಡತಿಯನ್ನು ಮಾಡಿಕೊಂಡರೆ ಹೇಗೆ? ಅಂತ ದ್ವಾಪರ ಯುಗದಲ್ಲಿ ಪಾಂಡವರು ಪ್ರಯೋಗ ಮಾಡಿ ನೋಡಿದರು. ಅದಕ್ಕಾದರೂ ಏನು ಗತಿ ಆಯಿತು? "ಗಂಡರೋ ನೀವ್ ಷಂಡರೋ?" ಅಂತ ದ್ರೌಪದಿ ಅವರಿಗೆ ಸವಾಲು ಹಾಕಿದಳು. ಇಲ್ಲಾ ಸ್ವಾಮಿ, ಹೆಂಡಂದಿರ ಸಂಖ್ಯೆಯಿಂದ ವೈವಾಹಿಕ ಸುಖ ನಿರ್ಧಾರ ಆಗುವುದಿಲ್ಲ ಅಂತ ಇತಿಹಾಸ ಕಲಿಸಿದೆ. ಆದ್ದರಿಂದ One wife at a time and that kept well—ಒಮ್ಮೆಗೆ ಒಂದು ಹೆಂಡತಿ, ಅವಳನ್ನು ಚೆನ್ನಾಗಿ ಇಟ್ಟುಕೋ ಅನ್ನುವ ತತ್ತ್ವಕ್ಕೆ ಬಂದಿದ್ದೇವೆ. ಹೌದು, ಕಾನೂನು ಈಗ ಡೈವೋರ್ಸಿಗೆ ಅನುಮತಿ ಕೊಡುತ್ತದೆ. ನೀವು ನಿಮ್ಮ ಹಳೇ ಹೆಂಡತಿಯನ್ನು ಸಾಗಹಾಕಿ ಹೊಸ ಹೆಂಡತಿಯ ಮೂಲಕ ಸುಖಾನ್ವೇಷಣೆ ಮಾಡಬಹುದು. ಥಿಯರಿಯೇನೋ ಸರಿ. ಆದರೆ ಈ ಹೊಸಬಳು ನಿಮಗೆ ಹೊಸದೇ ಪಾಠ ಕಲಿಸಬಹುದು. ಅ-ಆ-ಇ-ಈ ಅಂಕಲಿಪಿ ಕಷ್ಟ ಅಂತ ABCDಗೆ ಹೋಗೋದು, ಆಮೇಲೆ Alpha Beta Thita Lamdaಕ್ಕೆ, ಅನಂತರ ಅಲೀಫ್, ಬೇ, ತೇಗೆ, ಹೀಗೆ ಬದಲು ಮಾಡುತ್ತಾ ಮಾಡುತ್ತಾ ಕಡೆಗೆ ನೀವು ಹರಪ್ಪಾ ಲಿಪಿಗೆ ಬಂದು ತಲಪಬಹುದು. ಹರಪ್ಪಾ ಲಿಪಿಯನ್ನು ಓದುವುದು ಇನ್ನೂ ಯಾರಿಗೂ ಸಾಧ್ಯವಾಗಿಲ್ಲ. ಜಾಣರಾದವರು ಸಿಕ್ಕಿದ ಹೆಂಡತಿಯ ಸಂಗಾತವೇ ಹೇಗಾದರೂ ಪುದುವಾಳುವುದಕ್ಕೆ ಕಲಿಯುತ್ತಾರೆ.

ನಾನು ಈಗ ಸುಮಾರು ನಾಲ್ವತ್ತು ವರ್ಷಗಳಿಂದ ಒಬ್ಬಳೇ ಹೆಂಡತಿಯ ಸಂಗಡ, ಆತ್ಮಹತ್ಯೆಮಾಡಿಕೊಳ್ಳದೆ ಅಥವಾ ಅವಳನ್ನೂ ಆತ್ಮಹತ್ಯೆಗೆ ತಳ್ಳದೆ, ಬಾಳುತ್ತಾ ಇದ್ದೇನೆ ಅನ್ನೋದರಿಂದ ಹೆಂಡತಿಯನ್ನು ಒಲಿಸಿಕೊಂಡು ಇರುವುದು ಹೇಗೆ ಅನ್ನುವ ಬಗ್ಗೆ ನಾನು ಒಬ್ಬ ಎಕ್ಸ್‌ಪರ್ಟ್-ಅನುಭವಸ್ಥ-ಅಂತ ನೀವು ಭಾವಿಸಬಹುದು. ಆದರೆ ಅನುಭವ ಅನ್ನೋದು ನಮ್ಮ ತಪ್ಪುಗಳಿಗೆ ನಾವು ಕೊಡುವ ಹೆಸರು ಅಂತ ಆಸ್ಕರ್‌ವೈಲ್ಡ್ ಹೇಳಿರುವುದನ್ನು ಮರೆಯಬೇಡಿ. ಮಡದಿಯರನ್ನು ಒಲಿಸಿಕೊಂಡು ಇರುವುದರಲ್ಲಿ ಅನೇಕ ಗುಳಿಗುಂಪು ಇದೆ. ಯಾಕೆ ಅಂದರೆ, ಹೆಂಡಂದಿರು ನಾನಾಗಾತ್ರಗಳಲ್ಲಿ, ನಾನಾ ಆಕಾರಗಳಲ್ಲಿ, ನಾನಾ ರೂಪಗಳಲ್ಲಿ ಮತ್ತು ನಾನಾ ಮನೋವೃತ್ತಿಗಳಲ್ಲಿ ಬರುತ್ತಾರೆ. ನಿಮಗೆ ಸಿಕ್ಕಿದ್ದು ಯಾವ ತರಹದ ಸರಕು, ಅದು ಯಾವ ತರಹದಲ್ಲಿ ರೂಪಾಂತರ ಹೊಂದುತ್ತಾ ಇದೆ ಅಂತ ಊಹಿಸಿ ಎಲ್ಲಾ ಸಂಭಾವ್ಯತೆಗಳಿಗೂ ತಕ್ಕ ಉಪಾಯ ಹೇಳುವುದು ಬ್ರಹ್ಮನಿಗೂ ಸಾಧ್ಯವಿಲ್ಲ. ಬ್ರಹ್ಮ ಹೆಣ್ಣನ್ನು ಸೃಷ್ಟಿಮಾಡಿದ, ಆದರೆ ಅರ್ಥಮಾಡಿಕೊಂಡ ಅನ್ನುವ ಭರವಸೆ ನನಗಿಲ್ಲ.

ಇಷ್ಟು ಮುನ್ನೆಚ್ಚರಿಕೆ ಕೊಟ್ಟು, ಮಡದಿಯನ್ನು ಒಲಿಸಿಕೊಂಡಿರಬೇಕಾದರೆ ಏನು ಮಾಡಬೇಕು ಅಂತ ಹೇಳುತ್ತೇನೆ. ಮಡದಿಯನ್ನು ಒಲಿಸಿಕೊಂಡಿರಬೇಕಾದರೆ ಪ್ರೇಮ, ಕಾಮ, ಸರಳತನ, ಧೂರ್ತತನ, ಕಲ್ಪನಾಶಕ್ತಿ, ಅಮಾಯಕತನ, ಧೈರ್ಯ, ದೈನ್ಯ,

ಶೌರ್ಯ, ಹೇಡಿತನ, ಮೊಂಡತನ, ದೊರೆತನ, ಆಳ್ತನ—ಇವೆಲ್ಲ ನಿಮ್ಮಲ್ಲಿರಬೇಕು ಮತ್ತು ಅದನ್ನೆಲ್ಲ ಸಂದರ್ಭ ನೋಡಿ ನಿಮ್ಮ ಚೀಲದಿಂದ ಹೊರತೆಗೆದು ಪ್ರಯೋಗಿಸುವ ಮರ್ಮಜ್ಞತನ ನಿಮ್ಮಲ್ಲಿ ಇರಬೇಕು. ನೀವು ಒತ್ತಿದರೆ ಸರಿಯಪ್ಪ ಆಗಿರಬೇಕು, ಸರಿದರೆ ಒತ್ತಪ್ಪನೂ ಆಗಿರಬೇಕು.

ಪ್ರಥಮತಃ ನೀವು ಒಬ್ಬಾಕೆಯ ಕೈಹಿಡಿದು ನಿಮ್ಮ ಮನೆಗೆ ಕರೆತಂದ ಮೇಲೆ, ಮೊದಲು ಅವಳನ್ನು ಸೂಕ್ಷ್ಮವಾದ ನಿರೀಕ್ಷಣೆಯಲ್ಲಿ ಇಡಿ. ನಿಮ್ಮ ಕೈಯನ್ನು ಅವಳ ಕೈಲಿ ಕೊಟ್ಟರೂ, ನಿಮ್ಮ ಹೃದಯವನ್ನು ಅವಳಿಗೆ ಅರ್ಪಿಸಿ ಬಿಟ್ಟರೂ ಅನಕಾತ ನಿಮ್ಮ ತಲೆಯನ್ನು ಅವಳ ಕೈಲಿ ಒಪ್ಪಿಸಿಬಿಡಬೇಡಿ. ಯಾಕೆಂದರೆ ಹೋರಾಟ ಇಲ್ಲದೆ ಹೃದಯವನ್ನು ಸರೆಂಡರ್ ಮಾಡುವ ಹೆಣ್ಣನ್ನು ಗಂಡಸು ಮೆಚ್ಚುವುದಿಲ್ಲ; ಹೋರಾಟವಿಲ್ಲದೆ ತಲೆಯನ್ನು ಅರ್ಪಿಸಿ ಬಿಡುವ ಗಂಡಸನ್ನು ಹೆಂಗಸು ಮೆಚ್ಚುವುದಿಲ್ಲ. ಅವಳೇ ಪ್ರಯತ್ನಿಸಿ ಕಾಲಾಂತರದಲ್ಲಿ ನಿಮ್ಮ ತಲೆಯನ್ನು ವಶಪಡಿಸಿಕೊಳ್ಳಲಿ. ಅಂತೂ ನಿಮ್ಮ ತಲೆಯನ್ನು ಆದಷ್ಟು ಕಾಲ ನಿಮ್ಮ ಹೆಗಲ ಮೇಲೆ ಉಳಿಸಿಕೊಂಡು, ಅವಳ ಇಷ್ಟಾನಿಷ್ಟಗಳು ಏನು, ಅವಳ ಕಣ್ಣುಗಳ ಭಾಷೆಯ ಲಿಪಿ ಯಾವುದು, ಅವಳ ಅಂತರಂಗದ ಭಾಷೆಯ ಶಬ್ದಗಳಿಗೆ ಅವಳ ಬಹಿರಂಗದ ಭಾಷೆಯಲ್ಲಿನ ಪರ್ಯಾಯ ಪದಗಳು ಯಾವವು, ಅವಳ ಹುಸಿಕೋಪಕ್ಕೂ ಹಸಿಕೋಪಕ್ಕೂ ಅವಳ ಹಣೆ, ಹುಬ್ಬು, ಕಣ್ಣು, ತುಟಿ, ಗಲ್ಲಗಳ ಮೋಡಿಗಳಲ್ಲಿ ಏನೇನು ವ್ಯತ್ಯಾಸಗಳು ಬರುತ್ತವೆ, ಅವಳ ದೌರ್ಬಲ್ಯಗಳೇನು ಎಂದೆಲ್ಲಾ ಅಧ್ಯಯನ ಮಾಡುತ್ತ, ಸಾಧ್ಯವಿದ್ದರೆ ಒಂದು ದಿನಚರಿಯನ್ನು ಬರೆದಿಡಿ. ಇದರಿಂದ ಕೆಲ ತಿಂಗಳಲ್ಲಿ ನಿಮ್ಮ ಸ್ವಂತ ಉಪಯೋಗಕ್ಕಾಗಿ A Guide to My Wife 'ನನ್ನ ಮಡದಿಯ ಕೈಪಿಡಿ'ಯನ್ನು ತಯಾರಿಸಬಲ್ಲಿರಿ. ಇದು ಚಾಣಕ್ಯನೀತಿ ಅಥವಾ ಮೆಕಿಯವಿಲಿಯ Princeನಂಥ ಗನ್ನಗತಕತನದ ಸಂಹಿತೆ ಆಗಲಿಕ್ಕಿಲ್ಲವೇ-ಅಂತ ಕೇಳಿದರೆ, ಹೌದು ಅನ್ನುತ್ತೇನೆ. ಆದರೆ ಇದರಲ್ಲಿ ದುರುದ್ದೇಶವೇನೂ ನಿಮಗೆ ಇಲ್ಲವಲ್ಲ. ಮಡದಿಯನ್ನು ಒಲಿಸಿಕೊಂಡಿರುವುದು ತಾನೆ ನಿಮ್ಮ ಧ್ಯೇಯ? ಮತ್ತೆ ಅವಳಾದರೂ ನಿಮ್ಮ ಬಗ್ಗೆ ಒಂದು ಕೌಟಿಲ್ಯಸಂಹಿತೆಯನ್ನು ತಯಾರಿಸುತ್ತ ಇರುತ್ತಾಳೆ ಅನ್ನುವುದನ್ನು ನೀವು ಮರೆಯಬೇಡಿ. ದಾಂಪತ್ಯ ಅನ್ನುವುದು ಒಂದು ತರಹದ ಹುಸಿ ಯುದ್ಧ.

ಮಡದಿಯಾದವಳು ತನ್ನ ಮಾರಾಯನಿಂದ ಮುಖ್ಯವಾಗಿ ಎರಡು ಸಂಗತಿಗಳನ್ನು ನಿರೀಕ್ಷಿಸುತ್ತಾಳೆ. ಒಂದು ಪ್ರಶಂಸೆ; ಎರಡು ಇಂಗಿತಗ್ರಹಣ. ಹೊಗಳಿಕೆಯನ್ನು ಮೆಚ್ಚದ ಹೆಂಗಸನ್ನು ನಾನು ಇನ್ನೂ ಕಾಣಬೇಕಾಗಿದೆ. ಅದು ಮಿಥ್ಯಾಪ್ರಶಂಸೆ ಆಗಿದ್ದರೂ ಸೈಯೆ. ಹೊಗಳಿಕೆಯ ಹೊನ್ನಶೂಲಕ್ಕೆ ಮಡದಿಯರು ಸಂತೋಷದಿಂದ ಏರುತ್ತಾರೆ. ಆದರೆ ಇದರಲ್ಲಿ ಎಚ್ಚರಿಕೆ ಬೇಕು. ಪರ ಹೆಂಗಸರ ಮೇಲೆ ಮಿಥ್ಯಾಪ್ರಶಂಸೆಯ ಅಸ್ತ್ರ ಉಪಯೋಗಿಸಿದರೆ ಅಡ್ಡಿ ಇಲ್ಲ; ಸ್ವಂತ ಹೆಂಡತಿಯ ಮೇಲೆ ಪ್ರಯೋಗಿಸಿದರೆ ಅದು ನಿಮ್ಮ ಮೇಲೆ ಬೂಮರಾಂಗಿಸಬಹುದು. ನನ್ನ ಮಿತ್ರನ ಅನುಭವ ಹೇಳುತ್ತೇನೆ. ಮಡದಿಯನ್ನು ಖುಷಿ

ಮಾಡಬೇಕು ಅಂತ ಆತ, "ನಿನ್ನ ಕಂಠ ತುಂಬಾ ಚೆನ್ನಾಗಿದೆ. ನಿಮ್ಮ ತಂದೆ ನಿನಗೆ ಸಂಗೀತ ಕಲಿಸದೆ ಇರಬಾರದಿತ್ತು" ಅಂತ ಒಂದು ಬುರುಡೆ ಬಿಟ್ಟ. ಅವಳು ತತ್‌ಕ್ಷಣ "ಓ ಅದಕ್ಕೇನಂತೆ! ಒಬ್ಬ ಸಂಗೀತ ಮಾಸ್ತರನ್ನು ಗೊತ್ತುಮಾಡಿಬಿಡಿ!" ಅಂತ ಗಂಟುಬಿದ್ದಳು. ಬಡಪಾಯಿ ತನ್ನ ಬಲೆಯಲ್ಲಿ ತಾನೇ ಸಿಕ್ಕಿಕೊಂಡ. ಸಂಕ್ಷೇಪದಲ್ಲಿ ಹೇಳುವುದಾದರೆ, ಈಗ ಅವಳು ಗರಗಸದನಿಯಲ್ಲಿ ಹಾಡುವ "ಶೋಭಿಲ್ಲು ಸಪ್ತಸ್ವರಾ!" ವನ್ನು ದಿನಾ ಸಂಜೆ ಅವನು ಸಹಿಸಿಕೊಳ್ಳಬೇಕಾಗಿದೆ.

ನಿಮ್ಮಿಂದ ನಿಮ್ಮ ಮಡದಿ ನಿರೀಕ್ಷಿಸುವ ಇನ್ನೊಂದು ಸಂಗತಿ ಇಂಗಿತಜ್ಞತೆ ಅಂದೆನಲ್ಲ. ಇಂಗಿತಜ್ಞತೆ ಅಂದರೆ ಅವಳು ಬಿಡಿಸಿ ಹೇಳದೆ ನೀವು ಅವಳ ಅಂತರಂಗ ತಿಳಿದುಕೊಳ್ಳುವುದು. ಇದು ಸುಮಾರಾಗಿ ನವ್ಯ ಕವಿತೆಯನ್ನು ಅರ್ಥ ಮಾಡಿಕೊಳ್ಳುವಷ್ಟೇ ಸುಲಭದ ಕೆಲಸ. ಅಥವಾ ಚಕ್ರಬಂಧ ಒಗಟು ಬಿಡಿಸಿದ ಹಾಗನ್ನಿ. ನೀವು ಅವಳ ಹೊರಗಿನ ಮಾತಿಗೆ ಶಬ್ದಕೋಶದಲ್ಲಿ ಅರ್ಥ ನೋಡಿ ಅನುಸರಿಸಿದರೆ ಕೆಟ್ಟಿರಿ. ನೀವು ಅವಳ ಒಳಗಿನ ಒಳದನಿಯನ್ನು ಆಲಿಸಲಿಕ್ಕೆ ಕಲಿಯಬೇಕು. ಒಂದು ಉದಾಹರಣೆ ತೆಗೆದುಕೊಳ್ಳಿ. ಒಂದು ದಿನ ನೀವು ಆಫೀಸಿಗೆ ಹೊರಡುವಾಗ ನಿಮ್ಮ ನವವಿವಾಹಿತೆ ಮಡದಿ ನಸುನಕ್ಕು ಹೀಗೆ ಹೇಳುತ್ತಾಳೆ: "ನೋಡಿ, ಆಚೀಮನೆಯೋರು ಏನು ನಾಚಿಕೆಗೇಡಿಗಳು ಅಂತ! ವರ್ಷ ನಲವತ್ತಕ್ಕೆ ಬಂದಿರಬೇಕು, ಇನ್ನೂ ಗಂಡ ಆಫೀಸಿಗೆ ಹೊರಡುವಾಗ ಬಾಗಿಲಲ್ಲೇ ಹೆಂಡತೀ ಕೆನ್ನೆ ಹಿಂಡಿ ಬೈ ಬೈ ಹೇಳಿ ಹೋಗ್ತಾನೆ! ಯಾರಾದರೂ ನೋಡಿಯಾರು ಅನ್ನೋ ಯೋಚನೆ ಆದರೂ ಬೇಡವೇ?" ಈಗ ನೀವು ಈ ವಸ್ತುನಿಷ್ಠ ವರದಿಗೆ ಏನು ಅರ್ಥ ಮಾಡುತ್ತೀರಿ? ನಿಮ್ಮ ಮಡದಿಗೆ ಇಂಥಾ ಲಂಪಟತನ ಸೇರುವುದಿಲ್ಲ ಅಂತನೋ? ಅಥವಾ, "ನಿಮಗೆ ಇನ್ನೂ ಬರೇ ಇಪ್ಪತ್ತೇಳು ವರ್ಷ. ಹೊಸದಾಗಿ ಮದುವೆ ಮಾಡಿಕೊಂಡಿದ್ದೀರಿ. ಆದರೂ ಆಫೀಸಿಗೆ ಹೋಗುವಾಗ ಹೆಂಡತೀ ಕೆನ್ನೆ ಹಿಂಡಬೇಕು ಅನ್ನೋ ಆಸೆ ಆಗುವುದಿಲ್ಲವೆ? ಎಂಥ ಅರಸಿಕರು ನೀವು!" ಅಂತಲೋ? ಈ ಒಗಟನ್ನು ನೀವೇ ಬಿಡಿಸಬೇಕು. ಇದಕ್ಕೆ ನೀವು ಸಂಗ್ರಹಿಸಿರುವ ಮಡದಿಸಂಹಿತೆ ಸಹಾಯ ಮಾಡಬಹುದು. ಅಥವಾ ನೆರೆಮನೆಯವರ ಈ ವರದಿ ಕೊಡುವಾಗ ನಿಮ್ಮವಳ ಕೆನ್ನೆ ಕೆಂಪೇರಿದೆಯೇ ಅಥವಾ ಕಣ್ಣು ಮಿಟುಕುತ್ತದೆಯೇ ಇತ್ಯಾದಿ ಸಂಕೇತಗಳನ್ನು ನೋಡಬೇಕಾದೀತು.

ನೆರಮನೆ-ಅಂದೆನಲ್ಲ. ಅದೊಂದು ಸಮಸ್ಯೆ. ನೀವು ನಿಮ್ಮ ಮಡದಿ ಇಬ್ಬರೇ ಈ ಪ್ರಪಂಚದಲ್ಲಿ ಇರುವುದಾದರೆ ಅವಳನ್ನ ಒಲಿಸಿಕೊಂಡಿರುವುದು ಅಷ್ಟು ಕಷ್ಟವಾಗಲಿಕ್ಕಿಲ್ಲ. ಆದರೆ ನಿಮ್ಮ ನೆರೆಮನೆಯವಳಿಗೆ ಒಂದು ಹೊಸ ಸೀರೆಯೋ ಬಂಗಾರವೋ ಬಂದರೆ ಸಾಕು, ನಿಮ್ಮ ಮನೆಯಲ್ಲಿ ವಿದ್ಯುತ್ಕಾಂತಾ—ಅಂದರೆ ನಿಮ್ಮ ಕಾಂತೆಯ ವಿದ್ಯುತ್ ಅಲ್ಲೋಲ ಕಲ್ಲೋಲ ಆರಂಭವಾಗುತ್ತದೆ. ನೀವು ಬುದ್ಧಿವಂತರಾದರೆ ಈ ಕಲ್ಲೋಲ ಉಲ್ಬಣಿಸುವುದಕ್ಕೆ ಮೊದಲೇ ನಿಮ್ಮವಳ ಇಂಗಿತ ತಿಳಿದು ಜಾರ್ಜೆಟ್ ಸೀರೆಯನ್ನೋ ಲೇಟೆಸ್ಟ್ ನೆಕ್ಲೇಸನ್ನೋ

ಒದಗಿಸುವ ಯೋಚನೆಮಾಡಿ. ಆದರೆ ನಿಮ್ಮ ಜೇಬು ಇದಕ್ಕೆ ಅನುಮತಿ ಕೊಡದಿದ್ದರೆ ಏನು ಮಾಡುವಿರಿ? ಹಣಕಾಸಿನ ಶಾಸ್ತ್ರವನ್ನು ನಿಮ್ಮ ಮಡದಿಗೆ ವಿವರಿಸುವ ಪ್ರಯತ್ನ ಮಾಡುತ್ತೀರಾ? ಅದು ವ್ಯರ್ಥ. ನೀವು ಮಾಡುವ ದುಂದುಗಾರಿಕೆಯ ಒಂದು ಪಟ್ಟಿಯಿಂದ ಅವಳು ನಿಮ್ಮ ಮೇಲೆ ಪ್ರತಿಧಾಳಿ ಆರಂಭಿಸುತ್ತಾಳೆ. ಹೀಗಾದಾಗ ಗೃಹಶಾಂತಿ ಉಳಿಸಿಕೊಳ್ಳುವುದಕ್ಕೆ ಏನು ಮಾಡುತ್ತೀರಿ? ನಿಮ್ಮ ಸಂಬಳದ ಪಾಕೀಟನ್ನು ಇದ್ದಕ್ಕಿದ್ದ ಹಾಗೆ ನಿಮ್ಮವಳ ಕೈಗೆ ಹಾಕಿ, ಬೇಕಾದರೆ ನಿನ್ನ ಮೈಗೊಂದು ಬಂಗಾರದ ಕವಚ ಮಾಡಿಸಿಕೋ ಅನ್ನುವುದು ಕ್ಷೇಮ. ಆದರೆ ಎಲ್ಲಾ ಮಡದಿಯರೂ ಈ ಉಪಾಯಕ್ಕೆ ಒಪ್ಪುವುದಿಲ್ಲ. ಒಪ್ಪಿದರೂ ತಿಂಗಳೊಪ್ಪತ್ತಿನಲ್ಲಿ ರಾಜೀನಾಮೆ ಕೊಡುತ್ತಾರೆ. ನನ್ನವಳು ನನ್ನ ಹಣಕಾಸಿನ ಮಂತ್ರಿಯಾಗುವುದಕ್ಕೆ ಸುತರಾಂ ಒಲ್ಲೆ ಅಂದಿದ್ದಾಳೆ. "ಮನೆ ಕೆಲಸ ಬೇರೆ ಮಾಡಿಕೊಂಡು ಈ ರಗಳೇನೂ ನನ್ನ ಸೆರಗಿಗೆ ಯಾಕೆ ಕಟ್ಟಿಕೊಳ್ಳಲಿ?" ಅನ್ನುತ್ತಾಳೆ. ಇಂಥಾ ಪ್ರಸಂಗಗಳಲ್ಲಿ ಏನಾದರೂ diversionary tactics—ಅಡ್ಡ ಉಪಾಯ ಹೂಡಬೇಕಾಗುತ್ತದೆ. ಪ್ರಸಂಗ ಬಹಳ ಇಕ್ಕಟ್ಟಾದರೆ ನಾನು ಅಸ್ವಸ್ಥ ನಟಿಸುವ ಮೂಲಕ ಪಾರಾಗುತ್ತೇನೆ. ಆದರೆ ಇದರಲ್ಲಿ ಅಪಾಯವುಂಟು. ನಿಮ್ಮವಳು ನಿಮ್ಮನ್ನು ಡಾಕ್ಟರ ಬಳಿಗೆ ಕಳಿಸುವುದರಿಂದ ತೃಪ್ತಳಾಗದೆ ತಾನೇ ನಿಮ್ಮನ್ನು ಎಳೆದುಕೊಂಡು ಹೋಗಬಹುದು! ಕೊನೆಯ ಉಪಾಯ ಅಂದರೆ ನಿಮಗೆ ಯಾರಾದರೂ ಸಾಲ ಕೊಡುವ ಹಾಗಿದ್ದರೆ ಸಾಲ ಮಾಡುವುದು.

ನಿಮ್ಮಾಕೆಯನ್ನು ಒಲಿಸಿಕೊಂಡಿರಬೇಕು ಅಂದಾಕ್ಷಣ ಯಾವಾಗಲೂ ಅವಳ ಸೇವಕ ರಾಗಿರಬೇಕಂತ ತಿಳಿದುಕೊಳ್ಳಬೇಡಿ. ಮನೆಗೆಲಸದಲ್ಲಿ ಸಿಂಹಪಾಲು ನೀವೇ ವಹಿಸಿಕೊಂಡರೆ ನಿಮ್ಮವಳ ಒಲುಮೆ ಬೆಳೆಯುತ್ತದೆಂತಲೂ ನಿಶ್ಚಯವಾಗಿ ಹೇಳಲಾರೆ. ಮೊನ್ನೆ ಪೇಪರಿನಲ್ಲಿ ಬಂದಿತ್ತು; ಇಂಗ್ಲೆಂಡಿನಲ್ಲಿ ಒಬ್ಬಾಕೆ ತನ್ನ ಗಂಡ ಉತ್ತಮವಾಗಿ ಅಡಿಗೆ ಮಾಡುತ್ತಾನೆ ಅಂತ ದೂರು ಹೇಳಿ ಕೋರ್ಟಿನಲ್ಲಿ ಡೈವೋರ್ಸ್ ದಾವೆ ತಂದಳಂತೆ. ನೀವು ಅಡಿಗೆ ಮಾಡುವುದಕ್ಕೆ ನೆರವು ಕೊಟ್ಟರೆ ಅದು ತನ್ನ ಅಡಿಗೆ ಪಾಂಡಿತ್ಯದ ಟೀಕೆ ಅಂತ ಅವಳು ತಿಳಿದುಕೊಳ್ಳಬಹುದು.

ನಿಮ್ಮವಳನ್ನು ಒಲಿಸಿಕೊಂಡಿರುವ ಹವ್ಯಾಸದಲ್ಲಿ ನೀವು ದಾಸ್ಯಭಾವ ತೋರಿಸಬೇಡಿ. ಹೆಂಗಸರು ತಮ್ಮ ಗಂಡಂದಿರಿಂದ ಒಂದಿಷ್ಟು ಗಂಡಸ್ತನ ಅಪೇಕ್ಷಿಸುತ್ತಾರೆ—ಅಂದರೆ ನಾಲ್ಕು ಜನರ ಮುಂದೆ, ಖಾಸಗಿಯಲ್ಲಿ ಅಲ್ಲ. ನಾಲ್ಕು ಜನರ ಮುಂದೆ ನೀವು ಹೆಂಡತೀನ ಆಳುವವರ ಹಾಗೇ ತೋರಿಸಿಕೊಳ್ಳಬೇಕು. ಬಹಿರಂಗದಲ್ಲಿ ಒಂದಿಷ್ಟು ಕೋಪತಾಪ ತೋರಿಸಿದರೂ ಒಳ್ಳೇದೇ. ನಮ್ಮ ನೆರೆಯಲ್ಲಿ ಅಮ್ಮಾವ್ರ ಗಂಡ ಇದ್ದಾರೆ. ಅವರ ಮಡದಿ ನನ್ನವಳ ಹತ್ತಿರ ಹೆಮ್ಮೆಯಿಂದ ತಮ್ಮ ಗಂಡನ ಕೋಪತಾಪ ಬಣ್ಣಿಸೋದನ್ನ ಮೊನ್ನೆ ಕೇಳಿದೆ. "ನಮ್ಮನೇವರು ಏನಂತೀರಾ! ಮೂಗಿನ ತುದೀಲೇ ಸಿಟ್ಟು. ಅಡಿಗೇಲಿ ಉಪ್ಪು ಬೆಲ್ಲ ಏನಾದರೂ ಹೆಚ್ಚು ಕಡಿಮೆ ಆದರೆ ಎಂಥಾ ಸೀನ್ ಕ್ರಿಯೇಟ್ ಮಾಡ್ತಾರೆ ಗೊತ್ತಾ? ತಟ್ಟೇನ ಒದ್ದುಬಿಟ್ಟರೂ ಬಿಟ್ಟರು. ಶುದ್ಧ ದೂರ್ವಾಸ!" ಅವರ ಮನೆಯಲ್ಲಿ ನಾನು ಉಂಡು ಬಲ್ಲೆ.

ಪಾಪ, ಆ ಅಮ್ಮಾವ್ರ ಗಂಡ ಶಂಭುಮಹಾರಾಜ! ಉಪ್ಪು, ಹುಳಿ, ಖಾರ, ಹಂಜಕ್ಕಿ, ಏನೇ ಆದರೂ ಕ್ಯಿಂ ಅನ್ನದೆ ನುಂಗಿ ಹೋಗುತ್ತಾರೆ. ಆದರೆ ಅಮ್ಮಾವ್ರಿಗೆ ತಮ್ಮ ಯಜಮಾನರೂ ಕೋಪದಲ್ಲಿ ಇತರರಿಗೆ ಕೊರೆ ಅಲ್ಲ ಅಂತ ಹೇಳಿಕೊಳ್ಳುವುದರಲ್ಲಿ ಇಷ್ಟ. ಗಂಡನ ದಾಸ್ಯವನ್ನು ಅವರು ತಮ್ಮಿಬ್ಬರೊಳಗಿನ ಪ್ರೈವೇಟ್ ಅರೇಂಜ್‌ಮೆಂಟ್–ಖಾಸಗಿ ವ್ಯವಹಾರವಾಗಿ ಇರಿಸಬಯಸುತ್ತಾರೆ!

ಆದರೆ ನಿಮ್ಮ ಅಮ್ಮಾವ್ರ ಅನುಗ್ರಹ ನಿಮಗೆ ಬೇಕಾಗಿದ್ದರೆ, ಇನ್ನೊಬ್ಬ ಹೆಣ್ಣನ್ನ ಅವರ ಮುಂದೆ ಹೊಗಳುವ ತಪ್ಪನ್ನ ಎಂದೂ ಮಾಡಬೇಡಿ. ಇನ್ನೊಬ್ಬಳ ಪ್ರಶಂಸೆಯನ್ನು ಕೇಳುವುದೆಂದರೆ ಯಾವ ಹೆಣ್ಣಿಗೂ "ಪಿರಿದೆನಿಸುವ ಕರ್ಣಶೂಲೆಯಂ ಪುಟ್ಟಿಸುಗುಂ". ಹೆಂಗಸು ಮದುವೆಯಾಗುವ ಕಷ್ಟವನ್ನು ಯಾಕೆ ತೆಗೆದುಕೊಳ್ಳುತ್ತಾರೆ ಅಂತೀರಿ? ಒಬ್ಬ ಗಂಡಸನ್ನ ಇಡಿಯಾಗಿ ಹಿಡಿದು ಕೊಂಡಿರುವುದಕ್ಕೆ. ಪ್ರತಿಯೊಬ್ಬ ಪರ ಹೆಂಗಸನ್ನೂ ಅವಳು ತನ್ನ ಪ್ರತಿಸ್ಪರ್ಧಿ ಅಂತ ಭಾವಿಸುತ್ತಾಳೆ. ಹೆಂಗಸರ ಹೆಚ್ಚಿನ ಸಮಯ ಇತರ ಹೆಂಗಸರನ್ನು ತುಚ್ಛೀಕರಿಸುವುದರಲ್ಲಿ ಕಳೆಯುತ್ತದೆ. ನೀವು ಚಾಣಕ್ಯರಾದರೆ ಈ ದೌರ್ಬಲ್ಯವನ್ನು ನಿಮ್ಮ ಅನುಕೂಲಕ್ಕೂ ಉಪಯೋಗಿಸಿಕೊಳ್ಳಬಹುದು. ಬೇರೆ ಯಾವಳೋ ಹೆಣ್ಣಿನಲ್ಲಿ ನೀವು ಆಸಕ್ತಿ ವಹಿಸುತ್ತಾ ಇದ್ದೀರಿ ಅನ್ನುವ ನಸುಸಂಶಯ ನಿಮ್ಮವಳಲ್ಲಿ ಹುಟ್ಟುವ ಹಾಗೆ ನೀವು ನಡೆದುಕೊಂಡರೆ ಅದರ ತಳ ಶೋಧಿಸುವುದಕ್ಕೆ ನಿಮ್ಮ ಮಡದಿ ಆಕಾಶ ಪಾತಾಳ ಒಂದು ಮಾಡುತ್ತಾಳೆ. ಎಲ್ಲಾ ಡಿಟೆಕ್ಟಿವ್ ಕೆಲಸ ಮುಗಿದು ನೀವು ನಿರಪರಾಧಿಗಳು ಅಂತ ಸಿದ್ಧವಾದರೆ ನಿಮ್ಮ ಮಡದಿಗೆ ಒಮ್ಮೆಲೇ ಎಷ್ಟು ಖುಷಿ ಆಗುತ್ತದೆ ಅಂದರೆ ನಿಮ್ಮ ಮೇಲೆ ಅವಳ ಒಲವು ಇಮ್ಮಡಿ ಆಗುತ್ತದೆ! ಆದರೆ ಇದು ತುಂಬಾ ಅಪಾಯ, ಜಟಿಲವಾದ ಆಟ. ಜಾಗ್ರತೆ!

ಎಲ್ಲಾ ಹೇಳಿ, ಮಡದಿಯರ ಮನಸ್ಸು ಅತ್ಯಂತ ದುರೂಹ್ಯವಾದದ್ದಂತ ನಿಮಗೆ ಎಚ್ಚರಿಕೆಕೊಡದೆ ನಿರ್ವಾಹವಿಲ್ಲ. ನಾನು ಓದಿದ ಒಂದು ಇಟಾಲಿಯನ್ ಕತೆ ನೆನಪಾಗುತ್ತದೆ. ನೆರೆಮನೆಯವನು ಆಗಾಗ ರಾತ್ರಿ ಕುಡಿದು ಮನೆಗೆ ಬಂದು ಹೆಂಡತಿಯನ್ನು ಹೊಡೆದು ಬಡಿದು ಗಲಾಟೆ ಮಾಡುತ್ತಾ ಇದ್ದ. ತಲೆಗೆ ಏರಿದ್ದು ಇಳಿದಮೇಲೆ ಇಂಗು ತಿಂದ ಮಂಗನ ಹಾಗೆ ಪೆಚ್ಚಾಗಿ ಅವಳನ್ನು ಓಲೈಸುತ್ತಿದ್ದ. ಮೈಗೆ ಮುಲಾಮು ಹಚ್ಚುತ್ತಿದ್ದ. ಈಚೆ ಮನೆಯವಳ ಗಂಡ ಪಾಪ, ತುಂಬಾ ಸಾಧುಪ್ರಾಣಿ. ಆದರೆ ಕೆಲವು ದಿನಗಳ ನಂತರ ತನ್ನವಳು ವಿಚಿತ್ರವಾಗಿ ವರ್ತಿಸೋದನ್ನ ಕಂಡು ಅವನಿಗೆ ಆಶ್ಚರ್ಯವಾಯಿತು. ಸುಳ್ಳು ಸುಳ್ಳೇ ಅವಳು ಜಗಳ ತೆಗೆದು ರೌದ್ರಾವತಾರ ತೋರಿಸುತ್ತಿದ್ದಳು. ಸಹಿಸೀ ಸಹಿಸೀ ಕಡೆಗೊಂದು ದಿವಸ ಆತ ಅವಳನ್ನು ಹಿಡಿದು ನಾಲ್ಕು ಜಡಿದ. ಆಮೇಲೆ ಪಶ್ಚಾತ್ತಾಪಪಟ್ಟು ಅವಳನ್ನು ಸಿನಿಮಾಕ್ಕೆ ಕರೆದೊಯ್ದು ಬಹಳ ಮುದ್ದು ಮಾಡಿದ. ಅವಳಿಗೆ ಅದೇ ಬೇಕಾಗಿತ್ತು. ನೆರೆಮನೆಯವಳಿಗೆ ರಾದ್ಧಾಂತದ ನಂತರ ಸಿಗುತ್ತಾ ಇದ್ದ ಲಲ್ಲೆ ನೋಡಿ ಇವಳಿಗೂ ಅದರ ಆಸೆ ಹುಟ್ಟಿತ್ತು!

ಸಾರಾಂಶ ಇಷ್ಟೇ: ಒಲಿಸಿಕೊಂಡಿರುವುದಕ್ಕೆ ಒಂದು ರೂಲ್-ಆಫ್-ದಿ ಥಂಬ್ ಅನ್ನುವುದು ಇಲ್ಲ. ಪ್ರತಿ ಮಡದಿಗೂ ಅವಳದೆ ಕಾನೂನುಗಳು ಇರುತ್ತವೆ. ಅವುಗಳನ್ನು ಅರಿತುಕೊಳ್ಳುವುದರಲ್ಲಿ ಅರ್ಧಾಯುಷ್ಯ ಹೋಗಬಹುದು. ಅಷ್ಟರಲ್ಲಿ ಅವಳ ಕಾನೂನುಗಳೇ ಬದಲಾಗಿರಬಹುದು. ಹೆಂಡತಿಯನ್ನು ಒಲಿಸಿಕೊಂಡಿರುವುದು ಸುಮಾರು ಮಟ್ಟಿಗೆ ನಿಮ್ಮ ಅದೃಷ್ಟದ ವಿಷಯವೂ ಹೌದು. ಎಲ್ಲಾ ಮಾಡಿಯೂ ನಿಮ್ಮ ಮಡದಿ ಸೆಟೆದುಕೊಂಡೇ ಇದ್ದರೆ ಹರ್ಮನ್ ಕೆಸರ್‌ಲಿಂಗನ ತತ್ತ್ವಜ್ಞಾನದಿಂದ ನೀವು ಸಮಾಧಾನ ತಾಳಬೇಕಷ್ಟೇ. "ಹೆಚ್ಚು ಜನ ಮಹಾಪುರುಷರು ಸುಖಹೀನ ದಾಂಪತ್ಯಕ್ಕೆ ಹುಟ್ಟಿದವರು" ಅಂತ ಆತ ಹೇಳುತ್ತಾನೆ. ನೀವು ಸುಖಿ ಗಂಡ ಆಗದಿದ್ದರೆ ಮಹಾಪುರುಷನ ತಂದೆ ಆಗುವ ಚಾನ್ಸ್ ಇದೆ!

❐

# 'ಪ್ರಿಸಮ್' ಹಲವು ಕನ್ನಡ ಪ್ರಕಟಣೆಗಳು

**ಸಾಹಿತ್ಯ / ವಿಚಾರ**

| | | |
|---|---|---|
| 1. | ಶತಮಾನದ ಸಣ್ಣಕತೆಗಳು / ಸಂ: ಎಸ್. ದಿವಾಕರ್ | 400/- |
| 2. | ಕೆ. ಸದಾಶಿವ: ಸಮಗ್ರ ಕತೆಗಳು | 120/- |
| 3. | ನೆನಪಿನ ಗಣಿಯಿಂದ / ಗೋಪಾಲಕೃಷ್ಣ ಅಡಿಗ (ಅನುಭವ ಕಥನ) | 110/- |
| 4. | ಮರೆಯಬಾರದ ಹಳೆಯ ಕತೆಗಳು / ಸಂ: ಡಾ॥ ಗಿರಡ್ಡಿ ಗೋವಿಂದರಾಜ | 200/- |
| 5. | ಜಿ. ಎಸ್. ಸದಾಶಿವ: ಇದುವರೆಗಿನ ಕತೆಗಳು | 125/- |
| 6. | ಅವಳ ಕತೆಗಳು / ಸಂ: ಡಾ॥ ಜಿ. ಎಸ್. ಆಮೂರ | 150/- |
| 7. | ನಗೆಗಾರ ರಾ.ಶಿ. / ಸಂ: ಅಪರಂಜಿ ಶಿವು | 120/- |
| 8. | ಶೋಧ : ಪತ್ತೇದಾರಿ ಕತೆಗಳು / ಸಂ: ದಿ॥ ಎಂ. ಎಸ್. ಕೆ. ಪ್ರಭು | 135/- |
| 9. | ಜಗತ್ತಿನ ಅತಿಸಣ್ಣ ಕತೆಗಳು / ಆಯ್ಕೆ, ಅನುವಾದ: ಎಸ್. ದಿವಾಕರ್ | 100/- |
| 10. | ಬಾಗಲೋಡಿ ದೇವರಾಯ · ಸಮಗ್ರ ಕತೆಗಳು | 130/- |
| 11 | ಸಾಹಿತ್ಯ ಮತ್ತು ಶಿಕ್ಷಣ / ಪ್ರೊ. ಜಿ. ವೆಂಕಟಸುಬ್ಬಯ್ಯ | 75/- |
| 12. | ನಮ್ಮ ಕೈಲಾಸಂ / ಸಂ: ಪ್ರೊ॥ ಚಿ. ಶ್ರೀನಿವಾಸರಾಜು | 100/- |
| 13. | ಕೈಲಾಸಂ ಮತ್ತು ನಾನು / ರಾ.ಶಿ. | 65/- |
| 14. | ಗಾಂಧೀಜಿಯ ಕಡೆಯ ದಿನಗಳು / ಕೆ. ಎಸ್. ನಾರಾಯಣಸ್ವಾಮಿ | 60/- |
| 15. | ಪಾ.ಮೆಂ.ಆಚಾರ್ಯ: ಆಯ್ದ ಹರಟೆಗಳು / ಸಂ: ಆ.ರಾ. ಮಿತ್ರ, ಶ್ರೀನಿವಾಸ ಹಾವನೂರ | 70/- |
| 16. | ಪಾ.ಮೆಂ.ಆಚಾರ್ಯ: ಆಯ್ದ ನಗೆಬುಹರಗಳು / ಸಂ: ಶ್ರೀನಿವಾಸ ಹಾವನೂರ, ಆ.ರಾ. ಮಿತ್ರ | 60/- |
| 17. | ನಮ್ ಬೆಂಗ್ಳೂರು / ಕೆ. ಚಂದ್ರಮೌಳಿ | 100/- |
| 18. | ರಾಶಿ ನಗೆಹನಿಗಳು / ಆಯ್ಕೆ: ಅಪರಂಜಿ ಶಿವು | 45/- |
| 19. | ವೈದ್ಯನಲ್ಲದ ಡಾಕ್ಟರು / ಡಾ॥ ಎಚ್. ಕೆ. ರಂಗನಾಥ್ | 50/- |
| 20. | ಓಡಿ ಹೋದಾ ಮುಟ್ಟಿ ಬಂದಾ / ಯಶವಂತ ಚಿತ್ತಾಲ | 90/- |
| 21. | ನಿರಾತಂಕ ಆಹಾರ-ಡಯಾಬಿಟಿಕ್‌ಗಳಿಗಾಗಿ ಪುಷ್ಟಿಕರ ಸವಿಯೂಟ | 60/- |
| 22. | ಭೂಮಿ / ಮೊಗಳ್ಳಿ ಗಣೇಶ್ | 95/- |
| 23. | ಕಾನನದ ಮಲ್ಲಿಗೆ / ಡಾ. ಹೆಚ್. ಕೆ. ನಂಜುಂಡಸ್ವಾಮಿ | 75/- |
| 24. | ಉಡುಪಿ ಅಡುಗೆ / ಯು. ಬಿ. ರಾಜಲಕ್ಷ್ಮಿ | 95/- |
| 25. | ಶ್ರೀ ತ್ಯಾಗರಾಜ ಯೋಗ ವೈಭವ (ಸಂಪುಟ - ೧) | 295/- |
| 26. | ಶ್ರೀ ತ್ಯಾಗರಾಜ ಯೋಗ ವೈಭವ (ಸಂಪುಟ - ೨) | 295/- |
| 27 | ಪ್ರಿಸಂ ಇಂಗ್ಲಿಷ್-ಕನ್ನಡ ನಿಘಂಟು / ಸಂ: ಪ್ರೊ. ಜಿ. ವೆಂಕಟಸುಬ್ಬಯ್ಯ | 185/- |
| 28. | ಯರ್ಮುಂಜ ರಾಮಚಂದ್ರ : ಸಮಗ್ರ ಕತೆ, ಕಾವ್ಯ | 85/- |
| 29. | ಇಲ್ಲಿಯವರೆಗಿನ ಕವಿತೆಗಳು / ಯು. ಆರ್. ಅನಂತಮೂರ್ತಿ | 120/- |
| 30. | ಗಂಗಾಧರ ಚಿತ್ತಾಲ: ಎಪ್ಪತ್ತೆರಡು ಕವಿತೆಗಳು ಮತ್ತು ವಿಮರ್ಶಕರ ಸ್ಪಂದನ | 195/- |
| 31. | ಬೆಂಗಳೂರಿನ ನೋಟಗಳು / ಕೆ. ಚಂದ್ರಮೌಳಿ | 180/- |
| 32. | ಸಂವಹನ ಕಲೆ / ಎಚ್.ಜಿ. ಸೋಮಶೇಖರ್ | 85/- |
| 33. | ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ : ಬಿ.ವಿ.ಕಾರಂತ – ಸಂಗ್ರಹ ಕೃತಿರೂಪ : ವೈದೇಹಿ | 425/- |



.....ಅಮ್ಮಾವ್ರಿಂದ ಅಮ್ಮಾವ್ರ ಗಂಡಂದಿರಾಗುತ್ತಾರೋ - ಅಮ್ಮಾವ್ರ ಗಂಡಂದಿರಿಂದ ಅಮ್ಮಾವ್ರು ಆಗುತ್ತಾರೋ ಅನ್ನುವುದೊಂದು ಸಂದಿಗ್ಧ. ಇಕ್ಕಟ್ಟಿನ ನಿರ್ಣಯಗಳನ್ನು ತಮಗಾಗಿ ಇನ್ನೊಬ್ಬರು ಮಾಡಿದರೆ ಸುಖ ಎಂಬ ಮನೋವೃತ್ತಿಯವರು ಅಮ್ಮಾವ್ರ ಗಂಡಂದಿರಾಗಬಹುದು. ಆದರೆ ಅವರಿಗೆ ದೊರಕುವ ಅಮ್ಮಾವ್ರು ಆ ಹೊರೆ ಹೊರಲು ಯಾವಾಗಲೂ ಸಿದ್ಧರಾಗುತ್ತಾರೆಂದು ಹೇಳಲಾಗುವುದಿಲ್ಲ. ಆ ರಗಳೆಯೆಲ್ಲ ನನಗೆ ಬೇಡ. ಸಂಬಳದ ಮತ್ತು ಗಿಂಬಳದ ಪ್ಯಾಕೆಟ್ ಸರಿಯಾಗಿ ನನ್ನ ಕೈಲಿ ತಂದುಕೊಟ್ಟುಬಿಡಿ. ಉಳಿದಂತೆ ನಿಮ್ಮ ನೊಗ ನೀವೇ ಹೊರಬೇಕು - ಎಂದು ಅವರು ಹೇಳಿಬಿಡಬಹುದು. ನಿಜವಾದ ಅಧಿಕಾರ ಎಲ್ಲಿರುತ್ತದೆಂದು ಅವರಿಗೆ ಗೊತ್ತು. ಆದರೂ ಅವರು ಪರ್ಫೆಕ್ಟ್ ಅಮ್ಮಾವ್ರಾಗಲಾರರು ಎಂದು ನನ್ನ ಮತ. ಗಿಂಬಳವನ್ನಂತೂ ಅಮ್ಮಾವ್ರೇ ನೋಡಿಕೊಂಡರೆ ಹಿತ.

ನಮ್ಮ ಬೆರಳು ಹಿಡಿದು ಬರುವವರು ಅಮ್ಮಾವ್ರಾಗುತ್ತಾರೋ ಇಲ್ಲವೋ ಎನ್ನುವುದು ಕೆಲವೇ ದಿನಗಳಲ್ಲಿ ನಮಗೆ - ಸೂಕ್ಷ್ಮಬುದ್ಧಿ ಇದ್ದರೆ- ತಿಳಿದುಹೋಗುತ್ತದೆ. ಅಥವಾ ತಿಳಿಯದೇ ನಾವು ಅಮ್ಮಾವ್ರ ಗಂಡ ಆಗಿಬಿಡಬಹುದು. ಅಷ್ಟು ಸ್ಲಿಕ್ ಆದ ಅಮ್ಮಾವ್ರೂ ಇದ್ದಾರೆ. ಸಂಸ್ಕೃತ ಕವಿ ಹೇಳಿದ ಹಾಗೆ ಒಂದು ವಯಸ್ಸು ಇರುತ್ತದೆ. ಆಗ ನಾವು ನಮ್ಮ ರಾಣಿ ನಮ್ಮ ಇಷ್ಟದಂತೆ ನಡೆಯುತ್ತಾಳೆ ಎಂದೆಣಿಸಿರುತ್ತೇವೆ. ಆದರೆ ಅವಳ ನಡೆಯೆಲ್ಲ ನಮಗೆ ಇಷ್ಟವಾಗಿ ಕಾಣುತ್ತದೆ ಒಂದು ನಮಗೆ ಗೊತ್ತಾಗುವುದೇ ಇಲ್ಲ. ಗೊತ್ತಾಗುವ ಹೊತ್ತಿಗೆ ಹೊತ್ತು ಮೀರಿರುತ್ತದೆ. ಒಮ್ಮೆ ನೀವು ಅಮ್ಮಾವ್ರ ಗಂಡ ಆದರೆ ಮುಗಿದುಹೋಯಿತು. ಸವಾರನನ್ನು ಇಳಿಸುವುದು ಕುದುರೆಗೆ ಸಾಧ್ಯವಾಗುವುದಿಲ್ಲ.

- ಲಾಂಗೂಲಾಚಾರ್ಯ

ಪ್ರಿಸಮ್ ಬುಕ್ಸ್ ಪ್ರೈ. ಲಿ.
ಬೆಂಗಳೂರು - 560 070.
ರೂ. 60

